ಮಂಗಳವಾರ, ಮೇ 14, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮತದಾನ

ಪಶ್ಚಿಮ ಬಂಗಾಳದ ಬರ್ಧಮಾನ್‌ನಲ್ಲಿ ಲೋಕಸಭಾ ಚುನಾವಣೆಗೆ ಮತದಾನ ಮಾಡಿದ ನಂತರ ಮಹಿಳೆಯೊಬ್ಬರು ಫೋಟೊಗೆ ಪೋಸು ನೀಡಿದ್ದು ಹೀಗೆ...

SAPTHAGIRI NPS UNIVERSITY

ACADEMIC PROGRAMS DESIGNED IN COLLABORATION WITH IBM

Dr. K.P. Gopalkrishna
Chairman, National Public Schools
President, Sapthagiri NPS University

SCHOOL OF ENGINEERING AND TECHNOLOGY

2.5 LAKHS PER YEAR

- B.Tech - Computer Science & Engineering
- B.Tech - CSE (Artificial Intelligence & Machine Learning)
- B.Tech - CSE (Artificial Intelligence and Data Science)
- B.Tech - CSE (Data Science)
- B.Tech - CSE (Cyber Security)
- B.Tech - Electronics & Communication Engineering
- B.Tech - Electrical & Electronics Engineering

2 LAKH PER YEAR

SCHOOL OF MANAGEMENT STUDIES

1 LAKH PER YEAR

- BBA - Human Resource Management
- BBA - Digital Marketing
- BBA - Business Analytics
- BBA - Entrepreneurship and Startup
- BBA - Hospital Management
- BBA - Fintech

MBA WITH SPECIALIZATION

2 LAKHS PER YEAR

- MBA - Financial Management (FM)
- MBA - Human Resource Management (HRM)
- MBA - Business Analytics and Big Data Analytics (BA & BDA)
- MBA - Logistics & supply chain management (L&SCM)
- MBA - Digital Transformation (DT)
- MBA - Health Care Management
- MBA - Information Technology & Systems

2 LAKHS PER YEAR

- MCA - General
- MCA - Artificial Intelligence and Data Science
- MCA - Artificial Intelligence & Machine Learning
- MCA - Cyber Security and Forensics

SCHOOL OF APPLIED SCIENCES

1.15 LAKH PER YEAR

- BCA - General
- BCA - Data Science
- BCA - Artificial Intelligence & Machine Learning
- BCA - Cloud Computing and Cyber Security

SCHOOL OF BUSINESS STUDIES

90k PER YEAR

- B.Com - General
- B.Com - Accounting and Taxation
- B.Com - Business Analytics

RANKED AS TOP UNIVERSITY
IN KARNATAKA

ADMISSIONS
OPEN FOR 2024-25

SAPTHAGIRI NPS UNIVERSITY
For Application and Admission Scan Me

080-29633636

9900072632
9035922191
92/93/94/95

#14/5, CHIKKASANDRA, HESARGHATTA MAIN ROAD, BENGALURU – 560057

admissions@snpsu.edu.in
www.snpsu.edu.in

ಚುಟುಕು

ಮಹಿಳೆಯರ ಸ್ವಾಭಿಮಾನದೊಂದಿಗೆ ಆಟ ಬೇಡ: ಮಮತಾ ಬ್ಯಾನರ್ಜಿ

ಬನಗಾಂವ್ (ಪಶ್ಚಿಮ ಬಂಗಾಳ) (ಪಿಟಿಐ): ದೌರ್ಜನ್ಯಗಳ ಬಗ್ಗೆ ಸುಳ್ಳು ಹೇಳಿಕೆ ನೀಡುವ ಮೂಲಕ ರಾಜ್ಯದ ಮಹಿಳೆಯರ ಸ್ವಾಭಿಮಾನ ಮತ್ತು ಘನತೆಯೊಂದಿಗೆ ಆಟ ಆಡಬೇಡಿ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಾಕೀತು ಮಾಡಿದರು.

ಬನಗಾಂವ್‌ನಲ್ಲಿ ಸೋಮವಾರ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಪಶ್ಚಿಮ ಬಂಗಾಳದ ಸ್ಥಿತಿ ಬಿಜೆಪಿ ಆಡಳಿತವಿರುವ ರಾಜ್ಯಗಳಂತಲ್ಲ ಎನ್ನುವುದನ್ನು ಮೋದಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು' ಎಂದು ಹೇಳಿದರು.

'ನಮ್ಮ ಮಹಿಳೆಯರನ್ನು ಮುಟ್ಟಬೇಡಿ. ಇದು ನಿಮ್ಮ ಉತ್ತರ ಪ್ರದೇಶ, ಮಧ್ಯಪ್ರದೇಶ ಅಲ್ಲ. ಬಂಗಾಳದಲ್ಲಿ ಮಹಿಳೆಯರು ಘನತೆ ಮತ್ತು ಸ್ವಾಭಿಮಾನದಿಂದ ಬದುಕುತ್ತಿದ್ದಾರೆ. ಅವರ ಘನತೆಯೊಂದಿಗೆ ಆಟವಾಡುವ ಮೂಲಕ ಕುತಂತ್ರ ಹೆಣೆಯಬೇಡಿ' ಎಂದು ಎಚ್ಚರಿಸಿದರು.

'ಉತ್ತರ 24 ಪರಗಣ ಜಿಲ್ಲೆಯಂಥ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಕೇಂದ್ರವು ತನ್ನ ಪಡೆಗಳನ್ನು ಬಳಸಿಕೊಂಡು ಟಿಎಂಸಿ ಕಾರ್ಯಕರ್ತರಿಗೆ ತಡೆಯೊಡ್ಡುತ್ತಿದೆ. ಆ ಮೂಲಕ ಬಿಜೆಪಿ ವಿರುದ್ಧ ಕೆಲಸ ಮಾಡದಂತೆ ನೋಡಿಕೊಳ್ಳಲಾಗುತ್ತಿದೆ. ರಾಜ್ಯದ 'ಲಕ್ಷ್ಮಿ ಭಂಡಾರ' ಮಹಿಳಾ ಯೋಜನೆಗೆ ಅನುದಾನ ನಿಲ್ಲಿಸಲು ಕೇಂದ್ರವು ಪಿತೂರಿ ನಡೆಸುತ್ತಿದೆ' ಎಂದು ಆರೋಪಿಸಿದರು.

'ಇಂಡಿಯಾ ಅಧಿಕಾರಕ್ಕೆ ಬಂದರೆ ಮರುದಿನವೇ ಜೈಲಿನಿಂದ ವಾಪಸ್'

ನವದೆಹಲಿ (ಪಿಟಿಐ): 'ಇಂಡಿಯಾ' ಕೂಟವು ಅಧಿಕಾರಕ್ಕೆ ಬಂದರೆ ತಾವು ಜೂನ್ 5ರಂದು (ಫಲಿತಾಂಶ ಘೋಷಣೆ ಆದ ಮಾರನೆಯ ದಿನ) ತಿಹಾರ್ ಜೈಲಿನಿಂದ ವಾಪಸ್ ಬರುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೋಮವಾರ ಹೇಳಿದ್ದಾರೆ. 'ನಾನು ಜೂನ್ 2ರಂದು ಜೈಲಿಗೆ ಹಿಂದಿರುಗಬೇಕು. ಜೂನ್ 4ರಂದು ನಾನು ಜೈಲಿನಲ್ಲಿ ಚುನಾವಣೆಯ ಫಲಿತಾಂಶ ನೋಡುತ್ತೇನೆ' ಎಂದು ಹೇಳಿದರು.

ಎಎಪಿಯ ಕೌನ್ಸಿಲರ್‌ಗಳ ಸಭೆಯಲ್ಲಿ ಮಾತನಾಡಿದ ಅವರು, 'ತಿಹಾರ್ ಜೈಲಿನಲ್ಲಿದ್ದಾಗ ನನ್ನನ್ನು ಅವಮಾನಿಸಲು, ಆತ್ಮಸ್ಥೈರ್ಯ ಕುಸಿಯುವಂತೆ ಮಾಡಲು ಪ್ರಯತ್ನಿಸಲಾಯಿತು' ಎಂದು ಆರೋಪಿಸಿದರು.

'ಜೈಲಿನ ನನ್ನ ಕೋಣೆಯಲ್ಲಿ ಎರಡು ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಅದರ ವಿಡಿಯೊಗಳನ್ನು 13 ಮಂದಿ ಅಧಿಕಾರಿಗಳು ಪರಿಶೀಲಿಸುತ್ತಿದ್ದರು. ವಿಡಿಯೊಗಳನ್ನು ಪ್ರಧಾನಿ ಕಾರ್ಯಾಲಯಕ್ಕೂ ಕಳುಹಿಸಲಾಗುತ್ತಿದೆ ಎಂದು ಹೇಳಲಾಗುತ್ತಿತ್ತು. ಮೋದಿಜೀ ನನ್ನ ಮೇಲೆ ನಿಗಾ ಇಟ್ಟಿದ್ದರು. ಮೋದಿ ಅವರಿಗೆ ನನ್ನ ಮೇಲೆ ಏನು ದ್ವೇಷವೋ ಗೊತ್ತಿಲ್ಲ' ಎಂದು ಹೇಳಿದರು.

'ಎಎಪಿ ಮುಖಂಡರನ್ನು ಜನ ಗೌರವಿಸುತ್ತಾರೆ ಮತ್ತು ಪ್ರೀತಿಸುತ್ತಾರೆ. ನಮ್ಮ ಕೆಲಸ ಕಂಡು ಬಿಜೆಪಿಯವರಿಗೆ ಭಯ' ಎಂದು ಅಭಿಪ್ರಾಯಪಟ್ಟರು.

ಸ್ವರ್ಣ್ ಸಲಾರಿಯಾ ಎಎಪಿ ಸೇರ್ಪಡೆ

ಚಂಡೀಗಢ (ಪಿಟಿಐ): ಪಂಜಾಬ್‌ನ ಬಿಜೆಪಿ ಮುಖಂಡ ಸ್ವರ್ಣ್ ಸಲಾರಿಯಾ ಅವರು ಸೋಮವಾರ ಎಎಪಿಗೆ ಸೇರ್ಪಡೆಯಾದರು. ಅವರಿಗೆ ಬಿಜೆಪಿ ಗುರುದಾಸ್‌ಪುರ ಲೋಕಸಭಾ ಕ್ಷೇತ್ರದ ಟಿಕೆಟ್ ನಿರಾಕರಿಸಿತ್ತು.

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಸಲಾರಿಯಾ ಅವರನ್ನು ಪಕ್ಷಕ್ಕೆ ಸ್ವಾಗತಿಸಿದರು.

ಕಳೆದ ತಿಂಗಳು ಬಿಜೆಪಿಯು ಮಾಜಿ ಶಾಸಕ ದಿನೇಶ್ ಬಬ್ಬು ಅವರಿಗೆ ಗುರುದಾಸ್‌ಪುರ ಲೋಕಸಭಾ ಕ್ಷೇತ್ರದ ಟಿಕೆಟ್ ಘೋಷಿಸಿತ್ತು. ಆಗಿನಿಂದ ಪಕ್ಷದ ನಾಯಕರ ವಿರುದ್ಧ ಸಲಾರಿಯಾ ಬಂಡೆದ್ದಿದ್ದರು. ಸಲಾರಿಯಾ ಅವರು ಮಾಜಿ ಸಂಸದ ವಿನೋದ್ ಖನ್ನಾ ನಿಧನದ ನಂತರ ನಡೆದಿದ್ದ ಗುರುದಾಸ್‌ಪುರ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಆಗ ಅವರು ಕಾಂಗ್ರೆಸ್‌ನ ಸುನಿಲ್ ಜಾಖಡ್ ವಿರುದ್ಧ ಸೋಲು ಅನುಭವಿಸಿದ್ದರು. ನಂತರ ಬಿಜೆಪಿ ಸೇರಿದ್ದ ಸುನಿಲ್ ಜಾಖಡ್, ಈಗ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ.

2022ರ ವಿಧಾನಸಭೆ ಚುನಾವಣೆಯಲ್ಲಿ ಆನಂದಪುರ ಕ್ಷೇತ್ರದಿಂದ ಶಿರೋಮಣಿ ಅಕಾಲಿ ದಳ–ಬಿಎಸ್‌ಪಿ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದ ನಿತಿನ್ ನಂದಾ ಅವರು ಕೂಡ ಎಎಪಿಗೆ ಸೇರ್ಪಡೆಯಾದರು.

ಎಂಥಾ ಮಾತು!

ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂಬುದು ಭಗವಾನ್ ರಾಮನ ಇಚ್ಛೆಯಾಗಿದೆ. ನಾಲ್ಕನೇ ಹಂತದ ಮತದಾನದ ಬಳಿಕ ಮೋದಿ ಅಲೆ, ಸುನಾಮಿಯಾಗಿ ಬದಲಾಗಿದೆ. 'ರಾಮದ್ರೋಹಿ'ಗಳು ಮಾತ್ರ ಮೋದಿ ಅವರನ್ನು ವಿರೋಧಿಸುತ್ತಿದ್ದಾರೆ. ರಾಹುಲ್ ಗಾಂಧಿಗೂ, ಪಾಕಿಸ್ತಾನಕ್ಕೂ ಏನು ಸಂಬಂಧ ಎಂಬುದೇ ನನಗೆ ತಿಳಿಯುತ್ತಿಲ್ಲ. ಭಾರತದಲ್ಲಿ ನೆಲೆಸಿ, ರಾಯ್‌ಬರೇಲಿಯಲ್ಲಿ ಮತ ಕೇಳುವ ಅವರು ಪಾಕಿಸ್ತಾನದಿಂದ ಬೆಂಬಲ ಪಡೆಯುತ್ತಾರೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಹೇಮಂತ್ ಸೊರೇನ್ ಅವರನ್ನು ನೀವು ಬಂಧಿಸಿದ್ದೀರಿ. ಅದಾನಿ ಮತ್ತು ಅಂಬಾನಿ ಅವರನ್ನು ಏಕೆ ಬಂಧಿಸುತ್ತಿಲ್ಲ? ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಬಂಧನಕ್ಕೊಳಗಾಗಿರುವ 'ಇಂಡಿಯಾ' ಕೂಟದ ಎಲ್ಲಾ ನಾಯಕರನ್ನು ನಾವು ಅಧಿಕಾರಕ್ಕೆ ಬಂದರೆ ಬಂಧಮುಕ್ತಗೊಳಿಸಲಾಗುವುದು. ಮೋದಿ ಅವರು ಮತ್ತೊಂದು ಅವಧಿಗೆ ಅಧಿಕಾರಕ್ಕೇರಿದರೆ, ಭವಿಷ್ಯದಲ್ಲಿ ಈ ದೇಶದಲ್ಲಿ ಚುನಾವಣೆಯೇ ನಡೆಯದು. ಪ್ರಜಾಪ್ರಭುತ್ವ ಮತ್ತು ಸಂವಿಧಾನವು ಅಪಾಯದಲ್ಲಿದೆ. ನೀವು ಮೂಲಭೂತ ಹಕ್ಕುಗಳನ್ನು ಕಳೆದುಕೊಂಡರೆ ಗುಲಾಮರಾಗಿ ಬದಲಾಗುತ್ತೀರಿ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ

ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ತುರುಸಿನ ಹಣಾಹಣಿ ಏರ್ಪಟ್ಟಿದೆ. ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದಿಂದ ಕಣಕ್ಕಿಳಿದಿದ್ದಾರೆ. ಪಿಡಿಪಿಯಿಂದ ಮಾಜಿ ರಾಜ್ಯಸಭಾ ಸದಸ್ಯ ಮೊಹಮ್ಮದ್ ಫಯಾಜ್ ಮೀರ್ ಹಾಗೂ ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಕಾನ್ಫರೆನ್ಸ್‌ನಿಂದ ಸಜ್ಜಾದ್ ಗನಿ ಲೋನ್ ಅಖಾಡಕ್ಕಿಳಿದಿದ್ದು, ತ್ರಿಕೋನ ಹೋರಾಟ ನಿರೀಕ್ಷಿಸಲಾಗಿದೆ. 2019ರಲ್ಲಿ ಈ ಕ್ಷೇತ್ರದಿಂದ ನ್ಯಾಷನಲ್ ಕಾನ್ಫರೆನ್ಸ್‌ನ ಮೊಹಮ್ಮದ್ ಅಕ್ಬರ್ ಲೋನ್ ಅವರು ಆಯ್ಕೆಯಾಗಿದ್ದರು. ಬಿಜೆಪಿಯು ಇಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ಸಜ್ಜಾದ್ ಲೋನ್ ಅವರು ಬಿಜೆಪಿ ಬೆಂಬಲದೊಂದಿಗೆ ಕಣಕ್ಕಿಳಿದಿದ್ದಾರೆ ಎಂದು ಒಮರ್ ಆರೋಪಿಸಿದ್ದಾರೆ. 'ತಾವು ಸಂಸತ್‌ಗೆ ಆಯ್ಕೆಯಾದರೆ ಬಿಜೆಪಿ ಜತೆ ಸೇರುವುದಿಲ್ಲ ಎಂದು ಬಹಿರಂಗವಾಗಿ ಮಾತುಕೊಡಬೇಕು' ಎಂದು ಲೋನ್ ಅವರಿಗೆ ಈಚೆಗೆ ಸವಾಲು ಹಾಕಿದ್ದರು. ನ್ಯಾಷನಲ್ ಕಾನ್ಫರೆನ್ಸ್ ಪಕ್ಷಕ್ಕೆ ಕೆಲವು ಕಡೆ ರ್‍ಯಾಲಿ ನಡೆಸಲು ಜಮ್ಮು ಮತ್ತು ಕಾಶ್ಮೀರದ ಆಡಳಿತ ಅವಕಾಶ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಒಮರ್ ಅವರು ಚುನಾವಣಾಧಿಕಾರಿಗೆ ಪತ್ರ ಬರೆದಿದ್ದರು. ಆ ಬಳಿಕ ಪ್ರಚಾರ ಸಭೆಗಳನ್ನು ನಡೆಸಲು ಅನುಮತಿ ಲಭಿಸಿತ್ತು. ಈ ಕ್ಷೇತ್ರದಲ್ಲಿ ಶಿಯಾ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರ ಬೆಂಬಲ ಒಮರ್ ಅವರಿಗೆ ಲಭಿಸಬಹುದು ಎಂದು ವಿಶ್ಲೇಷಿಸಲಾಗಿದೆ. ಬಾರಾಮುಲ್ಲಾ ಕ್ಷೇತ್ರದಲ್ಲಿ ಮೇ 20ರಂದು ಮತದಾನ ನಡೆಯಲಿದೆ.

ಪಂಜಾಬ್: ಕಾಂಗ್ರೆಸ್, ಆಮ್ ಆದ್ಮಿ ಪಕ್ಷ, ಶಿರೋಮಣಿ ಅಕಾಲಿ ದಳ, ಬಿಜೆಪಿ ನಡುವೆ ಹಣಾಹಣಿ

ಪಂಚ ನದಿಗಳ ನಾಡಲ್ಲಿ ಚತುಷ್ಕೋನ ಸ್ಪರ್ಧೆ

• ಮಂಜುನಾಥ ಹೆಬ್ಬಾರ್

ಲೋಕಸಭಾ ಚುನಾವಣಾ ಫಲಿತಾಂಶ



ನವದೆಹಲಿ: ಪಂಚ ನದಿಗಳ ಬೀಡು ಹಾಗೂ ಸಿಖ್ ಧರ್ಮೀಯರ ನಾಡು ಪಂಜಾಬ್ ಬಹು ಆಯಾಮದ ಲೋಕಸಭಾ ಚುನಾವಣಾ ಕದನಕ್ಕೆ ಸಜ್ಜಾಗಿದೆ. ಕಾಂಗ್ರೆಸ್, ಆಮ್ ಆದ್ಮಿ ಪಕ್ಷ (ಎಎಪಿ), ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಹಾಗೂ ಬಿಜೆಪಿ ನಡುವೆ ಚತುಷ್ಕೋನ ಹಣಾಹಣಿ ನಡೆಯಲಿದೆ. ರಾಜ್ಯದಲ್ಲಿ ಜೂನ್ 1ರಂದು ಮತದಾನ ನಡೆಯಲಿದೆ.

ಪಂಜಾಬ್‌ನಲ್ಲಿ 13 ಲೋಕಸಭಾ ಕ್ಷೇತ್ರಗಳಿವೆ. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಎಂಟು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಉತ್ತರ ಭಾರತದ ರಾಜ್ಯವೊಂದರಲ್ಲಿ ಕೈ ಪಾಳಯವು ಗರಿಷ್ಠ ಸ್ಥಾನಗಳನ್ನು ಗಳಿಸಿದ್ದು ಪಂಜಾಬ್‌ನಲ್ಲೇ. ಆಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. 2022ರ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಅಭೂತಪೂರ್ವ ಜಯ ಗಳಿಸಿತ್ತು. ಲೋಕಸಭಾ ಚುನಾವಣೆಗೆ ದೆಹಲಿ, ಹರಿಯಾಣ ಹಾಗೂ ಗುಜರಾತ್‌ನಲ್ಲಿ ಕಾಂಗ್ರೆಸ್–ಎಎಪಿ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿವೆ. ಆದರೆ, ಪಂಜಾಬ್‌ನಲ್ಲಿ ಪ್ರತ್ಯೇಕವಾಗಿ ಸ್ಪರ್ಧೆಗಿಳಿದಿವೆ. 'ಇಂಡಿಯಾ' ಮೈತ್ರಿಕೂಟದ ದೋಸ್ತಿಗಳು ಇಲ್ಲಿ ಕುಸ್ತಿಗೆ ಇಳಿದಿವೆ.

ಪ್ರಮುಖ ನಾಯಕರು ಅಖಾಡಕ್ಕೆ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೈ ಪಾಳಯದ ಸೋಲಿಗೆ ಆಡಳಿತ ವಿರೋಧಿ ಅಲೆಯ ಜತೆಗೆ ಆಂತರಿಕ ಕಿತ್ತಾಟವೇ ಪ್ರಮುಖ ಕಾರಣವಾಗಿತ್ತು. ರಾಜ್ಯ ಘಟಕದಲ್ಲಿ ಹಲವು ಬಣಗಳಿದ್ದವು. ಚುನಾವಣೆಯಲ್ಲಿ ಹೀನಾಯವಾಗಿ ಸೋತ ಬಳಿಕ ನಾಯಕರು ಮೌನಕ್ಕೆ ಶರಣಾಗಿದ್ದರು. ಪಕ್ಷ ಸಂಘಟನೆಯಲ್ಲೂ ಸಕ್ರಿಯರಾಗಿರಲಿಲ್ಲ. ಹಲವು ನಾಯಕರು ಬಿಜೆಪಿ ಹಾಗೂ ಎಎಪಿಗೆ ವಲಸೆ ಹೋಗಿದ್ದರು. ಆದರೆ, ಲೋಕಸಭಾ ಚುನಾವಣೆಯಲ್ಲಿ ಪಕ್ಷವು ತನ್ನ ತಂತ್ರಗಾರಿಕೆಯಲ್ಲಿ ಬದಲಾವಣೆ ಮಾಡಿದೆ. ರಾಜ್ಯದ ಪ್ರಮುಖ ನಾಯಕರಾದ ಮಾಜಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ, ರಾಜ್ಯ ಘಟಕದ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ ವಾರಿಂಗ್, ಹಿರಿಯ ನಾಯಕ ಸುಖ್ವಿಂದರ್ ಸಿಂಗ್ ರಾಂಧವಾ ಅವರನ್ನು ಉಮೇದುವಾರರನ್ನಾಗಿ ಮಾಡಿದೆ. ಈ ಪ್ರಯೋಗ ಫಲ ಕೊಡಬಹುದು ಎಂಬುದು ಕಾಂಗ್ರೆಸ್ ನಾಯಕರ ಅಂದಾಜು.

ಚರಣ್‌ಜಿತ್ ಸಿಂಗ್ ಚನ್ನಿ

ಎಎಪಿ ಮುಂದಿರುವ ಸವಾಲು

2014ರ ಲೋಕಸಭಾ ಚುನಾವಣೆಯಲ್ಲೇ ರಾಜ್ಯದಲ್ಲಿ ಗಮನಾರ್ಹ ಸಾಧನೆ ಮಾಡಿದ್ದ ಎಎಪಿ, 4 ಕ್ಷೇತ್ರಗಳಲ್ಲಿ ಗೆದ್ದಿತ್ತು. ಕೆಲವು ಕ್ಷೇತ್ರಗಳಲ್ಲಿ ಕೂದಲೆಳೆ ಅಂತರದಲ್ಲಿ ಗೆಲುವು ತಪ್ಪಿಸಿಕೊಂಡಿತ್ತು. ಆದರೆ, 2019ರ ಚುನಾವಣೆಯಲ್ಲಿ ಪಕ್ಷವು ಒಂದು ಕ್ಷೇತ್ರದಲ್ಲಷ್ಟೇ ಗೆದ್ದಿತ್ತು. ಮತ ಪ್ರಮಾಣವು ಶೇ 24.5ರಿಂದ 7.5ಕ್ಕೆ ಕುಸಿದಿತ್ತು. ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿತ್ತು. 300 ಯೂನಿಟ್ ಉಚಿತ ವಿದ್ಯುತ್, ಆಮ್ ಆದ್ಮಿ ಕ್ಲಿನಿಕ್‌ನಂತಹ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನವು ಮತ ತಂದುಕೊಡಬಲ್ಲದು ಎಂಬುದು ಎಎಪಿ ನಾಯಕರ ವಿಶ್ವಾಸ. ಆದರೆ, ಎಎಪಿ ಅಂದುಕೊಂಡಷ್ಟು ಈ ಬಾರಿ ಚುನಾವಣಾ ಕಣ ಸುಲಭವಾಗಿಲ್ಲ. ಮೂರು ಪಕ್ಷಗಳ ಸವಾಲನ್ನು ಎಎಪಿ ಎದುರಿಸಬೇಕಿದೆ. ಜತೆಗೆ, ರೈತರ ಹೋರಾಟವನ್ನು ಹತ್ತಿಕ್ಕುವ ಕೆಲಸವನ್ನು ಭಗವಂತ್ ಸಿಂಗ್ ಮಾನ್ ಸರ್ಕಾರ ಮಾಡಿದೆ ಎಂಬ ಗಂಭೀರ ಆರೋಪ ಇದೆ.

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್

ಅಕಾಲಿ ದಳದ ಲೆಕ್ಕಾಚಾರವೇನು?

ರಾಜ್ಯದಲ್ಲಿ ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಹಾಗೂ ಬಿಜೆಪಿ 1990ರ ದಶಕದಿಂದಲೂ ಮಿತ್ರ ಪಕ್ಷಗಳಾಗಿದ್ದವು. ಮೈತ್ರಿಕೂಟದಲ್ಲಿ ಬಿಜೆಪಿ ಕಿರಿಯ ಪಾಲುದಾರ ಪಕ್ಷವಾಗಿತ್ತು. ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ, ಬಿಜೆಪಿ ಜತೆಗಿನ ಮೈತ್ರಿಯನ್ನು ಎಸ್‌ಎಡಿ 2020ರ ಸೆಪ್ಟೆಂಬರ್‌ನಲ್ಲಿ ಕಡಿದುಕೊಂಡಿತ್ತು. ಹಾಗಾಗಿ, ಪಂಜಾಬ್‌ನಲ್ಲಿ ಬಿಜೆಪಿ ಏಕಾಂಗಿಯಾಗಿತ್ತು. 2022ರ ವಿಧಾನಸಭಾ ಚುನಾವಣೆಯಲ್ಲಿ ಎಸ್‌ಎಡಿ ಗೆದ್ದಿದ್ದು ಮೂರು ಕ್ಷೇತ್ರಗಳಲ್ಲಿ ಮಾತ್ರ. ಬಿಜೆಪಿ ಎರಡು ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿತ್ತು. ಪ್ರಕಾಶ್ ಸಿಂಗ್ ಬಾದಲ್ ನಿಧನದ ಬಳಿಕ ಪಕ್ಷವು ಮತ್ತಷ್ಟು ಸೊರಗಿದೆ. ಲೋಕಸಭಾ ಚುನಾವಣೆಯಲ್ಲಿ ಅಕಾಲಿ ದಳದೊಂದಿಗೆ ಮೈತ್ರಿ ಮಾಡಿಕೊಳ್ಳಲು ಬಿಜೆಪಿ ಉತ್ಸುಕತೆ ತೋರಿತ್ತು. ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡರೆ ಜಾಟರ ಮತಗಳು ಕೈ ತಪ್ಪಿಹೋಗಬಹುದು ಎಂಬ ಕಾರಣಕ್ಕೆ ಎಸ್‌ಎಡಿ ನಾಯಕರು ಮೈತ್ರಿಗೆ ಹಸಿರು ನಿಶಾನೆ ತೋರಲಿಲ್ಲ.

ವಲಸೆ ನಾಯಕರೇ ಬಿಜೆಪಿಗೆ ಆಸರೆ

ಪಂಜಾಬ್‌ನಲ್ಲಿ ಬಿಜೆಪಿಗೆ ಸ್ವಂತ ಅಸ್ತಿತ್ವ ಎಂಬುದು ಇತ್ತೀಚಿನ ವರೆಗೆ ಇರಲೇ ಇಲ್ಲ. ಕಾಂಗ್ರೆಸ್ ಹಾಗೂ ಎಎಪಿಯ ಪ್ರಮುಖ ನಾಯಕರನ್ನು ಸೆಳೆದುಕೊಂಡಿರುವ ಪಕ್ಷವು ಈ ಸಲ ಉತ್ತಮ ಸಾಧನೆ ಮಾಡುವ ವಿಶ್ವಾಸದಲ್ಲಿದೆ.

ಪಂಜಾಬ್ ಮುಖ್ಯಮಂತ್ರಿ ಹುದ್ದೆಯಿಂದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ವಿಧಾನಸಭಾ ಚುನಾವಣೆಗೆ ಆರು ತಿಂಗಳಿರುವಾಗ ಕೆಳಗಿಳಿಸಲಾಗಿತ್ತು. 'ಪಂಜಾಬ್ ಲೋಕ ಕಾಂಗ್ರೆಸ್' ಪಕ್ಷ ಸ್ಥಾಪಿಸಿದ್ದ ಅವರು ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದ್ದರು. ಆದರೆ, ಅವರ ಪಕ್ಷವು ಹೀನಾಯವಾಗಿ ಸೋತಿತ್ತು. ಬಳಿಕ ಅವರು ತಮ್ಮ ಪಕ್ಷವನ್ನು ಬಿಜೆಪಿ ಜತೆಗೆ ವಿಲೀನಗೊಳಿಸಿದ್ದರು. ಅವರ ಪತ್ನಿ ಪ್ರಣೀತ್ ಕೌರ್ ಕಾಂಗ್ರೆಸ್ ಸಂಸದರಾಗಿದ್ದರು. ಲೋಕಸಭಾ ಚುನಾವಣೆಗೆ ಮುನ್ನ ಅವರು ಕಮಲ ಪಾಳಯಕ್ಕೆ ಸೇರಿದ್ದರು. ಅವರನ್ನು ಪಟಿಯಾಲ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ.

ಸುನಿಲ್ ಜಾಖಡ್

ಸುನಿಲ್ ಜಾಖಡ್ ಅವರು ಈ ಹಿಂದೆ ಪಂಜಾಬ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಮುಖ್ಯಮಂತ್ರಿ ಸ್ಥಾನ ಸಿಗದ ಕಾರಣಕ್ಕೆ ಮುನಿಸಿಕೊಂಡ ಅವರು ಬಿಜೆಪಿ ಸೇರ್ಪಡೆಯಾಗಿದ್ದರು. ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಜಾಖಡ್ ಅವರನ್ನು ಕಳೆದ ವರ್ಷ ನೇಮಿಸಲಾಗಿತ್ತು. ಕಾಂಗ್ರೆಸ್ ಸಂಸದ ರವನೀತ್ ಸಿಂಗ್ ಬಿಟ್ಟೂ ಹಾಗೂ ಎಎಪಿಯ ಸಂಸದ ಸುಶೀಲ್ ಕುಮಾರ್ ರಿಂಕು ಇತ್ತೀಚೆಗೆ ಬಿಜೆಪಿಗೆ ಸೇರ್ಪಡೆಯಾಗಿದ್ದರು. ರಾಜ್ಯದಲ್ಲಿ ಈ ಹಿಂದೆ ಬಿಜೆಪಿಗೆ ಪ್ರಭಾವಿ ನಾಯಕರೂ ಇರಲಿಲ್ಲ. ಗೆಲ್ಲಬಲ್ಲ ಅಭ್ಯರ್ಥಿಗಳೂ ಇರಲಿಲ್ಲ. ಪಕ್ಷವು ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು. ರಾಜ್ಯದಲ್ಲಿ ಪಕ್ಷದ ಸಂಘಟನೆಯೂ ವಿಸ್ತರಣೆಗೊಂಡಿದೆ. ಹೀಗಾಗಿ, ಪಕ್ಷವು ಕಳೆದ ಬಾರಿಗಿಂತ ಹೆಚ್ಚಿನ ಸ್ಥಾನಗಳನ್ನು ಗಳಿಸಲಿದೆ ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರ.

ನಮ್ಮ ಕುಟುಂಬ ಜನರಿಗಾಗಿ ಕೆಲಸ ಮಾಡಿತು: ರಾಹುಲ್ ಪ್ರತಿಪಾದನೆ

'ಅಂಬಾನಿ–ಅದಾನಿಗಾಗಿ ಮೋದಿ ಕೆಲಸ'

ರಾಯ್‌ಬರೇಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಂಬಾನಿ–ಅದಾನಿ ಹಿತಾಸಕ್ತಿ ಕಾಪಾಡುವುದಕ್ಕಾಗಿ ಕೆಲಸ ಮಾಡಿದರೆ, ತಮ್ಮ ಕುಟುಂಬವು ಸದಾ ರಾಯ್‌ಬರೇಲಿಯ ಜನರಿಗಾಗಿ ಕೆಲಸ ಮಾಡಿತು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಹೇಳಿದರು.

ರಾಯ್‌ಬರೇಲಿ ಲೋಕಸಭಾ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ ಬಳಿಕ ಮೊದಲ ಬಾರಿಗೆ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ಸಭೆ ನಡೆಸಿದ ಅವರು, ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು. ಜತೆಗೆ ತಮ್ಮ ಅಜ್ಜಿ ಇಂದಿರಾ, ತಂದೆ ರಾಜೀವ್ ಮತ್ತು ತಾಯಿ ಸೋನಿಯಾ ಅವರು ಕ್ಷೇತ್ರದ ಜನರ ಜೀವನ ಉತ್ತಮ ಪಡಿಸಲು ಕೆಲಸ ಮಾಡಿದರು ಎಂದು ಪ್ರತಿಪಾದಿಸಿದರು.

ದೇಶದ ಅತಿ ದೊಡ್ಡ 22–25 ಉದ್ಯಮಿಗಳ ₹16 ಲಕ್ಷ ಕೋಟಿ ಸಾಲವನ್ನು ಮೋದಿ ಮನ್ನಾ ಮಾಡಿದರು ಎಂದು ಆರೋಪಿಸಿದ ರಾಹುಲ್, ಅದು 24 ವರ್ಷಗಳ ನರೇಗಾ ವೆಚ್ಚಕ್ಕೆ ಸಮನಾದ ಮೊತ್ತ ಎಂದು ವಿವರಿಸಿದರು. 'ಇಂಡಿಯಾ' ಕೂಟ ಅಧಿಕಾರಕ್ಕೆ ಬಂದರೆ ಸಣ್ಣ ರೈತರ ಸಾಲ ಮನ್ನಾ ಮಾಡಲಾಗುವುದು ಎಂದು ಭರವಸೆ ನೀಡಿದರು.

ಶೀಘ್ರದಲ್ಲೇ ಮದುವೆ: ರಾಹುಲ್

ರಾಯ್‌ಬರೇಲಿಯಲ್ಲಿ ಸೋಮವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ರಾಹುಲ್ ಗಾಂಧಿ ಅವರಿಗೆ ಒಂದು ಮಾಮೂಲಿ ಪ್ರಶ್ನೆ ಎದುರಾಯಿತು. ಅದು 'ನೀವು ಯಾವಾಗ ಮದುವೆಯಾಗುತ್ತೀರಿ' ಎನ್ನುವುದು. ಅದಕ್ಕೆ ರಾಹುಲ್ 'ಶೀಘ್ರದಲ್ಲೇ' ಎಂದು ಉತ್ತರಿಸಿದರು.

ತಂಗಿ ಪ್ರಿಯಾಂಕಾ ಅವರನ್ನು ವೇದಿಕೆಗೆ ಆಹ್ವಾನಿಸುವ ಮೂಲಕ ರಾಹುಲ್ ತಮ್ಮ ಮಾತು ಅಂತ್ಯಗೊಳಿಸಿದರು. ರಾಹುಲ್ ತಂಗಿಯ ಭುಜದ ಮೇಲೆ ಕೈ ಇಟ್ಟು, ಆತ್ಮೀಯವಾಗಿ ಅವರ ಕೆನ್ನೆ ಮುಟ್ಟಿ ಮೆಚ್ಚುಗೆ ಸೂಚಿಸಿದರು.

'ಚುನಾವಣೆಯಲ್ಲಿ ನಾನು ದೇಶದ ವಿವಿಧ ಭಾಗಗಳನ್ನು ಸುತ್ತುತ್ತಿದ್ದೇನೆ. ನನ್ನ ತಂಗಿ ಇಲ್ಲಿ ಶ್ರಮಿಸುತ್ತಿದ್ದಾಳೆ. ಅದಕ್ಕಾಗಿ ಅವಳಿಗೆ ದೊಡ್ಡ ಧನ್ಯವಾದ' ಎಂದು ಹೇಳಿದರು.

ಆಗ ಪ್ರಿಯಾಂಕಾ, ಜನ ಕೇಳಿದ ಪ್ರಶ್ನೆಗೆ ಮೊದಲು ಉತ್ತರ ಹೇಳು ಎಂದು ಅಣ್ಣನಿಗೆ ಸೂಚಿಸಿದರು. ಆಗ ರಾಹುಲ್, ಕೆಲ ಹೊತ್ತು ಪ್ರಶ್ನೆ ಏನು ಎನ್ನುವುದನ್ನು ಕಂಡುಕೊಳ್ಳಲು ತಡಕಾಡಿ, ನಂತರ ಅದು ತನ್ನ ಮದುವೆಗೆ ಸಂಬಂಧಿಸಿದ್ದು ಎನ್ನುವುದು ಅರಿವಾಗಿ, 'ಶೀಘ್ರದಲ್ಲೇ ಆಗುತ್ತೇನೆ' ಎಂದು ಉತ್ತರಿಸಿದರು.

ಉತ್ತರ ಪ್ರದೇಶದ ರಾಯ್‌ಬರೇಲಿಯಲ್ಲಿ ಲೋಕಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ, ತಂಗಿ ಪ್ರಿಯಾಂಕಾ ಗಾಂಧಿ ಅವರೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ–ಪಿಟಿಐ ಚಿತ್ರ

ಮಹಿಳೆಯರ ಜೀವನ ಪರಿವರ್ತನೆ: ಸೋನಿಯಾ

ನವದೆಹಲಿ: ಪಕ್ಷವು ತನ್ನ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳು ಕಷ್ಟ ಕಾಲದಲ್ಲಿ ಮಹಿಳೆಯರ ಪರಿಸ್ಥಿತಿಯನ್ನು ಉತ್ತಮಪಡಿಸಲಿವೆ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಸೋಮವಾರ ಹೇಳಿದರು.

ಪಕ್ಷವು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ವಿಡಿಯೊ ಸಂದೇಶದಲ್ಲಿ ಮಹಿಳೆಯರ ಬಗ್ಗೆ ಮಾತನಾಡಿದ್ದಾರೆ. 'ನನ್ನ ಪ್ರೀತಿಯ ಸೋದರಿಯರೇ, ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಆಧುನಿಕ ಭಾರತದ ನಿರ್ಮಾಣದವರೆಗೆ, ಮಹಿಳೆಯರ ಕೊಡುಗೆ ಹಿರಿದಾಗಿದೆ. ಆದಾಗ್ಯೂ, ತೀವ್ರ ಹಣದುಬ್ಬರದಿಂದ ನಮ್ಮ ಮಹಿಳೆಯರು ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಅವರ ಕಠಿಣ ಶ್ರಮಕ್ಕೆ ನ್ಯಾಯ ಸಲ್ಲಿಸಲು ಕಾಂಗ್ರೆಸ್ ಪಕ್ಷವು ಕ್ರಾಂತಿಕಾರಕ ಗ್ಯಾರಂಟಿಯನ್ನು ಘೋಷಿಸಿದೆ. ಅದರಂತೆ ಪಕ್ಷವು ದೇಶದ ಪ್ರತಿ ಬಡ ಕುಟುಂಬದ ಮಹಿಳೆಗೆ ವಾರ್ಷಿಕವಾಗಿ ₹1 ಲಕ್ಷ ನೀಡಲಿದೆ' ಎಂದು ಹೇಳಿದರು.

ಸೋನಿಯಾ ಅವರ ವಿಡಿಯೊ ಹಂಚಿಕೊಂಡಿರುವ ರಾಹುಲ್, 'ಕಾಂಗ್ರೆಸ್‌ಗೆ ಮತ ನೀಡಿ, ನಿಮ್ಮ ಜೀವನ ಬದಲಿಸಿಕೊಳ್ಳಿ' ಎಂದು ಹೇಳಿದ್ದಾರೆ.

ಶೇ 12 ಮಹಿಳಾ ಅಭ್ಯರ್ಥಿಗಳು

ನವದೆಹಲಿ (ಪಿಟಿಐ): ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ಪ್ರಾತಿನಿಧ್ಯದ ಪ್ರಮಾಣ ಕಡಿಮೆ ಮಟ್ಟದಲ್ಲೇ ಮುಂದುವರಿದಿದೆ. ಐದನೇ ಹಂತದಲ್ಲಿ ಕಣದಲ್ಲಿರುವ ಅಭ್ಯರ್ಥಿಗಳಲ್ಲಿ ಮಹಿಳೆಯರ ಪ್ರಮಾಣ ಶೇ 12 ರಷ್ಟಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ.

ಐದನೇ ಹಂತದ ಮತದಾನ ಮೇ 20 ರಂದು ನಡೆಯಲಿದ್ದು, ಕಣದಲ್ಲಿ ಒಟ್ಟು 695 ಅಭ್ಯರ್ಥಿಗಳಿದ್ದಾರೆ. ಅದರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 82 ಮಾತ್ರ. ಮೊದಲ ನಾಲ್ಕು ಹಂತಗಳಲ್ಲೂ ಮಹಿಳಾ ಅಭ್ಯರ್ಥಿಗಳ ಪ್ರಮಾಣ ತುಂಬಾ ಕಡಿಮೆಯಿತ್ತು.

ಕಣದಲ್ಲಿರುವ ಅಭ್ಯರ್ಥಿಗಳಲ್ಲಿ 122 ಮಂದಿ (ಶೇ 18) ಗಂಭೀರ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. 29 ಮಂದಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ ಎಂಬ ಅಂಶ ವರದಿಯಲ್ಲಿದೆ.

ಶೇ 33 ಅಭ್ಯರ್ಥಿಗಳು ಕೋಟ್ಯಧಿಪತಿಗಳಾಗಿದ್ದು, ಸರಾಸರಿ ಆಸ್ತಿ ₹ 3.56 ಕೋಟಿ ಆಗಿದೆ. ಶ್ರೀಮಂತ ಅಭ್ಯರ್ಥಿಗಳಲ್ಲಿ ಮೊದಲ ಮೂರು ಸ್ಥಾನಗಳಲ್ಲಿರುವವರು ₹ 110 ರಿಂದ ₹ 212 ಕೋಟಿಯವರೆಗೆ ಆಸ್ತಿ ಘೋಷಿಸಿಕೊಂಡಿದ್ದಾರೆ.

ಐದನೇ ಹಂತ

695 ಒಟ್ಟು ಅಭ್ಯರ್ಥಿಗಳು

23% ಅಪರಾಧ ಪ್ರಕರಣ ಎದುರಿಸುತ್ತಿರುವವರು

18% ಗಂಭೀರ ಅಪರಾಧ ಪ್ರಕರಣ ಎದುರಿಸುತ್ತಿರುವವರು

33% ಕೋಟ್ಯಧಿಪತಿಗಳು



ಅನುರಾಗ್ ನಾಮಪತ್ರ ಸಲ್ಲಿಕೆ

ಹಮೀರ್‌ಪುರ/ ಶಿಮ್ಲಾ (ಹಿಮಾಚಲ ಪ್ರದೇಶ) (ಪಿಟಿಐ): ಕೇಂದ್ರ ಸಚಿವ ಅನುರಾಗ್ ಠಾಕೂರ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ವಿನೋದ್ ಸುಲ್ತಾನ್‌ಪುರಿ ಅವರು ಕ್ರಮವಾಗಿ ಹಮೀರ್‌ಪುರ ಹಾಗೂ ಶಿಮ್ಲಾ ಲೋಕಸಭಾ ಕ್ಷೇತ್ರಗಳಿಂದ ಸೋಮವಾರ ನಾಮಪತ್ರ ಸಲ್ಲಿಸಿದರು.

ಅನುರಾಗ್ ನಾಮಪತ್ರ ಸಲ್ಲಿಸುವಾಗ ಅವರ ಸಹೋದರ, ಇಂಡಿಯನ್ ಪ್ರೀಮಿಯರ್ ಲೀಗ್ ಮುಖ್ಯಸ್ಥ ಅರುಣ್ ಧುಮಾಲ್ ಹಾಗೂ ಬಿಜೆಪಿ ಮುಖಂಡರು ಜತೆಗಿದ್ದರು. ಅನುರಾಗ್ ಅವರು ಹಿಮಾಚಲ ಪ್ರದೇಶದ ಹಮೀರ್‌ಪುರ ಕ್ಷೇತ್ರದಿಂದ ಐದನೇ ಬಾರಿ ಆಯ್ಕೆ ಬಯಸಿ ಕಣಕ್ಕಿಳಿದಿದ್ದಾರೆ.

ನಾಮಪತ್ರ ಸಲ್ಲಿಕೆಗೂ ಮುನ್ನ ಅವರು ಅವಾಹದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರಲ್ಲದೆ, ಹಲವು ಕಡೆ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡರು.

ಕಾಂಗ್ರೆಸ್ ಪಕ್ಷವು ಅನುರಾಗ್ ವಿರುದ್ಧ ಉನಾ ಕ್ಷೇತ್ರದ ಮಾಜಿ ಶಾಸಕ ಸತ್ಪಾಲ್ ರಾಯಜಾದಾ ಅವರನ್ನು ಕಣಕ್ಕಿಳಿಸಿದೆ.

ಶಿಮ್ಲಾದಲ್ಲಿ ಹಾಲಿ ಸಂಸದ ಕಾಂಗ್ರೆಸ್‌ನ ವಿನೋದ್ ಸುಲ್ತಾನ್‌ಪುರಿ ಅವರು ನಾಮಪತ್ರ ಸಲ್ಲಿಸುವಾಗ ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಇದ್ದರು.

'ಇಂಡಿಯಾ' ಕೂಟದ ನಾಯಕರ ಹೇಳಿಕೆಗೆ ಪ್ರಧಾನಿ ನರೇಂದ್ರ ಮೋದಿ ಲೇವಡಿ

'ಪಾಕ್ ಬಳಿ ಸಾಕಷ್ಟು ಬಳೆ ಕೂಡ ಇಲ್ಲ'

ಮುಜಫರ್‌ಪುರ/ಹಾಜಿಪುರ/ಸರಣ್ (ಪಿಟಿಐ): 'ಇಂಡಿಯಾ' ಕೂಟದ ನಾಯಕರು ಹೇಡಿಗಳು, ಅವರು ಪಾಕಿಸ್ತಾನದ ಬಗ್ಗೆ ಭಯಗೊಂಡಿದ್ದಾರೆ ಮತ್ತು ಅದರ ಅಣ್ವಸ್ತ್ರ ಶಕ್ತಿಯು ಅವರಿಗೆ ದುಃಸ್ವಪ್ನವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ವಾಗ್ದಾಳಿ ನಡೆಸಿದರು.

ಬಿಹಾರದ ಹಾಜಿಪುರ, ಮುಜಫರ್‌ಪುರ ಮತ್ತು ಸರಣ್‌ಗಳಲ್ಲಿ ಸರಣಿ ರ್‍ಯಾಲಿಗಳನ್ನು ನಡೆಸಿದ ಅವರು, ಫಾರೂಕ್ ಅಬ್ದುಲ್ಲಾ ಅವರ ಹೆಸರು ಹೇಳದೇ ಅವರ ಹೇಳಿಕೆಗೆ ತಿರುಗೇಟು ನೀಡಿದರು.

'ಪಾಕಿಸ್ತಾನವು ಬಳೆ ತೊಟ್ಟಿಲ್ಲ ಎನ್ನುವುದಾದರೆ, ಬಳೆ ತೊಡುವಂತೆ ನಾವು ಮಾಡುತ್ತೇವೆ. ಅವರ ಬಳಿ ಆಹಾರ ಧಾನ್ಯಗಳು ಇಲ್ಲ ಎನ್ನುವುದು ನನಗೆ ಗೊತ್ತಿದೆ. ಅವರ ಬಳಿ ಅಗತ್ಯವಿರುವಷ್ಟು ಬಳೆ ಕೂಡ ಇಲ್ಲ ಎನ್ನುವುದು ಈಗ ಗೊತ್ತಾಯಿತು' ಎಂದು ಲೇವಡಿ ಮಾಡಿದರು.

'ಆದರೆ, ಅಂಜುಬುರುಕರೇ ತುಂಬಿರುವ ವಿರೋಧ ಪಕ್ಷವನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕು. ಅವರು ಭಯೋತ್ಪಾದನೆಗೆ ಸಂಬಂಧಿಸಿದಂತೆ ಪಾಕಿಸ್ತಾನವನ್ನು ಆರೋಪಮುಕ್ತಗೊಳಿಸಿದರು, ನಿರ್ದಿಷ್ಟ ದಾಳಿ ಬಗ್ಗೆ ಗುಮಾನಿ ವ್ಯಕ್ತಪಡಿಸಿದರು. ಅವರ ಮಿತ್ರರಾದ ಎಡಪಕ್ಷಗಳಂತೂ ನಾವು ಶಸ್ತ್ರಾಸ್ತ್ರಗಳನ್ನೇ ತ್ಯಜಿಸಬೇಕು ಎಂದು ಬಯಸಿದ್ದವು' ಎಂದು ಹೇಳಿದರು.

'ವಿರೋಧ ಪಕ್ಷಗಳ ಮುಖಂಡರು ತಮ್ಮ ಸಂತತಿಯನ್ನು ಬೆಳೆಸುತ್ತಿದ್ದು, ನನಗೆ ಯಾವ ಉತ್ತರಾಧಿಕಾರಿಯೂ ಇಲ್ಲ. ಸಾಮಾನ್ಯ ಜನರೇ ನನ್ನ ಉತ್ತರಾಧಿಕಾರಿಗಳು' ಎಂದು ಪ್ರತಿಪಾದಿಸಿದರು.

ತಮ್ಮ ಸರ್ಕಾರ ಕೈಗೊಂಡ ತ್ವರಿತ ಗತಿಯ ಹೆದ್ದಾರಿ ನಿರ್ಮಾಣ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣಕ್ಕೆ ಬದ್ಧತೆ ಮುಂತಾದ ಕ್ರಮಗಳನ್ನು ವಿವರಿಸಿದ ಮೋದಿ ಅವರು, ಮಹಿಳಾ ಮೀಸಲಾತಿಗೆ ಅಡ್ಡಿಪಡಿಸಿದವು ಎಂದು ವಿರೋಧ ಪಕ್ಷಗಳನ್ನು ಟೀಕಿಸಿದರು.

ವಾರಾಣಸಿಯಲ್ಲಿ ಸೋಮವಾರ ನಡೆದ ರೋಡ್ ಶೋನಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪಾಲ್ಗೊಂಡರು —ಎಎಫ್‌ಪಿ ಚಿತ್ರ

'70 ಟ್ರಕ್ ಹಣ ವಶಕ್ಕೆ ಪಡೆದಿದ್ದೇವೆ'

'ರಾಜಕಾರಣಿಗಳ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡ ಹಣವು ಈ ದೇಶದ ಬಡವರಿಗೆ ಸೇರಿದ್ದು' ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

'ಇ.ಡಿ.ಯಂತಹ ಸಂಸ್ಥೆಗಳ ಕ್ರಮದ ವಿರುದ್ಧ ಅವರು ಯಾಕೆ ಧ್ವನಿ ಎತ್ತುತ್ತಿದ್ದಾರೆ ಎಂದು ಹೇಳುತ್ತೇನೆ ಕೇಳಿ. ಹಿಂದಿನ ಕಾಂಗ್ರೆಸ್ ಅವಧಿಯಲ್ಲಿ ಇ.ಡಿ ಅಧಿಕಾರಿಗಳು ಶಾಲಾ ಬ್ಯಾಗ್‌ನಲ್ಲಿ ಒಯ್ಯುವಷ್ಟು, ಅಂದರೆ ₹35 ಲಕ್ಷ ವಶಪಡಿಸಿಕೊಂಡಿದ್ದರು. ನಾವು ಅಧಿಕಾರ ಹಿಡಿದಂದಿನಿಂದ ಸಂಸ್ಥೆಯು ₹2,200 ಕೋಟಿ, ಅಂದರೆ 70 ಸಣ್ಣ ಟ್ರಕ್‌ಗಳಲ್ಲಿ ಒಯ್ಯುವಷ್ಟು, ಹಣ ವಶಕ್ಕೆ ಪಡೆದಿದ್ದೇವೆ' ಎಂದರು.

'ಮೋದಿ ಸರ್ಕಾರ ಸಣ್ಣ ಉದ್ದಿಮೆಗಳ ವಿರೋಧಿ'

ನವದೆಹಲಿ (ಪಿಟಿಐ): ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಣ್ಣ, ಅತಿ ಸಣ್ಣ, ಮಧ್ಯಮ ಕೈಗಾರಿಕೋದ್ಯಮಿಗಳ (ಎಂಎಸ್‌ಎಂಇ) ವಿರೋಧಿ ಆಗಿದೆ ಎಂದು ಕಾಂಗ್ರೆಸ್ ಆರೋಪಿಸಿದ್ದು, ಕಳೆದ 10 ವರ್ಷದಲ್ಲಿ ಸಾವಿರಾರು ಸಣ್ಣ ಉದ್ಯಮಗಳು ಬಾಗಿಲು ಮುಚ್ಚಿವೆ ಎಂದು ಸೋಮವಾರ ಹೇಳಿದೆ.

ಎಂಎಸ್‌ಎಂಇ ವಲಯವು ಜಿಡಿಪಿಗೆ ಶೇ 30ರಷ್ಟು ಮತ್ತು ರಫ್ತಿಗೆ ಶೇ 40ರಷ್ಟು ಕೊಡುಗೆ ನೀಡುತ್ತಿದ್ದು, 12 ಕೋಟಿ ಮಂದಿಗೆ ಉದ್ಯೋಗ ಒದಗಿಸಿದೆ ಎಂದು ಪಕ್ಷದ ಮುಖಂಡ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಜೈರಾಮ್ ರಮೇಶ್

'ಆದಾಗ್ಯೂ, ನಿರ್ಲಕ್ಷ್ಯ ಅಥವಾ ದುರುದ್ದೇಶಪೂರಿತ ಎಂಎಸ್‌ಎಂಇ ವಿರೋಧಿ ನೀತಿಗಳಿಂದ ಭಾರತದ ಸಣ್ಣ ಉದ್ದಿಮೆಗಳು ಕಳೆದ 10 ವರ್ಷಗಳ 'ಅನ್ಯಾಯ ಕಾಲ'ದಲ್ಲಿ ಸಂಕಷ್ಟಕ್ಕೀಡಾಗಿವೆ. ನರೇಂದ್ರ ಮೋದಿ ಕಳೆದ ಒಂದು ದಶಕದಲ್ಲಿ ಆಯ್ದ ತಮ್ಮ ಸ್ನೇಹಿತರಿಗಾಗಿ ಕೆಲಸ ಮಾಡಿದ ವಿಚಾರ ಎಲ್ಲರಿಗೂ ಚೆನ್ನಾಗಿ ತಿಳಿದಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಅದರ ಫಲವಾಗಿ ಎಂಎಸ್‌ಎಂಇಗಳು ಜಿಡಿಪಿಗೆ ದಶಕಗಳಲ್ಲಿಯೇ ಅತಿ ಕಡಿಮೆ ಕೊಡುಗೆ ನೀಡಿದ್ದು, ದಶಕಗಳಲ್ಲಿಯೇ ಅತಿ ಹೆಚ್ಚು ತೆರಿಗೆ ಹೊರೆಯನ್ನು ಭರಿಸಿವೆ. ಜತೆಗೆ ತೀವ್ರ ಉದ್ಯೋಗ ನಷ್ಟ ಮತ್ತು ಬೆಲೆ ಏರಿಕೆಯನ್ನು ಎದುರಿಸುತ್ತಿವೆ. ಸಾವಿರಾರು ಎಂಎಸ್‌ಎಂಇಗಳು ಬಾಗಿಲು ಮುಚ್ಚುತ್ತಿವೆ' ಎಂದರು.

ಮಂಗಳವಾರ, ಮೇ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 134 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಪೋಷಕರ ಸಿಡುಕು, ಹತಾಶೆಗಳು ಮಕ್ಕಳ ಮನೋಪ್ರಪಂಚವನ್ನು ಹಾನಿಗೊಳಿಸಬಲ್ಲವು



ಆಳ–ಅಗಲ
ಬಿಜೆಪಿಯಲ್ಲಿ 75ಕ್ಕೆ ನಿವೃತ್ತಿ ಎಲ್ಲರಿಗೂ ಅನ್ವಯಿಸದು
ಇನ್ನೂ ನಿಲ್ಲದ ಹಾಸನ ಸಂತ್ರಸ್ತೆಯರ ಕಣ್ಣೀರ ಕೋಡಿ... 5
ಜೊಮಾಟೊಗೆ ₹175 ಕೋಟಿ ಲಾಭ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,776	22,104	₹74,980 (ಬೆಂಗಳೂರು)	₹85,800 (ಬೆಂಗಳೂರು)	83.52

PARISHRAMA
PU COLLEGE | NEET ACADEMY
Admissions Open for
NEET LONG TERM 2024-25
1st BATCH STARTS FROM 18th, MAY 2024
SATVIK
AIIMS, Delhi
AIIMS / JIPMER ನಿಮ್ಮ ಕನಸಾದರೆ, ಆ ಕನಸಿನ ಮೊದಲ ಹೆಜ್ಜೆ ಪರಿಶ್ರಮವಾಗಿರಲಿ.
ಪ್ರತಿದಿನ 16 ಗಂಟೆಗಳ ನಿರಂತರ ಅಧ್ಯಯನದಿಂದ ನನಗೆ ಈ ಯಶಸ್ಸು ಲಭಿಸಿದೆ. ಪಠ್ಯಕ್ಕೆ ಸಂಬಂಧಿಸಿದಂತೆ ಎಲ್ಲ ಸಮಸ್ಯೆಗಳಿಗೆ 24x7 ಪರಿಹಾರ ನೀಡುತ್ತಿದ್ದರು. ಅನುಭವಿ ಅಧ್ಯಾಪಕ ವೃಂದದವರಿಂದ ಉತ್ತಮ ತರಬೇತಿ, ಮಾರ್ಗದರ್ಶನ ಹಾಗೂ ನಿರಂತರ ಪ್ರೋತ್ಸಾಹ ಸಿಗುತ್ತಿತ್ತು. ಪರೀಕ್ಷೆಗೆ ಸಂಬಂಧಪಟ್ಟ ಸಾವಿರಾರು ಪ್ರಶ್ನೆಗಳನ್ನು SOLVE ಮಾಡಿಸುತ್ತಿದ್ದರು. ಪರಿಶ್ರಮದ ಊಟ ಮತ್ತು ಹಾಸ್ಟೆಲ್ ವ್ಯವಸ್ಥೆ ನಮ್ಮ ಮನೆಯಂತೆಯೇ ಇತ್ತು. Thank you Parishrama!
080 24413400, 7483830545
www.parishramagroup.com

ಮತ 4ನೇ ಹಂತ: ಹಲವೆಡೆ ಹಿಂಸೆ

96 ಲೋಕಸಭಾ ಕ್ಷೇತ್ರಗಳಲ್ಲಿ ಶೇ 62.84 ಮತದಾನ • ಆಂಧ್ರ, ಒಡಿಶಾ ವಿಧಾನಸಭೆಗೂ ಚುನಾವಣೆ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ನಾಲ್ಕನೆಯ ಹಂತದ ಮತದಾನದಲ್ಲಿ ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ ನಡೆದಿದೆ. ಈ ಹಂತದಲ್ಲಿ 96 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ನಡೆದಿದ್ದು, ಶೇಕಡ 62.84ರಷ್ಟು ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ಮತದಾನ ಪ್ರಮಾಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೇಂದ್ರ ಚುನಾವಣಾ ಆಯೋಗವು ರಾತ್ರಿ 8 ಗಂಟೆಗೆ ಬಿಡುಗಡೆ ಮಾಡಿದೆ. ಹಲವು ಮತಗಟ್ಟೆಗಳಲ್ಲಿ ಮತದಾನಕ್ಕಾಗಿ ಮತದಾರರು ಸರದಿಯಲ್ಲಿ ನಿಂತಿದ್ದಾರೆ, 6 ಗಂಟೆಯ ನಂತರವೂ ಮತದಾನ ಮುಂದುವರಿದಿದೆ. ಹೀಗಾಗಿ, ಮತದಾನದ ಪ್ರಮಾಣದಲ್ಲಿ ವ್ಯತ್ಯಾಸ ಆಗಬಹುದು ಎಂದು ಆಯೋಗ ಹೇಳಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಮತದಾನ, ಪಶ್ಚಿಮ ಬಂಗಾಳದಲ್ಲಿ ಅತ್ಯಂತ ಹೆಚ್ಚು ಪ್ರಮಾಣದ ಮತದಾನ ಆಗಿದೆ.

ಆಂಧ್ರಪ್ರದೇಶದಲ್ಲಿನ ಚುನಾವಣಾ ಹಿಂಸಾಚಾರಕ್ಕೆ ಕಾರಣರು ಯಾರು ಎಂಬ ವಿಚಾರವಾಗಿ ಟಿಡಿಪಿ ಮತ್ತು ವೈಎಸ್‌ಆರ್‌ಸಿಪಿ ನಡುವೆ ಆರೋಪ–ಪ್ರತ್ಯಾರೋಪ ನಡೆದಿದೆ. ಪಲ್ನಾಡು, ಕಡಪ ಮತ್ತು ಅನ್ನಮಯ್ಯ ಜಿಲ್ಲೆಗಳಲ್ಲಿ ಹಿಂಸಾಚಾರ ವರದಿಯಾಗಿದೆ. ಆಂಧ್ರಪ್ರದೇಶದಲ್ಲಿ ಲೋಕಸಭಾ ಚುನಾವಣೆಯ ಜೊತೆಯಲ್ಲೇ ವಿಧಾನಸಭೆಗೂ ಮತದಾನ ನಡೆದಿದೆ. ಒಡಿಶಾದ 28 ವಿಧಾನಸಭಾ ಕ್ಷೇತ್ರಗಳಲ್ಲಿ ಕೂಡ ಮತದಾನ ಆಗಿದೆ.

ಆಂಧ್ರ ಪ್ರದೇಶದಲ್ಲಿ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಟಿಡಿಪಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದೆ ಎಂದು ವೈಎಸ್‌ಆರ್‌ಸಿಪಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಟಿಡಿಪಿ ನಾಯಕರು ವೇಮೂರು ವಿಧಾನಸಭಾ ಕ್ಷೇತ್ರದಲ್ಲಿ ಐದು ಮತಗಟ್ಟೆಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ವೈಎಸ್‌ಆರ್‌ಸಿಪಿ ಆರೋಪಿಸಿದೆ.

9ನೇ ಪುಟ ನೋಡಿ

ಜಾರ್ಖಂಡ್‌ನ ಜಬುವಾದಲ್ಲಿ ಸೋಮವಾರ ನಡೆದ ಲೋಕಸಭಾ ಚುನಾವಣೆ ವೇಳೆ ಮತದಾನ ಮಾಡಲು ಮಹಿಳೆಯರು ಮತಗಟ್ಟೆ ಎದುರು ಸರತಿ ಸಾಲಿನಲ್ಲಿ ನಿಂತಿದ್ದರು —ಪಿಟಿಐ

ಹಿಜಾಬ್ ತೆಗೆಸಿದ ಬಿಜೆಪಿ ಅಭ್ಯರ್ಥಿ: ದೂರು

ಹೈದರಾಬಾದ್ (ಪಿಟಿಐ): ಮತದಾರರ ಬಳಿ ಇರುವ ಭಾವಚಿತ್ರದೊಂದಿಗೆ ಮುಖ ಹೋಲಿಕೆ ಮಾಡಿ ನೋಡಲು, ಹೈದರಾಬಾದ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಾಧವಿ ಲತಾ ಅವರು ಮುಸ್ಲಿಂ ಮಹಿಳಾ ಮತದಾರರು ಧರಿಸಿದ್ದ ಹಿಜಾಬ್ ಅನ್ನು ತೆಗೆಸಿದಂತೆ ಇರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಈ ವಿಡಿಯೊ ಆಧಾರದ ಮೇರೆಗೆ ಮಾಧವಿ ಲತಾ ವಿರುದ್ಧ ಚುನಾವಣಾ ಅಧಿಕಾರಿಗಳು ದೂರು ದಾಖಲಿಸಿಕೊಂಡಿದ್ದಾರೆ.

ಮಲಕ್‌ಪೇಟ ಪೊಲೀಸ್ ಠಾಣೆಯಲ್ಲಿಯೂ ದೂರು ದಾಖಲಾಗಿದೆ.

ಎಲ್ಲೆಲ್ಲಿ ಹಿಂಸಾಚಾರ

ಆಂಧ್ರಪ್ರದೇಶ

- ತೆನಾಲಿ ಕ್ಷೇತ್ರದ ಶಾಸಕ, ವೈಎಸ್‌ಆರ್‌ಸಿಪಿ ನಾಯಕ ಎ. ಶಿವಕುಮಾರ್ ಅವರು ತೆನಾಲಿಯಲ್ಲಿ ಮತದಾರರೊಬ್ಬರ ಕಪಾಲಕ್ಕೆ ಬಾರಿಸಿದ್ದಾರೆ. ಸರದಿ ತಪ್ಪಿಸಿ ಶಾಸಕ ಮುಂದೆ ಹೋಗಿದ್ದನ್ನು ಪ್ರಶ್ನಿಸಿದ್ದಕ್ಕೆ ಶಾಸಕ ಹೊಡೆದಿದ್ದಾರೆ ಎಂಬ ದೂರು ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ. ಅಲ್ಲದೆ, ಆ ಮತದಾರ ಕೂಡ ಶಾಸಕನ ಕೆನ್ನೆಗೆ ಬಾರಿಸಿದ್ದಾರೆ ಎಂದು ತಿಳಿಸಿದ್ದಾರೆ. ಬಳಿಕ ಶಾಸಕರ ಬೆಂಬಲಿಗರು ಮತದಾರನನ್ನು ಥಳಿಸಿದ್ದಾರೆ
- ಮೈಡೂರುಕು ಕ್ಷೇತ್ರದ ನಕ್ಕಲದಿನ್ನೆ ಹಳ್ಳಿಯಲ್ಲಿ ಟಿಡಿಪಿ ಏಜೆಂಟ್ ಒಬ್ಬರ ಮೇಲೆ ಹಲ್ಲೆ ನಡೆದಿದೆ
- ವೈಎಸ್‌ಆರ್‌ಸಿಪಿ ಏಜೆಂಟ್ ಸುರೇಶ್ ರೆಡ್ಡಿ ಅವರಿಗೆ ಚಿತ್ತೂರಿನ ಗುಡಿಪಲ ಮಂಡಲದ ಮಂಡಿ ಕೃಷ್ಣಾಪುರಂ ಹಳ್ಳಿಯಲ್ಲಿ ಚೂರಿಯಿಂದ ಇರಿಯಲಾಗಿದೆ ಎಂದು ಪಕ್ಷ ದೂರಿದೆ. ಪಕ್ಷದ ಸದಸ್ಯ ಬಿ. ಅಂಜಿರೆಡ್ಡಿ ಅವರ ಮೇಲೆ ಟಿಡಿಪಿ ಬೆಂಬಲಿಗರು ದಾಳಿ ಮಾಡಿದ್ದಾರೆ, ಅವರ ತಲೆಗೆ ಗಾಯ ಆಗಿದೆ ಎಂದು ಆರೋಪಿಸಿದೆ
- ಪಲ್ನಾಡು ಜಿಲ್ಲೆಯ ರೆಂಟಚಿಂತಲ ಮಂಡಲದ ರೆಂಟಾಲ ಹಳ್ಳಿಯಲ್ಲಿ ಟಿಡಿಪಿ ಬೆಂಬಲಿಗರ ಮೇಲೆ ವೈಎಸ್‌ಆರ್‌ಸಿಪಿ ಕಾರ್ಯಕರ್ತರು ದಾಳಿ ನಡೆಸಿದ್ದಾರೆ ಎಂದು ದೂರಿ ಟಿಡಿಪಿ ಶಾಸಕ ಮೊಹಮ್ಮದ್ ಅಹ್ಮದ್ ಶರೀಫ್ ಅವರು ಮುಖ್ಯ ಚುನಾವಣಾ ಅಧಿಕಾರಿ ಮುಕೇಶ್ ಕುಮಾರ್ ಮೀನಾ ಅವರಿಗೆ ಪತ್ರ ಬರೆದಿದ್ದಾರೆ
- ವೈಎಸ್‌ಆರ್‌ಸಿಪಿ ಹಿರಿಯ ನಾಯಕ ನಂದಿಗಂ ಸುರೇಶ್ ಅವರ ವಾಹನಕ್ಕೆ ಟಿಡಿಪಿ ಕಾರ್ಯಕರ್ತರು ಹಾನಿ ಉಂಟುಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಪಶ್ಚಿಮ ಬಂಗಾಳ

- ಬೀರ್‌ಭೂಮ್ ಲೋಕಸಭಾ ಕ್ಷೇತ್ರದ ನಾನೂರ್‌ನಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ.
- ಬಿಜೆಪಿ ಅಭ್ಯರ್ಥಿ ದಿಲೀಪ್ ಘೋಷ್ ಅವರ ಕಾರಿನ ಮೇಲೆ ಕಲ್ಲು ತೂರಾಟ ನಡೆದಿದೆ
- ಕೃಷ್ಣಾನಗರ ಲೋಕಸಭಾ ಕ್ಷೇತ್ರದ ಛಪರಾದಲ್ಲಿ ಟಿಎಂಸಿ ಕಾರ್ಯಕರ್ತರು ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ದೂರ ಲಾಗಿದೆ. ಈ ಆರೋಪವನ್ನು ಟಿಎಂಸಿ ನಿರಾಕರಿಸಿದೆ.

ಬಿಜೆಪಿ ಮುಖಂಡರಿಗೆ ಕಾಂಗ್ರೆಸ್ ಗುದ್ದು

‘ಆಪರೇಷನ್ ಕಮಲ’ ಸದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಮತದಾನ ಮುಗಿದ ಬೆನ್ನಲ್ಲೇ ‘ಆಪರೇಷನ್ ಕಮಲ’ದ ಸದ್ದು ಎದ್ದಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೀಡಿರುವ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಚರ್ಚೆಯ ಕಿಡಿ ಹೊತ್ತಿಸಿದೆ.

ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಂಪುಟದ ಹಲವು ಸದಸ್ಯರು ಅಂತಹ ಸಾಧ್ಯತೆಯನ್ನು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. ಚುನಾವಣೆಯ ಫಲಿತಾಂಶವು ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆದರೆ, ‘ನಮ್ಮ ಸರ್ಕಾರದಲ್ಲಿ ಭಿನ್ನಮತ ಇದೆ’ ಎಂದಿರುವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಚರ್ಚೆಯ ಕಾವು ಏರಿಸಿದ್ದಾರೆ.

ಮಹಾರಾಷ್ಟ್ರದ ಸತಾರದಲ್ಲಿ ಚುನಾವಣೆಯ ಪ್ರಚಾರದಲ್ಲಿ ಮಾತನಾಡಿರುವ ಶಿಂಧೆ, ‘ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಪತನಗೊಳ್ಳಲಿದೆ’ ಎನ್ನುವ ಮೂಲಕ ‘ಆಪರೇಷನ್ ಕಮಲ’ದ ತಯಾರಿಯ ಸುಳಿವು ನೀಡಿದ್ದಾರೆ.

ಶಿಂಧೆ ಹೇಳಿಕೆ ಕುರಿತು ಸೋಮವಾರ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ರಾಜ್ಯದಲ್ಲಿ ಆಪರೇಷನ್ ಕಮಲ ನಡೆಸಿ ನಮ್ಮ ಸರ್ಕಾರ ಪತನಗೊಳಿಸುವುದು ಬಿಜೆಪಿಯ ಹಗಲುಗನಸು’ ಎಂದು ತಿರುಗೇಟು ನೀಡಿದರು.

‘ರಾಜ್ಯದಲ್ಲಿ ಕಾಂಗ್ರೆಸ್‌ನ 136 ಶಾಸಕರಿದ್ದೇವೆ. ಸರ್ಕಾರ ಉರುಳಬೇಕಾದರೆ 89 ಮಂದಿ ಬಿಜೆಪಿಗೆ ಹೋಗಬೇಕಾಗುತ್ತದೆ. ಈಗ ಬೇರೆ ಪಕ್ಷಕ್ಕೆ ಹೋಗುವಷ್ಟು ದಡ್ಡರು ಯಾರೂ ಇಲ್ಲ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಶಾಸಕರು ಮಾರಾಟಕ್ಕಿಲ್ಲ: ಸಿ.ಎಂ

‘ಮಾರಾಟವಾಗಲು ನಮ್ಮ ಶಾಸಕರಲ್ಲಿ ಯಾರೂ ತಯಾರಿಲ್ಲ. ಒಂದು ವರ್ಷದಿಂದ ಇಂತಹ ಪ್ರಯತ್ನ ಮಾಡಿ ವಿಫಲರಾಗಿದ್ದಾರೆ. ಇನ್ನೊಂದು ಬಾರಿ ಏಕೆ ಪ್ರಯತ್ನಿಸುತ್ತಾರೆ? ಮಹಾರಾಷ್ಟ್ರದಲ್ಲಿ ಆದಂತೆ ಕರ್ನಾಟಕದಲ್ಲಿ ಆಗಲು ಸಾಧ್ಯವಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು. ಏಕನಾಥ ಶಿಂದೆ ಹೇಳಿಕೆಗೆ ಪ್ರತಿಕ್ರಿಯಿಸಿದರು.

ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಧ್ರುವೀಕರಣ ಆಗಬಹುದೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಕಾಂಗ್ರೆಸ್ ನೇತೃತ್ವದ ಇಂಡಿಯಾ ಗೆಲ್ಲಲಿದ್ದು, ನಮ್ಮವರೇ ಪ್ರಧಾನ ಮಂತ್ರಿಯಾಗಲಿದ್ದಾರೆ’ ಎಂದು ಹೇಳಿದರು.

ಶಿಂದೆ ಸರ್ಕಾರವೇ ಪತನ: ಡಿಕೆಶಿ

ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಮಹಾರಾಷ್ಟ್ರದಲ್ಲಿ ಏಕನಾಥ ಶಿಂದೆ ನೇತೃತ್ವದ ಸರ್ಕಾರ ಉಳಿಯದು. ಅಲ್ಲಿ ಮತ್ತೆ ಕಾಂಗ್ರೆಸ್–ಎನ್‌ಸಿಪಿ–ಶಿವಸೇನಾ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಮತ್ತು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಮೇಲುಗೈ ಸಾಧಿಸಲಿದ್ದಾರೆ. ಎರಡೂ ಪಕ್ಷಗಳ ಶಾಸಕರು ಮೂಲ ಬಣಗಳಿಗೆ ಮರಳುತ್ತಾರೆ’ ಎಂದರು.

‘ಭಿನ್ನಮತ ಇದೆ, ಸರ್ಕಾರ ಬೀಳದು’

‘ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಭಿನ್ನಮತವಿದೆ. ಆದರೆ, ಅದು ಸರ್ಕಾರ ಪತನಕ್ಕೆ ಕಾರಣವಾಗುವುದಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ನಮ್ಮದು ಪಕ್ಷದ ಒಳಗಿನ ಘರ್ಷಣೆ. ಹೊರಗೆ ಯಾವುದೇ ಘರ್ಷಣೆ ಇಲ್ಲ. ಹೀಗಾಗಿ ಭಿನ್ನಮತದಿಂದ ನಮ್ಮ ಸರ್ಕಾರ ಬೀಳುತ್ತದೆ ಎನ್ನುವುದು ಸುಳ್ಳು’ ಎಂದರು.

‘ಅಭಿವೃದ್ಧಿ, ಅನುದಾನ, ವರ್ಗಾವಣೆ ವಿಚಾರಗಳಲ್ಲಿ ಸರ್ಕಾರದಲ್ಲಿ ಭಿನ್ನಮತ ಇರಬಹುದು. ಅಧಿಕಾರ ಇರುವವರೆಗೂ ಸಮಸ್ಯೆಗಳು ಇರುತ್ತವೆ. ಅವುಗಳನ್ನು ನಾವು ಸರಿಪಡಿಸಿಕೊಳ್ಳುತ್ತೇವೆ. ಗೊಂದಲ, ಭಿನ್ನಮತ ಬರುತ್ತವೆ, ಹೋಗುತ್ತವೆ. ಅವುಗಳ ಕಾರಣಕ್ಕೆ ಸರ್ಕಾರ ಪತನವಾಗುತ್ತದೆ ಎನ್ನುವುದರಲ್ಲಿ ಸತ್ಯವಿಲ್ಲ’ ಎಂದು ಹೇಳಿದರು.

ರಾಜೀನಾಮೆ ಪ್ರಶ್ನೆ ಉದ್ಭವಿಸದು: ‘ಲೋಕಸಭಾ ಚುನಾವಣೆಯಲ್ಲಿ ಕಡಿಮೆ ಸ್ಥಾನ ಗೆದ್ದ ಕಾರಣಕ್ಕೆ ಮುಖ್ಯಮಂತ್ರಿ ಅಥವಾ ಸರ್ಕಾರದಲ್ಲಿರುವವರು ರಾಜೀನಾಮೆ ನೀಡಬೇಕಾದ ಪ್ರಶ್ನೆ ಉದ್ಭವಿಸದು. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಯಾವ ಪಕ್ಷ ಅಧಿಕಾರದಲ್ಲಿದ್ದಾಗಲೂ ರಾಜೀನಾಮೆ ನೀಡಿದ ಉದಾಹರಣೆ ಇಲ್ಲ’ ಎಂದರು.

ರೇವಣ್ಣಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆ ಅಪಹರಣ ಪ್ರಕರಣದ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್‌ನ ಶಾಸಕ ಎಚ್.ಡಿ.ರೇವಣ್ಣ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಎಚ್.ಡಿ.ರೇವಣ್ಣ

ಈ ಸಂಬಂಧ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯ, ಸೋಮವಾರ ವಿಸ್ತೃತವಾದ ವಿಚಾರಣೆ ಆಲಿಸಿ ಸಂಜೆ 6.34ಕ್ಕೆ ಜಾಮೀನು ಮಂಜೂರು ಮಾಡಿ ಆದೇಶಿಸಿತು.

ಪ್ರಭಾವಿ ಕುಟುಂಬ: ಬೆಳಿಗ್ಗೆ ಪ್ರಾಸಿಕ್ಯೂಷನ್ ಪರ ಹಾಜರಾಗಿದ್ದ ವಿಶೇಷ ಪ್ರಾಸಿಕ್ಯೂಟರ್ ಜೈನಾ ಕೊಠಾರಿ ಮತ್ತು ಅಶೋಕ್ ನಾಯಕ್ ತಮ್ಮ ವಾದ ಮಂಡಿಸಿದರು. ಅಶೋಕ್ ನಾಯಕ್ ಆರೋಪಿಗೆ ಜಾಮೀನು ನೀಡದಂತೆ ಬಲವಾಗಿ ಪ್ರತಿಪಾದಿಸಿದರು.

8ನೇ ಪುಟ ನೋಡಿ

ರಾಜ್ಯಕ್ಕೆ ನಾಲ್ಕನೇ ಸ್ಥಾನ

ಪ್ರಜಾವಾಣಿ ವಾರ್ತೆ

ಸಿಬಿಎಸ್‌ಇ ಫಲಿತಾಂಶ

ಬೆಂಗಳೂರು: ಸಿಬಿಎಸ್‌ಇ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್) 10 ಮತ್ತು 12ನೇ ತರಗತಿಗಳ ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕ ನಾಲ್ಕನೇ ಸ್ಥಾನ ಪಡೆದಿದೆ.

10ನೇ ತರಗತಿಯಲ್ಲಿ ಶೇ 99.26 ಹಾಗೂ 12ನೇ ತರಗತಿಯಲ್ಲಿ ಶೇ 96.95 ಫಲಿತಾಂಶ ದೊರೆತಿದೆ. 2023ರಲ್ಲಿ 10ನೇ ತರಗತಿಯಲ್ಲಿ ಶೇ 99.18 ಹಾಗೂ 12 ನೇ ತರಗತಿಯಲ್ಲಿ ಶೇ 98.64 ಫಲಿತಾಂಶ ಬಂದಿತ್ತು. ಬೆಂಗಳೂರು ಹಾಗೂ ರಾಜ್ಯದ ಇತರ ಜಿಲ್ಲೆಗಳ ಹೆಚ್ಚಿನ ಶಾಲೆಗಳು ಶೇ 100 ಫಲಿತಾಂಶ ಪಡೆದಿವೆ.

12ನೇ ತರಗತಿ ಪರೀಕ್ಷೆಯಲ್ಲಿ ಎಚ್‌ಎಸ್‌ಆರ್ ಲೇಔಟ್‌ನ ನ್ಯಾಷನಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಸ್ತುತಿ ಅಲ್ಮಾಲ್ ವಾಣಿಜ್ಯ ವಿಭಾಗದಲ್ಲಿ 500ಕ್ಕೆ 496 ಅಂಕ (ಶೇ 99.2) ಗಳಿಸಿದ್ದಾರೆ.

‘ಸ್ಪಷ್ಟ ಪರಿಕಲ್ಪನೆ, ಗುರಿ ಇಟ್ಟುಕೊಂಡು ಓದಿದ ಫಲವಾಗಿ ಉತ್ತಮ ಫಲಿತಾಂಶ ದೊರೆತಿದೆ. ಓದಿನ ಜತೆಗೆ ಸ್ವಲ್ಪ ವಿರಾಮ ತೆಗೆದುಕೊಂಡು ಪಠ್ಯೇತರ ವಿಷಯಗಳಿಗೆ ಗಮನ ನೀಡಿದ್ದು ಪರೀಕ್ಷೆ ಮುಗಿಯುವವರೆಗೂ ಮಾನಸಿಕ ಸಮತೋಲನ ಕಾಯ್ದುಕೊಳ್ಳಲು ಸಹಕಾರಿಯಾಯಿತು’ ಎಂದು ಸ್ತುತಿ ವಿವರಿಸಿದರು.

ಜೆಇಇನಲ್ಲಿ 100 ಪರ್ಸೆಂಟೈಲ್ ಗಳಿಸಿದ್ದ ಬೆಂಗಳೂರಿನ ವೈಟ್‌ಫೀಲ್ಡ್‌ನ ದಿ ಡೀನ್ಸ್ ಅಕಾಡೆಮಿಯ ವಿದ್ಯಾರ್ಥಿನಿ ಸಾನ್ವಿ ಜೈನ್ ಹಾಗೂ ರಾಮಮೂರ್ತಿ ನಗರದ ಶ್ರೀ ಚೈತನ್ಯ ಟೆಕ್ನೋ ಸ್ಕೂಲ್‌ನ ವಿದ್ಯಾರ್ಥಿನಿ ಎಂ.ಮೋನಿಕಾ 12ನೇ ತರಗತಿ ವಿಜ್ಞಾನ ವಿಭಾಗದಲ್ಲಿ 500ಕ್ಕೆ 494 ಅಂಕಗಳನ್ನು (ಶೇ 98.8) ಪಡೆದಿದ್ದಾರೆ.

9ನೇ ಪುಟ ನೋಡಿ

ಸಿಬಿಎಸ್‌ಇ 12ನೇ ತರಗತಿ ಫಲಿತಾಂಶ ಸೋಮವಾರ ಪ್ರಕಟವಾದ ನಂತರ ನವದೆಹಲಿಯಲ್ಲಿ ವಿದ್ಯಾರ್ಥಿನಿಯರು ಸಂಭ್ರಮಿಸಿದ್ದು ಹೀಗೆ... ಪಿಟಿಐ ಚಿತ್ರ

ದೂಳು ಸಹಿತ ಬಿರುಗಾಳಿ, ಮಳೆ

ಮುಂಬೈ (ಪಿಟಿಐ): ಮುಂಬೈನಲ್ಲಿ ಇದ್ದಕ್ಕಿದ್ದಂತೆ ದೂಳು ಸಹಿತ ಭಾರಿ ಬಿರುಗಾಳಿ ಬೀಸಿತಲ್ಲದೆ ಮಳೆ ಸುರಿದ ಪರಿಣಾಮ ಮುಂಬೈ ವಿಮಾನ ನಿಲ್ದಾಣದಲ್ಲಿ ಸೋಮವಾರ ವಿಮಾನ ಕಾರ್ಯಾಚರಣೆಯನ್ನು ಒಂದು ಗಂಟೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ನಗರದಲ್ಲಿ ರೈಲು ಸಂಚಾರದಲ್ಲೂ ವ್ಯತ್ಯಯ ವಾಯಿತು. 9

ಚಿಲ್ಲರೆ ಹಣದುಬ್ಬರ: 11 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಹನ್ನೊಂದು ತಿಂಗಳ ಕನಿಷ್ಠ ಮಟ್ಟವಾದ ಶೇ 4.83ಕ್ಕೆ ಇಳಿಕೆಯಾಗಿದೆ. ಸತತ ಎರಡು ತಿಂಗಳಿನಿಂದ ಹಣದುಬ್ಬರವು ಇಳಿಕೆಯ ಪಥದಲ್ಲಿ ಸಾಗುತ್ತಿದ್ದರೂ, ಕೆಲವು ಆಹಾರ ಪದಾರ್ಥಗಳ ಧಾರಣೆಯು ಏರುಗತಿಯಲ್ಲಿಯೇ ಸಾಗಿದೆ. 8

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮರ ಬಿದ್ದು ಶಿರಾಡಿ ಘಾಟ್‌ನಲ್ಲಿ ಸಂಚಾರ ಸ್ಥಗಿತ

ಹಲವು ಜಿಲ್ಲೆಗಳಲ್ಲಿ ಮಳೆಯ ಸಿಂಚನ

ಪ್ರಜಾವಾಣಿ ವಾರ್ತೆ

ಕಲಬುರಗಿ / ಚಿಕ್ಕಮಗಳೂರು / ಮಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾನುವಾರ ರಾತ್ರಿ, ಸೋಮವಾರ ಬೆಳಗಿನ ಜಾವ ಮಳೆಯಾಗಿದ್ದು ಬಿಸಿಲಿನಿಂದ ಬಸವಳಿದಿದ್ದ ಜನರಿಗೆ ನೆಮ್ಮದಿ ತಂದಿದೆ.

ಕಲ್ಯಾಣ ಕರ್ನಾಟಕದ ರಾಯಚೂರು, ಯಾದಗಿರಿ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಭಾನುವಾರ ತಡರಾತ್ರಿಯಿಂದ ಸೋಮವಾರ ಬೆಳಗಿನ ಜಾವದವರೆಗೆ ಮಳೆ ಸುರಿದಿದೆ. ಶಹಾಪುರ ತಾಲ್ಲೂಕಿನ ವಿಭೂತಿಹಳ್ಳಿ ಗ್ರಾಮದಲ್ಲಿ ಸಿಡಿಲು ಬಡಿದು ಕುರಿಗಾಹಿ ಗೋವಿಂದಪ್ಪ ಬಸಲಿಂಗಪ್ಪ (26) ಮೃತಪಟ್ಟಿದ್ದಾರೆ.

ಚಿಕ್ಕಮಗಳೂರಲ್ಲಿ ಮಳೆ ಎಡೆಬಿಡದೆ ಗಂಟೆಗಟ್ಟಲೆ ಸುರಿಯಿತು. ಬರದಿಂದ ಬಳಲಿದ್ದ ಕಡೂರು, ತರೀಕೆರೆ ತಾಲ್ಲೂಕಿನಲ್ಲಿ ಹದ ಮಳೆಯಾಗಿದೆ. ಅಜ್ಜಂಪುರ ತಾಲ್ಲೂಕಿನ ಹಲವೆಡೆ ಸಾಧಾರಣ ಮಳೆಯಾಗಿದೆ. ಮಲೆನಾಡು ಭಾಗವಾದ ಎನ್.ಆರ್.ಪುರ, ಶೃಂಗೇರಿ, ಕಳಸ, ಬಾಳೆಹೊನ್ನೂರು, ಮೂಡಿಗೆರೆ ಭಾಗದಲ್ಲಿ ಉತ್ತಮ ಮಳೆಯಾಗಿದ್ದು, ರೈತರಲ್ಲಿ ಸಂತಸ ಉಂಟು ಮಾಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಉಪ್ಪಿನಂಗಡಿ, ಕಡಬ ಪ್ರದೇಶಗಳಲ್ಲಿ ಹಾಗೂ ಪಶ್ಚಿಮ ಘಟ್ಟದ ತಪ್ಪಲಿನ ಪ್ರದೇಶಗಳಲ್ಲಿ ನದಿ ಹಾಗೂ ಹೊಳೆಗಳಲ್ಲಿ ನೀರು ಹರಿದು ಹೋಗುವಷ್ಟು ಬಿರುಸಾಗಿ ಮಳೆಯಾಗಿದೆ. ಜಿಲ್ಲೆಯ ಜನತೆಯಲ್ಲಿ ಮನೆಮಾಡಿದ್ದ ಕುಡಿಯುವ ನೀರಿನ ಕೊರತೆ ಎದುರಾಗಬಹುದು ಎಂಬ ಆತಂಕವನ್ನು ಈ ಮಳೆ ದೂರ ಮಾಡಿದೆ. ಮಂಗಳೂರು ನಗರದಲ್ಲಿ ಸೋಮವಾರ ಮುಂಜಾನೆ ಸುಮಾರು ಅರ್ಧ ಗಂಟೆ ತುಂತುರು ಮಳೆಯಾಗಿದೆ.

ಮೈಸೂರು ವರದಿ: ಮೈಸೂರು ಭಾಗದ ಹಾಸನ ಮತ್ತು ಚಾಮರಾಜನಗರದಲ್ಲಿ ಉತ್ತಮ ಮಳೆಯಾಗಿದೆ. ಹಾಸನ, ಅರಕಲಗೂಡು, ಚನ್ನರಾಯಪಟ್ಟಣ, ಹಿರೀಸಾವೆ, ನುಗ್ಗೇಹಳ್ಳಿ, ಹಳೇಬೀಡು, ಕೊಣನೂರು, ಜಾವಗಲ್‌ನಲ್ಲಿ ಉತ್ತಮ ಮಳೆಯಾಗಿದೆ.

5ನೇ ಪುಟ ನೋಡಿ

ಮಳೆ ಬಳಿಕ ರಾಯಚೂರಿನ ಎಪಿಎಂಸಿ ರಸ್ತೆಯ ನೋಟ

RAMAIAH UNIVERSITY OF APPLIED SCIENCES
WHERE SUCCESS IS A TRADITION
Engineering & Technology | Dental Sciences | Medical | Nursing | Education & Research | Social Sciences | Life & Allied Health Sciences | Law | Pharmacy | Physiotherapy | Mathematical & Physical Sciences | Management & Commerce | Art & Design | Hospitality Management & Catering Technology
Top-Notch Placements
52 LPA Highest National Package
25.5 LPA Highest International Package
Key Recruiters: amazon, Reliance, Infosys, Apollo Munich, Vedantu, wipro
RUAS Accreditation & Recognition: nirf 65th Rank in Pharmacy, 14th Rank in Dental, 43rd Rank in Medical
ADMISSIONS OPEN 2024
Apply Now Through RUAS-AT
8010004444 | admissions@msruas.ac.in | www.msruas.ac.in

ನಾಮಪತ್ರ ಸಲ್ಲಿಕೆ ಬಳಿಕ ಸಿದ್ದರಾಮಯ್ಯ ಹೇಳಿಕೆ

ಸಮರ್ಥ ಅಭ್ಯರ್ಥಿಗಳು ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ರಾಮೋಜಿಗೌಡ ಮತ್ತು ಡಿ.ಟಿ. ಶ್ರೀನಿವಾಸ್ ಶಿಕ್ಷಕರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವರ ಧ್ವನಿಯಾಗಿ ಕೆಲಸ ಮಾಡುವ ಸಮರ್ಥ ಅಭ್ಯರ್ಥಿಗಳು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಬ್ಬರ ನಾಮಪತ್ರ ಸಲ್ಲಿಕೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಆರು ತಿಂಗಳ ಹಿಂದೆಯೇ ಪಕ್ಷ ಅಭ್ಯರ್ಥಿಗಳನ್ನು ಘೋಷಿಸಿದ್ದು ಅವರಿಗೆ ಅನುಕೂಲವಾಗಿದೆ. ರಾಮೋಜಿ ಗೌಡ ಶಿಕ್ಷಕರ ಕೆಲಸ ಮಾಡಿದ್ದಾರೆ. ಪದವೀಧರರ ಸಮಸ್ಯೆಗಳ ಅರಿವಿದೆ. ಅವುಗಳನ್ನು ಬಗೆಹರಿಸುವ ಶಕ್ತಿಯೂ ಇದೆ ಎಂದರು.

ಬೆಂಗಳೂರು ಪದವೀಧರ ಕ್ಷೇತ್ರ ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರಗಳಲ್ಲಿ ಮತದಾರರು ಕಾಂಗ್ರೆಸ್ ಬೆಂಬಲಿಸುತ್ತಾರೆ. ಪದವೀಧರರು ಮತ್ತು ಶಿಕ್ಷಕರಿಗೆ ಬಿಜೆಪಿ ನೆರವಾಗಲಿಲ್ಲ. ಗ್ಯಾರಂಟಿ ಯೋಜನೆಗಳ ಮೂಲಕ ಕಾಂಗ್ರೆಸ್ ನೆರವಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸಚಿವರಾದ ಕೆ.ಎಚ್. ಮುನಿಯಪ್ಪ, ರಾಮಲಿಂಗಾರೆಡ್ಡಿ, ಮಧು ಬಂಗಾರಪ್ಪ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ನಾಮಪತ್ರ ಸಲ್ಲಿಕೆ ವೇಳೆ ಜತೆಗಿದ್ದರು.

ಬೆಂಗಳೂರು ಪದವೀಧರ ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ವೇಳೆ ಗೆಲುವಿನ ಚಿಹ್ನೆ ತೋರಿಸಿದ ನಾಯಕರು. ಸಚಿವ ಮಧುಬಂಗಾರಪ್ಪ, ರಾಮೋಜಿಗೌಡ, ಡಿ.ಟಿ. ಶ್ರೀನಿವಾಸ್ ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದರು

ಶ್ರೀನಿವಾಸ್ ಬಳಿ ಸ್ವಂತ ಆಸ್ತಿಯೇ ಇಲ್ಲ!

ಬೆಂಗಳೂರು: ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್ ಬಳಿ ಸ್ವಂತ ಹೆಸರಿನಲ್ಲಿ ಆಸ್ತಿಯೇ ಇಲ್ಲ!

ಸೋಮವಾರ ಸಲ್ಲಿಸಿರುವ ನಾಮಪತ್ರದ ಜತೆಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಅವರು ಈ ಮಾಹಿತಿ ಒದಗಿಸಿದ್ದಾರೆ. ಆದರೆ, ಅವರ ಪತ್ನಿ, ಮಕ್ಕಳು ಮತ್ತು ಅವಿಭಕ್ತ ಕುಟುಂಬದ ಹೆಸರಿನಲ್ಲಿ ಆಸ್ತಿಗಳಿವೆ.

ಪತ್ನಿ ಪೂರ್ಣಿಮಾ ಬಳಿ ₹ 20.65 ಕೋಟಿ, ಅವಿಭಕ್ತ ಕುಟುಂಬದ ಹೆಸರಿನಲ್ಲಿ ₹ 4.57 ಕೋಟಿ, ಮಗನ ಹೆಸರಿನಲ್ಲಿ ₹ 1.11 ಕೋಟಿ ಮತ್ತು ಮಗಳ ಹೆಸರಿನಲ್ಲಿ ₹ 10.76 ಲಕ್ಷ ಮೌಲ್ಯದ ಚರಾಸ್ತಿಗಳಿವೆ.

ಪೂರ್ಣಿಮಾ ಹೆಸರಿನಲ್ಲಿ ₹ 58.76 ಕೋಟಿ ಮೌಲ್ಯದ ಸ್ಥಿರಾಸ್ತಿ ಇದ್ದರೆ, ಕುಟುಂಬದ ಹೆಸರಿನಲ್ಲಿ ₹ 19.44 ಕೋಟಿ ಮೌಲ್ಯದ ಸ್ಥಿರಾಸ್ತಿ ಇದೆ. ಪೂರ್ಣಿಮಾ ₹ 8.31 ಕೋಟಿ ಸಾಲ ಹೊಂದಿದ್ದರೆ, ಒಟ್ಟು ಕುಟುಂಬದ ಸಾಲ ₹ 11.43 ಕೋಟಿ ಇದೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಬಿಜೆಪಿ: ನಾರಾಯಣಸ್ವಾಮಿ, ದೇವೇಗೌಡ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಆಗ್ನೇಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಡಾ. ವೈ.ಎ. ನಾರಾಯಣಸ್ವಾಮಿ ಮತ್ತು ಬೆಂಗಳೂರು ಪದವೀಧರ ಕ್ಷೇತ್ರದ ಅಭ್ಯರ್ಥಿ ಅ. ದೇವೇಗೌಡ ಅವರು ಸೋಮವಾರ ಶಾಂತಿನಗರದ ಪ್ರಾದೇಶಿಕ ಆಯುಕ್ತರ ಕಚೇರಿ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆ ಬಳಿಕ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಲೋಕಸಭಾ ಚುನಾವಣೆಯನ್ನು ಬಿಜೆಪಿ ಮತ್ತು ಜೆಡಿಎಸ್ ಜತೆಯಾಗಿ ಎದುರಿಸಿದ್ದೇವೆ. ವಿಧಾನಪರಿಷತ್ ಚುನಾವಣೆಯನ್ನೂ ಒಟ್ಟಾಗಿಯೇ ಎದುರಿಸುತ್ತೇವೆ ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಯಾರೇ ಪ್ರಚಾರ ಮಾಡಿದರೂ ಕಾಂಗ್ರೆಸ್‌ಗೆ ಉಳಿಗಾಲವಿಲ್ಲ. ನಾರಾಯಣಸ್ವಾಮಿ ಮತ್ತು ಅ.ದೇವೇಗೌಡ ಅವರು ಮಾಡಿರುವ ಕೆಲಸ, ಜನರೊಂದಿಗಿನ ಸಂಪರ್ಕ ಮತ್ತು ನಿರಂತರ ಸೇವೆಯನ್ನು ಪರಿಗಣಿಸಿ ಮತ್ತೊಮ್ಮೆ ಜನರು ಆಶೀರ್ವದಿಸುತ್ತಾರೆ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಬಸವರಾಜ ಬೊಮ್ಮಾಯಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸುರೇಶ್ ಗೌಡ, ಮಾಜಿ ಸಚಿವ ಗೋವಿಂದ ಕಾರಜೋಳ, ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ, ಸಂಸದ ಪಿ.ಸಿ.ಮೋಹನ್, ಮಾಜಿ ಶಾಸಕರಾದ ಎಂ.ಡಿ. ಲಕ್ಷ್ಮೀ ನಾರಾಯಣ, ಎಂ.ಕೃಷ್ಣಾರೆಡ್ಡಿ ಇದ್ದರು.

ಆಗ್ನೇಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಡಾ. ವೈ.ಎ.ನಾರಾಯಣಸ್ವಾಮಿ ಮತ್ತು ಬೆಂಗಳೂರು ಪದವೀಧರ ಕ್ಷೇತ್ರದ ಅಭ್ಯರ್ಥಿ ಅ. ದೇವೇಗೌಡ ಅವರ ನಾಮಪತ್ರ ಸಲ್ಲಿಕೆಯ ಬಳಿಕ ಶಾಸಕ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿರೋಧಪಕ್ಷದ ನಾಯಕ ಆರ್‌.ಅಶೋಕ ಅವರು ಗೆಲುವಿನ ಚಿಹ್ನೆ ತೋರಿದರು

ನಾರಾಯಣಸ್ವಾಮಿ ಆಸ್ತಿ ₹ 34 ಕೋಟಿ

ಬೆಂಗಳೂರು: ಆಗ್ನೇಯ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವೈ.ಎ.ನಾರಾಯಣಸ್ವಾಮಿ ₹34 ಕೋಟಿಗೂ ಅಧಿಕ ಸಂಪತ್ತು ಹೊಂದಿದ್ದಾರೆ. ಇವರ ಪತ್ನಿ ₹35.55 ಕೋಟಿಯಷ್ಟು ಸಂಪತ್ತು ಹೊಂದಿದ್ದಾರೆ.

ನಾರಾಯಣಸ್ವಾಮಿ ₹6.46 ಕೋಟಿ ಮತ್ತು ಅವರ ಪತ್ನಿ ₹6.66 ಕೋಟಿ ಬ್ಯಾಂಕ್ ಸಾಲ ಪಡೆದಿದ್ದಾರೆ.

ಬೆಂಗಳೂರು ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅ.ದೇವೇಗೌಡ ಸುಮಾರು ₹1.26 ಕೋಟಿ ಮತ್ತು ಅವರ ಪತ್ನಿ ₹6.36 ಕೋಟಿ ಆಸ್ತಿ ಹೊಂದಿದ್ದಾರೆ.

ಸುದ್ದಿ 2 ನಿಮಿಷ

ಡಿಕೆಶಿ ಭೇಟಿಯಾದ ಹೆಬ್ಬಾರ್, ಎಸ್‌.ಟಿ.ಸೋಮಶೇಖರ್

ಬೆಂಗಳೂರು: ಬಿಜೆಪಿ ಶಾಸಕರಾದ ಅರಬೈಲ್ ಶಿವರಾಂ ಹೆಬ್ಬಾರ್ ಮತ್ತು ಎಸ್‌.ಟಿ. ಸೋಮಶೇಖರ್ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸೋಮವಾರ ಭೇಟಿಮಾಡಿ ಚರ್ಚಿಸಿದರು.

ರಾಜ್ಯಸಭಾ ಚುನಾವಣೆ ದಿನದಿಂದಲೂ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಇಬ್ಬರೂ ಶಾಸಕರು, ಕಾಂಗ್ರೆಸ್ ನಾಯಕರ ಜತೆ ನಿಕಟವಾಗಿದ್ದಾರೆ. ಶಿವರಾಂ ಹೆಬ್ಬಾರ್ ಅವರ ಮಗ ವಿವೇಕ್ ಹೆಬ್ಬಾರ್ ಲೋಕಸಭಾ ಚುನಾವಣೆಗೂ ಮೊದಲು ಕಾಂಗ್ರೆಸ್ ಸೇರಿದ್ದರು. ಸೋಮವಾರದ ಭೇಟಿ ವೇಳೆ ವಿವೇಕ್ ಹೆಬ್ಬಾರ್ ಕೂಡ ಜತೆಗಿದ್ದರು.

ಲೋಕಸಭಾ ಚುನಾವಣೆಯಲ್ಲಿ ಶಿವರಾಂ ಹೆಬ್ಬಾರ್ ಮತ್ತು ಸೋಮಶೇಖರ್ ಅವರು ಬಿಜೆಪಿ ಅಭ್ಯರ್ಥಿಗಳ ಪ್ರಚಾರದಲ್ಲಿ ಪಾಲ್ಗೊಂಡಿರಲಿಲ್ಲ. ಪಕ್ಷದ ಯಾವುದೇ ಚಟುವಟಿಕೆಗಳಲ್ಲೂ ಭಾಗವಹಿಸಿರಲಿಲ್ಲ.

ಭೇಟಿ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸೋಮಶೇಖರ್, 'ಹಲವು ದಿನಗಳಿಂದ ಶಿವಕುಮಾರ್ ಅವರನ್ನು ಭೇಟಿಮಾಡಿರಲಿಲ್ಲ. ಲೋಕಸಭಾ ಚುನಾವಣೆ ಮುಗಿದಿರುವುದರಿಂದ ಭೇಟಿ ಮಾಡಿದೆವು. ರಾಜಕೀಯ ಕುರಿತು ಯಾವುದೇ ಚರ್ಚೆ ನಡೆಸಿಲ್ಲ' ಎಂದರು.

ನಾಮಪತ್ರ ಸಲ್ಲಿಕೆ ಭರಾಟೆ

ಬೆಂಗಳೂರು: ವಿಧಾನ ಪರಿಷತ್‌ನ ಆರು ಕ್ಷೇತ್ರಗಳ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆ ಭರಾಟೆ ಜೋರಾಗಿದೆ. ಪರಿಷತ್‌ನ ಹಾಲಿ ಸದಸ್ಯರಾದ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ, ಅ. ದೇವೇಗೌಡ ಸೇರಿದಂತೆ 11 ಮಂದಿ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ.

ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ವೈ.ಎ. ನಾರಾಯಣಸ್ವಾಮಿ ಮತ್ತು ಕಾಂಗ್ರೆಸ್ ಡಿ.ಟಿ. ಶ್ರೀನಿವಾಸ್, ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಅ. ದೇವೇಗೌಡ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಮೋಜಿಗೌಡ ಸೋಮವಾರ ನಾಮಪತ್ರ ಸಲ್ಲಿಸಿದರು. ನೈರುತ್ಯ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಧನಂಜಯ ಸರ್ಜಿ ಕೂಡ ನಾಮಪತ್ರ ಸಲ್ಲಿಸಿದ್ದಾರೆ.

ವಿಶ್ರುತ್ ಗುರಲ್ಲ

ಸುಚಿತಾ ಮನ್ನೆ

ಸತ್ಕೃತಿ

ಮೋನಿಕಾ

ಟೆಕ್ನೊ ಸ್ಕೂಲ್: ಉತ್ತಮ ಸಾಧನೆ

ಬೆಂಗಳೂರು: ಸಿಬಿಎಸ್‌ಇ ಬೋರ್ಡ್‌ನ 10 ಮತ್ತು 12ನೇ ತರಗತಿಯ ಪರೀಕ್ಷೆಯಲ್ಲಿ ಶ್ರೀಚೈತನ್ಯ ಟೆಕ್ನೊ ಸ್ಕೂಲ್ಸ್ ಆಫ್ ಕರ್ನಾಟಕದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

10ನೇ ತರಗತಿಯ ಪರೀಕ್ಷೆಯಲ್ಲಿ ಸುಚಿತಾ ಮನ್ನೆ ಮತ್ತು ಸತ್ಕೃತಿ ತಿಮ್ಮನದೊಡ್ಡಿ ಕರಣಂ ಅವರು 500ಕ್ಕೆ 494 ಅಂಕ ಗಳಿಸಿದ್ದಾರೆ.



ಆದಿತ್ಯ

12ನೇ ತರಗತಿಯ ಪರೀಕ್ಷೆಯಲ್ಲಿ ಮೋನಿಕಾ 500 ಅಂಕಗಳಿಗೆ 494 ಅಂಕಗಳಿಸಿದರೆ, ವಿಶ್ರುತ್ ಗುರಲ್ಲ 493 ಮತ್ತು ಆದಿತ್ಯ ಎ 493 ಅಂಕಗಳಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅನ್ಶುಮನ್

ಅನನ್ಯ

ಶಿವಾಂಶಿ

ಸುಜನ್

ಯೂರೊಸ್ಕೂಲ್: ಮೂರು ಶಾಲೆಗಳಿಗೆ ಶೇ 100ರಷ್ಟು ಫಲಿತಾಂಶ

ಬೆಂಗಳೂರು: ಯುರೊಸ್ಕೂಲ್‌ನ ವೈಟ್‌ಫೀಲ್ಡ್, ನಾರ್ಥ್ ಕ್ಯಾಂಪಸ್ ಮತ್ತು ಚಿನ್ಮಯ್ ಹಿಲ್ಸ್ ಶಾಲೆಗಳು 10 ಮತ್ತು 12ನೇ ತರಗತಿಯ ಸಿಬಿಎಸ್‌ಇ ಗ್ರೇಡ್‌ನ ಬೋರ್ಡ್ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ಪಡೆದಿವೆ.



ಶ್ರೀಧರ್

ರಿತಿಕಾ

12ನೇ ತರಗತಿಯ ಪರೀಕ್ಷೆಯಲ್ಲಿ ಯೂರೊಸ್ಕೂಲ್ ವೈಟ್‌ಫೀಲ್ಡ್‌ನ ಸುಜನ್ ಕುಂಡು ಮತ್ತು ಯೂರೊಸ್ಕೂಲ್ ನಾರ್ಥ್ ಕ್ಯಾಂಪಸ್‌ನ ಅನ್ಶುಮನ್ ಸಿಂಗ್ ಅವರು ಶೇ 96.80 ಹಾಗೂ ಚಿನ್ಮಯ್ ಹಿಲ್ಸ್‌ನ ಶಿವಾಂಶಿ ರಾಘವ್ ಅವರು ಶೇ 96ರಷ್ಟು ಅಂಕಗಳಿಸಿದ್ದಾರೆ.

10ನೇ ತರಗತಿಯ ಪರೀಕ್ಷೆಯಲ್ಲಿ ಯೂರೊಸ್ಕೂಲ್ ವೈಟ್‌ಫೀಲ್ಡ್‌ನ ಅನನ್ಯ ಕಾರ್ತ್ಯ ದೀಪಕ್, ಸಾನ್ಯಾ ಶ್ರೀಧರ್ ಶೇ 98.4, ಯೂರೊಸ್ಕೂಲ್ ನಾರ್ಥ್ ಕ್ಯಾಂಪಸ್‌ನ ರಿತಿಕಾ ರಾಜನ್ ಸುಥರ್ವೆ ಶೇ 97.8 ಹಾಗೂ ಚಿನ್ಮಯ್ ಹಿಲ್ಸ್‌ನ ದೀಪ್ತಾ ಡಿ.ಎಚ್ ಅವರು ಶೇ 97.33ರಷ್ಟು ಅಂಕಗಳಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದೀಪ್ತಾ

ಟ್ಯಾಂಕರ್ ಡಿಕ್ಕಿ: ಬೈಕ್ ಸವಾರ ಸಾವು

ಗೌರಿಬಿದನೂರು: ತಾಲ್ಲೂಕಿನ ತೊಂಡೇಬಾವಿ ಹೋಬಳಿ ಕಾಮಲಾಪುರದ ಸಮೀಪ ಬೈಕ್‌ಗೆ ಪೆಟ್ರೋಲ್ ಟ್ಯಾಂಕರ್ ಡಿಕ್ಕಿ ಹೊಡೆದು, ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಹಿಂದೂಪುರ ತಾಲ್ಲೂಕಿನ ಸಂತೇಬಿದನೂರಿನ ವೆಂಕಟೇಶ(28) ಮೃತ ಸವಾರ.

ನೈರುತ್ಯ ಪದವೀಧರ ಕ್ಷೇತ್ರ: ಬಂಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಆರು ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಕೆ ಬಿರುಸು ಪಡೆದಿರುವ ಮಧ್ಯೆಯೇ ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಬಂಡಾಯದ ಬಿಸಿ ಎದುರಿಸುತ್ತಿವೆ.

ಲೋಕಸಭಾ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳಲ್ಲಿ ಎರಡೂ ಪಕ್ಷಗಳು ಬಂಡಾಯದ ಬಿಸಿ ಎದುರಿಸಿದ್ದವು. ತಕ್ಷಣದಲ್ಲೇ ಎದುರಾದ ವಿಧಾನ ಪರಿಷತ್ ಚುನಾವಣೆಯಲ್ಲೂ ಬಂಡಾಯ ಮುಂದುವರಿದಿದೆ. ನೈರುತ್ಯ ಪದವೀಧರ ಕ್ಷೇತ್ರಗಳಲ್ಲಿ ಎರಡೂ ಪಕ್ಷಗಳೂ ಬಂಡಾಯ ಎದ್ದವರನ್ನು ಮನವೊಲಿಸಲು ಕಸರತ್ತು ನಡೆಸುತ್ತಿವೆ.

ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಆಯನೂರು ಮಂಜುನಾಥ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿರುವುದರ ವಿರುದ್ಧ ಬಂಡಾಯ ಸಾರಿರುವ ಎಸ್. ಪಿ. ದಿನೇಶ್, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ಘೋಷಿಸಿದ್ದಾರೆ. ದಿನೇಶ್ ಹಿಂದಿನ ಎರಡು ಚುನಾವಣೆಗಳಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಈ ಕ್ಷೇತ್ರದಲ್ಲಿ ಬಿಜೆಪಿ ಡಾ. ಧನಂಜಯ ಸರ್ಜಿ ಅವರಿಗೆ ಟಿಕೆಟ್ ಘೋಷಿಸಿದ ಬೆನ್ನಲ್ಲೇ ಉಡುಪಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಕೆ. ರಘುಪತಿ ಭಟ್ ಬಂಡಾಯ ಸಾರಿದ್ದಾರೆ. ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರು, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಪ್ರಕಟಿಸಿದ್ದಾರೆ.

ಸೋಮವಾರ ಉಡುಪಿಯಲ್ಲಿ ಬೆಂಬಲಿಗರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿ ನಡೆಸಿದ ರಘುಪತಿ ಭಟ್, 'ವಿಧಾನ ಪರಿಷತ್ ಚುನಾವಣೆಗೆ ನನಗೆ ಟಿಕೆಟ್ ನೀಡುವುದಾಗಿ ಪಕ್ಷದ ವರಿಷ್ಠರು ಭರವಸೆ ನೀಡಿದ್ದರು. ನಾನು ಚುನಾವಣಾ ತಯಾರಿ ನಡೆಸಿದ್ದೆ. ಈಗ ಸರ್ಜಿ ಅವರಿಗೆ ಟಿಕೆಟ್ ಘೋಷಿಸಲಾಗಿದೆ. ನಾನು ಪಕ್ಷೇತರನಾಗಿ ಸ್ಪರ್ಧಿಸುತ್ತೇನೆ' ಎಂದರು.

ಸವಾರರ ಮೇಲೆ ಹತ್ತು ಕ್ಯಾಮೆರಾ ಕಣ್ಣು

ಕ್ಯಾಮೆರಾ ಅಳವಡಿಸಲು ಸ್ಥಳ ಪರಿಶೀಲನೆ • ನಿಯಮ ಉಲ್ಲಂಘಿಸಿದರೆ ದಂಡ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು–ಮೈಸೂರು ಹೆದ್ದಾರಿಯ ಹತ್ತು ಕಡೆ ಕ್ಯಾಮೆರಾ ಅಳವಡಿಸಲು ರಾಜ್ಯ ರಸ್ತೆ ಸುರಕ್ಷಿತ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಸೋಮವಾರ ಸ್ಥಳ ಪರಿಶೀಲನೆ ನಡೆಸಿದರು.

ಕೇಂದ್ರ ಸರ್ಕಾರದ ಅನುದಾನದ ಅಡಿ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಐದು ಮತ್ತು ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಐದು ಕಡೆ ಕ್ಯಾಮೆರಾ ಅಳವಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಈಗಾಗಲೇ ಕ್ಯಾಮೆರಾ ಅಳವಡಿಕೆ ಕಾರ್ಯ ಪೂರ್ಣಗೊಳಿಸಬೇಕಿತ್ತು. ಆದರೆ, ಕೆಲಸ ತಡವಾಗಿದೆ. ಈ ಹಿನ್ನೆಲೆಯಲ್ಲಿ ಶೀಘ್ರವೇ ಕಾಮಗಾರಿ ಪೂರ್ಣಗೊಳಿಸಿ ಸಂಚಾರ ನಿಯಮ ಉಲ್ಲಂಘಿಸುವ ವಾಹನ ಸವಾರರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಹೆದ್ದಾರಿ ಹತ್ತು ಸ್ಥಳಗಳಲ್ಲಿ ಅಳವಡಿಸುವ ಕ್ಯಾಮೆರಾಗಳು ವಾಹನ ಸವಾರರ ಚಲನವಲನಗಳ ಮೇಲೆ ನಿಗಾ ಇಡಲಿವೆ. ಅತಿವೇಗ, ಸೀಟ್ ಬೆಲ್ಟ್ ಇಲ್ಲದೆ ವಾಹನ ಚಾಲನೆ, ಲೈನ್ ಶಿಸ್ತು ಉಲ್ಲಂಘನೆ ಸೇರಿದಂತೆ ಸಂಚಾರ ನಿಯಮ ಉಲ್ಲಂಘನೆ ದೃಶ್ಯಗಳನ್ನು ಕ್ಯಾಮೆರಾ ಸೆರೆ ಹಿಡಿಯಲಿದೆ. ಇದರ ಆಧಾರದ ಮೇಲೆ ಸಂಬಂಧಪಟ್ಟ ವಾಹನ ಮಾಲೀಕರಿಗೆ ನೋಟಿಸ್ ಕಳುಹಿಸಲಾಗುವುದು. ಸಂಚಾರ ನಿಯಮ ಉಲ್ಲಂಘಿಸಿ ತಪ್ಪಿಸಿಕೊಳ್ಳುತ್ತಿದ್ದ ಚಟುವಟಿಕೆಗಳಿಗೆ ಇದರಿಂದ ಬ್ರೇಕ್ ಬೀಳಲಿದೆ ಎಂದು ಅವರು ತಿಳಿಸಿದರು.

ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ಎಎಸ್‌ಪಿ ಸುರೇಶ್, ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಗುಪ್ತ ಹಾಗೂ ಅಧಿಕಾರಿಗಳು ಜೊತೆಗಿದ್ದರು.

ರಾಮನಗರ ತಾಲ್ಲೂಕಿನ ಕಲ್ಲುಗೋಪಲ್ಲಿ ಬಳಿ ರಸ್ತೆ ಸುರಕ್ಷಿತ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಸ್ಥಳ ಪರಿಶೀಲನೆ ನಡೆಸಿದರು. ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಗುಪ್ತ, ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಇತರರು ಹಾಜರಿದ್ದರು

₹11.36 ಲಕ್ಷ ಮೌಲ್ಯದ ಆಭರಣ, ನಗದು ಕಳ್ಳತನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ನಾಟ್ಯ ಪ್ರಿಯಾ ನೃತ್ಯ ಅಕಾಡೆಮಿಯ ಮಾಲೀಕರ ಮನೆಯಲ್ಲಿ ₹11.36 ಲಕ್ಷ ಮೌಲ್ಯದ ಚಿನ್ನಾಭರಣ ಮತ್ತು ನಗದು ಕಳ್ಳತನವಾಗಿದೆ.

'ನಾವು ಬಾಗೇಪಲ್ಲಿಯಲ್ಲಿ ಮನೆ ನಿರ್ಮಿಸುತ್ತಿದ್ದೇವೆ. ಎಂಟು ದಿನದ ಹಿಂದೆ ಬಾಗೇಪಲ್ಲಿಗೆ ಹೋಗಿ ಅಲ್ಲಿಯೇ ಇದ್ದೆವು. ಶುಕ್ರವಾರ ಚಿಕ್ಕಬಳ್ಳಾಪುರದ ಧರ್ಮರಾಯಸ್ವಾಮಿ ಕರಗವಿದ್ದ ಕಾರಣ ಸಂಬಂಧಿಕರು ಸಹ ಮನೆಗೆ ಬಂದಿದ್ದರು. ಎಚ್‌.ಎಸ್.ಗಾರ್ಡನ್‌ನಲ್ಲಿ ವಾದ್ಯಗೋಷ್ಠಿಯೂ ಇತ್ತು. ಈ ಕಾರ್ಯಕ್ರಮದಲ್ಲಿ ನೃತ್ಯ ಸ್ಪರ್ಧೆ ಏರ್ಪಡಿಸಿದ್ದರು. ನನ್ನ ಮಗಳು ಮತ್ತು ನೃತ್ಯ ಅಕಾಡೆಮಿಯ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದರು. ಶನಿವಾರ ಬೆಳಗಿನ ಜಾವ ಬಂದು ನೋಡಿದಾಗ ಮನೆಯ ಬಾಗಿಲ ಬೀಗ ಮುರಿದಿತ್ತು.

ರೂಮಿನಲ್ಲಿದ್ದ ಬೀರುವಿನ ಬಾಗಿಲು ಮುರಿದು 80 ಗ್ರಾಂ ತೂಕದ ಬಂಗಾರದ ಚಂದ್ರಹಾರ, 15 ಗ್ರಾಂ ಬಂಗಾರದ ನಕ್ಲೆಸ್, 40 ಗ್ರಾಂ ತೂಕದ ಬಂಗಾರದ 4 ಬಳೆಗಳು, 4 ಗ್ರಾಂ ತೂಕದ ಬಂಗಾರದ 2 ಉಂಗುರ, 9 ಗ್ರಾಂ ತೂಕದ ಬಂಗಾರದ 3 ಜೊತೆ ಕಿವಿ ಓಲೆಗಳು, 6.5 ಗ್ರಾಂ ತೂಕದ ಬಂಗಾರದ ಒಂದು ಉಂಗುರ, 1.5 ಕೆ.ಜಿ ತೂಕದ ಒಂದು ಬೆಳ್ಳಿ ತಟ್ಟೆ, 200 ಗ್ರಾಂ ತೂಕದ ಬೆಳ್ಳಿಯ ಎರಡು ದೀಪ ಸ್ಥಂಭಗಳು, ಬೆಳ್ಳಿ ಕುಂಕುಮ ಬಟ್ಟಲುಗಳು, ₹ 2,80,500 ನಗದು ಕಳ್ಳತನ ಮಾಡಿದ್ದಾರೆ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಸೇಂಟ್ ಫಿಲೋಮಿನಾ ಸ್ಕೂಲ್‌ಗೆ ಶೇ 100ರಷ್ಟು ಫಲಿತಾಂಶ

ಬೆಂಗಳೂರು: ಸೇಂಟ್ ಫಿಲೋಮಿನಾ ಪಬ್ಲಿಕ್ ಸ್ಕೂಲ್ ಸಿಬಿಎಸ್‌ಇ ಗ್ರೇಡ್ 10ನೇ ತರಗತಿಯ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ಗಳಿಸಿದೆ.

ಶಾಲೆಯ ಲಹರಿ ಕೆ.ಎಸ್. ರೆಡ್ಡಿ ಅವರು ಶೇ 97, ಎಂ. ವಿಶ್ವಜಿತ್ ಚೌಧರಿ ಶೇ 96, ದುಷ್ಯಂತ್ ಗೌಡ ಬಿ.ಎಸ್. ಶೇ 94, ವಿಸ್ಮಯ ಎಸ್. ವಿ. ಶೇ 94 ಹಾಗೂ ಮೈತ್ರಿ ಆರ್. ಅವರು ಶೇ 92ರಷ್ಟು ಅಂಕ ಗಳಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಲಹರಿ ಕೆ.ಎಸ್.

ಒಣ ಮೇವು ತಿನ್ನುತ್ತಿರುವ ರಾಸುಗಳು

ಮಳೆ ಕೊರತೆ: ಒಣ ಹುಲ್ಲಿಗೆ ಹೆಚ್ಚಿದ ಬೇಡಿಕೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನಲ್ಲಿ ಮಳೆಯ ಕೊರತೆಯಿಂದಾಗಿ ಜಾನುವಾರುಗಳಿಗೆ ಮೇವು ಸಿಗುತ್ತಿಲ್ಲ. ಹಾಗಾಗಿ ರಾಗಿ ಹುಲ್ಲಿಗೆ ಬೇಡಿಕೆ ಹೆಚ್ಚಿದೆ.

ರೈತರು ಬೆಳೆದ ರಾಗಿ ಧಾನ್ಯಕ್ಕಿಂತ ಆದರ ಹುಲ್ಲಿನ ಬೆಲೆ ಹೆಚ್ಚುತ್ತಿದೆ. ಸದ್ಯ ಪೂರ್ವ ಮುಂಗಾರಿನ ಸೂಚನೆ ಕಾಣಿಸಿರುವುದು ಆಶಾಭಾವನೆ ಉಂಟು ಮಾಡಿದೆಯಾದರೂ ಮಳೆ ಎಷ್ಟು ದಿನ ಮುಂದುವರಿಯಲಿದೆ ಎಂಬುದು ಗೊತ್ತಾಗದೇ ರೈತರು ಆತಂಕದಲ್ಲಿದ್ದಾರೆ.

4 ರಿಂದ 5 ಅಡಿ ಎತ್ತರದ ಒಂದು ಮಾರು ಒಣ ಹುಲ್ಲಿನ ಬಣವೆ ₹10 ಸಾವಿರದಿಂದ ₹15 ಸಾವಿರಕ್ಕೆ ಮಾರಾಟವಾಗುತ್ತಿದೆ. ಮತ್ತೆ ಪೂರ್ವ ಮುಂಗಾರು ಕೈ ಕೊಟ್ಟರೆ ಹುಲ್ಲಿನ ಬೆಲೆ ಇನ್ನಷ್ಟು ಏರಿಕೆಯಾಗಲಿದೆ. ಹಸು ಸಾಕುತ್ತಿರುವ ರೈತರು ಮೇವಿಗಾಗಿ ದುಬಾರಿ ಬೆಲೆ ತೆತ್ತು ಹುಲ್ಲು ಖರೀದಿಸುತ್ತಿದ್ದಾರೆ.

ಹಾಲು ಕೊಡುವ ಹಾಗೂ ಗರ್ಭ ಧರಿಸಿದ ರಾಸುಗಳಿಗೆ ರಾಗಿ ಹುಲ್ಲು ಪೌಷ್ಟಿಕ ಆಹಾರ ಆಗಿರುವುದರಿಂದ ಅದಕ್ಕೆ ಬೇಡಿಕೆ ಜಾಸ್ತಿ ಇದೆ. ಎರಡು ಮೂರು ಎಕರೆಯಲ್ಲಿ ರಾಗಿ ಬೆಳೆಯುವ ಸಣ್ಣ ರೈತರು ಬೆಳೆದ ಹುಲ್ಲನ್ನು ಯಾರಿಗೂ ಮಾರಾಟ ಮಾಡದೆ ತಮ್ಮ ಮನೆಯ ಹಸುಗಳಿಗೆ ಬಣವೆ ಹಾಕಿ ಶೇಖರಿಸಿಟ್ಟುಕೊಂಡಿದ್ದಾರೆ. ದೊಡ್ಡ ರೈತರು ಹಾಗೂ ರಾಸುಗಳು ಇಲ್ಲದವರು ಮಾತ್ರ ಹುಲ್ಲು ಮಾರಾಟ ಮಾಡುತ್ತಿದ್ದಾರೆ.

ನೆಲಮಂಗಲ ತಾಲ್ಲೂಕಿನಲ್ಲಿ ಹಾಲಿನ ಡೇರಿಗಳು ಹೆಚ್ಚಿದ್ದು, ಹೈನುಗಾರಿಕೆಯನ್ನೇ ಅವಲಂಬಿಸಿ ಜೀವನ ನಡೆಸುವ ಕುಟುಂಬಗಳು ಹೆಚ್ಚಾಗಿವೆ. ಕೊಳವೆ ಬಾವಿ ಇರುವವರು ಬೇಸಿಗೆಯಲ್ಲಿ ಒಣ ಮೇವಿನ ಜೊತೆಗೆ ಹಸಿರು ಮೇವು ಬೆಳೆದುಕೊಳ್ಳುತ್ತಾರೆ. ಮಳೆಯಾಶ್ರಿತ ಬೇಸಾಯಗಾರರಿಗೆ ಒಣ ಹುಲ್ಲೇ ಗಟ್ಟಿ. ಈಗ ಮಳೆ ಬಂದರೂ ಹಸಿರು ಮೇವು ಬರಲು ಇನ್ನೂ ಎರಡು ಮೂರು ತಿಂಗಳು ಬೇಕಾಗುವುದರಿಂದ ಒಣ ಹುಲ್ಲಿಗೆ ಬೇಡಿಕೆ ಹೆಚ್ಚಿದೆ ಎನ್ನುತ್ತಾರೆ ರೈತ ತಿಮ್ಮೇಗೌಡ.

ರೈತರು ಏನಂತಾರೆ?

ಇತ್ತೀಚಿನ ವರ್ಷಗಳಲ್ಲಿ ರೈತರು ಯಂತ್ರದ ಮೂಲಕ ರಾಗಿ ಕೊಯ್ಲು ಮಾಡಿಸಿ ಅದನ್ನು ಯಂತ್ರದ ಮೂಲಕವೇ ಪೆಂಡಿ ಮಾಡುತ್ತಿರುವುದರಿಂದ ಹುಲ್ಲು ಪುಡಿಯಾಗುತ್ತಿದೆ. ಹುಲ್ಲು ಹೆಚ್ಚು ಒದಗುತ್ತಿಲ್ಲ. ಹಿಂದೆಲ್ಲಾ ಕೈನಲ್ಲಿ ಕೊಯ್ಲು ಮಾಡಿ, ಕಣದಲ್ಲಿ ಒಕ್ಕಣೆ ಮಾಡುತ್ತಿದ್ದರಿಂದ ಹುಲ್ಲು ಹೆಚ್ಚುತ್ತಿತ್ತು.

ರಾಮಯ್ಯ, ರೈತ

ಕಳೆದ ವರ್ಷ ಮಳೆ ಕೊರತೆಯಾಯಿತು. ಡಿಸೆಂಬರ್ ವೇಳೆಗೆ ಹೊರಗಡೆ ಜಾನುವಾರುಗಳಿಗೆ ಮೇವು ಸಿಗಲಿಲ್ಲ. ಅಧಿಕ ಬಿಸಿಲು, ಮಳೆ ಕೊರತೆಯಿಂದ ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾಗಿ ಮೇವು ಬೆಳೆಯಲು ಆಗದೆ ಒಣ ಹುಲ್ಲಿಗೆ ಬೇಡಿಕೆ ಹೆಚ್ಚಿದೆ.

ಆನಂದ, ಹೈನುಗಾರಿಕೆ ಅವಲಂಬಿತ ರೈತ

ನಗರದಲ್ಲಿ ಇಂದು

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಉದ್ಘಾಟನೆ: ಜಯಕರ ಎಸ್.ಎಂ., ಅತಿಥಿಗಳು: ಹ.ರ. ಮಹೇಶ್, ಸುನಿಲ್‌ಕುಮಾರ್ ಗುನ್ನಾಪುರ್, ಅಧ್ಯಕ್ಷತೆ: ವಿ. ಸುದೇಶ್, ಉಪಸ್ಥಿತಿ: ಎನ್. ದಶರಥ್, ಆಯೋಜನೆ: ಕಾನೂನು ಕಾಲೇಜು ವಿಶ್ವವಿದ್ಯಾಲಯ ಮತ್ತು ಕಾನೂನು ಅಧ್ಯಯನ ವಿಭಾಗ, ಸ್ಥಳ: ಪ್ರೊ.ವಿ.ಬಿ. ಕುಟಿನ್ಹೋ ಸೆಮಿನಾರ್ ಹಾಲ್, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ರಾಜ್ಯಮಟ್ಟದ ಮಹಿಳಾ ಸಮಾವೇಶ: ಅತಿಥಿಗಳು: ಸಿ.ಎಚ್. ಹನುಮಂತರಾಯ, ಡಾ. ಸುಧಾಕಾಮತ್, ನಾಗಲಕ್ಷ್ಮಿ ಮಂಜುಳಾ, ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸ್ಥಳ: ಯುವಿಸಿಇ ಅಲುಮ್ನಿ ಅಸೋಸಿಯೇಷನ್ ಹಾಲ್, ಕೆ.ಆರ್.ವೃತ್ತ, ಬೆಳಿಗ್ಗೆ 11

56ನೇ ವರ್ಷದ ಮಕ್ಕಳ ಬೇಸಿಗೆ ರಜೆಯ ಸಾಂಸ್ಕೃತಿಕ ಶಿಕ್ಷಣ ಹಾಗೂ ಮನೋರಂಜನಾ ಶಿಬಿರ–2024: ಹೊರಾಂಗಣ ಚಟುವಟಿಕೆಗಳು: ಉದ್ಘಾಟನೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಅತಿಥಿಗಳು: ಮಹೇಂದ್ರ ಮುನ್ನೋಟ್, ಎ.ಪಿ. ಗುಣಶೇಖರ್, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಸಂಜೆ 4

ಕಾಸಾಗ್ರ್ಯಾಂಡ್‌ನಿಂದ ಅತ್ಯಾಧುನಿಕ 'ಕಾಸಾಬ್ಲಾಂಕಾ'

ಬೆಂಗಳೂರು: ದಕ್ಷಿಣ ಭಾರತದ ಪ್ರಮುಖ ರಿಯಲ್ ಎಸ್ಟೇಟ್ ಡೆವಲಪರ್‌ಗಳಲ್ಲಿ ಒಂದಾದ ಕಾಸಾಗ್ರ್ಯಾಂಡ್, ಸಿಲಿಕಾನ್ ಸಿಟಿ ಬೆಂಗಳೂರಿಗೆ ಐಷಾರಾಮಿ ಜೀವನ ಶೈಲಿಯ ಹೊಸ ಐಕಾನ್ ವಸತಿ ಸಮುಚ್ಚಯ'ಕಾಸಾಬ್ಲಾಂಕಾ'ವನ್ನು ನಿರ್ಮಾಣ ಮಾಡುತ್ತಿದೆ.

ಕನಕಪುರ ರಸ್ತೆಯ ಸಮೀಪದ 27 ಎಕರೆ ಪ್ರದೇಶದಲ್ಲಿ ಕಾಸಾಗ್ರ್ಯಾಂಡ್ ಕಂಪನಿ ₹750 ಕೋಟಿ ಹೂಡಿಕೆ ಮಾಡಿ 1700ಕ್ಕೂ ಅಧಿಕ ಐಷಾರಾಮಿ ಅಪಾರ್ಟ್‌ಮೆಂಟ್‌ಗಳು, ಫ್ಲೋರ್ ವಿಲ್ಲಾಗಳು ಹಾಗೂ ಪೆಂಟ್‌ಹೌಸ್‌ಗಳನ್ನು ನಿರ್ಮಿಸುವುದಾಗಿ ಘೋಷಿಸಿದೆ. ಈ ವಸತಿ ಪ್ರದೇಶವನ್ನು 16.1 ದಶಲಕ್ಷ ಚದರ ಅಡಿ ಜಾಗದಲ್ಲಿ ಅಭಿವೃದ್ಧಿಪಡಿಸಲು ಕಂಪನಿ ಸಿದ್ಧವಾಗಿದೆ. ಬಾಲಿವುಡ್ ನಟಿ ಕರೀನಾ ಕಪೂರ್ ಖಾನ್ ಅವರು ಈ ಪ್ರತಿಷ್ಠಿತ ಯೋಜನೆಯ ಸೆಲೆಬ್ರಿಟಿ ಅನುಮೋದಕರಾಗಿದ್ದಾರೆ.

ದಿ ಗ್ರೇಟೆಸ್ಟ್ ಲಿವಿಂಗ್ ಎಕ್ಸ್‌ಪೀರಿಯನ್ಸ್: 'ದಿ ಗ್ರೇಟೆಸ್ಟ್ ಲಿವಿಂಗ್ ಎಕ್ಸ್‌ಪೀರಿಯನ್ಸ್' ಎಂಬ ಹೆಸರಿನ 360 ಡಿಗ್ರಿ ಮಾರ್ಕೆಟಿಂಗ್ ಅಭಿಯಾನವನ್ನು ಹೊರತಂದಿರುವ ಕಾಸಾಗ್ರ್ಯಾಂಡ್, ರೋಮನ್ ವಾಸ್ತುಶೈಲಿಯ ಟೈಮ್ಲೆಸ್ ಸೊಬಗಿನಿಂದ ಸ್ಫೂರ್ತಿ ಪಡೆದಿದೆ. ಅತ್ಯುತ್ತಮ ವಿನ್ಯಾಸ ಮತ್ತು ಸಾಟಿಯಿಲ್ಲದ ಐಷಾರಾಮಿ ಸೌಲಭ್ಯಗಳ 2, 3, 4 BHK ಪ್ರೀಮಿಯಂ ಅಪಾರ್ಟ್‌ಮೆಂಟ್‌ಗಳು, 5 BHK ಫ್ಲೋರ್ ವಿಲ್ಲಾಗಳು ಮತ್ತು ಪೆಂಟ್‌ಹೌಸ್‌ಗಳ ಜೊತೆಗೆ 100ಕ್ಕೂ ಹೆಚ್ಚು ವಿಶ್ವದರ್ಜೆ ಸೌಕರ್ಯಗಳನ್ನು ಕಾಸಾಬ್ಲಾಂಕಾ ಸಮುಚ್ಚಯ ಹೊಂದಲಿದೆ.

ಜೆಪಿ ನಗರ, ಜಯನಗರ, ಬನಶಂಕರಿ, ಫೋರಂ ಮಾಲ್ ಮತ್ತು ಐಟಿ, ಐಟಿಇಎಸ್ ಹಬ್‌ಗಳಿಗೆ ಸಮೀಪವಿರುವ ಕಾಸಾಗ್ರ್ಯಾಂಡ್ ಕಾಸಾಬ್ಲಾಂಕಾ ನಿವಾಸಿಗಳು ಸಾಟಿಯಿಲ್ಲದ ಅನುಕೂಲತೆ ಮತ್ತು ಸಮೃದ್ಧ ಜೀವನಶೈಲಿ ಪಡೆಯಲಿದ್ದಾರೆ. ಪ್ರಮುಖ ಶಿಕ್ಷಣ ಸಂಸ್ಥೆಗಳು, ಆರೋಗ್ಯ ಸೌಲಭ್ಯಗಳು ಮತ್ತು ವಿರಾಮ ಸ್ಥಳಗಳ ಅನುಕೂಲದಿಂದ ಕೂಡಿದ ಆಹ್ಲಾದಕರ ಜೀವನದ ಭರವಸೆಯನ್ನು ನಿವಾಸಿಗಳಿಗೆ ಕಂಪನಿ ನೀಡುತ್ತದೆ.

ವಿಶ್ವ ದರ್ಜೆಯ ಸೌಕರ್ಯ: ಕಾಸಾಬ್ಲಾಂಕಾ ಸಮುಚ್ಚಯದಲ್ಲಿ ಅದ್ದೂರಿ ಈಜುಕೊಳ, ಬಹುಪಯೋಗಿ ಹಾಲ್, ಜಿಮ್, AV ಕೊಠಡಿ, ಮತ್ತು ವಿವಿಧೋದ್ದೇಶ ಕೋರ್ಟ್ ಸೇರಿದಂತೆ 100ಕ್ಕೂ ಹೆಚ್ಚು ವಿಶ್ವ ದರ್ಜೆಯ ಸೌಕರ್ಯಗಳಿವೆ.

24 ಸಾವಿರ ಚದರ ಅಡಿ ವಿಸ್ತೀರ್ಣ ಹೊಂದಿದ ಈಜುಕೊಳ ವಿಶೇಷವಾಗಿ ಪೂಲ್‌ಸೈಡ್ ಸೌಕರ್ಯಗಳೊಂದಿಗೆ ವಿನ್ಯಾಸಗೊಳಿಸಲಾಗಿದೆ.

ಐಷಾರಾಮಿ ವ್ಯವಸ್ಥೆಗಳ ನಡುವೆ ವಿಶ್ರಾಂತಿ ಪಡೆಯಲು ಪ್ರಶಾಂತವಾದ ಓಯಸಿಸ್, 42 ಸಾವಿರ ಚದರ ಅಡಿ ವ್ಯಾಪ್ತಿಯ ಕ್ಲಬ್ ಹೌಸ್, 26000 ಚದರ ಅಡಿ ಕ್ರೀಡಾ ಕ್ಲಬ್‌ಹೌಸ್ ಹಾಗೂ 23 ಎಕರೆ ಓಪನ್ ಸ್ಪೇಸ್ ಕೂಡ ಒದಗಿಸಿದೆ. ಜತೆಗೆ ಬಹುಪಯೋಗಿ ಸಭಾಂಗಣ, ಮನರಂಜನಾ ಕೋಣೆ, ಟೆರೇಸ್ ಹ್ಯಾಂಗ್‌ಔಟ್ ಪ್ಲಾಜಾ ಮತ್ತು ವಿಡಿಯೋ ಗೇಮ್‌ಗಳ ಕೊಠಡಿ ಸೌಲಭ್ಯವನ್ನು ಕಲ್ಪಿಸಿದೆ.

ವಿವರಗಳಿಗೆ: +91 7358134851

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

'ಬದ್ಧತೆಗೆ ಸಾಕ್ಷಿ ಕಾಸಾಬ್ಲಾಂಕಾ'

ಬೆಂಗಳೂರು ವಲಯದ ಕಾಸಾಗ್ರ್ಯಾಂಡ್‌ನ ನಿರ್ದೇಶಕ ಸತೀಶ್ ಸಿ.ಜಿ. ಅವರು ಮಾತನಾಡಿ, 'ಬೆಂಗಳೂರಿನ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಇದೊಂದು ಮೈಲಿಗಲ್ಲಾಗಲಿದೆ. ಕಾಸಾಗ್ರ್ಯಾಂಡ್ ಎಂದರೆ ಬದಲಾವಣೆ, ಹೊಸತನ ಎಂಬ ಹೆಗ್ಗಳಿಕೆ ಪಡೆದಿರುವ ಕಂಪನಿಯ ಇತ್ತೀಚಿನ ಯೋಜನೆ ಕಾಸಾಬ್ಲಾಂಕಾವನ್ನು ಪರಿಚಯಿಸಲು ನಾವು ಸಂತೋಷಪಡುತ್ತೇವೆ. ಮೊದಲ ಬಾರಿಗೆ 27 ಎಕರೆ ವಿಸ್ತೀರ್ಣದಲ್ಲಿ ಕ್ಯಾನ್ವಾಸ್ ಅನ್ನು ತರುತ್ತಿದ್ದೇವೆ. ನಮ್ಮ ಬೆಂಗಳೂರು ಯೋಜನೆಯ ಪೋರ್ಟ್‌ಫೋಲಿಯೋದಲ್ಲಿ ಇದು ಒಂದಾಗಿದ್ದು, ಈ ಯೋಜನೆ ಐಷಾರಾಮಿ ಜೀವನವನ್ನು ಮರುವ್ಯಾಖ್ಯಾನಿಸುವತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಕಾಸಾಬ್ಲಾಂಕಾ ಸಮುಚ್ಚಯ ಉತ್ಕೃಷ್ಟತೆಗೆ ಹಾಗೂ ನಾವು ನೀಡುವ ದೃಢವಾದ ಬದ್ಧತೆಗೆ ಸಾಕ್ಷಿಯಾಗಿ ನಿಂತಿದೆ'.ನಟಿ ಕರೀನಾ ಕಪೂರ್ ಖಾನ್ ಅವರೊಂದಿಗಿನ ನಮ್ಮ ಸಹಯೋಗವು ಸಾಟಿಯಿಲ್ಲದ ಆಧುನಿಕತೆ ಮತ್ತು ಆಕರ್ಷಣೆಯ ಸ್ಪರ್ಶವನ್ನು ಒಳಗೊಂಡಿದೆ ಎಂದಿದ್ದಾರೆ.

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಈ ಸಂಚಿಕೆಯಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳು, QR ಕೋಡ್ ಆಧಾರಿತ ಮಾದರಿ ಪರೀಕ್ಷೆ ಹಾಗೂ ವಿಡಿಯೋ ಪಾಠಗಳು ಲಭ್ಯ

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ

ಚಂದಾದಾರಿಕೆ ಕೇವಲ ₹360 ರಿಂದ ಪ್ರಾರಂಭ

*ಷರತ್ತುಗಳು ಅನ್ವಯ

ಅಧಿಕಾರಿಗಳ ಸಭೆಯಲ್ಲಿ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಮಾಹಿತಿ

ಅವಘಡ ತಡೆ: ವಿಪತ್ತು ನಿರ್ವಹಣೆ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆಗಾಲದಲ್ಲಿ ಯಾವುದೇ ತೊಂದರೆ ಉಂಟಾಗದಂತೆ ಕ್ರಮಗಳನ್ನು ಕೈಗೊಳ್ಳಲು ಬಿಬಿಎಂಪಿ ವಲಯಗಳ ಉಪವಿಭಾಗಗಳ ಹಂತದಲ್ಲಿ ವಿಪತ್ತು ನಿರ್ವಹಣಾ ತಂಡಗಳನ್ನು ನಿಯೋಜನೆ ಮಾಡಲಾಗುವುದು' ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ನಗರದಲ್ಲಿ ವಿಪತ್ತು ನಿರ್ವಹಣೆಗಾಗಿ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ಸೋಮವಾರ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

ಪಾಲಿಕೆ, ಜಲಮಂಡಳಿ, ಬೆಸ್ಕಾಂ, ಮೆಟ್ರೊ, ಅಗ್ನಿಶಾಮಕ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ವಿಪತ್ತು ನಿರ್ವಹಣಾ ತಂಡಗಳನ್ನು ರಚಿಸಲಾಗಿದೆ. ತಗ್ಗು ಪ್ರದೇಶಗಳಿಗೆ ಮಳೆ ನೀರು ನುಗ್ಗುವುದು, ಮ್ಯಾನ್ ಹೋಲ್‌ಗಳು ತೆರೆದುಕೊಳ್ಳುವುದು, ಮರ/ವಿದ್ಯುತ್ ಕಂಬಗಳು ಬೀಳುವಂತಹ ಘಟನೆಗಳು ನಡೆಯುತ್ತಿವೆ. ಮಳೆಯಿಂದಾಗುವ ಅನಾಹುತಗಳನ್ನು ತಡೆಗಟ್ಟಲು ಆಯಾ ವಲಯಗಳ ಉಪ ವಿಭಾಗಗಳಲ್ಲಿ ವಿಪತ್ತು ನಿರ್ವಹಣಾ ತಂಡಗಳು ಸಿದ್ದವಾಗಿರಬೇಕು ಎಂದು ಸೂಚಿಸಿದರು.

ಒಂದು ವಾರದಿಂದ ನಗರದ ವಿವಿಧೆಡೆ ಮಳೆಯಾಗುತ್ತಿದೆ. ಸುಮಾರು 150 ಕಡೆಗಳಲ್ಲಿ ನೀರು ನಿಂತಿತ್ತು. ನಿಂತ ನೀರು ಎರಡು ಗಂಟೆಯೊಳಗಾಗಿ ಹರಿದುಹೋಗಿದ್ದು, ಯಾವುದೇ ರೀತಿಯ ಸಮಸ್ಯೆಯಾಗಿಲ್ಲ. ಇಲ್ಲಿಯವರೆಗೆ 325 ಮರಗಳು ಬಿದ್ದಿದ್ದು, ಅದರಲ್ಲಿ 320 ಮರಗಳನ್ನು ತೆರವುಗೊಳಿಸಲಾಗಿದೆ. 698 ಕೊಂಬೆಗಳು ಬಿದ್ದಿದ್ದು, 650 ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಳೆ-ಗಾಳಿಯಿಂದಾಗಿ ಮುರಿದು ಬಿದ್ದ ಮರ, ರೆಂಬೆಗಳನ್ನು ತೆರವುಗೊಳಿಸಲು 39 ತಂಡಗಳು ಕಾರ್ಯನಿರ್ವಹಿಸುತ್ತಿವೆ. ರಸ್ತೆ ಬದಿ ಹಾಕಿರುವಂತಹ ರೆಂಬೆಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವಂತೆ ಅವರು ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ 225 ವಾರ್ಡ್‌ಗಳಲ್ಲಿ ಚರಂಡಿ ಹೂಳೆತ್ತಲು ಪ್ರತಿ ವಾರ್ಡ್‌ಗೆ ತಲಾ ₹30 ಲಕ್ಷ ಮೀಸಲಿಡಲಾಗಿದೆ. ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಲ್ಲಿ ವಿಪತ್ತು ನಿರ್ವಹಣೆಗಾಗಿ ಈ ಬಾರಿಯ ಬಜೆಟ್‌ನಲ್ಲಿ ₹10 ಕೋಟಿ ಮೀಸಲಿಡಲಾಗಿದೆ. ಈಗಿರುವ ಸಮಸ್ಯೆಗಳ ನಿವಾರಣೆಗೆ ಈ ಅನುದಾನ ವನ್ನು ಬಳಕೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಬೇಕಿದೆ 74 ಕಡೆ ಶಾಶ್ವತ ಪರಿಹಾರ: ನಗರದಲ್ಲಿ 198 ಪ್ರವಾಹ ಪೀಡಿತ ಪ್ರದೇಶಗಳಿದ್ದು, ಅದರಲ್ಲಿ 74 ಪ್ರದೇಶಗಳಲ್ಲಿ ಇನ್ನೂ ಶಾಶ್ವತ ಪರಿಹಾರದ ವ್ಯವಸ್ಥೆಯಾಗಿಲ್ಲ ಎಂದು ತುಷಾರ್ ಗಿರಿನಾಥ್ ಹೇಳಿದರು.

'124 ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಈಗಾಗಲೇ ಶಾಶ್ವತ ಪರಿಹಾರವನ್ನು ಮಾಡಲಾಗಿದೆ. ಈ ಸ್ಥಳಗಳಿಗೆ ವಲಯ ಆಯುಕ್ತರು ಭೇಟಿ ನೀಡಿ ಪರಿಶೀಲನೆ ನಡೆಸಿ ಏನಾದರೂ ಸಮಸ್ಯೆಯಿದ್ದರೆ ಕೂಡಲೇ ಕಾಮಗಾರಿ ಕೈಗೊಂಡು ಸರಿಪಡಿಸಬೇಕು. ಉಳಿದ 74 ಪ್ರದೇಶಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಶೀಘ್ರ ಶಾಶ್ವತ ಪರಿಹಾರ ಕೈಗೊಳ್ಳಲಾಗುವುದು' ಎಂದು ವಿವರಿಸಿದರು.

ಸಭೆಯಲ್ಲಿ ಬಿಬಿಎಂಪಿ ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಕೆ.ಹರೀಶ್ ಕುಮಾರ್, ಸುರೋಳ್ಕರ್ ವಿಕಾಸ್ ಕಿಶೋರ್, ಶಿವಾನಂದ ಕಲಕೇರಿ, ವಲಯ ಆಯುಕ್ತರಾದ ಆರ್. ಎಲ್ ದೀಪಕ್, ವಿನೊತ್ ಪ್ರಿಯಾ, ರಮೇಶ್, ಶಿವಾನಂದ ಕಾಪಸಿ, ಸ್ನೇಹಲ್, ರಮ್ಯಾ, ಪ್ರೀತಿ ಗೆಹಲೋತ್ ಉಪಸ್ಥಿತರಿದ್ದರು.

ಭಾನುವಾರ ರಾತ್ರಿ ಸುರಿದ ಮಳೆಗೆ ನಗರದ ಮಡಿವಾಳದ ಕೆಳರಸ್ತೆಯಲ್ಲಿ ಹರಿಯುತ್ತಿರುವ ನೀರಿನಲ್ಲಿ ಸಾಗಿದ ವಾಹನಗಳು
ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್

ಸೆನ್ಸಾರ್‌ಗಳ ಮೇಲ್ವಿಚಾರಣೆ

ಪಾಲಿಕೆ ವ್ಯಾಪ್ತಿಯಲ್ಲಿ ಪ್ರವಾಹವನ್ನು ನಿಭಾಯಿಸಲು ಮತ್ತು ಪ್ರತಿಕ್ರಿಯಿಸಲು ರಾಜಕಾಲುವೆಗಳಲ್ಲಿ 124 ಕಡೆ ನೀರಿನ ಮಟ್ಟ ಅಳೆಯುವ ಸಂವೇದಕಗಳನ್ನು(Water Level Sensor) ಕೆಎಸ್‌ಎನ್‌ಡಿಎಂಸಿ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಅಳವಡಿಸಲಾಗಿದೆ. ಇದನ್ನು ಪಾಲಿಕೆಯ ಇಂಟಿಗ್ರೇಟೆಡ್ ಕಮಾಂಡಿಂಗ್ ಕಂಟ್ರೋಲ್ ಸೆಂಟರ್‌ನಲ್ಲಿ(ಐಸಿಸಿಸಿ) ಮೇಲ್ವಿಚಾರಣೆ ಮಾಡಲಾಗುತ್ತಿದ್ದು, ಈ ಬಗ್ಗೆ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರಹ್ಲಾದ್ ವಿವರಣೆ ನೀಡಿದರು.

'ಮೇಘ ಸಂದೇಶ', 'ವರುಣಮಿತ್ರ'

ಮಳೆಯ ಬಗ್ಗೆ ನಾಗರಿಕರಿಗೆ ಅಗತ್ಯ ಮಾಹಿತಿಯನ್ನು ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಮತ್ತು ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ) ವತಿಯಿಂದ 'ಬೆಂಗಳೂರು ಮೇಘ ಸಂದೇಶ" ಮೊಬೈಲ್ ಆಪ್ (https://play.google.com/store/apps/details?id = com.moserptech.meghasandesha&hl = en) ಬಿಡುಗಡೆಗೊಳಿಸಲಾಗಿದೆ.

ಅಲ್ಲದೆ 'ವರುಣಮಿತ್ರ' ಅಂತರ್ಜಾಲ ತಾಣದಲ್ಲಿ (http://varunamitra.karnataka.gov.in) ಪಾಲಿಕೆ ವ್ಯಾಪ್ತಿಯಲ್ಲಿ ಉಂಟಾಗುವ ಪ್ರವಾಹವನ್ನು ತಡೆಯಲು ವಲಯವಾರು ನಕ್ಷೆ, ಮಳೆ ಮುನ್ಸೂಚನೆ, ಪ್ರವಾಹ ಮುನ್ಸೂಚನೆ ಬಗ್ಗೆ ನಿರ್ದಿಷ್ಟ ಮಾಹಿತಿಯನ್ನು ಪಡೆಯಬಹುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ತಡರಾತ್ರಿ ಸುರಿದ ಮಳೆಗೆ ಬೆಂಗಳೂರಿನ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಮುಂದೆ ಸಾಗಲು ತೊಂದರೆಯುಂಟಾಯಿತು
–ಪ್ರಜಾವಾಣಿ ಚಿತ್ರ

ತಡರಾತ್ರಿ ಧಾರಾಕಾರ ಮಳೆ ತಂಪಾದ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ತಡರಾತ್ರಿ ಧಾರಾಕಾರ ಮಳೆಯಾಗಿದ್ದು, ನಗರದ ವಾತಾವರಣ ಇನ್ನಷ್ಟು ತಂಪಾಯಿತು.

ಬಿಳೇಕಹಳ್ಳಿ, ಸಾರಕ್ಕಿ ಭಾಗದಲ್ಲಿ ಜೋರು ಮಳೆಯಾಗಿದೆ. ಮಳೆಯಿಂದ ಅಂಡರ್ ಪಾಸ್ ಹಾಗೂ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಬಿರುಗಾಳಿಯಿಂದ ಅಲ್ಲಲ್ಲಿ ಮರದ ಕೊಂಬೆಗಳು ಬಿದ್ದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ನಗರದ ಉತ್ತರ ಭಾಗದ ಪ್ರದೇಶಗಳಲ್ಲಿಯೂ ಜೋರು ಮಳೆಯಾಗಿದೆ.

ಮಳೆ ಪ್ರಮಾಣ: ಬಿಳೇಕಹಳ್ಳಿಯಲ್ಲಿ ಅತಿ ಹೆಚ್ಚು ಅಂದರೆ 5.25 ಸೆಂ.ಮೀ. ಮಳೆಯಾಗಿದೆ. ಸಾರಕ್ಕಿ, ದೊರೆಸಾನಿಪಾಳ್ಯ, ಕೋಣನಕುಂಟೆಗಳಲ್ಲಿ ತಲಾ 4.65 ಸೆಂ.ಮೀ. ಮಳೆ ದಾಖಲಾಗಿದೆ. ಬಿಟಿಎಂ ಲೇಔಟ್ (3.7 ಸೆಂ.ಮೀ.), ಬೊಮ್ಮನಹಳ್ಳಿ (3.4 ಸೆಂ.ಮೀ.), ಅರಕೆರೆ (3 ಸೆಂ.ಮೀ.), ಬೇಗೂರು (3 ಸೆಂ.ಮೀ.), ಕೂಡಿಗೆಹಳ್ಳಿ (2.6 ಸೆಂ.ಮೀ.), ರಾಧಾಕೃಷ್ಣನಗರಗಳಲ್ಲಿ (2.6 ಸೆಂ.ಮೀ.) ಉತ್ತಮ ಮಳೆಯಾಗಿದೆ. ಕುಮಾರಸ್ವಾಮಿ ಬಡಾವಣೆ, ಬಸವನಗುಡಿ, ಸಿಂಗಸಂದ್ರ, ವಿಶ್ವನಾಥ ನಾಗೇನಹಳ್ಳಿ, ಕೋರಮಂಗಲ, ವನ್ನಾರ್ ಪೇಟೆಗಳಲ್ಲಿ 2 ಸೆಂ.ಮೀ.ನಷ್ಟು ಮಳೆಯಾಗಿದೆ.

ನಗರದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ಹೊಸಕೆರೆಹಳ್ಳಿಯ ಕೆರೆ ಕೋಡಿ ರಸ್ತೆ ಸಂಪೂರ್ಣ ಹಾಳಾಗಿದೆ
– ಪ್ರಜಾವಾಣಿ ಚಿತ್ರ

ಗುಂಡಿಮಯ
ನಗರದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ಹೊಸಕೆರೆಹಳ್ಳಿಯ ಕೆರೆ ಕೋಡಿ ರಸ್ತೆ ಸಂಪೂರ್ಣ ಹಾಳಾಗಿದೆ
– ಪ್ರಜಾವಾಣಿ ಚಿತ್ರ / ರಂಜು ಪಿ.

ಲಾಲ್‌ಬಾಗ್: 24ರಿಂದ 'ಮಾವು ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇ 24 ರಿಂದ ಜೂನ್ 10ವರೆಗೆ ಲಾಲ್‌ಬಾಗ್‌ನಲ್ಲಿ 'ಮಾವು ಮೇಳ' ನಡೆಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ತೀರ್ಮಾನಿಸಿದೆ.

ಮೇಳದಲ್ಲಿ ಸುಮಾರು 60 ಮಳಿಗೆಗಳು ಇರಲಿವೆ. ಕೊಪ್ಪಳದ ಕೇಸರ್, ಚಿತ್ರದುರ್ಗ ಮತ್ತು ತುಮಕೂರಿನ ಬಾದಾಮಿ, ರಸಪುರಿ, ಬೆನಿಶಾ, ಮಲಗೋವಾ, ಇಮಾಮ್‌ಪಸಂದ್ ನಂತಹ ಪ್ರಸಿದ್ಧ ತಳಿಗಳು ಮೇಳದಲ್ಲಿ ಲಭ್ಯವಿರುತ್ತವೆ. 'ಮಾವು ಬೆಳೆಯುವ ಪ್ರಮುಖ ಜಿಲ್ಲೆಗಳಾದ ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ರೈತರು ರಸಪುರಿ ಮತ್ತು ತೋತಾಪುರಿಯಂತಹ ತಳಿಯ ಹಣ್ಣುಗಳನ್ನು ಮೇಳಕ್ಕೆ ತರಲಿದ್ದಾರೆ' ಎಂದು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಸಿ.ಜಿ.ನಾಗರಾಜ್ ತಿಳಿಸಿದರು.

'ಕಳೆದ ವರ್ಷ ಭೌಗೋಳಿಕ ಮಾನ್ಯತೆ (ಜಿಐ ಟ್ಯಾಗ್) ಪಡೆದಿರುವ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ಕರಿ ಇಶಾದ್ ಮಾವಿನ ತಳಿಯ ಹಣ್ಣುಗಳೂ ಮೇಳಕ್ಕೆ ಬರಲಿವೆ. ಮಾವು ಮತ್ತು ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳೂ ಮಾರಾಟಕ್ಕಿರಲಿವೆ' ಎಂದು ಅವರು ತಿಳಿಸಿದರು.

ಮಣಿಪಾಲ್ ಆಸ್ಪತ್ರೆ: ತಾಯಂದಿರ ದಿನಾಚರಣೆ

'ಆರೋಗ್ಯ ಕಡೆಗಣಿಸುತ್ತಿರುವ ತಾಯಂದಿರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾಯ್ತನವು ಅಪಾರ ಆನಂದ, ಪ್ರೀತಿ ಮತ್ತು ವಿಶಿಷ್ಟ ಸವಾಲುಗಳಿಂದ ಒಡಗೂಡಿದ ಅನನ್ಯ ಅನುಭವ. ತಾಯ್ತನದ ಪ್ರಯಾಣದ ಪ್ರತಿ ಹಂತದಲ್ಲಿಯೂ ವಿಶೇಷ ತಿಳಿವಳಿಕೆ ಮತ್ತು ಬೆಂಬಲ ಅಗತ್ಯ' ಎಂದು ವೈದ್ಯಕೀಯ ತಜ್ಞರು ತಿಳಿಸಿದರು.

ಮಣಿಪಾಲ್ ಆಸ್ಪತ್ರೆ ಸಮೂಹವು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ವಿಶ್ವ ತಾಯಂದಿರ ದಿನ' ಕಾರ್ಯಕ್ರಮದಲ್ಲಿ ವೈದ್ಯಕೀಯ ತಜ್ಞರು ತಾಯ್ತನದ ಸಂಕೀರ್ಣತೆ ಮತ್ತು ಸವಾಲುಗಳ ಬಗ್ಗೆ ವಿವರಿಸಿದರು.

ವರ್ತೂರು ರಸ್ತೆಯ ಮಣಿಪಾಲ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ವಿಜಯಾ ಮೀನಾಕ್ಷಿ, ಆಂತರಿಕ ಔಷಧ ವಿಭಾಗದ ಸಲಹೆಗಾರ ಡಾ.ದಿಲಿಪ್ ರಾಜ್ ಕೆ.ಎಸ್., ವೈಟ್‌ಫೀಲ್ಡ್ ಆಸ್ಪತ್ರೆಯ ಮನೋವೈದ್ಯೆ ಡಾ.ನೀತು ತಿವಾರಿ ಹಾಗೂ ಮೂತ್ರ ವಿಜ್ಞಾನ ವಿಭಾಗದ ಸಲಹೆಗಾರ ಡಾ.ದೀಪಕ್ ಜಯಪ್ರಕಾಶ್ ಅವರು ವಿವಿಧ ವಯೋಮಾನದ ತಾಯಂದಿರು ಎದುರಿಸುವ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

'ಬಹುತೇಕ ತಾಯಂದಿರು ಆರೋಗ್ಯ ಕಡೆಗಣಿಸುತ್ತಾರೆ. ಇದರಿಂದ ಸಮಸ್ಯೆ ಉಲ್ಬಣವಾಗಿ, ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿವೆ. ಆದ್ದರಿಂದ ತಾಯಂದಿರು ನಿಯಮಿತ ಪರೀಕ್ಷೆಗೆ ಒಳಗಾಗಿ, ಸಮಸ್ಯೆ ಇದ್ದಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು' ಎಂದು ಡಾ.ದಿಲಿಪ್ ರಾಜ್ ಹೇಳಿದರು.

ಡಾ.ನೀತು ತಿವಾರಿ, 'ಆರೋಗ್ಯ ಕಾಪಾಡಿಕೊಳ್ಳಲು ಮಹಿಳೆಯರು ದೈಹಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು. ಪೌಷ್ಟಿಕ ಆಹಾರ ಸೇವನೆ, ನಿಯಮಿತ ಆರೋಗ್ಯ ತಪಾಸಣೆ ಸೇರಿ ವಿವಿಧ ಕ್ರಮಗಳ ಮೂಲಕ ತಾಯಂದಿರು ಆರೋಗ್ಯ ವೃದ್ಧಿಗೆ ಆದ್ಯತೆ ನೀಡಬೇಕು' ಎಂದರು.

ಡಾ.ದೀಪಕ್ ಜಯಪ್ರಕಾಶ್, 'ವಯಸ್ಸಾದ ಮಹಿಳೆಯರು ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಮೂತ್ರ ಸೋಂಕು ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನೂರಕ್ಕೂ ಅಧಿಕ ತಾಯಂದಿರು ಭಾಗವಹಿಸಿದ್ದರು. ಜೀವನದಲ್ಲಿ ತಾವು ಎದುರಿಸಿದ ಸಮಸ್ಯೆಗಳು ಹಾಗೂ ಅದನ್ನು ಪರಿಹರಿಸಿಕೊಂಡ ಬಗೆಯನ್ನು ವಿವರಿಸಿದರು.

ಶ್ರೀಗಂಧ ಕಳ್ಳತನ; ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಶ್ರೀಗಂಧ ಕಳ್ಳತನಕ್ಕೆ ಸಂಬಂಧಿಸಿದಂತೆ ಚಿಂತಾಮಣಿ ಪೊಲೀಸರು ಭಾನುವಾರ ಮತ್ತೆ ಮೂವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಹೊಸಕೋಟೆ ತಾಲ್ಲೂಕು ಕಟ್ಟಿಗೇನಹಳ್ಳಿಯ ಸೈಯದ್ ಅಲ್ತಾಫ್, ಸೈಯದ್ ರಿಯಾಜ್ ಉಲ್ಲಾ, ಬೆಂಗಳೂರು ಉತ್ತರ ತಾಲ್ಲೂಕಿನ ಬಾಗಲೂರು ಗ್ರಾಮದ ಸೈಯದ್ ಇಮ್ತಿಯಾಜ್ ಬಂಧಿತರು. ಆರೋಪಿಗಳಿಂದ ಎರಡು ದ್ವಿಚಕ್ರ ವಾಹನ ಮತ್ತು ₹61 ಸಾವಿರ ನಗದು ವಶಕ್ಕೆ ಪಡೆಯಲಾಗಿದೆ.

ಥಿಯೇಟರ್ ತತ್ಕಾಲ್ ಬುಕ್ಸ್ ಮತ್ತು ಚಾರುಮತಿ ಪ್ರಕಾಶನದಿಂದ ನಗರದ 'ಸುಚಿತ್ರ'ದಲ್ಲಿ ಭಾನುವಾರ ರಂಗಕರ್ಮಿ ರಘುನಂದನ್ ಅವರ 'ತುಯ್ತುವೆಲ್ಲ ನವ್ಯದತ್ತ: ಅಂದತ್ತರ ಉಯ್ಯಾಲೆ.. ಮತ್ತು ಅದರ ಸುತ್ತ' ಹಾಗೂ 'ನಾನು ಸತ್ತಮೇಲೆ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ನಟ ಅಚ್ಯುತ್ ಕುಮಾರ್, ಬರಹಗಾರ ರಾಜೇಂದ್ರ ಚೆನ್ನಿ, ಕೃತಿಕಾರ ರಘುನಂದನ್, ರಂಗನಿರ್ದೇಶಕ ವೆಂಕಟರಮಣ ಐತಾಳ, ಪ್ರಕಾಶಕ ವಿದ್ಯಾರಣ್ಯ ಭಾಗವಹಿಸಿದ್ದರು.

ಅನಧಿಕೃತ ಶಾಲೆಗಳ ವಿರುದ್ಧ ಕಠಿಣ ನಿಯಮ: ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ಶಾಲೆಗಳ ಹಾವಳಿಗೆ ಸಂಪೂರ್ಣ ಕಡಿವಾಣ ಹಾಕಲು ಸರ್ಕಾರ ದಿನಕ್ಕೆ ₹10 ಸಾವಿರ ದಂಡ ವಿಧಿಸುವಂತಹ ಕಠಿಣ ನಿಯಮಗಳನ್ನು ರೂಪಿಸಬೇಕು ಎಂದು ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ ಆಗ್ರಹಿಸಿದೆ.

ಸರ್ಕಾರ ಅನಧಿಕೃತ ಪೂರ್ವ ಪ್ರಾಥಮಿಕ ಶಾಲೆಗಳ ಬಗ್ಗೆ ಅನುಸರಿಸುತ್ತಿರುವ ಮೃದು ಧೋರಣೆ ಬಿಡಬೇಕು. ಅಂತಹ ಶಾಲೆಗಳಿಗೆ ₹10 ಸಾವಿರ ದಂಡ ವಿಧಿಸಬೇಕು. ನಂತರವೂ ನಿಯಮ ಪಾಲಿಸದಿದ್ದರೆ ದಿನಕ್ಕೆ ₹10 ಸಾವಿರ ಹಾಕಬೇಕು. ಪೂರ್ವ ಪ್ರಾಥಮಿಕ, ಪ್ರಾಥಮಿಕ ಸೇರಿದಂತೆ ಯಾವುದೇ ಹಂತದ ಶಾಲೆ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿದ್ದರೂ ಕ್ರಮ ಕೈಗೊಳ್ಳದ ಶಿಕ್ಷಣ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಸಮಿತಿಯ ಸಂಚಾಲಕ ಡಿ. ಶಶಿಕುಮಾರ್ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಕುಸಿದಿರುವ ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ ಶಿಕ್ಷಣ ಇಲಾಖೆ ಪರಿಣಾಮಕಾರಿ ರೂಪುರೇಷೆ ಸಿದ್ಧಪಡಿಸಬೇಕು. ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಹೆಚ್ಚಿಸದೇ ದಿನಕ್ಕೊಂದು ನಿಯಮ ಮಾಡುತ್ತಾ ಖಾಸಗಿ ಶಾಲೆಗಳಿಗೆ ಕಿರುಕುಳ ನೀಡುತ್ತಾ ಲಾಭ ಮಾಡಿಕೊಳ್ಳುತ್ತಿದ್ದಾರೆ.

5, 8ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಸದೇ, ಆಯಾ ಶಾಲೆಗಳ ಮಟ್ಟದಲ್ಲೇ ಮೌಲ್ಯಾಂಕನ ನಡೆಸಿ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಉತ್ತೇಜನ ನೀಡಬೇಕು. ಗುಣಮಟ್ಟದ ಪಠ್ಯಪುಸ್ತಕ ರೂಪಿಸಬೇಕು. ಶಾಲೆ ತೊರೆಯುವ ಮಕ್ಕಳನ್ನು ಗುರುತಿಸಿ, ಬಾಲ್ಯ ವಿವಾಹ ತಡೆಯಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಹೋರಾಟ ನಡೆಸಲು ಹಸಿರು ಪ್ರತಿಷ್ಠಾನದ ಸಮಾಲೋಚನಾ ಸಭೆಯಲ್ಲಿ ನಿರ್ಧಾರ

'371 ಜೆ: 24 ಜಿಲ್ಲೆಗಳಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 371-ಜೆ ಮೀಸಲಾತಿಯನ್ನು ರಾಜ್ಯದ ಎಲ್ಲ ಭಾಗಗಳ ಹುದ್ದೆಗಳ ಭರ್ತಿಗೆ ಅನ್ವಯಿಸುವುದರಿಂದ ಕರ್ನಾಟಕದ ಇತರ ಪ್ರದೇಶಗಳಿಗೆ ಆಗುತ್ತಿರುವ ಅನ್ಯಾಯವನ್ನು ವಿರೋಧಿಸಿ ಪ್ರತಿಭಟನೆ ನಡೆಸಲು ವಿವಿಧ ಸಂಘಟನೆಗಳು ನಿರ್ಧರಿಸಿವೆ.

ಹಸಿರು ಪ್ರತಿಷ್ಠಾನ ಈಚೆಗೆ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

371-ಜೆ ತಿದ್ದುಪಡಿಯ ಸೌಲಭ್ಯಕ್ಕೆ ಸಹಮತ ನೀಡಿದ ನೌಕರರನ್ನು ಮಾತ್ರ ಕಲ್ಯಾಣ ಕರ್ನಾಟಕ ಕೋಟಾದಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಸಹಮತ ನೀಡದ ಆ ಭಾಗದ ನೌಕರರನ್ನು ಕರ್ನಾಟಕದ ಕೋಟಾಕ್ಕೆ ಸೇರಿಸಲಾಗಿದೆ. ಇದರಿಂದ ಉಳಿದ 24 ಜಿಲ್ಲೆಗಳಿಗೆ ಅನ್ಯಾಯವಾಗಿದೆ ಎಂದು ಸಂಘಟನೆಗಳ ಪದಾಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಸಂವಿಧಾನದ 371-ಜೆ ವಿಧಿಯಲ್ಲಿ ರಾಜ್ಯಮಟ್ಟದ ಹುದ್ದೆಗಳಿಗೆ ಮೀಸಲಾತಿ ರೂಪಿಸಲು ಅವಕಾಶವಿಲ್ಲದೇ ಇದ್ದರೂ ಕೋಟಾ ನಿಗದಿಪಡಿಸಲಾಗಿದೆ. ರಾಜ್ಯಮಟ್ಟದ ವ್ಯಾಪ್ತಿಯಲ್ಲಿ ಬಾರದ ಬಿಡಿಎ, ಬಿಬಿಎಂಪಿಯಂಥ ಕಚೇರಿಗಳಲ್ಲಿಯೂ ಕಲ್ಯಾಣ ಕರ್ನಾಟಕ ಕೋಟಾ ನಿಗದಿ ಮಾಡಲಾಗಿದೆ ಎಂದು ಆರೋಪಿಸಿದರು.

ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ಖಾಲಿ ಹುದ್ದೆಗಳನ್ನು ತುಂಬಲು ಆದ್ಯತೆ ನೀಡಿದಂತೆ ರಾಜ್ಯದ ಇತರ ಜಿಲ್ಲೆಗಳಲ್ಲಿಯೂ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಎಲ್ಲ ಕಡೆ ಕಲ್ಯಾಣ ಕರ್ನಾಟಕದ ನೌಕರರೇ ಹೆಚ್ಚಾಗುತ್ತಿದ್ದಾರೆ ಎಂದು ದೂರಿದರು.

ಬಡ್ತಿ ನೀಡುವಾಗ ಜ್ಯೇಷ್ಠತಾ ಪಟ್ಟಿಯನ್ನು ಪ್ರತ್ಯೇಕವಾಗಿ ಮಾಡುವ ಬದಲು ಒಂದೇ ಮಾಡುತ್ತಿರುವುದರಿಂದ ಕರ್ನಾಟಕದ ಇತರ ಭಾಗದ ನೌಕರರಿಗೆ ಅನ್ಯಾಯವಾಗುತ್ತಿದೆ ಎಂದು ತಿಳಿಸಿದರು.

ಈ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲದ ಕಾರಣ ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಆ ಬಳಿಕವೂ ಸಮಸ್ಯೆ ಪರಿಹಾರಕ್ಕೆ ಸ್ಪಂದಿಸದೇ ಇದ್ದರೆ ಬೀದಿಗಿಳಿದು ಹೋರಾಟ ನಡೆಸಲು ತೀರ್ಮಾನಿಸಲಾಯಿತು.

ಹಸಿರು ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ. ಕುಮಾರ್, ಪೋಷಕ ಕೆ.ಸಿ.ಶಿವರಾಮ್, ಉಪಾಧ್ಯಕ್ಷ ಲಕ್ಷ್ಮೀ ಶ್ರೀನಿವಾಸ್, ಒಕ್ಕಲಿಗರ ಮುಖಂಡರಾದ ಕೆ. ಪ್ರಕಾಶ್ ಗೌಡ, ಮಂಜುನಾಥ ರೆಡ್ಡಿ, ಸಿ.ಎ. ದೇವರಾಜ್, ಪ್ರೇಮಕುಮಾರ್ ತಮ್ಮಣ್ಣ, ಸಂಶೋಧಕ ತಲಕಾಡು ಚಿಕ್ಕರಂಗೇಗೌಡ, ಕಾರ್ಮಿಕ ಮುಖಂಡ ಎ.ಎಸ್. ಗೋವಿಂದೇಗೌಡ, ಗೋವಿಂದರಾಜು ಪಟೇಲ್, ರವೀಶ್ ಗೌಡ, ಮಹೇಶ್ ಎಂ.ಇ.ಎಸ್, ಲಕ್ಷ್ಮಣಗೌಡ, ಗಬ್ಬಾಡಿ ಕಾಡೇಗೌಡ, ನಾಗರತ್ನ, ಯಶೋದಾ, ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

371 ಜೆ ಮೀಸಲಾತಿಯಿಂದ ಕರ್ನಾಟಕದ ಇತರ ಭಾಗಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಚರ್ಚಿಸಲು ಹಸಿರು ಪ್ರತಿಷ್ಠಾನದ ನೇತೃತ್ವದಲ್ಲಿ ಸಮಾಲೋಚನಾ ಸಭೆ ನಡೆಯಿತು

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ
Syndicate

Premises & Estate Section, G A Wing, Head Office, No. 112, J C Road, Bangalore - 560002

NOTICE FOR EMPANELMENT OF ARCHITECTS, CONSULTANTS, CONTRACTORS & SUPPLIERS

Fresh applications are invited for empanelment of contractors/vendors/suppliers for various works coming within the jurisdiction of Canara Bank, Head Office, Bengaluru. **All contractors in the existing panel need not apply afresh. However those who want to upgrade their category may submit fresh applications.** The duly filled in application with all supporting documents as mentioned in the application form shall be submitted to the above office **on or before 05.06.2024 up to 03:00 PM.**
For further details and other terms and conditions, please visit Bank's website **https://canarabank.com/tenders.aspx.** For any clarifications contact 080-22238819/22297695 . Last date for submission of tender form is 05.06.2024, 3:00 PM. Further, all addendum/corrigendum including modification if any, will be hosted at the Bank's website only.

Place : Bengaluru, Date : 14.05.2024 Sd/- Asst. General Manager

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹಾನಗರ ಪಾಲಿಕೆ ಕಛೇರಿಗಳು,
ನರಸಿಂಹರಾಜ ಚೌಕ, ಬೆಂಗಳೂರು – 560002

ಅಧಿಸೂಚನೆ ಸಂಖ್ಯೆ: ಸ.ಆ.ನೇ&ವಿ/ಪಿಆರ್/45&46/2023–24/04 ದಿನಾಂಕ: 13.05.2024

ತಿದ್ದುಪಡಿ ಅಧಿಸೂಚನೆ-2

ವಿಷಯ: ಪಾಲಿಕೆಯಲ್ಲಿ ನೇರಪಾವತಿಯಡಿ (DPS) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಹುದ್ದೆಗೆ ಅರ್ಜಿ ಸಲ್ಲಿಸಲು ಕಾಲಾವಾಕಾಶವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಪಾಲಿಕೆಯ ತಿದ್ದುಪಡಿ ಅಧಿಸೂಚನೆ ಪತ್ರ ಸಂಖ್ಯೆ: ಸ.ಆ.ನೇ&ವಿ/ಪಿಆರ್/45&46/2023-24/03, ದಿನಾಂಕ: 12.04.2024

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರಪಾವತಿಯಡಿ (DPS) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಭರ್ತಿಗಾಗಿ ಸೃಜಿಸಿರುವ 11,307 ಸಂಖ್ಯಾತಿರಿಕ್ತ (Supernumerary posts) ಹುದ್ದೆಗಳನ್ನು, ಆಫ್ ಲೈನ್ ಮೂಲಕ ನೇಮಕ ಮಾಡಿಕೊಳ್ಳುವ ಸಂಬಂಧ, ಪಾಲಿಕೆಯ ಅಧಿಸೂಚನೆಯಲ್ಲಿ ಸದರಿ ಹುದ್ದೆಯ ಷರತ್ತುಗಳ ವಿವರವಾದ ಮಾಹಿತಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಿ, ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರು ಅರ್ಹ ಪೌರಕಾರ್ಮಿಕರಿಂದ ಭರ್ತಿ ಮಾಡಿರುವ ಅರ್ಜಿ ನಮೂನೆಯನ್ನು ಸ್ವೀಕರಿಸಿ, ಸ್ವೀಕೃತಿಯನ್ನು ಅರ್ಜಿದಾರರಿಗೆ ಮೇಲಿನ ಉಲ್ಲೇಖ ರೀತ್ಯಾ ಅರ್ಜಿ ಸಲ್ಲಿಸಲು ದಿನಾಂಕ 15.05.2024ರ ವರೆಗೆ ವಿಸ್ತರಿಸಲಾಗಿತ್ತು.

ಮುಂದುವರಿದು, ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಸದರಿ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಕಾಲಾವಕಾಶವನ್ನು ದಿನಾಂಕ: 31.05.2024ರವರೆಗೆ ವಿಸ್ತರಿಸಲಾಗಿದೆ.

ಅದರಂತೆ, ದಿನಾಂಕ: 14.03.2024ರ ಅಧಿಸೂಚನೆಗಳಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/–
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

REQUIRED KINDERGARTEN, Art teachers for premier school on Bangalore Mysore Road. call 9036656567

BUSINESS

Business to Business

Business

WANTED BUSINESS PARTNER ATTRACTIVE INCOME CONTACT: 88925 01007/ 9606701007

Business Offers

Dealers And Stockists

EARN UPTO Rs.40,000 to Rs.60,000 Manufacturing of Paper plate, Areca plates (Adake pate Tattegalu) with minimum investment. With Buy Back agreement for finished goods with best price. Contact:- 9008462323, 9741021222. Our Factory/ office: Bangalore

PERSONAL

Change of Name

I, RATHNAMMA W/o. C.Earappa R/a#52, 3rd cross, HAL 3rd Stage New Thippasandra Post, Bengaluru- 560075 have changed my Name`to RATHNAMMA GOWDER PAPAIAH vide`affidavit dated:9.5.2024 sworn before`Notary D.K.Prakash Bangalore

I, GHAFFAR SHARIEF residing at Bengaluru-45 have changed my name as GHAFFAR SHARIEFF vide affidavit dated 13/05/2024 before Notary K.S.Bammappanavar, Bengaluru

CHANGE OF NAME
I, AUGUSTINE JOSE, S/o Mr. Jose Choolakal, R/at # A2, Nanda Dweep Apartment, Viviani Road, Behind Clarence School, Richards Park, Frazer Town, Bangalore - 560005. have changed my minor daughter's name from MAYA ANNA AUGUSTINE to **MAYA AUGUSTINE** vide affidavit dated 07.05.2024 before notary Prasad Shetty K.B., Bangalore. Henceforth she shall be called as **MAYA AUGUSTINE** only.

I, GIREESH B MARIGOUDAR residing at Flat B1, Prakruthi Apartment, 1st A Main Road, Athmananda Colony Sulthanpalya, R.T.Nagar Post, Bangalore-560032 have changed my name from GIREESH MARIGOUDAR to GIREESH B MARIGOUDAR, vide affidavit dated-10-05-2024 before Notary, Sivakumara.M.N Bangalore.

CHANGE OF NAME
I, **MADHURA,** residing at # 26, 2nd Cross, PF Layout, Vijayanagar,Bengaluru-560040, have changed my name to **K. MADHURA** vide affidavit dated 13.05.2024, before notary M.S.Satish, Bengaluru. Henceforth I shall be known as **K. MADHURA** only

CHANGE OF NAME
I, **TABARAK,** residing at # 28, C Cross, Anwar Street, Modi Road, D J Halli, Bangalore-560045, Declare that my name is wrongly mentioned as TABARAK KHAN in some documents, my correct name is **TABARAK** vide affidavit dated 13.05.2024, before notary Meer Hassan, Bangalore.

CHANGE OF NAME
I, **GAGAN K R Y PUJARI,** residing at # 231, 7th Cross, Emerald Meadows Layout, Gopalpura, Bagaluru, Bengaluru-562149, have changed my name to **GAGAN KUMAR Y PUJARI** vide affidavit dated 13.05.2024, before notary N.Thulasi, Bengaluru. Henceforth I shall be known as **GAGAN KUMAR Y PUJARI** only

CHANGE OF NAME
I, **LAKSHMI,** D/o S. Gangaiah residing at # 25, Aluru, Aluru Palya, Near Bust Stop, Bengaluru North, Bengaluru-562123, have changed my name to **DHANALAKSHMI G** vide affidavit dated 03.05.2024, before notary Anitha Bai Bengaluru. Henceforth I shall be known as **DHANALAKSHMI G** only

CHANGE OF NAME
I, **MOSES,** aged 26 years, residing at # 256, Mini Taj Mahal, Ambedkar Nagar, Vijinapura, Bengaluru North, Bengaluru-16, have changed my name to **PRAVEEN L** vide affidavit dated 13.05.2024, before notary Sivakumara M.N. Bengaluru. Henceforth I shall be known as **PRAVEEN L** only

I, HARSHITHA KHANDELWAL R/at No. 110, Durga Nivas, Lakshmipura Main Road, M.S. Palya, Vaderahalli, Vidyaranyapura Post, Bangalore- 560097 have changed my name to HARSHITHA DEVENDRA vide affidavit dated: 13/5/2024 Before Notary Onkarappa. N.R Bangalore

DH DECCAN HERALD
ಪ್ರಜಾವಾಣಿ
Classifieds
More value, more impact
EDUCATION
*Conditions apply
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277
+91 9886213331
+91 9845114560
+91 9900428036
+91 9901641752
080- 45557163/164

EDUCATION SUCCESS
ಕ್ಲಾಸಿಫೈಡ್ಸ್

FLORENCE HIGH SCHOOL
VIVIANI ROAD, BENGALURU-560005

STUDENTS WHO HAVE PERFORMED WELL IN THE S.S.L.C EXAMINATION 2023-24

VINEETH KUMAR. A 542 (86.72%); HAFSAH FATHIMA 541 (86.56%); NISHITHA G 540 (86.4%); V. BHARATH 523 (83.68%); MOHAMMED AYAAN AHMED 522 (83.52%); JUVERIA SYED 520 (83.2%)

HIBA FATHIMA 518 (82.88%); MOHAMMED ARSHAQ 512 (81.92%); MOHAMMED HUSSAIN 511 (81.76%); MOHAMMED FARMAN 501 (80.16%); NITESH.S 501 (80.16%); SHAUN FELIX.V 500 (80%)

KAVYA.K 497 (79.52%); KAIRUNNISHA.S 496 (79.36%); POOJA 494 (79.04%); MOHAMMED AMEEN 493 (78.88%); BINDU SHREE.K 484 (77.44%); DEEKSHITHA.P 482 (77.12%)

SYED SALEEM 480 (76.8%); MAHE TALAT 477 (76.32%); N.NANDINI 474 (75.84%); BI BI SANOBAR 471 (75.36%); SYED AADIL SHEZAAN 469 (75.04%); M.A.UMMU KULSUM 468 (74.88%)

MUHAMMAD AMEEN 466 (74.56%); MAHEEN BANU 461 (73.76%); SYED MOHAMMED ALI 460 (73.6%); MOHAMMED AILHAAN.Z 459 (73.44%); MOHAMMED HUSSAIN MUJTABA 454 (72.64%); ASSRA FATIMA 437 (69.92%)

ADMISSIONS OPEN FROM NURSERY TO X STANDARD

THE BEST HIGH SCHOOL
HBR LAYOUT, BENGALURU-560043

STUDENTS WHO HAVE PERFORMED WELL IN THE S.S.L.C EXAMINATION 2023-24

RAKSHITHA.C 571 (91.36%); PURVIKSH.S 570 (91.2%); IQRA FATHIMA.H 554 (88.64%); KARTHIK. A 553 (88.48%); MUHAMMED SHAMEEM .T.M 542 (86.72%); KUNDURU RUTHIK RAVINDAR REDDY 536 (85.76%)

MOHAMMED SUFIYAN 536 (85.76%); UMME KULSUM KHAN 533 (85.28%); NISCHAL MAURYA 521 (83.36%); MUSARATH SAFA 515 (82.4%); TANISHKA.U 507 (81.12%); KAVYA.R 505 (80.8%)

BIBI SAIMAH KHAN 497 (79.52%); AYESHA KHAN 496 (79.36%); SURAJ.S 496 (79.36%); MOHAMMED UMAR 490 (78.4%); SUCHITHRA. K 489 (78.24%); S. MD ASHHAM AREEB 487 (77.92%)

NAYANA C.M 486 (77.76%); A.KHADIRA NASIR 467 (74.72%); YOGI PRIYA DARSHAN.R 462 (73.92%); ABDUL RAHMAN 454 (72.64%); THANISH.P 453 (72.48%); LAVANYA.S 450 (72%); SHAIK ABDUL RAHIM 445 (71.2%)

ADMISSIONS OPEN FROM NURSERY TO X STANDARD

FLORENCE HIGH SCHOOL
SUBBAYANAPALYA , BENGALURU-560033

STUDENTS WHO HAVE PERFORMED WELL IN THE S.S.L.C EXAMINATION 2023-24

ABIGAL.G 580 (92.8%); D.LALITH KUMAR 564 (90.24%); AKSHAY KUMAR 543 (86.88%); GANASHREE.R 522 (83.52%); YATIN.N 519 (83.04%); BHAVA HARINAKSHI.S 515 (82.4%)

CHEEMALA VENKATA KEERTHANA 510 (81.6%); THANUSREE.J.S 491 (78.56%); KUSHAL YADAV.V 488 (78.08%); DERRICK BENJAMIN.J 484 (77.44%); B. DAKSHATHA 473 (75.68%); P. PRANAV KUMAR 470 (75.2%); LIKITHA.V 465 (74.4%)

DHIRAJ.R 461 (73.76%); PRIYADARSHINI.R 457 (73.12%); P. VIKASH 452 (72.32%); S. SAMEER MOHAMED 450 (72%); SACHIN.M 443 (70.88%); R. SIVA SAKTHI VEDIYAPPA 442 (70.72%); ARBEENA 437 (69.92%)

ADMISSIONS OPEN FROM NURSERY TO X STANDARD

V.E.T. SCHOOL
2nd Phase, J.P. Nagar, Bengaluru – 560078.
Web: jpnagar.vetschool.edu.in

ACADEMIC ACHIEVERS

KEERTHANA V. 604 - 96.64%; ARPITHA R. 602 - 96.32%; SPURTHI NAGARAJ RAO 589 - 94.34%; BINDU K. 588 - 94.08%

ADMISSION OPEN FOR THE ACADEMIC YEAR 2024-2025
Pre-Nursery to IX std
CONTACT: 95133 76736, 84312 65561

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

HMR NATIONAL PU COLLEGE
HMR GROUP

HEARTIEST CONGRATULATIONS!
TO GRADE II PUC TOPPERS 2023-24

NAWAB SHARIFF — COLLEGE TOPPER 569/600 (94.83%) 99 in Mathematics,95 in Physics & 95 in Hindi

M. HEMALATHA — PCMC TOPPER – 385/400 (96.25%) 97 in Computer Science

VARSHADHARANI H M — PCMB TOPPER – 383/400 (95.75%) 98 in Biology & Chemistry

SHREYAS M R — EABC TOPPER 360/400 (90%)

SPOORTHI PULIPATI PCMC 568/600 (94.67%) 99 in Mathematics & 97 in Sanskrit

ARON JOSHUA 98 in Accountancy & 94 in Business Studies

KASHISH BHARAT 98 in English & 91 in French

VIVEK N 97 in Computer science

SHASHANK MANJUNATHA 95 in Kannada

DIVYA SEERVI P PCMB 551/600 (91.83%) 95 in Hindi

NEHA PRAJAPATHI 95 in Hindi

SATHYA R 91 in Economics

SHAIKH RADIYAH MUZAFFAR 90 in Home Science

Congratulations

100% RESULTS

SRI KRISHNA INTERNATIONAL SCHOOL
SKIES — "Knowledge is Power"
#2, ITI LAYOUT, BSK 3RD STAGE, BANGALORE-85

The Management Heartily Congratulates the Staff and Students

RESULT OF X ICSE BOARD EXAMINATION 2023-24 SCHOOL TOPPERS

Congratulations for 100% Result

EESHA S. 98.8%; CHETAN M. 98.6%; NAMRATHA R. 98.4%; AHANA K. 97.6%; MOHAK N.P. 96.4%; GOWRI SHASTRI K.S. 96.0%

SANGEETHA S. 95.2%; BHOOMIKA B.G. 95.2%; PRITHU C. SHETTY 94.8%; KEERTHANA S. 94.2%; PRUTHVI K.V. PRAGNAVI 93.4%; KARRI ROSHNI 92.4%

JAYANTH M.S. 91.6%; SRI VARDHAN REDDY B. 91.2%; NITHYASHREE N. 90.4%; NITHYA K. 89.8%; PARINITHA M. 89.2%; NISCHAL N. 87.8%

MANOJ R. 86.8%; DHRUV KASHYAP 86.2%; SRUSHTI S.B. 85.8%; VARSHINI C. 85.2%; BHASHIKA B.K. 85.0%; DEEKSHITHA K. 85.0%

THANIKSHA R. N 84.8%; ISCHITHA S. 83.4%; YUKTHA NAVEEN 82.4%; CHETAN J.M. 82.4%; ROOPASHREE J. 81.8%; AMOGH C. SHAH 81.0%

HITHAISHI M. 80.8%; SUKRUTH V. 80.6%; PRIYANKA V. 78.6%; JASMITHA S. 78.2%; VAMSHIK M.V. 77.8%; ASHWIN M.H. 77.2%

Dr. M. Rukmangada Naidu Chairman
Mrs. Jalajakshamma Vice Chairman

SRI KRISHNA INTERNATIONAL SCHOOL
SKIES — "Knowledge is Power"
#2, ITI LAYOUT, BSK 3RD STAGE, BANGALORE-85

The Management Heartily Congratulates the Staff and Students

RESULT OF STATE BOARD EXAMINATION 2023-24 SCHOOL TOPPERS

Congratulations for 100% Result

KOUMUDI V.S. 98.24%

PRAGNYA PAVANDEEP 95.68%

POOJASHREE. G 93.92%; HAMSINI NAG H.G. 93.44%; AMRITH K.V. 93.12%; SAI VIJAY 92.96%

ANAGHA R. 91.52%; DARSHAN NIRAG 91.04%; UCHATHYA K.G. 90.20%; HARSHALA N. 88.8%

MEGHA G. 88.64%; MANISH G 88.48%; RUCHIKASHREE P. 88.32%; BHARATH RAJ 87.2%

NIKIL M. 87.04%; ADITI V.N. 85.76%; NIHARIKA T. 85.76%; R. DARSHNINI 85.6%

KRISHNA SHARMA V.L. 84.16%; VILAS D. 84.16%; MANJUNATH AARYAN R.H. 83.84%; SANJANA RAO 82.24%; UDAY KUMAR J. 80.32%; R. SUMEDH RAIKAR 80%

ABHAY N. VATSA 80%; TANAY S. KULKARNI 80%; KSHITIJ R. RAO 80%; VARSHITHA G. 80%

Dr. M. Rukmangada Naidu
Chairman

Mrs. Jalajakshamma
Vice Chairman

ಮಹಿಳೆಯಿಂದ ₹30 ಲಕ್ಷ ಪಡೆದಿರುವ ಸೈಬರ್ ವಂಚಕರು • ಪ್ರಕರಣ ದಾಖಲು

ಅಧಿಕಾರಿಗಳ ಸೋಗಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರಸಂಪರ್ಕ ಇಲಾಖೆ ಅಧಿಕಾರಿಗಳೆಂದು ಹೇಳಿಕೊಂಡು ಮಹಿಳೆಯೊಬ್ಬರಿಗೆ ಕರೆ ಮಾಡಿ ₹30 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇದುವರೆಗೂ ಫೆಡೆಕ್ಸ್ ಹಾಗೂ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ಸೋಗಿನಲ್ಲಿ ವಂಚಿಸುತ್ತಿದ್ದ ಸೈಬರ್ ವಂಚಕರು ಈಗ ಹೊಸ ಮಾರ್ಗವನ್ನು ಕಂಡುಕೊಂಡಿದ್ದಾರೆ.

ಈಗ ದೂರಸಂಪರ್ಕ ಇಲಾಖೆ ಅಧಿಕಾರಿಗಳೆಂದು ಹೇಳಿಕೊಂಡು ವಂಚಿಸುವ ಜಾಲ ಸೃಷ್ಟಿಯಾಗಿದೆ. ನಿದಾ (ಹೆಸರು ಬದಲಾಯಿಸಲಾಗಿದೆ) ಎಂಬುವರು ಹಣ ಕಳೆದುಕೊಂಡಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಏಪ್ರಿಲ್ 8ರಂದು ದೂರಸಂಪರ್ಕ ಇಲಾಖೆ ಅಧಿಕಾರಿಗಳ ಸೋಗಿನಲ್ಲಿ ಮಹಿಳೆಗೆ ಕರೆ ಮಾಡಿದ್ದ ವಂಚಕರು, 'ನಿಮ್ಮ ಆಧಾರ್ ಬಯೋಮೆಟ್ರಿಕ್ ದುರ್ಬಳಕೆಯಾಗಿದೆ. ಬ್ಯಾಂಕ್ ಖಾತೆ ಪರಿಶೀಲಿಸಬೇಕಿದೆ ಎಂದು ವಂಚಕರು ಹೇಳಿದ್ದರು' ಎಂದು ಪೊಲೀಸರು ಹೇಳಿದರು.

'ಮುಂಬೈನಲ್ಲಿ ಸಿಮ್ ಕಾರ್ಡ್ ಖರೀದಿಸಲು ತಮ್ಮ ಆಧಾರ್ ಬಯೋಮೆಟ್ರಿಕ್ ಬಳಕೆ ಮಾಡಿಕೊಳ್ಳಲಾಗುತ್ತದೆ. ಆ ಸಿಮ್ ಕಾರ್ಡ್ ಅನ್ನು ಕಾನೂನುಬಾಹಿರ ಜಾಹೀರಾತುಗಳನ್ನು ಪ್ರಚಾರ ಮಾಡಲು ಮತ್ತು ಅಪರಾಧ ಚಟುವಟಿಕೆ ನಡೆಸಲು ಬಳಸಲಾಗುತ್ತಿದೆ ಎಂದು ಆಕೆಗೆ ವಂಚಕರು ತಿಳಿಸಿದ್ದರು. ಇದರಿಂದ ಮಹಿಳೆ ಗಾಬರಿಗೊಂಡಿದ್ದರು. ಬಳಿಕ ಬೇರೊಂದು ನಂಬರ್ ನೀಡಿ, ಸಂಪರ್ಕಿಸುವಂತೆ ವಂಚಕರು ತಿಳಿಸಿದ್ದರು. ಆ ನಂಬರ್‌ಗೆ ಕರೆ ಮಾಡಿದಾಗ ಆತ ತಾನು ಮುಂಬೈನ ಅಂಧೇರಿಯ ಪೊಲೀಸ್ ಎಂದು ಪರಿಚಯಿಸಿಕೊಂಡಿದ್ದ' ಎಂದು ಹೇಳಿದರು.

'ಈ ವಿಷಯವನ್ನೂ ಯಾರಿಗೂ ತಿಳಿಸಬಾರದು. ತಿಳಿಸಿದರೆ ಸಮಸ್ಯೆ ಆಗಲಿದೆಯೆಂದೂ ಭಯ ಹುಟ್ಟಿಸಲಾಗಿತ್ತು. ಅದಾದ ಮೇಲೆ ಬ್ಯಾಂಕ್ ಖಾತೆಗಳ ಪರಿಶೀಲನೆ ಸೇರಿದಂತೆ ವಿವಿಧ ರೀತಿಯಲ್ಲಿ ₹30 ಲಕ್ಷದಷ್ಟು ಹಣ ಪಡೆದು ವಂಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಟ ಚೇತನ್‌ಚಂದ್ರ ಮೇಲೆ ಹಲ್ಲೆ

ಬೆಂಗಳೂರು: ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಟ ಚೇತನ್‌ಚಂದ್ರ ಅವರ ಮೇಲೆ ದರೋಡೆಕೋರರ ಗುಂಪು ಹಲ್ಲೆ ನಡೆಸಿ, ಚಿನ್ನದ ಸರ ಹಾಗೂ ಹಣ ಕಸಿದುಕೊಂಡು ಪರಾರಿಯಾಗಿದೆ.

ಈ ಘಟನೆ ವಿವರಿಸಿ ನಟ ಚೇತನ್‌ಚಂದ್ರ ಅವರು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಚೇತನ್‌ಚಂದ್ರ ಅವರು ಕಗ್ಗಲಿಪುರ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

'ಸ್ನೇಹಿತ ಲಕ್ಷ್ಮಣ್ ಜತೆಗೆ ಭಾನುವಾರ ಕನಕಪುರಕ್ಕೆ ತೆರಳಿದ್ದೆ. ಅದೇ ದಿನ ರಾತ್ರಿ 8.30ರ ಸುಮಾರಿಗೆ ಸಾತನೂರು ರಸ್ತೆಯ ಮೂಲಕ ನಗರಕ್ಕೆ ಕಾರಿನಲ್ಲಿ ಬರುತ್ತಿದ್ದಾಗ ಈ ಘಟನೆ ನಡೆದಿದೆ. ಮಾರ್ಗಮಧ್ಯದಲ್ಲಿ ಬೇಕರಿಯೊಂದರಲ್ಲಿ ತಿನಿಸು ಖರೀದಿಸಿ ಅಲ್ಲಿಂದ ತೆರಳಿದೆವು. ವ್ಯಕ್ತಿಯೊಬ್ಬ ಬೈಕ್‌ನಲ್ಲೇ ನಮ್ಮನ್ನೇ ಹಿಂಬಾಲಿಸುತ್ತಿದ್ದ. ಮಾರ್ಗದ ಉದ್ದಕ್ಕೂ ಸುಮ್ಮನೇ ಹಾರ್ನ್ ಮಾಡುವುದು, ಕಾರಿಗೆ ಒದೆಯುವುದನ್ನು ಮಾಡುತ್ತಿದ್ದ. ನಿರ್ಜನ ಪ್ರದೇಶವಾಗಿದ್ದರಿಂದ ನಾವು ಕಾರು ನಿಲುಗಡೆ ಮಾಡದೇ ತೆರಳಿದೆವು. ಟೋಲ್ ದಾಟಿದ ಮೇಲೂ ಮತ್ತೆ ಹಿಂಬಾಲಿಸಿದ.

ಮಾರ್ಗಮಧ್ಯದ ಗ್ರಾಮವೊಂದರಲ್ಲಿ ಕಾರನ್ನು ನಿಲುಗಡೆ ಮಾಡಲಾಯಿತು. ಅಲ್ಲಿ 15 ರಿಂದ 20 ಮಂದಿ ಗುಂಪು ಕೂಡಿಕೊಂಡು ಥಳಿಸಿ ಚಿನ್ನದ ಸರ ಕಸಿದುಕೊಂಡರು. ಅಲ್ಲದೇ ಕಾರಿನಲ್ಲಿದ್ದ ₹15ರಿಂದ ₹20 ಸಾವಿರವನ್ನು ತೆಗೆದುಕೊಂಡು ಪರಾರಿಯಾದರು' ಎಂದು ಚೇತನ್‌ಚಂದ್ರ ದೂರಿನಲ್ಲಿ ತಿಳಿಸಿದ್ದಾರೆ.

ಎರಡು ದೂರು: ಜಂಟಿ ವಿಚಾರಣೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ದೂರು ಮತ್ತು ಅದೇ ದೂರಿಗೆ ಸಂಬಂಧಿಸಿದಂತೆ ಮತ್ತೊಂದು ಕೋರ್ಟ್‌ನಲ್ಲಿ ಆರೋಪ ಪಟ್ಟಿ ಸಲ್ಲಿಕೆಯಾಗಿದ್ದರೆ ಅಂತಹ ಎರಡೂ ಪ್ರಕರಣಗಳನ್ನು ಜಂಟಿಯಾಗಿಸಿ ಒಂದೇ ಕೋರ್ಟ್‌ನಲ್ಲಿ ವಿಚಾರಣೆ ನಡೆಸಬಹುದು' ಎಂದು ಹೈಕೋರ್ಟ್, ಸ್ಥಿರಾಸ್ತಿಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಆದೇಶಿಸಿದೆ.

ಭಾರತ್ ಎಲೆಕ್ಟ್ರಾನಿಕ್ಸ್ ಎಂಪ್ಲಾಯಿಸ್ ಕೋ ಆಪರೇಟಿವ್ ಹೌಸ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್ ಹಾಗೂ ಶ್ರೀ ಮಾಯಾ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಸಲ್ಲಿಸಿದ್ದ ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಈ ಪ್ರಕರಣದಲ್ಲಿ ಖಾಸಗಿ ದೂರು ಮತ್ತು ಪೊಲೀಸರು ದಾಖಲಿಸಿರುವ ಎರಡೂ ಪ್ರಕರಣಗಳು ಒಂದೇ ವಿಷಯ ಹಾಗೂ ಸಂಗತಿಗಳನ್ನು ಆಧರಿಸಿವೆ. ಎರಡೂ ವಿಚಾರಣೆಗಳನ್ನು ಪ್ರತ್ಯೇಕವಾಗಿ ನಡೆಯಲು ಬಿಟ್ಟರೆ ಸಿಆರ್‌ಪಿಸಿ ಕಲಂ 300ರ ಅನ್ವಯ ಒಂದು ವಿಚಾರಣೆಗೆ ನಿರ್ಬಂಧ ವಿಧಿಸಬೇಕಾಗುತ್ತದೆ. ಜತೆಗೆ ಇದು ಗೊಂದಲಕ್ಕೂ ಕಾರಣವಾಗುತ್ತದೆ. ಎರಡೂ ಪ್ರಕರಣಗಳ ವಿಚಾರಣೆಗಳನ್ನು ಒಟ್ಟಿಗೇ ನಡೆಸುವುದರಿಂದ ಪಕ್ಷಗಾರರ ಹಕ್ಕು ಮತ್ತು ಹಿತಾಸಕ್ತಿಗಳನ್ನು ರಕ್ಷಿಸಿದಂತಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ವಿಚಾರಣೆಯನ್ನು ರಾಮನಗರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿದೆ.

ಅಪಘಾತ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮಲ್ಲೇಶ್ವರ ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ಬೈಕ್ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದು ಸವಾರ ಮೃತಪಟ್ಟಿದ್ದಾರೆ.

ಯಶವಂತಪುರ ನಿವಾಸಿ ವಿನೋದ್ ಕುಮಾರ್ (27) ಮೃತಪಟ್ಟವರು.

'ಭಾನುವಾರ ತಡರಾತ್ರಿ ವಿನೋದ್ ಕುಮಾರ್ ಬೈಕ್‌ನಲ್ಲಿ ಶೇಷಾದ್ರಿಪುರದ ಕಡೆಯಿಂದ ಶ್ರೀರಾಮಪುರ ಮಾರ್ಗವಾಗಿ ಬಂದು, ಅಲ್ಲಿಂದ ಮಲ್ಲೇಶ್ವರ ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ಯಶವಂತಪುರದ ಕಡೆಗೆ ತೆರಳುತ್ತಿದ್ದರು. ಮಾರ್ಗಮಧ್ಯೆ ಗಾಯತ್ರಿನಗರದ ಬಳಿ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ತಲೆ ಸೇರಿದಂತೆ ದೇಹದ ವಿವಿಧ ಭಾಗಗಳಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದವು. ಸ್ಥಳದಲ್ಲಿದ್ದವರು ಕೂಡಲೇ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಗಾಯಾಳುವನ್ನು ಪರೀಕ್ಷಿಸಿದ ವೈದ್ಯರು ಮಾರ್ಗ ಮಧ್ಯೆಯೇ ಮೃತಪಟ್ಟಿರುವುದಾಗಿ ದೃಢಪಡಿಸಿದರು' ಎಂದು ಪೊಲೀಸರು ಹೇಳಿದರು. ವಿನೋದ್ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು.

ಮಲ್ಲೇಶ್ವರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪ್ರಕರಣ ದಾಖಲಿಸುವ ಮುನ್ನವೇ ಸತೀಶ್ ಬಾಬು ವಶಕ್ಕೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕೆ.ಆರ್. ನಗರ ಮಹಿಳೆ ಅಪಹರಣ ಪ್ರಕರಣಕ್ಕೆ ಸಂಬಂಧಿಸಿ ಎಫ್ ಐಆರ್ ದಾಖಲಾಗುವ ಮುನ್ನವೇ ಸತೀಶ್ ಬಾಬು ಅವರನ್ನು ಎಸ್‌ಐಟಿಯವರು ವಶಕ್ಕೆ ಪಡೆದಿದ್ದರು' ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ದೂರಿದರು.

ನಗರದಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, 'ರಾತ್ರಿ 9ರ ನಂತರ ಪ್ರಕರಣ ದಾಖಲಾಗಿದೆ. ಆದರೆ, ಅಂದು ಮಧ್ಯಾಹ್ನ 12ರ ವೇಳೆಗೇ ಸತೀಶ್ ಬಾಬು ಅವರನ್ನು ಪೊಲೀಸರು ಕರೆದೊಯ್ದಿದ್ದರು' ಎಂದು ಆರೋಪಿಸಿದರು.

'ಬೇಕರಿಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯಗಳು ಸೆರೆಯಾಗಿದ್ದವು. ಮೈಸೂರಿನಿಂದ ಎಸ್‌ಐ ಒಬ್ಬರು ಕಾರ್‌ನಲ್ಲಿ ಬಂದು ಆ ದಾಖಲೆಗಳನ್ನು ನಾಶಪಡಿಸಿದ್ದಾರೆ' ಎಂದು ದೂರಿದರು. 'ಲಭ್ಯ ದಾಖಲೆಗಳನ್ನು ನಮ್ಮ ವಕೀಲರು ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ' ಎಂದರು.

'ಮಹಿಳೆ ಅಪಹರಣ ಸಂಬಂಧ ದೂರು ನೀಡಿದ ವ್ಯಕ್ತಿ ಅಮಾಯಕ. ಆತನಿಗೆ ಹಣ ನೀಡಿ ಖಾಲಿ ಪೇಪರ್‌ನಲ್ಲಿ ಸಹಿ ಪಡೆದುಕೊಂಡಿದ್ದಾರೆ. ಆತ ಈಗ ಎಲ್ಲಿದ್ದಾನೆ, ಎಲ್ಲಿಗೆ ಹೋಗಿದ್ದಾನೆ?' ಎಂದು ಅಚ್ಚರಿಯಿಂದ ಕೇಳಿದರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ.ಕನ್ನಡದಲ್ಲಿ ಚಿನ್ನದ ಪದಕ ಪಡೆದ ತೇಜಸ್ವಿನಿಯವರಿಗೆ ಕರ್ನಾಟಕ ಕೈಗಾರಿಕಾ ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದಿಂದ ವತಿಯಿಂದ 10 ಸಾವಿರ ನಗದು ಸಹಿತ 'ಎಂ.ತಿಮ್ಮಯ್ಯ ವಿದ್ಯಾಚೇತನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಶಿಕ್ಷಣ ತಜ್ಞರಾದ ವೂಡೇ ಪಿ.ಕೃಷ್ಣ, ನಿರಂಜನಾರಾಧ್ಯ, ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಕಾರ್ಯಾಧ್ಯಕ್ಷ ಸಿದ್ಧಯ್ಯ, ಪ್ರಧಾನ ಕಾರ್ಯದರ್ಶಿಗಳಾದ ಸು.ಜಗದೀಶ್, ಹೇಮಂತ್ ಕುಮಾರ್ ಜಿ., ಖಜಾಂಚಿ ಬಿ.ಜೆ.ರಾಜೇಶ್ ಉಪಸ್ಥಿತರಿದ್ದರು.

ಪಂಚಾಯ್ತಿ ಸಿಬ್ಬಂದಿ ಸಲ್ಲಾಪ ಆರೋಪ: ಸದಸ್ಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆಜಿಎಫ್: 'ರಾಮಸಾಗರ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಸಿಬ್ಬಂದಿ ಖಾಸಗಿ ಕ್ಷಣಗಳ ಫೋಟೊ ಬಹಿರಂಗವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ' ಎಂದು ಆರೋಪಿಸಿ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಗ್ರಾಮಸ್ಥರು ಪಂಚಾಯಿತಿಯಲ್ಲಿ ಪ್ರತಿಭಟನೆ ನಡೆಸಿದರು.

'ಕಚೇರಿಯ ಬಿಲ್ ಕಲೆಕ್ಟರ್ ಮತ್ತು ಮಹಿಳಾ ಉದ್ಯೋಗಿ ಕಚೇರಿಯಲ್ಲಿಯೇ ಸರಸ ಸಲ್ಲಾಪದಲ್ಲಿ ತೊಡಗಿದ್ದಾರೆ. ಖಾಸಗಿ ಕ್ಷಣಗಳ ಅಶ್ಲೀಲ ಚಿತ್ರ ತೆಗೆಸಿಕೊಂಡಿದ್ದಾರೆ. ಕೆಲಸ ಮಾಡುತ್ತಿದ್ದ ಕೊಠಡಿಯ ಸಿಸಿಟಿವಿ ಕ್ಯಾಮೆರಾದ ವೈರ್ ಕತ್ತರಿಸಲಾಗಿದೆ' ಎಂದು ಪ್ರತಿಭಟನಕಾರರು ಆರೋಪ ಮಾಡಿದ್ದಾರೆ.

'ಗ್ರಾಮಸ್ಥರು ನಾಚಿಕೆಯಿಂದ ತಲೆತಗ್ಗಿಸುವ ಘಟನೆ ನಡೆದಿವೆ. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಈ ಮಾಹಿತಿ ತಿಳಿಸಿದ್ದರೂ ಕ್ರಮ ಕೈಗೊಳ್ಳದೆ ಆರೋಪಿಗಳನ್ನು ರಕ್ಷಿಸುತ್ತಿದ್ದಾರೆ. ಮಹಿಳೆಯರು ಪಂಚಾಯಿತಿ ಕಚೇರಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಕೂಡಲೇ ಪಂಚಾಯಿತಿ ಸಭೆ ಕರೆದು ನಿರ್ಣಯ ಅಂಗೀಕರಿಸಬೇಕು' ಎಂದು 14 ಸದಸ್ಯರು ಮನವಿ ಸಲ್ಲಿಸಿದರು.

'ಚುನಾವಣೆ ನೀತಿ ಸಂಹಿತೆ ಇರುವ ಕಾರಣ ಸಭೆ ನಡೆಸಲು ಬರುವುದಿಲ್ಲ. ಸಂಬಂಧಪಟ್ಟ ನೌಕರರ ವಿರುದ್ಧ ಕೂಡ ಕ್ರಮ ಕೈಗೊಳ್ಳಲು ಚುನಾವಣಾಧಿಕಾರಿಯ ಅನುಮತಿ ಪಡೆಯಬೇಕು ಎಂದು ಪಂಚಾಯಿತಿ ಅಧಿಕಾರಿಗಳು ಸುಳ್ಳು ಹೇಳುತ್ತಿದ್ದಾರೆ' ಎಂದು ಪ್ರತಿಭಟನಕಾರರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನೋಟಿಸ್: 'ತಪ್ಪಿತಸ್ಥ ಸಿಬ್ಬಂದಿಗೆ ನೋಟಿಸ್ ನೀಡಲಾಗಿದೆ. ಮೂರು ದಿನಗಳೊಳಗೆ ಉತ್ತರ ನೀಡುವಂತೆ ತಿಳಿಸಲಾಗಿದೆ. ಉತ್ತರ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು' ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮಂಜುನಾಥ ಹರ್ತಿ ತಿಳಿಸಿದ್ದಾರೆ.

ಶಾಸಕಗೆ ನೋಟಿಸ್

ಪುತ್ತೂರು (ದಕ್ಷಿಣ ಕನ್ನಡ): ಶಾಸಕ ಅಶೋಕ್‌ಕುಮಾರ್ ರೈ ಅವರು ಶಾಸಕರ ಕಚೇರಿಯಲ್ಲಿ ಸೋಮವಾರ ನಡೆಸಿದ ಜಲಸಿರಿ ಯೋಜನೆ ಹಾಗೂ ನಗರಸಭೆಯ ನೀರಿನ ವಿಭಾಗದ ಅಧಿಕಾರಿಗಳ ಸಭೆಯನ್ನು ತಹಶೀಲ್ದಾರ್ ಮತ್ತು ಅಧಿಕಾರಿಗಳ ತಂಡ ನೀತಿ ಸಂಹಿತೆ ಉಲ್ಲಂಘನೆ ಮಾಡಿದ ಆರೋಪದಲ್ಲಿ ಮೊಟಕುಗೊಳಿಸುವಂತೆ ಸೂಚಿಸಿ ಶಾಸಕರನ್ನು ಹೊರಕಳಿಸಿ, ಕಚೇರಿ ಮತ್ತು ಸಭಾಂಗಣಕ್ಕೆ ಬೀಗ ಜಡಿಯಿತು.

ಐಪಿಎಸ್ ಅಧಿಕಾರಿ ಪುತ್ರನ ವಿಚಾರಣೆ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದ ಆರೋಪಿ ಶ್ರೀಕಿ ಜತೆ ಸೇರಿಕೊಂಡು ಅಕ್ರಮ ಎಸಗಿದ್ದ ಆರೋಪದ ಹಿನ್ನೆಲೆಯಲ್ಲಿ ಹಿರಿಯ ಐಪಿಎಸ್ ಅಧಿಕಾರಿಯೊಬ್ಬರ ಪುತ್ರನನ್ನು ವಿಶೇಷ ತನಿಖಾ ದಳದ ಅಧಿಕಾರಿಗಳು ಸೋಮವಾರ ವಿಚಾರಣೆ ನಡೆಸಿದ್ದಾರೆ.

ಶ್ರೀಕಿಯ ಸ್ನೇಹಿತನೂ ಆಗಿರುವ ಅಧಿ ಕಾರಿಯ ಪುತ್ರ ಇತ್ತೀಚೆಗೆ ₹47 ಲಕ್ಷ ಬೆಲೆ ಬಾಳುವ ಐಷಾರಾಮಿ ಕಾರೊಂದನ್ನು ಖರೀದಿಸಿದ್ದ. ಅಲ್ಲದೇ ಶ್ರೀಕಿ ಜತೆ ಒಡನಾಟ ಹೊಂದಿದ್ದ. ಶ್ರೀಕಿಗೆ ಬಿಟ್ ಕಾಯಿನ್ ಅಕ್ರಮದಿಂದ ಬಂದಿದ್ದ ಹಣವನ್ನು ಪಡೆದು ಈತ ಕಾರು ಖರೀದಿ ಮಾಡಿದ್ದಾನೆ ಎಂಬ ಆರೋಪವಿತ್ತು. ಹೀಗಾಗಿ ಆತನನ್ನು ಎಸ್‌ಐಟಿ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಯುವತಿಗೆ ಪತ್ರ ಬರೆದ ಮೋದಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ತಾಯಿ ಇರುವ ಭಾವಚಿತ್ರ ನೀಡಿದ್ದ ಯುವತಿ ನಾಗರತ್ನಾ ಬಸವರಾಜ ಮೇಟಿಯವರಿಗೆ ಮೋದಿ ಧನ್ಯವಾದ ತಿಳಿಸಿ, ಪತ್ರ ಬರೆದಿದ್ದಾರೆ.



ನರೇಂದ್ರ ಮೋದಿ

ಏಪ್ರಿಲ್ 29ರಂದು ಬಾಗಲಕೋಟೆಗೆ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಬಂದ ಸಂದರ್ಭದಲ್ಲಿ ಮೋದಿ ಅವರಿಗೆ ನಾಗರತ್ನಾ ಅವರು ಚಿತ್ರವನ್ನು ದೂರದಿಂದ ತೋರಿಸಿದ್ದರು. ಆಗ ಮೋದಿ ಅವರು ವಿಶೇಷ ಭದ್ರತಾ ಸಿಬ್ಬಂದಿಗೆ ಚಿತ್ರವನ್ನು ಸಂಗ್ರಹಿಸಿಕೊಳ್ಳುವಂತೆ ತಿಳಿಸಿದ್ದಲ್ಲದೇ, ಪತ್ರ ಬರೆಯುವುದಾಗಿ ಹೇಳಿದ್ದರು.

'ಈ ಕಲಾತ್ಮಕ ಚಿತ್ರವು ಮಾನವನ ಭಾವನೆಗಳ ಪ್ರಾಮುಖ್ಯತೆ ತೋರಿಸುತ್ತದೆ. ಹೊಸ ಭಾರತ ಮತ್ತು ಯುವಶಕ್ತಿಯ ಭವಿಷ್ಯ ನಿರ್ಮಾಣಕ್ಕೆ ನನ್ನನ್ನು ಪ್ರೇರೇಪಿಸುತ್ತದೆ. ಕೌಶಲ ಹಾಗೂ ರಚನಾ ತ್ಮಕ ಚಟುವಟಿಕೆಯನ್ನು ನಿಮ್ಮ ಕೆಲಸದಲ್ಲಿ ಅಳವಡಿಸಿಕೊಳ್ಳಿ. ಶುಭವಾಗಲಿ' ಎಂದು ಮೋದಿ ಹಾರೈಸಿದ್ದಾರೆ.

ಅಜಿತ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಹಿನಿಯ ಕಾರ್ಯಕ್ರಮವೊಂದರಲ್ಲಿ ಭಾರತದ ಮುಸ್ಲಿಮರಿಗೆ ಅವಮಾನಿಸಲಾಗಿದೆ' ಎಂದು ಆರೋಪಿಸಿ, ದೂರು ನೀಡಲಾಗಿದ್ದು, ಸುವರ್ಣ ಸುದ್ದಿವಾಹಿನಿ ಸಂಪಾದಕ ಅಜಿತ್ ಹನುಮಕ್ಕನವರ್ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತನ್ವೀರ್ ಅಹ್ಮದ್ ಎಂಬುವವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ವಿಚಾರಣೆಗೆ ಹಾಜರಾಗಲು ನೋಟಿಸ್ ಜಾರಿ ಮಾಡಲಾಗಿದೆ. ಅವರು ವಿಚಾರಣೆಗೆ ಬಂದಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮೇ 9ರಂದು ರಾತ್ರಿ 8.30ಕ್ಕೆ ಅಜಿತ್ ಅವರು ಕಾರ್ಯಕ್ರಮದ ನಿರೂಪಣೆ ಮಾಡುತ್ತಿದ್ದರು. ಪರದೆಯ ಮೇಲೆ ಹಿಂದೂಗಳ ಸಂಖ್ಯೆ ಇಳಿಕೆ, ಮುಸ್ಲಿಮರ ಸಂಖ್ಯೆ ಭಾರಿ ಏರಿಕೆ ಎಂದು ಬರೆಯಲಾಗಿತ್ತು. ಭಾರತದ ರಾಷ್ಟ್ರಧ್ವಜ ಹಾಕಿ ಹಿಂದೂ ಜನಸಂಖ್ಯೆ ಶೇ 7.82 ಇಳಿಕೆ ಹಾಗೂ ಪಾಕಿಸ್ತಾನದ ರಾಷ್ಟ್ರಧ್ವಜ ಹಾಕಿ ಮುಸ್ಲಿಂ ಜನಸಂಖ್ಯೆ ಶೇ 43.15 ಬಾರಿ ಏರಿಕೆ ಎಂದು ಬರೆದು ಕಾರ್ಯಕ್ರಮ ನಡೆಸಿಕೊಡಲಾಗಿತ್ತು. ಭಾರತದ ಮುಸ್ಲಿಮರನ್ನು ಪಾಕಿಸ್ತಾನದವರೆಂದು ಬಿಂಬಿಸಿ ಅವಮಾನ ಮಾಡಲಾಗಿದೆ. ಮುಸ್ಲಿಂ ಸಮುದಾಯದವರು ಭಾರತದ ದೇಶದ ಸ್ವಾತಂತ್ರ್ಯ ಹೋರಾಟದ ಹಾದಿಯಿಂದ ಇದುವರೆಗೂ ಸಾಕಷ್ಟು ಕೊಡುಗೆ ನೀಡಿದ್ದಾರೆ. ಆದರೂ, ಈ ಸಮುದಾಯವನ್ನು ಅವಮಾನಿಸುವ ರೀತಿಯಲ್ಲಿ ಕಾರ್ಯಕ್ರಮ ನಡೆಸಿದ್ದಾರೆ. ಅಜಿತ್ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸುಶೀಲ್ ಕುಮಾರ್ ಮೋದಿ ಇನ್ನಿಲ್ಲ

ಪಟ್ನಾ (ಪಿಟಿಐ): ಬಿಜೆಪಿಯ ಹಿರಿಯ ನಾಯಕ ಹಾಗೂ ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿ (72) ಅವರು ನವದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಸೋಮವಾರ ರಾತ್ರಿ ಮೃತಪಟ್ಟಿದ್ದಾರೆ. ಅವರು ಕ್ಯಾನ್ಸರ್‌ಗೆ ತುತ್ತಾಗಿದ್ದರು.

ಮೋದಿ ಅವರು ಬಿಹಾರದ ಉಪ ಮುಖ್ಯಮಂತ್ರಿಯಾಗಿ 2005ರಿಂದ 2013ರವರೆಗೆ ಹಾಗೂ 2017ರಿಂದ 2020ರವರೆಗೆ ಕರ್ತವ್ಯ ನಿರ್ವಹಿಸಿದ್ದರು. 'ಸುಶೀಲ್ ಕುಮಾರ್ ಮೋದಿ ಅವರ ಸಾವಿನ ಸುದ್ದಿ ಕೇಳಿ ಬಿಜೆಪಿ ಕುಟುಂಬವು ತೀವ್ರ ದುಃಖತಪ್ತವಾಗಿದೆ' ಎಂದು ಪಕ್ಷದ ಬಿಹಾರ ಘಟಕವು ಹೇಳಿದೆ.

ಸುಶೀಲ್ ಕುಮಾರ್ ಮೋದಿ ಅವರ ಪಾರ್ಥಿವ ಶರೀರದ ಅಂತ್ಯಸಂಸ್ಕಾರವು ಪಟ್ನಾದಲ್ಲಿ ಮಂಗಳವಾರ ನಡೆಯಲಿದೆ ಎಂದು ಪಕ್ಷದ ಮೂಲಗಳು ಹೇಳಿವೆ. ತಾವು ಕ್ಯಾನ್ಸರ್‌ನೊಂದಿಗೆ ಸೆಣಸಾಟ ನಡೆಸುತ್ತಿರುವುದಾಗಿ, ಲೋಕಸಭಾ ಚುನಾವಣೆಯ ಪ್ರಚಾರದಲ್ಲಿ ಭಾಗಿಯಾಗಲು ಸಾಧ್ಯವಿಲ್ಲ ಎಂಬುದಾಗಿ ಅವರು ಕಳೆದ ತಿಂಗಳು ಹೇಳಿದ್ದರು.

ಸುಶೀಲ್ ಕುಮಾರ್ ಮೋದಿ ಅವರು ವಿಧಾನಸಭೆ, ವಿಧಾನ ಪರಿಷತ್ತು, ರಾಜ್ಯಸಭೆ ಹಾಗೂ ಲೋಕಸಭೆಯ ಸದಸ್ಯ ಆಗಿದ್ದರು. 1990ರಲ್ಲಿ ಪಟ್ನಾ ಸೆಂಟ್ರಲ್ ಕ್ಷೇತ್ರದಿಂದ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. 1996ರಿಂದ 2004ರವರೆಗೆ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆಗಿದ್ದರು.

2004ರಲ್ಲಿ ಭಾಗಲ್ಪುರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. 2005ರಲ್ಲಿ ಲೋಕಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ, ಬಿಹಾರದ ವಿಧಾನ ಪರಿಷತ್ ಸದಸ್ಯರಾದರು. ನಂತರ ಅವರನ್ನು ನಿತೀಶ್ ಕುಮಾರ್ ನೇತೃತ್ವದ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯನ್ನಾಗಿ ನೇಮಿಸಲಾಯಿತು. 2020ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದ ಮೋದಿ ಅವರು ಈ ವರ್ಷ ನಿವೃತ್ತರಾಗಿದ್ದರು.

ನಿಧನ ವಾರ್ತೆ

ನಾರಾಯಣಪ್ಪ

ಪ್ರಜಾವಾಣಿ ವಾರ್ತೆ



ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ನಾರಾಯಣಪ್ಪ (77) ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಪುತ್ರ, ಕಾಂಗ್ರೆಸ್ ಮುಖಂಡ ಹೆಗ್ಗನಹಳ್ಳಿ ಕ್ರಾಸ್ ಎನ್. ರಮೇಶ್ ಗೌಡ್ರು, ಐವರು ಪುತ್ರಿಯರು ಇದ್ದಾರೆ.

ಅಂತ್ಯಕ್ರಿಯೆಯನ್ನು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ದಾಬಸ್ ಪೇಟೆ ಹೋಬಳಿ ಶಿವಗಂಗೆ ಸಮೀಪದ ಮಾಚನಹಳ್ಳಿ ಕೋಳಿ ಫಾರಂ ಹತ್ತಿರ ನೆರವೇರಿಸಲಾಗುವುದು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ G20

ತೆರೆದ ಟೆಂಡರು ಸೂಚನೆ ಸಂ.: B-TRO-AMC-CMS-KIOSK-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿರುವ ವಿವಿಧ ಸ್ಥಳಗಳಲ್ಲಿ ಎರಡು ವರ್ಷಗಳ ಅವಧಿಗೆ ಸಿಎಂಎಸ್ ಕಿಯೋಸ್ಕ್‌ಗಳು, ಡೆಸ್ಕ್‌ಟಾಪ್ ಗಣಕ ಯಂತ್ರಗಳು ಮತ್ತು ಅದಕ್ಕೆ ಅನುಗುಣವಾಗಿರುವಂತಹ ಇತರ ಉಪಕರಣಗಳಿಗೆ ಸಿಎಂಎಸ್ ಸೇವೆಗಳು.	ರೂ. 5,26,721.36

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.05.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್, ಟ್ರ್ಯಾಕ್ಷನ್ ಆಪರೇಷನ್/ಬೆಂಗಳೂರು

PUB/70/AAD/PRB/SWR/2024-25

South Western Railway - SWR | SWRRLY | SWRRLY

ASC CENTRE AND COLLEGE, BANGALORE
ALLOTMENT OF REGIMENTAL SHOPS NOTICE
INVITING FOR RE-TENDER

1. Sealed tenders are invited from interested War Widows/Widows of defence personnel killed while on duty/ Disabled Soldiers /Ex-servicemen & Spouses/ Widows of Ex-servicemen subject to license period of one year (extendable to five years) with a three years cooling off/ break period for running Regimental Shops at ASC Centre & College, Agram Post, Bangalore-56007. (Re-tenders are invited further to advertisement by this establishment in 'Deccan Herald & Prajavani' dated 22 March 2024).

Ser No	Name of Shop	No of Shops	EMD Money
	ASC Centre & College		
(a)	Mobile / SIM/ Recharge/ Repair and Computer Accessories Shop	One	2,000/-
(b)	Fruit Juice Shop	One	2,000/-
(c)	Cafeteria	One	2,000/-
(d)	Gift Shop	One	2,000/-

2. Application forms and instructions for applicants can be collected by interested persons / parties / firms from Department of Administration (DOA), (AQMG Office), Headquarter ASC Centre & College, Old Airport Road, Bangalore-07 within 15 days from the date of publication of Tender Notice in Newspaper, Queries be clarified on Mob No.9599951218 and Email - **doa.as3c@gmail.com.** Last date for receipt of Tender is **1200hrs on 27 May 2024**. For details contact:-

Published by
Quarter Master
For Colonel Administration
Department of Administration
ASC Centre & College, Domlur, Agram Post Office
Bengaluru-560007, Mob No-9599951218
E-Mail : doa.as3c@gmail.com

ಭಾರತೀಯ ವಾಯುಸೇನೆ

ಭಾರತೀಯ ವಾಯುಸೇನೆಯಲ್ಲಿ ಅಗ್ನಿವೀರವಾಯು ಎಂಬುದಾಗಿ ಸೇರಿಕೊಳ್ಳಿ

ಭಾರತೀಯ ವಾಯುಸೇನೆಯಲ್ಲಿ ಅಗ್ನಿ ವೀರವಾಯು (ಮ್ಯುಜಿಷಿಯನ್) ಸೇರ್ಪಡೆ 01/2025 ರಲ್ಲಿ ಸೇರಿಕೊಳ್ಳಲು 03 ಜುಲೈ 2024 ರಿಂದ 12 ಜುಲೈ 2024 ರವರೆಗೆ 3 ಎಎಸ್‌ಸಿ ಕೇರಾಫ್ ವಾಯುಪಡೆ ನಿಲ್ದಾಣ, ಕಾನ್ಪುರ (ಉತ್ತರ ಪ್ರದೇಶ) ಮತ್ತು 7 ಎಎಸ್‌ಸಿ, ನಂ. 1, ಕಬ್ಬನ್ ರೋಡ್, ಬೆಂಗಳೂರು (ಕರ್ನಾಟಕ) ಇಲ್ಲಿ ನಡೆಯಲಿರುವ ನೇಮಕಾತಿ ರ್‍ಯಾಲಿಯಲ್ಲಿ ಪಾಲ್ಗೊಳ್ಳಬೇಕೆಂದು ಅವಿವಾಹಿತ ಭಾರತೀಯ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಭಾರತೀಯ ವಾಯು ಸೇನೆ ಆಹ್ವಾನಿಸುತ್ತಲಿದೆ.

1.	ಸ್ಥಳ/ಪ್ರದೇಶ	3 ಎಎಸ್‌ಸಿ ಕೇರಾಫ್ ವಾಯುಪಡೆ ನಿಲ್ದಾಣ, ಕಾನ್ಪುರ (ಉತ್ತರ ಪ್ರದೇಶ) ಮತ್ತು 7 ಎಎಸ್‌ಸಿ, ನಂ. 1, ಕಬ್ಬನ್ ರೋಡ್, ಬೆಂಗಳೂರು (ಕರ್ನಾಟಕ)
2.	ವೈವಾಹಿಕ ಸ್ಥಿತಿಗತಿ ಮತ್ತು ಜನ್ಮದಿನಾಂಕ ದಪ್ಪ ಅಕ್ಷರಗಳಲ್ಲಿ	ಅಭ್ಯರ್ಥಿಯು ಕಡ್ಡಾಯವಾಗಿ ಅವಿವಾಹಿತ/ತೆ ಆಗಿರಬೇಕು ಮತ್ತು 02 ಜನವರಿ 2004 ಮತ್ತು 02 ಜುಲೈ 2007 ರೊಳಗೆ ಜನಿಸಿರಬೇಕು. (ಎರಡೂ ದಿನಾಂಕಗಳು ಪರಿಗಣಿಸಲ್ಪಡುತ್ತವೆ)
3.	(ಎ) ಶೈಕ್ಷಣಿಕ ವಿದ್ಯಾರ್ಹತೆ (ಬಿ) ಸಂಗೀತ ಸಾಮರ್ಥ್ಯ	ಸರ್ಕಾರಿ ಮಾನ್ಯತೆಯುಳ್ಳ ಯಾವುದೇ ಶಾಲೆ/ಮಂಡಳಿಯಿಂದ ಮೆಟ್ರಿಕ್ಯುಲೇಶನ್/10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಉತ್ತೀರ್ಣ ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. (1) ಅಭ್ಯರ್ಥಿಗಳು ಕಡ್ಡಾಯವಾಗಿ ಸಂಗೀತದಲ್ಲಿ ಪ್ರಾವಿಣ್ಯತೆ ಹೊಂದಿರುವ ಜೊತೆಗೆ ಟೆಂಪೊ, ಪಿಚ್‌ನಲ್ಲಿ ನಿಖರವಾಗಿರಬೇಕು ಹಾಗೂ ಒಂದು ಪೂರ್ಣ ಗೀತೆಯನ್ನು ಹಾಡಬೇಕು. ಅಭ್ಯರ್ಥಿಗಳು ಕಡ್ಡಾಯವಾಗಿ ಒಂದು ಸಿದ್ಧತಾ ಟ್ಯೂನ್ ಮತ್ತು ಯಾವುದೇ ನೊಟೇಷನ್ ಎಂದರೆ., ಸ್ಟಾಫ್ ನೊಟೇಶನ್/ಟ್ಯಾಬ್ಲೇಚರ್/ಟೋನಿಕ್ ಸೊಲ್ಫಾ/ಹಿಂದೂಸ್ತಾನಿ/ಕರ್ನಾಟಿಕ್ ಇತ್ಯಾದಿಗಳಂತಹ ನೊಟೇಷನ್ ಪ್ರಸ್ತುಪಡಿಸುವ ಸಾಮರ್ಥ್ಯ ಹೊಂದಿರಬೇಕು. ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರತ್ಯೇಕ ವಾದ್ಯಗಳನ್ನು (ವಾದ್ಯಗಳ ಟ್ಯೂನಿಂಗ್ ಮಾಡಬೇಕಾದ ಸಂದರ್ಭದಲ್ಲಿ) ಟ್ಯೂನ್ ಮಾಡುವ ಮತ್ತು ವೊಕಲ್ ಅಥವಾ ವಾದ್ಯಗಳಲ್ಲಿ ಅಪರಿಚಿತ ನೋಟ್‌ಗಳನ್ನು ಹೊಂದಾಣಿಕೆ ಮಾಡುವ ಸಾಮರ್ಥ್ಯ ಹೊಂದಿರಬೇಕು. (2) ಕೆಳಗಿನ ಪಟ್ಟಿ ಎ ಅಥವಾ ಬಿ ಗಳಲ್ಲಿನ ಯಾವುದೇ ಒಂದು ವಾದ್ಯ ನುಡಿಸುವ ಪ್ರಾವಿಣ್ಯತೆ ಹೊಂದಿರುವುದು ಕಡ್ಡಾಯ. ಪಟ್ಟಿ-ಎ: 1. ಕಾನ್ಸರ್ಟ್ ಫ್ಲ್ಯೂಟ್/ಪಿಕ್ಕೊಲೊ 2. ಒಬೊಯ್ 3. ಕ್ಲಾರಿನೆಟ್ ಇಬಿ/ಬಿಬಿ 4. ಸ್ಯಾಕ್ಸೊಫೋನ್ ಇನ್ ಇಬಿ/ಬಿಬಿ 5. ಫ್ರೆಂಚ್ ಹಾರ್ನ್ ಇನ್ ಎಫ್/ಬಿಬಿ 6. ಟ್ರಂಪೆಟ್ ಇನ್ ಇಬಿ/ಸಿ/ಬಿಬಿ 7. ಟ್ರೊಂಬೋನ್ ಇನ್ ಬಿಬಿ/ಜಿ 8. ಬ್ಯಾರಿಟೋನ್ 9. ಯುಫೋನಿಯಮ್ 10. ಬಾಸ್/ಟೂಬಾ ಇನ್ ಇಬಿ/ಬಿಬಿ ಪಟ್ಟಿ-ಬಿ: 1. ಕೀಬೋರ್ಡ್/ಆರ್ಗನ್/ಪಿಯಾನೊ 2. ಗಿಟಾರ್ (ಅಕೌಸ್ಟಿಕ್/ಲೀಡ್/ಬಾಸ್) 3. ವಯೊಲಿನ್, ವಯೊಲಾ, ಸ್ಟ್ರಿಂಗ್ ಬಾಸ್ 4. ಪರ್ಕ್ಯೂಷನ್/ಡ್ರಮ್ಸ್ (ಅಕೌಸ್ಟಿಕ್/ಇಲೆಕ್ಟ್ರಾನಿಕ್) 5. ಸಮಸ್ತ ಭಾರತೀಯ ಶಾಸ್ತ್ರೀಯ ವಾದ್ಯಗಳು (3) ಅಭ್ಯರ್ಥಿಗಳು ಎರಡು ವಾದ್ಯಗಳನ್ನು ನುಡಿಸುವಲ್ಲಿ ಪ್ರಾವಿಣ್ಯತೆ ಹೊಂದಿರಬೇಕೆಂದು ಅಪೇಕ್ಷಿಸಲಾಗುತ್ತದೆ. (ಮೇಲಿನ ಪಟ್ಟಿ ಎ ಮತ್ತು ಬಿ ಗಳಲ್ಲಿನ ತಲಾ ಒಂದನ್ನು)
	(ಸಿ) ಸಂಗೀತ ಅನುಭವ ಪ್ರಮಾಣಪತ್ರ	ಅಭ್ಯರ್ಥಿಗಳು ಕಡ್ಡಾಯವಾಗಿ ಕೆಳಕಂಡ ಯಾವುದೇ ಒಂದು ಅನುಭವ ಪ್ರಮಾಣಪತ್ರ ಹೊಂದಿರಬೇಕು: (1) ಟಿಸಿಎಲ್ ಅಥವಾ ಆರ್‌ಎಸ್‌ಎಂ, ಕೆಎಮ ಮ್ಯೂಸಿಕ್ ಕನ್ಸರ್ವೇಟರಿ, ಬೆಂಗಳೂರು ಸಂಗೀತ ಶಾಲೆ, ಟಿಎಸ್‌ಎಂ, ಜಿಎಂಐ, ಬರ್ಕ್ಲಿ ಸಂಗೀತ ಶಾಲೆ ಇತ್ಯಾದಿಗಳಂತಹ ಒಂದು ಮಾನ್ಯತೆಯುಳ್ಳ ಸಂಗೀತ ಶಾಲೆಯಲ್ಲಿ, ಒಂದು ವಾದ್ಯದಲ್ಲಿ 5ನೇ ಗ್ರೇಡ್ ಅಥವಾ ತತ್ಸಮಾನ ಅಥವಾ ಮೇಲ್ಪಟ್ಟವರಾಗಿರಬೇಕು. ಅಥವಾ (2) ಹಿಂದೂಸ್ತಾನಿ ಅಥವಾ ಕರ್ನಾಟಿಕ್ ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸುವ ಅಭ್ಯರ್ಥಿಗಳು, ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಸಂಗೀತ ಕ್ಷೇತ್ರದಲ್ಲಿ ಡಿಪ್ಲೋಮಾ ಅಥವಾ ತತ್ಸಮಾನ ಹೊಂದಿರಬೇಕು. ಅಥವಾ (3) ವಿವಿಧ ಕಾರ್ಯಕ್ರಮಗಳಲ್ಲಿ ನೀಡಲಾಗುವ ಪಾಲ್ಗೊಳ್ಳುವಿಕೆ ಪ್ರಮಾಣಪತ್ರ/ಪ್ರಶಸ್ತಿ ಹೊಂದಿರಬೇಕು. ಶೈಕ್ಷಣಿಕ ಕ್ಯೂಆರ್'ಗಳಲ್ಲಿ ಉಲ್ಲೇಖಿಸಲಾಗಿರುವ ಸ್ಟಾಫ್ ನೊಟೇಶನ್ ಜೊತೆಗೆ ಊದುವ ವಾದ್ಯಗಳನ್ನು ನುಡಿಸುವ/ಪ್ರಸ್ತುತಪಡಿಸುವ ಅಭ್ಯರ್ಥಿಗಳಿಗೆ.
4	ರ್‍ಯಾಲಿ ದಿನಾಂಕ ಮತ್ತು ಸಮಯ	ರ್‍ಯಾಲಿ ನೇಮಕಾತಿಗೆ ನೋಂದಣಿ ಪ್ರಕ್ರಿಯೆಯು, 22 ಮೇ 2024 ರಂದು 1100 ಗಂಟೆಗೆ https://agnipathvayu.cdac.in ಪೋರ್ಟಲ್‌ನಲ್ಲಿ ಪ್ರಾರಂಭವಾಗುತ್ತದೆ ಮತ್ತು 05 ಜೂನ್ 2024 ರಂದು 2300 ಗಂಟೆಗೆ ಕೊನೆಗೊಳ್ಳುತ್ತದೆ. ನೋಂದಣಿ ಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಮಾತ್ರ ತಾತ್ಕಾಲಿಕ ಪ್ರವೇಶ ಪತ್ರ ಹೊರಡಿಸಲಾಗುತ್ತದೆ ಮತ್ತು ಇಂತಹ ತಾತ್ಕಾಲಿಕ ಪ್ರವೇಶ ಪತ್ರ ಪಡೆದಿರುವ ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿ ಉಲ್ಲೇಖಿಸಲಾಗಿರುವ ಸ್ಥಳದಲ್ಲಿ, ನಿಗದಿತ ದಿನಾಂಕ ಮತ್ತು ಸಮಯದಲ್ಲಿ ನೇಮಕಾತಿ ರ್‍ಯಾಲಿಗೆ ಹಾಜರಾಗಲು ಅವಕಾಶವಿರುತ್ತದೆ. ಅಭ್ಯರ್ಥಿಗಳು ನೋಂದಣಿ ಶುಲ್ಕ ರೂ. 100/– + ಜಿಎಸ್‌ಟಿ ಪಾವತಿಸಬೇಕು.
5	ವ್ಯಾಪ್ತಿಗೊಳಪಡುವ ರಾಜ್ಯ/ಜಿಲ್ಲೆಗಳು	ಭಾರತದ ಎಲ್ಲಾ ರಾಜ್ಯಗಳ ಎಲ್ಲಾ ಜಿಲ್ಲೆಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು.

ವಿವರವಾದ ಜಾಹೀರಾತಿಗಾಗಿ ಲಾಗಾನ್ ಮಾಡಿರಿ https://agnipathvayu.cdac.in

CBC 10803/11/0004/2425 ಸಂಪೂರ್ಣ ವಿವರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

ಆಕ್ಸಿಸ್ ಬ್ಯಾಂಕ್ **ಹರಾಜಿಗೆ ಸಾರ್ವಜನಿಕ ಸೂಚನೆ**

ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 24.05.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ	ಡಿಮ್ಯಾಂಡ್ ನೋಟೀಸ್ ದಿನಾಂಕ	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ [ಬೆಂ]	XXXXXXXXXXX06629	ಬಸುದೇವ್ ಪ್ರಮಾಣಿಕ್	607735	15-Feb-24	222.800	164.600
ಬನಶಂಕರಿ [ಬೆಂ]	XXXXXXXXXXX39540	ಸುಬ್ರಹ್ಮಣ್ಯ ಎನ್	244002	15-Feb-24	61.100	61.000
ಬನಶಂಕರಿ [ಬೆಂ]	XXXXXXXXXXX99748	ಸುಬ್ರಹ್ಮಣ್ಯ ಎನ್	241514	15-Feb-24	58.800	58.600
ಬನಶಂಕರಿ [ಬೆಂ]	XXXXXXXXXXX94071	ಎಸ್ ಹೇಮಲತಾ	179402.65	15-Feb-24	45.900	45.400
ಬನಶಂಕರಿ [ಬೆಂ]	XXXXXXXXXXX93117	ಎಸ್ ಹೇಮಲತಾ	131145	15-Feb-24	36.700	32.400
ಭಟ್ಟರಹಳ್ಳಿ [ಬೆಂ]	XXXXXXXXXXX69491	ಸಿಬಾ ಪ್ರಸಾದ್ ಬಿಸ್ವಾಲ್	43007.38	28-Dec-23	12.400	12.400
ಬಿಡದಿ [ಬೆಂ]	XXXXXXXXXXX36373	ಸುರೇಂದ್ರ ಎಸ್	115876	22-Mar-24	29.500	27.400
ಚಿಕ್ಕಬಳ್ಳಾಪುರ [ಕ]	XXXXXXXXXXX68653	ನವೀನ್ ಎನ್	49715	10-Oct-23	8.700	8.400
ಚಿಂತಾಮಣಿ [ಕ]	XXXXXXXXXXX65187	ಲೋಕೇಶ್ ಎನ್	415712	02-Apr-24	113.500	105.600
ದೇವನಹಳ್ಳಿ [ಬೆಂ]	XXXXXXXXXXX15590	ರಮೇಶ ವಿ ಎಸ್	77491	28-Dec-23	19.900	18.500
ದೇವನಹಳ್ಳಿ [ಬೆಂ]	XXXXXXXXXXX35105	ಶ್ರೀನಿವಾಸ್	54425	15-Feb-24	17.600	13.600
ಎಲೆಕ್ಟ್ರಾನಿಕ್ ಸಿಟಿ [ಬೆಂ]	XXXXXXXXXXX98894	ಭವಾನಿ ಸುಯಂಬುಲಿಂಗಂ	71939.09	09-Nov-23	36.300	35.700
ಗೋವಿಂದರಾಜನಾಗ [ಬೆಂ]	XXXXXXXXXXX21215	ನಾರಾಯಣ ಸಿಂಗ್	253941	15-Feb-24	63.700	63.600
ಹೊಸಕೋಟೆ, [ಬೆಂ]	XXXXXXXXXXX66983	ಸೈಯದ್ ಚಂದ್ ಪಾಷಾ	438194	27-Mar-24	146.500	142.200
ಐಟಿಐ ಲೇಔಟ್ [ಬೆಂ]	XXXXXXXXXXX69790	ಯಶವಂತ ಎಂ	118327	28-Feb-24	35.000	32.000
ಐಟಿಐ ಲೇಔಟ್ [ಬೆಂ]	XXXXXXXXXXX40007	ಕೇಶರ ದೇವಿ	73636	10-Oct-23	39.600	23.900
ಐಟಿಐ ಲೇಔಟ್ [ಬೆಂ]	XXXXXXXXXXX88512	ವಿ ಧನುಷ್ ಗೌಡ	39626	02-Apr-24	9.300	9.300
ಜೆ ಪಿ ನಗರ [ಬೆಂ]	XXXXXXXXXXX48356	ಪದ್ಮಾ	194159	28-Dec-23	49.240	46.640
ಕಲ್ಯಾಣ್ ನಗರ [ಬೆಂ]	XXXXXXXXXXX59177	ವಿ ಸಂದೀಪ್ ಕುಮಾರ್ ರೆಡ್ಡಿ	192477	22-Mar-24	59.800	57.500
ಕನಕಪುರ [ಕ]	XXXXXXXXXXX64740	ಕಿರಣ್ ಕುಮಾರ್ ಬಿ ಎಸ್	29847	22-Mar-24	7.900	7.500
ಕನಕಪುರ [ಕ]	XXXXXXXXXXX39465	ವೈ ಕೆ ನಾಗರಾಜು	25295	29-Sep-23	30.680	29.880
ಕಸ್ತೂರಿ ನಗರ [ಬೆಂ]	XXXXXXXXXXX72388	ಅಬಿದಾ ಪಟಾನ್	1135876	02-Apr-24	290.800	272.200
ಕಸ್ತೂರಿ ನಗರ [ಬೆಂ]	XXXXXXXXXXX23294	ಮಹೇಶ್ ಎಸ್	148587	28-Dec-23	43.400	37.500
ಕಸ್ತೂರಿಬಾನಗರ ಮೈಸೂರು ರಸ್ತೆ [ಬೆಂ]	XXXXXXXXXXX68325	ಆನಂದ್ ಎಲ್	52791	22-Mar-24	15.900	15.200
ಕೋಲಾರ [ಕ]	XXXXXXXXXXX29756	ರಾಘವೇಂದ್ರ ಟಿ ಎನ್	405127	22-Mar-24	102.000	101.000
ಕೋಲಾರ [ಕ]	XXXXXXXXXXX33357	ರಾಘವೇಂದ್ರ ಟಿ ಎನ್	305700	22-Mar-24	84.400	84.000
ಮಹಾಲಕ್ಷ್ಮಿ ಲೇಔಟ್ [ಬೆಂ]	XXXXXXXXXXX61793	ದೀಪಾ ಎಸ್ ಆರ್	61945	28-Dec-23	18.500	15.800
ಮಲ್ಲೇಶ್ವರಂ [ಬೆಂ]	XXXXXXXXXXX16040	ಸಂಜೀವಿ ಸಾಗರ್ ಕುಮಾರ್	251963	02-Apr-24	77.100	74.600
ಮಲ್ಲೇಶ್ವರಂ [ಬೆಂ]	XXXXXXXXXXX79933	ಹರೀಶ ಜಿ	36095.71	28-Dec-23	9.800	9.300
ಮಾಲೂರು [ಕ]	XXXXXXXXXXX05725	ಜಿ ಶ್ರೀನಿವಾಸ್	155578	02-Apr-24	45.000	42.000
ಮಾಲೂರು [ಕ]	XXXXXXXXXXX33745	ಜಿ ಶ್ರೀನಿವಾಸ್	107232	02-Apr-24	30.400	25.400
ಮಾಲೂರು [ಕ]	XXXXXXXXXXX47772	ಬಿ ಎಸ್ ವರದರಾಜು	71002	27-Mar-24	16.100	15.600
ಮಾರತಹಳ್ಳಿ [ಬೆಂ]	XXXXXXXXXXX18562	ಪಾಂಡಿ ಸುಜಾತ	134994	15-Feb-24	33.600	33.300
ನೆಲಮಂಗಲ [ಬೆಂ]	XXXXXXXXXXX91944	ಹರೀಶ್ ಎನ್	72632	28-Dec-23	17.600	17.300
ಪೀಣ್ಯ [ಬೆಂ]	XXXXXXXXXXX95672	ವೆಂಕಟದಾಸರಿ ಅರವಿಂದ ರೆಡ್ಡಿ	823550.19	28-Dec-23	309.800	289.800
ಪೀಣ್ಯ [ಬೆಂ]	XXXXXXXXXXX85972	ನವೀನ ಡಿ ಎಸ್	131261	28-Feb-24	33.700	33.400
ಪೀಣ್ಯ [ಬೆಂ]	XXXXXXXXXXX49458	ಶ್ವೇತಾ ಎ	86524	02-Apr-24	22.500	22.000
ಪೀಣ್ಯ [ಬೆಂ]	XXXXXXXXXXX54886	ರಾಜೀವ್ ಎಸ್	38924.74	28-Dec-23	15.800	14.800
ರಾಜಾಜಿನಗರ [ಬೆಂ]	XXXXXXXXXXX06687	ರಾಘವೇಂದ್ರ ಎಲ್	352363.07	15-Feb-24	85.100	85.000
ರಾಜರಾಜೇಶ್ವರಿ ನಗರ [ಬೆಂ]	XXXXXXXXXXX06131	ಪಲ್ಲವಿ ಎನ್	164514	28-Dec-23	43.800	42.900
ಆರ್‌ಬಿಐ ಲೇಔಟ್ [ಬೆಂ]	XXXXXXXXXXX27819	ವಿನೋದಕುಮಾರ್ ಬಿ	25114	15-Feb-24	11.400	9.200
ಸಂಜಯ್ ನಗರ [ಬೆಂ]	XXXXXXXXXXX53452	ಶಾಲಿನಿ ತ್ರಿಪಾಠಿ	518166	09-Nov-23	182.600	164.300
ವಿದ್ಯಾರಣ್ಯಪುರ [ಬೆಂ]	XXXXXXXXXXX55824	ಹುಮೇರಾ ತಾಜ್	571481	15-Feb-24	166.300	161.000
ವಿಜಯನಗರ [ಬೆಂ]	XXXXXXXXXXX81398	ನಿತ್ಯಾನಂದ ಬಿ	1007416	25-Feb-24	293.000	270.900
ವಿಜಯನಗರ [ಬೆಂ]	XXXXXXXXXXX87192	ನಿತ್ಯಾನಂದ ಬಿ	991538	10-Apr-24	327.700	275.950
ವಿಜಯನಗರ [ಬೆಂ]	XXXXXXXXXXX19753	ಕಿಶೋರ್ ಕುಮಾರ್ ಬಿ ಜೆ	119088	02-Apr-24	29.300	29.300
ವಿಜಯನಗರ [ಬೆಂ]	XXXXXXXXXXX25868	ಕಿಶೋರ್ ಕುಮಾರ್ ಬಿ ಜೆ	82120	02-Apr-24	20.250	20.250
ಯಲಹಂಕ [ಬೆಂ]	XXXXXXXXXXX54234	ಆನಂದ ನಾಯ್ಕ	113469	28-Dec-23	26.900	26.500

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 24.05.2024 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ. ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು — ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

ಕ್ಷೇಮ ಕುಶಲ

ಅಮೃತ ಸದೃಶ ಎಳನೀರು

ಡಾ. ಮುರಲಿ ಮೋಹನ್ ಚೂಂತಾರು

ದೇಹದ ಕಾವನ್ನು ತಣಿಸಿ ಬಾಯಾರಿಕೆಯನ್ನು ಇಂಗಿಸಬಲ್ಲ ಅತ್ಯಂತ ಉತ್ತಮ ಪೇಯವೆಂದರೆ ಅದು ಎಳನೀರು. ಇದರಲ್ಲಿ ದೊರಕುವ ವಿಟಮಿನ್, ಖನಿಜಾಂಶ, ಪೋಷಕಾಂಶ ಮತ್ತು ಸೋಡಿಯಂ, ಪೊಟ್ಯಾಷಿಯಂ ಮುಂತಾದ ಲವಣಗಳಿಂದಾಗಿ, ಎಳನೀರು ಅಮೃತಸದೃಶ ಎಂಬ ಅನ್ವರ್ಥನಾಮವನ್ನು ಪಡೆದಿದೆ. ಬೇಸಿಗೆಯಲ್ಲಿ ಬಾಯಾರಿದಾಗ, ದೇಹ ಬಳಲಿದಾಗ, ದೇಹದಲ್ಲಿ ನೀರಿನಂಶ ಕಳೆದುಹೋಗಿ ನಿರ್ಜಲೀಕರಣವಾದಾಗ, ಜ್ವರ ಬಂದಾಗ, ವಾಂತಿ-ಭೇದಿಯಾಗಿ ದೇಹದಲ್ಲಿ ನೀರಿನಂಶ ಕಡಿಮೆಯಾದಾಗ ಅತಿ ಉತ್ತಮ ನೈಸರ್ಗಿಕ ಪೇಯ ಒಂದಿದ್ದರೆ, ಅದು ಎಳನೀರು. ಸಾಮಾನ್ಯವಾಗಿ ಯುವಜನರು ಕೃತಕ ತಂಪು ಪಾನೀಯಗಳನ್ನು ಬಳಸುವುದು ಹೆಚ್ಚು. ಆದರೆ ಕೃತಕ ಪೇಯಗಳಲ್ಲಿ ರಾಸಾಯನಿಕಗಳು ಇರುವುದರಿಂದ ಅವನ್ನು ಕ್ಯಾನ್ಸರ್ ಕಾರಕ ಎಂದೂ ಅಂದಾಜಿಸಲಾಗಿದೆ.

ಲಾಭಗಳು

1. ಎಳನೀರು ನೈಸರ್ಗಿಕವಾಗಿ ದೊರಕುವ ಅತಿ ಉತ್ತಮ ಪೇಯ; ದೇಹ ನಿರ್ಜಲೀಕರಣದಿಂದ ಬಳಲಿದಾಗ, ಯಾವುದೇ ರಾಸಾಯನಿಕಗಳಿಲ್ಲದ ಎಳನೀರು ಅತಿ ಉತ್ತಮ ಪೇಯವಾಗಿದೆ. ಬಹಳ ಬೇಗನೆ ದೇಹವನ್ನು ಪುನರ್ಜಲೀಕರಣ ಮಾಡಿ, ದೇಹವನ್ನು ಬಳಲದಂತೆ ಮಾಡುತ್ತದೆ.
2. ಹೊಟ್ಟೆಯಲ್ಲಿ ಉರಿ, ಹುಣ್ಣು ಅಥವಾ ಅಜೀರ್ಣ ಅಥವಾ ಇನ್ನಾವುದೇ ಸಮಸ್ಯೆ ಇದ್ದಲ್ಲಿ ನೀರಿನ ಅಥವಾ ಇನ್ನಾವುದೇ ಪೇಯಗಳ ಬದಲು ಎಳನೀರಿನ ಸೇವನೆ ಅತಿ ಉತ್ತಮ. ಬಳಲಿದ ಕರುಳಿನ ಒಳಭಾಗಕ್ಕೆ ಗಾಯ ವಾಸಿಯಾಗಲು ಎಳನೀರು ಉತ್ತಮ ಅವಕಾಶವನ್ನು ಕಲ್ಪಿಸುತ್ತದೆ. ದೇಹಕ್ಕೆ ಅಗತ್ಯವಿರುವ ಲವಣ, ವಿಟಮಿನ್ ಮತ್ತು ಪೋಷಕಾಂಶಗಳನ್ನು ನೀಡುತ್ತದೆ.
3. ಬೇಸಿಗೆಯಲ್ಲಿ ವಿಪರೀತ ಬೆವರುವಿಕೆಯಿಂದ ದೇಹದಿಂದ ಲವಣಗಳು ಕಳೆದುಹೋಗುತ್ತವೆ. ಆಗ ಅಂಥ ವ್ಯಕ್ತಿ ಬಳಲಿ ಬೆಂಡಾಗುತ್ತಾನೆ. ಅಂಥ ಸಮಯದಲ್ಲಿ ಎಳನೀರನ್ನು ಸೇವಿಸಿದಲ್ಲಿ, ಕಳೆದುಹೋಗಿರುವ ಲವಣಗಳು ಮತ್ತು ವಿಟಮಿನ್‌ಗಳು ದೇಹಕ್ಕೆ ದೊರಕಿ ಹೊಸ ಹೊಮ್ಮಸ್ಸು ಮತ್ತು ಹುರುಪು ದೇಹಕ್ಕೆ ಬರುತ್ತದೆ.
4. ಮಲಬದ್ಧತೆಯ ಸಮಸ್ಯೆ ಇರುವವರಲ್ಲಿ ಎಳನೀರು ಬಹಳ ಉತ್ತಮ ಪೇಯ. ಮಲಬದ್ಧತೆ ಉಂಟಾದಾಗ, ಕರುಳಿನಲ್ಲಿ ಶೇಖರಣೆಯಾದ ಮಲದಿಂದ ದೇಹಕ್ಕೆ ತೊಂದರೆ ಆಗಬಹುದು. ಎಳನೀರಿನಲ್ಲಿರುವ ಕರಗಿರುವ ನಾರಿನಂಶ ಕರುಳಿನ ಚಲನೆಯನ್ನು ಪ್ರಚೋದಿಸಿ ಮಲವನ್ನು ಹೊರಹಾಕುವಂತೆ ಪ್ರಚೋದಿಸುತ್ತದೆ. ನಿಯಮಿತವಾಗಿ, ನಿರಂತರವಾಗಿ ಎಳನೀರಿನ ಸೇವನೆಯಿಂದ ಕರುಳಿನ ಚಲನೆ ಸರಾಗವಾಗಿ ಜೀರ್ಣಾಂಗ ಸಂಬಂಧಿ ಸಮಸ್ಯೆಗಳು ಪರಿಹಾರವಾಗುತ್ತವೆ.
5. ಎಳನೀರಿನಲ್ಲಿ 'ಆರ್ಜಿನೈನ್' ಎಂಬ ರಾಸಾಯನಿಕ ಇರುತ್ತದೆ. ಇದು ದೇಹದ ಎಲ್ಲಾ ಆಂತರಿಕ ಅಂಗಾಂಗಗಳ ರಕ್ತಪರಿಚಲನೆಯನ್ನು ಹೆಚ್ಚಿಸುತ್ತದೆ. ಆರೋಗ್ಯವನ್ನು ವೃದ್ಧಿಸುವಂತೆ ಮಾಡುತ್ತದೆ.
6. ಎಳನೀರಿನಲ್ಲಿ ಅತಿ ಹೆಚ್ಚು ಪೊಟ್ಯಾಷಿಯಂ ಇರುವ ಕಾರಣ ಕಿಡ್ನಿಯಲ್ಲಿ ಕಲ್ಲು ಬೆಳೆಯದಂತೆ ಮಾಡುತ್ತದೆ. ಈ ಪೊಟಾಷಿಯಂ ದೇಹದಿಂದ ಹೆಚ್ಚು ಮೂತ್ರ ಹೋಗುವಂತೆ ಮಾಡಿ ಕಿಡ್ನಿಯಲ್ಲಿ ಕಲ್ಲು ಬೆಳೆಯದಂತೆ ತಡೆಯುತ್ತದೆ.
7. ಎಳನೀರಿನಲ್ಲಿ ಕೊಬ್ಬಿನಾಂಶ ಇರುವುದೇ ಇಲ್ಲ; ಮತ್ತು ಅತಿ ಕಡಿಮೆ ಕ್ಯಾಲರಿ ಇರುತ್ತದೆ. ನೀರಿನ ಬದಲು ಎಳನೀರನ್ನು ಸೇವಿಸುವುದರಿಂದ ಹೊಟ್ಟೆ ತುಂಬಿದಂತಾಗಿ, ದೇಹದ ತೂಕ ಕಳೆಯಲು ಕಾರಣವಾಗುತ್ತದೆ. ಹೆಚ್ಚು ಸೋಡಿಯಂ ಇರುವ ಆಹಾರವನ್ನು ಸೇವಿಸಿ, ದೇಹದಲ್ಲಿ ಹೆಚ್ಚು ನೀರು ಶೇಖರಣೆಯಾದಾಗ, ಎಳನೀರನ್ನು ಸೇವಿಸಿದಲ್ಲಿ ಈ ಹೆಚ್ಚಾದ ನೀರು ಮೂತ್ರದ ಮುಖಾಂತರ ಹೊರ ಹಾಕಲ್ಪಡುತ್ತದೆ. ಆ ಮೂಲಕ ದೇಹದ ತೂಕ ನಿಯಂತ್ರಣಕ್ಕೆ ಒಳಪಡುತ್ತದೆ.
8. ಎಳನೀರು ನೈಸರ್ಗಿಕ ಪೇಯ. ಸಣ್ಣ ಮಕ್ಕಳಿಗೂ ಕೊಡಬಹುದು. ಅವರಿಗೆ ಅಗತ್ಯವಿರುವ ಎಲ್ಲ ಪೋಷಕಾಂಶಗಳನ್ನು ಅದು ದೇಹಕ್ಕೆ ನೀಡುತ್ತದೆ.
9. ಎಳನೀರು ಒಂದು ಉತ್ತಮ ಪೇಯವಾಗಿದ್ದು, ದೇಹದಲ್ಲಿನ ವಿಷಕಾರಕ ವಸ್ತುಗಳನ್ನು ಹೊರಹಾಕುತ್ತದೆ. ರಕ್ತವನ್ನು ಪರಿಶುದ್ಧವಾಗಿಸುತ್ತದೆ. ಅದೇ ರೀತಿ ಕರುಳಿನಲ್ಲಿ ಶೇಖರಣೆಯಾದ ವಿಷಕಾರಿ ವಸ್ತುಗಳನ್ನು ಹೊರಹಾಕುತ್ತದೆ.
10. ಉರಿಯೂತವನ್ನು ನಿಯಂತ್ರಿಸುವಲ್ಲಿ ಎಳನೀರು ಅತ್ಯಂತ ಉತ್ತಮ ಪೇಯ. ದೇಹದ ಯಾವುದೇ ಭಾಗದಲ್ಲಿ ಉರಿಯೂತವಾಗಿದ್ದರೆ ಎಳನೀರು ಸೇವನೆಯಿಂದ ಗಾಯ ಬೇಗನೆ ಗುಣವಾಗುತ್ತದೆ. ಆಂತರಿಕವಾಗಿ ಉಂಟಾದ ಗಾಯಗಳನ್ನು ಶಮನಿಸಲೂ ಎಳನೀರು ಬಹಳ ಉಪಯುಕ್ತ.

ಕೊನೆಮಾತು

ಎಳನೀರಿನಲ್ಲಿ ಶೇ 94ರಷ್ಟು ನೀರು ಇರುತ್ತದೆ. ಅತಿ ಕನಿಷ್ಠ ಪ್ರಮಾಣದಲ್ಲಿ ಕೊಬ್ಬಿನಾಂಶ ಇರುತ್ತದೆ. ಒಂದು ಕಪ್ ಅಂದರೆ 240 ಮಿ.ಲೀ. ಎಳನೀರಿನಲ್ಲಿ ಸುಮಾರು 60 ಕ್ಯಾಲರಿ ಮಾತ್ರ ಇರುತ್ತದೆ. ಇದರ ಜೊತೆಗೆ 15 ಗ್ರಾಂನಷ್ಟು ಶರ್ಕರಪಿಷ್ಟ, 5 ಗ್ರಾಂನಷ್ಟು ಸಕ್ಕರೆ ಇರುತ್ತದೆ. ಇದಲ್ಲದೆ ಸಾಕಷ್ಟು ಪ್ರಮಾಣದಲ್ಲಿ ಮ್ಯಾಗ್ನೀಷಿಯಂ, ಪೊಟ್ಯಾಷಿಯಂ, ಕ್ಯಾಲ್ಸಿಯಂ ಮತ್ತು ರಂಜಕ ಕೂಡ ಇರುತ್ತದೆ. ಆ್ಯಂಟಿ ಆಕ್ಸಿಡೆಂಟ್‌ಗಳು ಸಾಕಷ್ಟು ಇರುವ ಕಾರಣ ಎಳನೀರು ಅತ್ಯಂತ ಉಪಯುಕ್ತ ಪೇಯ. ಮಧುಮೇಹಿಗಳಲ್ಲಿ ಎಳನೀರು ರಕ್ತದ ಸಕ್ಕರೆಯ ಮಟ್ಟವನ್ನು ನಿಯಂತ್ರಿಸಲು ಸಹಕರಿಸುತ್ತದೆ ಎಂದು ತಿಳಿದುಬಂದಿದೆ. ಎಳನೀರಿನಲ್ಲಿರುವ ಪೊಟ್ಯಾಷಿಯಂ ಕೂಡ ರಕ್ತದೊತ್ತಡವನ್ನು ನಿಯಂತ್ರಿಸಿ, ಹೃದಯಸಂಬಂಧಿ ರೋಗಗಳು ಬಾರದಂತೆ ತಡೆಯುತ್ತದೆ. ಅತಿಯಾದ ದೈಹಿಕ ಕಸರತ್ತು, ವ್ಯಾಯಾಮ ಅಥವಾ ಇನ್ಯಾವುದೇ ದೈಹಿಕ ಪರಿಶ್ರಮ ಇರುವ ಕೆಲಸ ಮಾಡಿದ ಬಳಿಕ ಜೀವಕೋಶಗಳನ್ನು ಉತ್ತೇಜಿಸಲು ಮತ್ತು ಬಳಲಿದ ದೇಹಕ್ಕೆ ಶಕ್ತಿ ತುಂಬಲು ನೈಸರ್ಗಿಕವಾಗಿ ದೊರಕುವ ಶಕ್ತಿವರ್ಧಕ ಪೇಯ ಎಂದರೆ ಎಳನೀರು. ಈ ಕಾರಣದಿಂದಲೇ ಕೃತಕ ರಾಸಾಯನಿಕಯುಕ್ತ ಪೇಯಗಳನ್ನು ವರ್ಜಿಸಿ, ಎಳನೀರನ್ನು ದಿನನಿತ್ಯ ಸೇವಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಿ. ❖

ಮಕ್ಕಳ ಮೇಲೆ ಸಿಡುಕಬೇಡಿ

ರಮ್ಯಾ ಶ್ರೀಹರಿ

ಒಂದು ದಿನದ ಅವಧಿಯಲ್ಲಿ,ನಮ್ಮ ಯಾವುದೇ ವಯಸ್ಸಿನ ಮಕ್ಕಳ ಮೇಲೆ ಎಷ್ಟು ಸಿಡುಕುತ್ತೇವೆ ಎನ್ನುವುದನ್ನು ಗಮನಿಸಿದ್ದೀರಾ? ಮಕ್ಕಳಷ್ಟೇ ಅಲ್ಲ, ಮನೆಯ ಇತರ ಸದಸ್ಯರ ಮೇಲೆ, ಸಹೋದ್ಯೋಗಿಗಳೊಡನೆ, ಅಪರಿಚಿತರೊಡನೆ 'ಸಿಡುಕಿನಿಂದ ವರ್ತಿಸುತ್ತಿದ್ದೇನೆ' ಎಂದು ಅನಿಸಿದೆಯೇ? ಹಾಗೆ ಸಿಡುಕುತ್ತಿರುವಾಗ ಏನು ನಡೆಯುತ್ತಿದೆ ನಿಮ್ಮೊಳಗೆ?, ಯಾಕೆ ಸಿಡುಕಬೇಕೆನಿಸುತ್ತಿದೆ ಪ್ರಶ್ನಿಸಿಕೊಂಡಿದ್ದೀರಾ? ಮಕ್ಕಳ ಪ್ರತಿ ಮಾತು, ಪ್ರಶ್ನೆ, ನಡವಳಿಕೆ ಎಲ್ಲದಕ್ಕೂ ಹೆಚ್ಚಿನ ಬಾರಿ ಸಿಡುಕಿನಿಂದ, ಅಸಹನೆಯಿಂದ ಏರುದನಿಯಲ್ಲಿ ಮಾತನಾಡುತ್ತಿದ್ದರೆ ಅದು ಅವರ ವ್ಯಕ್ತಿತ್ವದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದೆಂಬ ಅಂದಾಜಿದೆಯೇ?

ಯಾರಾದರೂ ನಮಗಿಂತ ಹಿರಿಯರು, ನಾವು ಭಾವನಾತ್ಮಕವಾಗಿ ಯಾರನ್ನು ಆಶ್ರಯಿಸಿರುವೆವೋ ಅವರು, ನಮ್ಮ ಜೀವನದಲ್ಲಿ ಮುಖ್ಯವಾಗಿರುವವರು ನಮ್ಮ ಮೇಲೆ ಆಗಾಗ ಸಿಡುಕುತ್ತಲೇ ಇದ್ದರೆ ನಮಗೆ ಹೇಗನಿಸುತ್ತದೆ? ನಮ್ಮ ಸಣ್ಣ ತಪ್ಪಿಗೂ ಅಥವಾ ತಪ್ಪಿಲ್ಲದಿದ್ದರೂ ಅವರದ್ಯಾವುದೋ ಅಸೌಖ್ಯಕ್ಕೆ ನಮ್ಮ ಮೇಲೆ ಕೂಗಾಡಿದರೆ ಏನನಿಸುತ್ತದೆ? ಇಂತಹ ಪರಿಸ್ಥಿತಿಗಳು ವಯಸ್ಕರಾದ ನಮ್ಮನ್ನೇ ಅಸ್ವಸ್ಥತೆಗೆ ದೂಡುವುದಾದರೆ 'ನನ್ನ ಪ್ರಪಂಚ ಎಂದರೆ ನನ್ನ ತಂದೆ, ತಾಯಿ' ಎಂದು ತಿಳಿದುಕೊಂಡಿರುವ ಮಗುವಿಗೆ ಎಷ್ಟು ನೋವುಂಟು ಮಾಡುವುದಿಲ್ಲ?

ನಮ್ಮ ಯಾವುದೋ ತಲೆಬಿಸಿಯನ್ನು ಮುಗ್ಧ ಮಕ್ಕಳ ಮೇಲೆ ಕೂಗಾಡಿ ತೀರಿಸಿಕೊಂಡಾಗ 'ಈ ಸಿಡುಕು/ ಕೂಗಾಟ ನನ್ನ ತಪ್ಪಿಗಾಗಿಯಲ್ಲ, ಇದು ಅವರ ಅಸಹಾಯಕತೆ, ಅಪಕ್ವತೆಯನ್ನು ಪ್ರತಿಬಿಂಬಿಸುತ್ತದೆ' ಎಂದು ಮಕ್ಕಳಿಗೆ ವಿಚಾರ ಮಾಡಲು ಬರುವುದಿಲ್ಲ. ಯಾವುದೇ ಕಾರಣಕ್ಕೂ ಮಗು ತನ್ನ ತಂದೆ ತಾಯಿಯೇ ತಪ್ಪಿತಸ್ಥರು, ತಿಳಿವಳಿಕೆಯಿಲ್ಲದವರು ಎಂಬ ತೀರ್ಮಾನಕ್ಕೆ ಬರುವುದಿಲ್ಲ, ಏಕೆಂದರೆ ಹಾಗೆ ತಂದೆ ತಾಯಿಯನ್ನು ಒಂದು ಉನ್ನತ ಸ್ಥಾನದಲ್ಲಿರಿಸುವುದು, ಅವರನ್ನು ಮಾದರಿಯಾಗಿಟ್ಟುಕೊಳ್ಳುವುದು ಹಲವು ಕಾರಣಗಳಿಗಾಗಿ ಮಕ್ಕಳ ಬೆಳವಣಿಗೆಗೆ ಅವಶ್ಯಕ. ತಮ್ಮನ್ನು ನಿಂದಿಸಿದಾಗ, ತಮ್ಮ ಮೇಲೆ ಸಿಡುಕಿದಾಗ ಮಕ್ಕಳು ಅದಕ್ಕೆ ತನ್ನ ತಂದೆ ತಾಯಿಯನ್ನು ಜವಾಬ್ದಾರರನ್ನಾಗಿಸುವುದಿಲ್ಲ ,ಬದಲಾಗಿ ತಂದೆ ತಾಯಿಯ ಈ ವರ್ತನೆಗೆ ತಮ್ಮನ್ನೇ ಜವಾಬ್ದಾರರನ್ನಾಗಿಸಿಕೊಳ್ಳುತ್ತಾರೆ. 'ನಾನು ಯಾವಾಗಲೂ ಏನಾದರೂ ತಪ್ಪನ್ನೇ ಮಾಡುತ್ತಿರುತ್ತೇನೆ', 'ನನಗೆ ಗೌರವಕ್ಕೆ ಅರ್ಹತೆಯಿಲ್ಲ', 'ಯಾರ ಸಮಯಕ್ಕೂ, ಸಮಾಧಾನದ ವರ್ತನೆಗೂ ನನಗೆ ಹಕ್ಕಿಲ್ಲ, ಸ್ವಲ್ಪ ಪ್ರೀತಿಗಾಗಿಯೂ ನಾನೇ ತುಂಬಾ ಪರಿಶ್ರಮ ಪಡಬೇಕು' ಎನ್ನುವುದು ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಉಳಿದುಕೊಂಡುಬಿಡುತ್ತದೆ.

ಸ್ನೇಹಕ್ಕೆ, ಸಮಾಧಾನದ ಮಾತುಕತೆಗೆ, ಗೌರವಕ್ಕೆ ಯಾರೂ ಕಷ್ಟಪಡಬೇಕಾದ್ದಿಲ್ಲ, ಅದು ಎಲ್ಲರ ಆಜನ್ಮಸಿದ್ಧ ಹಕ್ಕು, ಅದನ್ನು ನಮಗೆ ನೀಡಲಾರದವರು ಅಪ್ರಬುದ್ಧರು ಎನ್ನುವ ತಿಳಿವಳಿಕೆ ಇಲ್ಲದಿದ್ದರೆ ಮಕ್ಕಳು ಅವರ ಮುಂದಿನ ಜೀವನದಲ್ಲಿ ಎಲ್ಲರನ್ನೂ ಮೆಚ್ಚಿಸುವ, ಕನಿಷ್ಠ ಮಾನವೀಯ ವರ್ತನೆಗೂ ಬೇಡಿಕೊಳ್ಳುವ, ತಮ್ಮೊಂದಿಗೆ ಗೌರವಯುತವಾಗಿ ನಡೆದುಕೊಳ್ಳದವರನ್ನು ತಿರಸ್ಕರಿಸಲಾಗದ, ಎಲ್ಲ ಬಗೆಯ ಅವಮಾನಗಳನ್ನು, ಭಾವನಾತ್ಮಕ ಅನ್ಯಾಯಗಳನ್ನು ಸಹಿಸಿಕೊಂಡೇ ಬಾಳುವ ಬಲಹೀನತೆಯನ್ನು ಮೈಗೂಡಿಸಿಕೊಳ್ಳುತ್ತಾರೆ. ತನ್ನ ಬೇಕು-ಬೇಡಗಳಿಗಿಂತ, ತನ್ನ ಸುರಕ್ಷೆಗಿಂತ ಬೇರೆಯವರ ಅವಶ್ಯಕತೆಗಳೇ ಮುಖ್ಯ ಎನ್ನುವ ತಪ್ಪುಕಲ್ಪನೆಯೂ ಅವರನ್ನು ಆವರಿಸಿಕೊಳ್ಳುತ್ತದೆ. ಇಂತಹ ತಪ್ಪುಕಲ್ಪನೆಗಳು ಮಕ್ಕಳ ಸಾಮಾಜಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಶಿಕ್ಷಣ, ಉದ್ಯೋಗ, ಸ್ನೇಹ, ಸಾಮುದಾಯಿಕ ಸಹಭಾಗಿತ್ವ, ಮಾನಸಿಕ ಆರೋಗ್ಯ ಎಲ್ಲದಕ್ಕೂ ಸೌಹಾರ್ದಯುತ ಸಂಬಂಧಗಳು ಮುಖ್ಯವಾಗುತ್ತದೆ. ಎಲ್ಲ ಸಂದರ್ಭಗಳಲ್ಲೂ ಬೇರೆಯವರು ತೋರಿಸುವ ಅಸಹನೆ, ಅಸಡ್ಡೆಗಳಿಗೆ ತನ್ನಲ್ಲಿರುವ ಯಾವುದೋ ದೋಷವೇ ಕಾರಣ ಎಂದು ತಿಳಿಯುವ ವ್ಯಕ್ತಿ ಹೇಗೆ ತಾನೇ ಸಂತೃಪ್ತಿ ತರುವ ಬಾಂಧವ್ಯ ಗಳನ್ನು ಕಂಡುಕೊಳ್ಳುವುದು ಸಾಧ್ಯ? ಅಷ್ಟೇ ಅಲ್ಲದೆ, ಸದಾ ಸಿಡುಕಿಗೆ, ಕೋಪಕ್ಕೆ ತುತ್ತಾಗುವ ಮಗುವಿನಲ್ಲಿ ಒಂದು ಬಗೆಯ ಆತಂಕ, ಚಡಪಡಿಸುವಿಕೆ, ಸದಾ ಏನನ್ನೋ ಸರಿಪಡಿಸಲು ಹೆಣಗುವುದು, 'ಏನು ಮಾಡಿದರೆ ಏನಾಗುವುದೋ, ಅದರಿಂದ ಹೇಗೆ ತಪ್ಪಿಸಿಕೊಳ್ಳುವುದೋ' ಎಂಬ ನಿರಂತರ ಚಿಂತೆ – ಇಂಥವೆಲ್ಲಾ ಮಕ್ಕಳನ್ನು ಸಂಕಟದಲ್ಲಿ ತೊಳಲಾಡುವಂತೆ ಮಾಡುತ್ತದೆ ಮಕ್ಕಳ ಮಾನಸಿಕ ಸೌಖ್ಯದ ಬಗ್ಗೆ ಮಾತ್ರ ಮಾತನಾಡುತ್ತ, ಪೋಷಕರು ಮಕ್ಕಳನ್ನು ಬೆಳೆಸುವ ದಾರಿಯಲ್ಲಿ ಎಷ್ಟೆಲ್ಲಾ ಕಷ್ಟಗಳನ್ನು ಎದುರಿಸುತ್ತಾರೆ ಎನ್ನುವುದನ್ನೇ ಮರೆತುಬಿಡಬೇಕೆ? ಪೋಷಕರ ಬಗೆಗೂ ಸಹಾನುಭೂತಿ ಬೇಡವೇ? ಎಂದರೆ ಖಂಡಿತ ಹೌದು; ಪೋಷಕರಿಗೂ ತಮ್ಮ ಕರ್ತವ್ಯ, ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಬಳಲಿಕೆ ಉಂಟಾಗಿರುತ್ತದೆ, ತಮ್ಮ ಜೀವನದ ನೋವು ಹತಾಶೆಗಳಿಂದ ಕಂಗಾಲಾಗಿರುವ ಸಾಧ್ಯತೆಯೂ ಇದೆ. ಇವೆಲ್ಲದರ ಜೊತೆಗೆ ತಾವೇ ಆರೋಗ್ಯಕರವಾದ ಕೌಟುಂಬಿಕ ವಾತಾವರಣದಲ್ಲಿ ಬೆಳೆಯದೆ ಇದ್ದಾಗ, ತಮ್ಮ ಜೀವನದ ಮುಖ್ಯ ನಿರ್ಧಾರಗಳಾದ ಉದ್ಯೋಗ, ಮದುವೆ, ಮಕ್ಕಳು, ಕುಟುಂಬ ಮುಂತಾದವುಗಳನ್ನು ತಾವೇ ಸ್ವತಂತ್ರವಾಗಿ ಕೈಗೊಳ್ಳದೇ ಇದ್ದಾಗ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಅವರಿಗೆ ಹೊರೆಯಂತೆ ಭಾಸವಾಗುತ್ತದೆ. ತನಗೆ ಆಯ್ಕೆಗಳೇ ಇಲ್ಲ, ಬೇರೆಯವರ ಒತ್ತಡಗಳಿಗೆ ಮಣಿಯದೆ ಬೇರೆ ದಾರಿಯಿಲ್ಲ ಎಂದುಕೊಂಡು, ತನ್ನತನಕ್ಕೆ ಅವಕಾಶವನ್ನೂ, ಬೆಲೆಯನ್ನು ಕೊಡುವುದೆಂದರೆ ಏನು ಎಂದೇ ತಿಳಿಯದೆ, ತನಗೆ ತಾನೇ ಸ್ವಾತಂತ್ರ್ಯ ಕೊಟ್ಟುಕೊಳ್ಳದೆ ಅದರಿಂದ ಉಂಟಾಗುವ ಅಸಮಾಧಾನಗಳನ್ನು ಮಕ್ಕಳ ಮೇಲೆ ಸಿಡುಕುವುದರ ಮೂಲಕ ತೋರ್ಪಡಿಸಿಕೊಳ್ಳುವಂತಾಗುತ್ತದೆ. ❖

ಮಕ್ಕಳ ಮೇಲೆ ಸಿಡುಕುವವರು ನೀವಾದರೆ ಕೆಳಕಂಡ ಕೆಲವು ವಿಚಾರಗಳ ಬಗೆಗೆ ಚಿಂತಿಸುವುದು ಒಳ್ಳೆಯದು

- ಕೆಲವರು ಪೋಷಕರು 'ನಾವು ಮಕ್ಕಳನ್ನು ತುಂಬಾ ಪ್ರೀತಿಸುತ್ತೇವೆ, ಎಲ್ಲ ಸೌಕರ್ಯ ಕೊಡುತ್ತಿದ್ದೇವೆ, ಸ್ವಲ್ಪ ಸಿಡುಕಿದರೆ ಯಾವ ದೊಡ್ಡ ಹಾನಿಯಾಗಿಬಿಡುತ್ತದೆ' ಎಂದುಕೊಳ್ಳುತ್ತಾರೆ. ಮಕ್ಕಳಿಗೆ 'ಪ್ರೀತಿ'ಯಷ್ಟೇ ಸಾಕಾಗುವುದಿಲ್ಲ, ತಂದೆ/ತಾಯಿ ಸಿಡುಕುತ್ತಾರೆ ಎನ್ನುವ ಭಯವಿಲ್ಲದೆ ತಮ್ಮನ್ನು ತಾವು ತೆರೆದಿಟ್ಟುಕೊಳ್ಳಬಹುದಾದ ಒಂದು ನಿರಾತಂಕವಾದ 'ಸ್ಪೇಸ್' ಬೇಕು. ಎಲ್ಲ ಸಂಘರ್ಷಗಳನ್ನು, ಭಿನ್ನಾಭಿಪ್ರಾಯಗಳನ್ನು ನಿರ್ವಹಿಸಲುಬೇಕಾದ ಸಮಾಧಾನದ ಮಾತುಗಳು ಮಕ್ಕಳ ಭಾವನಾತ್ಮಕ ಅವಶ್ಯಕತೆಗಳಲ್ಲೊಂದು.
- ಮಕ್ಕಳೂ ಮನುಷ್ಯರೇ ಹೌದು, ಅವರೂ ನಮಗೆ ಕಿರಿಕಿರಿಯುಂಟುಮಾಡುತ್ತಾರೆ ಕೂಡ. ಆದರೆ ಅದು ಉದ್ದೇಶಪೂರ್ವಕವಲ್ಲ. ಮಕ್ಕಳು ತಮಗಾಗುತ್ತಿರುವ ಯಾವುದೋ ಕೆರಳಿಕೆಯನ್ನು ರಗಳೆ, ಹಠದ ಮೂಲಕ ವ್ಯಕ್ತಪಡಿಸುತ್ತಾರೆ. ಅಂತಹ ಸಮಯದಲ್ಲಿ ತನಗೂ ತನ್ನ ಮಗುವಿಗೂ ಶಿಕ್ಷೆಯಲ್ಲ, ಸಹಾನುಭೂತಿಯ ಅವಶ್ಯಕತೆಯಿದೆ ಎಂದು ಗುರುತಿಸುವುದೇ ಸಮಾಧಾನಕ್ಕೆ ಕೀಲಿಕೈ.
- ನಿಯಂತ್ರಣ ಮೀರಿ ಮಕ್ಕಳ ಮೇಲೆ ಕೂಗಾಡಿದಾಗ ಅಹಂ ತೊರೆದು ಮಕ್ಕಳ ಕ್ಷಮೆಯಾಚಿಸುವುದು ಸರಿಯಾದ ನಡೆಯೇ ಹೌದು. ತಾನು ಸಿಡುಕದೇ ಇರಬಹುದಾಗಿದ್ದರೂ ಸಿಡುಕಿದ್ದು ತನ್ನದೇ ಆಯ್ಕೆಯಾಗಿತ್ತು, ಹಾಗೆ ಮಾಡಬಾರದಿತ್ತು ಎನ್ನುವುದನ್ನು ಮಕ್ಕಳಿಗೆ ಅರ್ಥವಾಗುವಂತೆ ಹೇಳುವುದು ಎಷ್ಟು ಚಂದವಲ್ಲವೇ?
- ಮಕ್ಕಳು ನಮ್ಮ ಬಹುಪಾಲು ಸಮಯವನ್ನು, ಗಮನವನ್ನು ಬೇಡುತ್ತಾರೆ. ಇದರಿಂದ ಪೋಷಕರಾದ ನಮಗೆ ಮಾನಸಿಕ ಆಯಾಸವಾಗಿ ಅದನ್ನು ಮಕ್ಕಳ ಮೇಲೆ ಸಿಡುಕಿ ತೋರಿಸಿಕೊಳ್ಳುವಂತಾಗುತ್ತದೆ. ಸ್ವ ಆರೈಕೆಯ ಕಡೆಗೆ ಗಮನ ನೀಡಿ ಸದೃಢ ರಾಗುವುದು ಈಆಯಾಸದಿಂದ ಹೊರಬರುವ ದಾರಿಯಾಗಿದೆ.
- ಮಕ್ಕಳನ್ನು ಎಲ್ಲ ಬಗೆಯ ಸಮಸ್ಯೆಗಳಿಂದ, ಸಂಕಟಗಳಿಂದ, ತಪ್ಪು ಮಾಡುವುದರಿಂದ ನಾವು ಪಾರುಮಾಡಲಾರೆವು. ಅಂತಹ ನಿರೀಕ್ಷೆಗಳನ್ನಿಟ್ಟುಕೊಂಡಾಗ ತಾಳ್ಮೆ ತಪ್ಪುತ್ತದೆ. ಮಕ್ಕಳ ಆಯ್ಕೆ, ಅಭಿಪ್ರಾಯಗಳಿಗೆ ಬೆಲೆಕೊಟ್ಟು ಸಂದರ್ಭಗಳನ್ನೆದುರಿಸುವ ವಿವೇಚನೆಯನ್ನು, ಸ್ವತಂತ್ರ ಮನೋಭಾವವನ್ನು ಅವರಲ್ಲಿ ಬೆಳೆಸುವುದು ನಮ್ಮ ತಲೆಯ ಮೇಲಿನ ಭಾರವನ್ನು ಸ್ವಲ್ಪ ಮಟ್ಟಿಗೆ ಹಗುರಾಗಿಸುತ್ತದೆ. ಹಗುರವಾದ ಭಾವ ಸಮಾಧಾನದಿಂದ ಮಾತನಾಡಲು ಪ್ರೋತ್ಸಾಹಿಸುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

4) ....ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ 'ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ' ಪರಿಗಣಿಸಲ್ಪಟ್ಟಿತು.

ಎ) ಕಾನ್‌ಸ್ಟಾಂಟಿನೋಪಲ್ ಬಿ) ಲಂಡನ್
ಸಿ) ಪ್ಯಾರಿಸ್ ಡಿ) ಬರ್ಲಿನ್

ಉತ್ತರ:– (ಎ) ಕಾನ್‌ಸ್ಟಾಂಟಿನೋಪಲ್

5) ಭಾರತದಲ್ಲಿ ಫ್ರೆಂಚ್‌ರು ತಮ್ಮ ಮೊದಲ ಮಳಿಗೆಯನ್ನು ಎಲ್ಲಿ ತೆರೆದರು?

ಎ) ಮಸಲಿ ಪಟ್ಟಣಂ ಬಿ) ಸೂರತ್
ಸಿ) ವಿಶಾಖ ಪಟ್ಟಣಂ ಡಿ) ಕೊಚ್ಚಿನ್

ಉತ್ತರ:– (ಬಿ) ಸೂರತ್

6) ಪೋರ್ಚುಗೀಸರ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕಲ್ಲಿಕೋಟೆಗೆ ಮೊತ್ತಮೊದಲ ಬಾರಿ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದನು. ಅವನು ಭಾರತಕ್ಕೆ ಬಂದ ವರ್ಷ ಯಾವುದು?

ಎ) 1398 ಬಿ) 1488
ಸಿ) 1598 ಡಿ) 1498

ಉತ್ತರ:–(ಡಿ) 1498

II) ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.

1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ....

2) ಭಾರತ .ಹಾಗೂ. ಯೂರೋಪ್ ನಡುವೆ ಹೊಸ ಜಲ ಮಾರ್ಗವನ್ನು.......................... ಕಂಡುಹಿಡಿದರು

3) ಭಾರತದಲ್ಲಿ ಫ್ರೆಂಚರ ರಾಜಧಾನಿ..........................

4) ರಾಬರ್ಟ್ ಕ್ಲೈವನು 1757ರಲ್ಲಿ ಸಿರಾಜ್–ಉದ್–ದೌಲನ ಮೇಲೆ...............................ಕದನ ಸಾರಿದನು

ಉತ್ತರ: (1) ಆಲ್ಫೋನ್ಸೊ–ಡಿ–ಅಲ್ಬುಕರ್ಕ್ (2) ಪೋರ್ಚುಗೀಸರು (3) ಪಾಂಡಿಚೇರಿ (4) ಪ್ಲಾಸಿ

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಭಾರತದ ಯಾವೆಲ್ಲಾ ಪದಾರ್ಥಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು?

ಉತ್ತರ:– ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.

2) 'ಕಾನ್‌ಸ್ಟಾಂಟಿನೋಪಲ್ ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು'. ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:– ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು. ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.

3) ಪ್ರಾರಂಭದಲ್ಲಿ ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು?

ಉತ್ತರ:– ಭಾರತದ ಸಾಂಬಾರು ಪದಾರ್ಥಗಳನ್ನು ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡುವ ಮೂಲಕ ಯುರೋಪಿಯನ್ನರೊಂದಿಗೆ (ಪ್ರಾರಂಭದಲ್ಲಿ) ವ್ಯಾಪಾರ ನಡೆಯುತ್ತಿತ್ತು. ವಿಶೇಷವಾಗಿ ಮೆಣಸು, ಶುಂಠಿ ಮೊದಲಾದ ವಸ್ತುಗಳಿಗೆ ಯುರೋಪಿನಲ್ಲಿ ಬಹಳ ಬೇಡಿಕೆಯಿತ್ತು.

4) ಮಧ್ಯಕಾಲೀನ ಇತಿಹಾಸದ ಸಮಯದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಹೇಗೆ ನಡೆಯುತ್ತಿದ್ದವು?

ಉತ್ತರ:– ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು

5) ಯೂರೋಪಿಯನ್ ರಾಷ್ಟ್ರಗಳಲ್ಲಿ ಭಾರತದ ಯಾವೆಲ್ಲಾ ವಸ್ತುಗಳಿಗೆ ಬಹಳ ಬೇಡಿಕೆಯಿತ್ತು?

ಉತ್ತರ:– ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನಿ, ಏಲಕ್ಕಿ, ಶುಂಠಿ ಮೊದಲಾದ ವಸ್ತುಗಳಿಗೆ ಯೂರೋಪಿನಲ್ಲಿ ಬಹಳ ಬೇಡಿಕೆಯಿತ್ತು.

6) ಮಧ್ಯಕಾಲೀನ ಇತಿಹಾಸದಲ್ಲಿ ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಅರಬ್ಬರು ಏಕಸ್ವಾಮ್ಯ ಸಾಧಿಸಿದ್ದರೆ, ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಯಾವ ದೇಶದ ವರ್ತಕರು ಏಕಸ್ವಾಮ್ಯ ಸಾಧಿಸಿದ್ದರು?

ಉತ್ತರ:– ಇಟಲಿ

7) ಭಾರತದೊಡನೆ ವ್ಯಾಪಾರವಹಿವಾಟು ನಡೆಸಲು ಯೂರೋಪಿಯನ್ನರಿಗೆ ಹೊಸ ಜಲಮಾರ್ಗವನ್ನು ಯಾವ ಕಾರಣಕ್ಕಾಗಿ ಕಂಡುಹಿಡಿಯ ಬೇಕಾಯಿತು? ಹಾಗೂ ಯಾವುದು ಇವರ ನೆರವಿಗೆ ಬಂದವು?

ಉತ್ತರ:– ಭಾರತ (ಏಷ್ಯಾ) ಮತ್ತು ಯುರೋಪ್ ನಡುವಿನ ವ್ಯಾಪಾರ ಮತ್ತು ವ್ಯವಹಾರಗಳು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು. 1453ರಲ್ಲಿ ಆಟೋಮಾನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು. ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು. ಇದರಿಂದಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿರಲಿಲ್ಲ. ಇದೇ ವೇಳೆ ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಲಾರಂಭಿಸಿದರು. ಇದಕ್ಕೆ ಪೂರಕವಾಗಿ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪನ), ಸಿಡಿಮದ್ದು, ಮೊದಲಾದವುಗಳು ನೆರವಿಗೆ ಬಂದವು

8) 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗ ಯಾರು?

ಉತ್ತರ:– 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗನೆಂದರೆ ಪೋರ್ಚುಗೀಸ್ ನಾವಿಕ ವಾಸ್ಕೊಡಗಾಮ

9) ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ. ಪೋರ್ಚುಗೀಸ್ ನಾವಿಕ ಬಂದುದರಿಂದ ಆದ ಪರಿವರ್ತನೆ ಏನು?

ಉತ್ತರ:– ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ ಪೋರ್ಚುಗೀಸ್ ನಾವಿಕ ಬಂದುದರಿಂದ ಅವರಿಂದ ಪ್ರೇರಣೆಗೊಂಡ ಯುರೋಪಿನ ಡಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದವು. ಈ ಬೆಳವಣಿಗೆಯು ಕಾಲಾನುಕ್ರಮದಲ್ಲಿ ಭಾರತವು ವಸಾಹತು ರಾಷ್ಟ್ರವಾಗಿ ಪರಿವರ್ತನೆಗೊಳ್ಳಬೇಕಾಯಿತು.

ಭಾರತವನ್ನು ವಸಾಹತುವಾಗಿ ಪರಿವರ್ತಿಸಿದ ಯೂರೋಪಿಯನ್ ರಾಷ್ಟ್ರಗಳ ಚರಿತ್ರೆಯಲ್ಲಿಯೂ ಸಹಾ ನಿರ್ಣಾಯಕ ಬದಲಾವಣೆಗಳಾದವು. ಈ ಮೊದಲಾದ ಪರಿವರ್ತನೆಯನ್ನು ಇತಿಹಾಸದಲ್ಲಿ ನೋಡುವಂತಾಯಿತು.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

32) If $y = x^{x^{x^{\cdot^{\cdot^{\cdot\infty}}}}}$ find $\frac{dy}{dx}$

Soln: (..........Contd)

$$\frac{dy}{dx}\left(\frac{1 - y\log x}{y}\right) = \frac{y}{x}$$

$$\therefore \frac{dy}{dx} = \frac{y^2}{x(1 - y\log x)}$$

Exponential Function

If a is positive real and a ≠ 1, then the function that associates each x of R to a^x is called genera exponential function with base a.

Let $f(x) = a^x$; $(a > 0, a \neq 1)$; $D_f = R$ and $R_f = (0, \infty)$



Graph of $f(x) = a^x$ for $a > 1$ and $a < 1$ are shown above. a^x increase if $a > 1$ and decreases if $a < 1$.

Note: a^x increase if $a > 1$ and decreases if $a < 1$.

Case 1: $a > 1$

Note that, $f(x) = a^x \begin{cases} <1 \text{ for } x < 0 \\ =1 \text{ for } x = 0 \\ >1 \text{ for } x > 0 \end{cases}$

Case 2: $0 < a < 1$

$$f(x) = a^x \begin{cases} >1 \text{ for } x < 0 \\ =1 \text{ for } x = 0 \\ <1 \text{ for } x > 0 \end{cases}$$

Note:

1. Exponential function with base 10 is called **Common Exponential Function.**
2. Exponential function with base e which is sum of the series

$$1 + \frac{1}{\lfloor 1} + \frac{1}{\lfloor 2} + \frac{1}{\lfloor 3} + \ldots\ldots\infty.$$

And lies between 2 and 3 is called Natural Exponential Function.

The graph of $f(x) = e^x$ is identical to $f(x) = a^x$ for $a > 1$

The graph of $f(x) = e^{-x}$ is identical to $f(x) = a^x$ for $0 < a < 1$ because

$$f(x) = e^{-x} = \left(\frac{1}{e}\right)^x \text{ and } \frac{1}{e} < 1$$

Logarithmic Function (General)

The function defined by $f(x) = \log_a x$, $x > 0, a > 0, a \neq 1$ is called the logarithmic function.

Definition: $\log_a x = y \Leftrightarrow a^y = x$

Let $f(x) = \log_a x$, $x > 0, a > 0, a \neq 1$;

$D_f = (0, \infty)$, $R_f = R$

The graph of $f(x) = \log_a x$ for $a > 1$ and $a < 1$ are as in figure.

For a > 1,

$f(x) =$

$$\log_a x \begin{cases} <0 \text{ for } 0 < x < 1 \\ =0 \text{ for } x = 1 \\ >0 \text{ for } x > 1 \end{cases}$$



Also y increases as x increases.

For 0 < a < 1,

$$f(x) = \log_a x \begin{cases} >0 \text{ for } 0 < x < 1 \\ =0 \text{ for } x = 1 \\ <0 \text{ for } x > 1 \end{cases}$$

Also y decreases as x increases.

Logarithmic Function (Natural)



The function f defined by $y = f(x) = \log_e x$, $x > 0$ is called *Logarithmic Function.*

log x is not defined for x zero or negative.

$\therefore D_f = (0, \infty)$

Also, $y = \log_e x \Leftrightarrow x = e^y$

$\therefore x \to 0$ when $y \to \infty$ and $x \to \infty$ when $y \to \infty$

$\therefore R_f = (-\infty, \infty)$

Also $x = 1 \Rightarrow y = \log 1 = 0 \Rightarrow (1, 0)$ lies on the graph.

Note:

1. General Logarithmic Function is defined by $y = f(x) = \log_a x$, where $a \neq 1$ and $a > 0$.

Here, $D_f = (0, \infty)$ and $R_f = (-\infty, \infty)$ and the point (1, 0) lies on the graph

Contd/-

ಇನ್ನೂ ನಿಲ್ಲದ ಹಾಸನ ಸಂತ್ರಸ್ತೆಯರ ಕಣ್ಣೀರ ಕೋಡಿ...

• ಅನಿತಾ ಪೈಲೂರು

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ನಡೆಯಿತೆನ್ನಲಾದ ಲೈಂಗಿಕ ದೌರ್ಜನ್ಯದ ಪ್ರಕರಣಗಳ ಹಲವು ಸಂತ್ರಸ್ತೆಯರ 'ಮನೆಗಳು ಮುರಿದಿವೆ'. ಅಸಂಖ್ಯಾತ ಮಹಿಳೆಯರು ಮತ್ತು ಅವರ ಮಕ್ಕಳ ಭವಿಷ್ಯ ಗಂಡಾಂತರಕ್ಕೆ ಸಿಲುಕಿದೆ. ಮನೆಯಿಂದ ಹೊರಬಂದು ತಲೆ ಎತ್ತಿ ಓಡಾಡುವ ಸ್ಥಿತಿಯಲ್ಲೂ ಸಂತ್ರಸ್ತೆಯರು ಇಲ್ಲ.

'ನನ್ನ ಕುಟುಂಬದವರೇ ನನ್ನನ್ನು ಅಣಕಿಸುತ್ತಾರೆ. ತಿರಸ್ಕಾರದಿಂದ ನೋಡುತ್ತಿದ್ದಾರೆ' ಎಂದು ದೌರ್ಜನ್ಯಕ್ಕೆ ಒಳಗಾದ ಮಹಿಳೆಯೊಬ್ಬರು ಅಳಲು ತೋಡಿಕೊಂಡರು.

'ವ್ಯಕ್ತಿಗತ ನೆಲೆಯಲ್ಲಿ ಮಾನಹಾನಿ ಒಂದು ಕಡೆಯಾದರೆ, ಮತ್ತೊಂದು ಕಡೆ ಸಹೋದ್ಯೋಗಿಗಳೇ 'ವೃತ್ತಿ ಸಾಮರ್ಥ್ಯ'ವನ್ನೂ ಪ್ರಶ್ನಿಸಲಾರಂಭಿಸಿದ್ದಾರೆ. ಅಷ್ಟೇ ಅಲ್ಲ; ವೃತ್ತಿಗೆ ಸಂಬಂಧಿಸಿದ ಸಂಘಟನೆಯ ಪದಾಧಿಕಾರಿ ಹುದ್ದೆಗೂ ರಾಜೀನಾಮೆ ನೀಡುವಂತೆ ಮಹಿಳಾ ಸಹೋದ್ಯೋಗಿಗಳೇ ಸಂದೇಶ ಕಳುಹಿಸಿದ್ದಾರೆ' ಎಂದು ತಮಗೆ ಬಂದ ಸಂದೇಶವನ್ನು ತೋರಿಸಿ, ಸಿಟ್ಟು ಮತ್ತು ಅಸಹಾಯಕತೆಯಿಂದ ಅವುಡುಗಚ್ಚಿದ ಅವರು ಕೋಪದಿಂದ ಕಂಪಿಸಿದರು.

'ಕುಟುಂಬದ ಸದಸ್ಯರು ಮತ್ತು ಬಂಧು–ಬಳಗದವರೂ ಈಗ ಮಾತನಾಡುವುದನ್ನು ನಿಲ್ಲಿಸಿದ್ದಾರೆ. ತಾಯಿ ಮತ್ತು ಸಹೋದರಿಯ ಮೂಲಕ ಎಚ್ಚರಿಕೆಯ ಹಾಗೂ ಕುಹಕದ ಮಾತುಗಳನ್ನು ಹೇಳಿ-ಸುತ್ತಿದ್ದಾರೆ. ನನಗೆ ಮಾತ್ರವಲ್ಲ, ನನ್ನ ಮನೆಯವರಿಗೂ ಕಾರ್ಯಕ್ರಮಗಳಿಗೆ ಆಹ್ವಾನ ನೀಡುವುದನ್ನೂ ನಿಲ್ಲಿಸಿಬಿಟ್ಟಿದ್ದಾರೆ' ಎಂದು ಸಂತ್ರಸ್ತೆ ನಿಡುಸುಯ್ದರು.

'ಈ ಹಗರಣ ಹೊರಬಂದಾಗ ಆದ ಅವಮಾನ ಮತ್ತು ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆ ಬಂದಿತ್ತು. ಆದರೆ, ಮಕ್ಕಳ ಮುಖ ನೋಡಿಕೊಂಡು ಆ ಮನಃಸ್ಥಿತಿಯಿಂದ ಹೊರಬಂದೆ. ಅಗ್ನಿಪರೀಕ್ಷೆಯ ಈ ಸಂದರ್ಭದಲ್ಲಿ ಕೆಲ ಹಿತೈಷಿಗಳು ನನ್ನ ಜತೆಗೆ ಗಟ್ಟಿಯಾಗಿ ನಿಂತರು' ಎಂದು ಅವರು ಸ್ಮರಿಸಿಕೊಂಡರು.

'ಮುರಿದುಬಿದ್ದ ನಿಶ್ಚಿತಾರ್ಥ'

ದೌರ್ಜನ್ಯಕ್ಕೆ ಒಳಗಾದ ಮೂವರು ವಿದ್ಯಾರ್ಥಿನಿಯರು ತಮ್ಮ ಅಧ್ಯಯನವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ. ಕೆಲವು ನಿಶ್ಚಿತಾರ್ಥಗಳು ಮುರಿದುಹೋಗಿವೆ.

ಇಡೀ ಹಾಸನದ ಸಾಮಾಜಿಕ ನೈತಿಕತೆಗೆ ಆಳವಾದ ಪೆಟ್ಟುಬಿದ್ದಿದೆ. ವಿಡಿಯೊಗಳಲ್ಲಿ ಮಹಿಳೆಯರ ಗುರುತನ್ನು ಮರೆಮಾಚಿಲ್ಲ. ಚಿಕ್ಕಪ್ರಾಯದ ಮತ್ತು ವಯಸ್ಸಾದ ಮಹಿಳೆಯರ ದೃಶ್ಯಗಳು ಹರಿದಾಡಿವೆ. ಇವರಲ್ಲಿ ಬಹುತೇಕರು ಹಾಸನದಲ್ಲಿ ಸಾಮಾಜಿಕ ಮತ್ತು ರಾಜಕೀಯ ವಲಯದಲ್ಲಿ ಪರಿಚಿತರು. ರಾಜಕೀಯ ಪಕ್ಷಗಳ ಕಾರ್ಯಕರ್ತೆಯರು, ಮನೆಗೆಲಸದವರು, ಅಧಿಕಾರಿಗಳು ಮತ್ತು ವೃತ್ತಿಪರರೂ ಇದ್ದಾರೆ. ಇವರ ಸ್ಥಿತಿಯಂತೂ ಹೇಳ ತೀರದಾಗಿದೆ.

ಏ. 22 ರಂದು ಅಶ್ಲೀಲ ವಿಡಿಯೊ ಕ್ಲಿಪಿಂಗ್, ಚಿತ್ರಗಳು ಮತ್ತು ವಿಡಿಯೊ ಕರೆಗಳ ಸ್ಕ್ರೀನ್ ಶಾಟ್‌ಗಳು ಬಹಿರಂಗಗೊಂಡ ಬಳಿಕ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹಲವು ಮಹಿಳೆಯರು ಇನ್ನೂ ಆಘಾತದ ಸ್ಥಿತಿಯಲ್ಲೇ ಇದ್ದಾರೆ. ಈ ಘೋರ ಕೃತ್ಯ ಮಾನವೀಯತೆ ಮತ್ತು ಸಮಾಜದ ಅಡಿಪಾಯವನ್ನೇ ಅಲುಗಾಡಿಸಿದೆ.

'ಒಪ್ಪಿಕೊಂಡೇ ಆತನ ಕೃತ್ಯಕ್ಕೆ ಸಹಕರಿಸಿದ್ದಾರೆ ಎಂಬ ಕಳಂಕವನ್ನೂ ದೌರ್ಜನ್ಯಕ್ಕೆ ಒಳಗಾದವರಿಗೆ ಅಂಟಿಸಲಾಗಿದೆ. ಕಳಂಕ ತೊಡೆದುಕೊಂಡು ಮುಖ್ಯವಾಹಿನಿಗೆ ಬರುವುದಕ್ಕೆ ಸಹಾಯ ಹಸ್ತವನ್ನು ಚಾಚುವವರೂ ಇಲ್ಲ' ಎಂದರು ಸಾಮಾಜಿಕ ಕಾರ್ಯಕರ್ತೆ ಮಮತಾ ಶಿವು.

'ಕೆಲವೇ ಸೆಕೆಂಡುಗಳ ವಿಡಿಯೊ ದೃಶ್ಯವನ್ನು ನೋಡಿ ಒಪ್ಪಿತ ಕ್ರಿಯೆ ಎಂದು ಹೇಗೆ ತೀರ್ಮಾನಕ್ಕೆ ಬರಲು ಸಾಧ್ಯ? ಕೆಲವು ವಿಡಿಯೊಗಳಲ್ಲಿ ದೃಶ್ಯವನ್ನು ಚಿತ್ರೀಕರಿಸದಂತೆ ಪರಿಪರಿಯಾಗಿ ಬೇಡಿಕೊಳ್ಳುವ ದೃಶ್ಯಗಳೂ ಇವೆ. ಆದರೂ ಆತ ಬಿಡುವುದಿಲ್ಲ. ದೃಶ್ಯವನ್ನು ನಂತರ ಡಿಲೀಟ್ ಮಾಡುವುದಾಗಿ ಆತ ಹೇಳುತ್ತಾನೆ' ಎಂದು ಮಮತಾ ವಿವರಿಸಿದರು..

'ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ತಮ್ಮ ಪತಿ ಮತ್ತು ಮನೆಯ ಇತರರ ಸದಸ್ಯರಿಗಿಂತ ತಮ್ಮ ಮಕ್ಕಳಿಗೆ ವಿವರಿಸುವುದು ಕಷ್ಟವಾಗಿದೆ. ಯಾವ ಕಾರಣಕ್ಕೆ ದೌರ್ಜನ್ಯಕ್ಕೆ ಒಳಗಾಗಿದ್ದು ಮತ್ತು ಸನ್ನಿವೇಶ ಎಂತಹದ್ದು ಎಂಬುದನ್ನು ಹೇಳುವುದು ಕಷ್ಟ. ಅಷ್ಟು ಮಾತ್ರವಲ್ಲ, ಪರಿಣಾಮಗಳನ್ನೂ ಎದುರಿಸಬೇಕಾಗಿದೆ. ಕೆಲವು ಮಹಿಳೆಯರು ತಮ್ಮ ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ದೂರು ನೀಡಲು ಮುಂದೆ ಬರುತ್ತಿಲ್ಲ. ಇಡೀ ಜಗತ್ತನ್ನಾದರೂ ಎದುರಿಸಬಹುದು. ಆದರೆ, ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯಾಗಿ ತಮ್ಮ ಮಕ್ಕಳನ್ನು ಎದುರಿಸಲು ಅವರು ತಯಾರಿಲ್ಲ' ಎಂದು ಲೇಖಕಿ ರೂಪಾ ಹಾಸನ ಹೇಳಿದರು.

'ಇದೊಂದು ಅತ್ಯಂತ ಸಂಕೀರ್ಣ ಸನ್ನಿವೇಶ. ಸಂತ್ರಸ್ತೆಯರಿಗೆ ಮಾನಸಿಕ ಶಾಂತಿ ಮತ್ತು ದೈಹಿಕ ಸುರಕ್ಷತೆ ಸಿಗಲಿ ಎಂಬುದನ್ನು ಹಾರೈಸುತ್ತೇವೆ. ಧೈರ್ಯದಿಂದ ಸತ್ಯವನ್ನು ಹೇಳುವ ಆತ್ಮವಿಶ್ವಾಸ ಅವರಲ್ಲಿ ಬರಲಿ. ಆರೋಪಿಗಳ ಬಂಧನವಾಗಿ, ಶಿಕ್ಷೆಯಾದರೆ ಸಂತ್ರಸ್ತೆಯರಲ್ಲಿ ಆತ್ಮವಿಶ್ವಾಸ ಮೂಡಲು ಸಾಧ್ಯ' ಎಂದು ಅವರು ಅಭಿಪ್ರಾಯಪಟ್ಟರು.

ಪೆನ್‌ಡ್ರೈವ್ ಹಂಚಿಕೆ: ಮೂವರಿಗೆ ಶೋಧ

ಪ್ರಜಾವಾಣಿ ವಾರ್ತೆ

ಪ್ರಜ್ವಲ್ ರೇವಣ್ಣ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿದ್ದಾರೆ ಎಂಬ ಆರೋಪದ ಮೇಲೆ ಹಾಸನದಲ್ಲಿ ಇಬ್ಬರನ್ನು ಬಂಧಿಸಿರುವ ಎಸ್‌ಐಟಿ, ಇದೇ ಪ್ರಕರಣದಲ್ಲಿ ಮತ್ತೆ ಮೂವರಿಗೆ ಶೋಧ ಮುಂದುವರಿಸಿದೆ.

ಹಾಸನದ ಚೇತನ್ ಹಾಗೂ ಲಿಖಿತ್ ಎಂಬುವರನ್ನು ಭಾನುವಾರ ಬಂಧಿಸಲಾಗಿತ್ತು. ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪ್ರಜ್ವಲ್ ಅವರಿಗೆ ಸೇರಿದ್ದು ಎನ್ನಲಾದ ಪೆನ್‌ಡ್ರೈವ್ ಅನ್ನು ಇನ್ನೂ ಮೂವರು ಹಂಚಿಕೆ ಮಾಡಿದ್ದಾರೆ ಎಂಬ ಮಾಹಿತಿ ಎಸ್‌ಐಟಿಗೆ ಲಭಿಸಿದ್ದು ತನಿಖೆ ಚುರುಕುಗೊಳಿಸಿದ್ದಾರೆ. ಸದ್ಯ ಮೂವರೂ ತಲೆಮರೆಸಿಕೊಂಡಿದ್ದಾರೆ.

'ಅರಕಲಗೂಡು ಶಾಸಕ ಎ.ಮಂಜು ಅವರಿಗೆ ಪೆನ್‌ಡ್ರೈವ್ ನೀಡಿದ್ದೆ' ಎಂದು ನವೀನ್‌ಗೌಡ ಎಂಬುವರು ಹೇಳಿಕೆ ನೀಡಿದ್ದು, ಆತನ ವಿರುದ್ಧ ಮಂಜು ಅವರು ಎಸ್‌ಐಟಿಗೆ ದೂರು ನೀಡಿದ್ದಾರೆ. ಆ ದೂರನ್ನೂ ಸ್ವೀಕರಿಸಿರುವ ಎಸ್‌ಐಟಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

'ಏಪ್ರಿಲ್ 20ರಂದು ರಸ್ತೆಯಲ್ಲಿ ಸಿಕ್ಕಿದ ಪೆನ್‌ಡ್ರೈವ್ ಅನ್ನು ಎ.ಮಂಜು ಅವರಿಗೆ ಏ.21ರಂದು ಅರಕಲಗೂಡಿನ ಮಾರುತಿ ಕಲ್ಯಾಣ ಮಂಟಪದ ಬಳಿ ನೀಡಿದ್ದೆ' ಎಂದು ತಮ್ಮ ಫೇಸ್‌ಬುಕ್ ಪೇಜ್‌ನಲ್ಲಿ ನವೀನ್ ಬರೆದುಕೊಂಡಿದ್ದರು. 'ನವೀನ್‌ಗೌಡ ಯಾರೆಂದು ಗೊತ್ತಿಲ್ಲ. ಮೊದಲು ನವೀನ್‌ಗೌಡನನ್ನೇ ಬಂಧಿಸಬೇಕು. ಆಗ ಪೆನ್‌ಡ್ರೈವ್ ಇತಿಹಾಸ ತಿಳಿಯಲಿದೆ' ಎಂದು ಮಂಜು ಹೇಳಿದ್ದರು.

ದೋಷಾರೋಪಪಟ್ಟಿ ಸಲ್ಲಿಕೆಗೆ ತಯಾರಿ: ಮತ್ತೊಂದೆಡೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ ಶೀಘ್ರದಲ್ಲೇ ತನಿಖೆ ಪೂರ್ಣಗೊಳಿಸಿ ದೋಷಾರೋಪ ಪಟ್ಟಿ ಸಲ್ಲಿಸಲು ತಯಾರಿ ನಡೆಸುತ್ತಿದೆ. ಹಾಸನದಲ್ಲೂ ಒಂದು ತಂಡ ಬೀಡುಬಿಟ್ಟಿದ್ದು, ಮಾಹಿತಿ ಕಲೆಹಾಕುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜ್ವಲ್ ರೇವಣ್ಣ ಅವರು ಇನ್ನೂ ವಿದೇಶದಿಂದ ವಾಪಸ್ ಆಗಿಲ್ಲ. ಅವರು ಎರಡು ಬಾರಿ ದಿಢೀರ್ ಆಗಿ ವಿಮಾನದ ಟಿಕೆಟ್ ಅನ್ನು ರದ್ದುಪಡಿಸಿರುವ ಮಾಹಿತಿ ಎಸ್‌ಐಟಿಗೆ ಸಿಕ್ಕಿದೆ. ಅವರನ್ನು ರಾಜ್ಯಕ್ಕೆ ಕರೆತರುವ ತಯಾರಿ ನಡೆಸುತ್ತಿದೆ.

'ತನಿಖೆ ಪೂರ್ಣಗೊಳಿಸಿ, ಸಾಕ್ಷ್ಯಾಧಾರ ಸಹಿತ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುತ್ತೇವೆ. ನಂತರ, ರೆಡ್ ಕಾರ್ನರ್ ನೋಟಿಸ್ ಜಾರಿ ಮಾಡಲಾಗುವುದು. ಸಿಬಿಐನ ಇಂಟರ್‌ಪೋಲ್‌ನ ಅನುಮತಿ ಕೇಳಲಾಗಿದೆ. ಪ್ರಜ್ವಲ್ ಅವರ ರಾಜತಾಂತ್ರಿಕ ಹಾಗೂ ಸಾಮಾನ್ಯ ಪಾಸ್‌ಪೋರ್ಟ್ ರದ್ದುಗೊಂಡರೆ ಅವರನ್ನು ರಾಜ್ಯ ಕರೆ ತರುವುದು ಸುಲಭವಾಗಲಿದೆ' ಎಂದು ಮೂಲಗಳು ಹೇಳಿವೆ.

ಪ್ರಜ್ವಲ್ ರಾಜ್ಯಕ್ಕೆ ಬರುವ ನಿರೀಕ್ಷೆ?: ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದ ಹೊಳೆನರಸಿಪುರದ ಶಾಸಕ, ಪ್ರಜ್ವಲ್ ಅವರ ತಂದೆ ಎಚ್.ಡಿ.ರೇವಣ್ಣ ಅವರಿಗೆ ಷರತ್ತುಬದ್ಧ ಜಾಮೀನು ಸಿಕ್ಕಿದ್ದು, ಈ ಬೆನ್ನಲ್ಲೇ ಪ್ರಜ್ವಲ್ ಅವರೇ ರಾಜ್ಯಕ್ಕೆ ಬರುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ಬೆಂಗಳೂರು ಹಾಗೂ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ನಿಗಾ ಇಡಲಾಗಿದೆ. ರಾಜ್ಯಕ್ಕೆ ಬಂದರೆ ತಕ್ಷಣವೇ ವಶಕ್ಕೆ ಪಡೆಯಲಾಗುವುದು ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಪ್ರಕರಣ ರಾಷ್ಟ್ರೀಯ ಸಮಸ್ಯೆ ಅಲ್ಲ'

'ಪ್ರಜ್ವಲ್ ರೇವಣ್ಣ ಪ್ರಕರಣ ರಾಷ್ಟ್ರೀಯ ಸಮಸ್ಯೆಯಲ್ಲ. ಅದು ವೈಯಕ್ತಿಕವಾಗಿ ಆಗಿದೆ. ಪೊಲೀಸರು ತನಿಖೆ ನಡೆಸುತ್ತಾರೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ವೈಯಕ್ತಿಕ ಪ್ರಕರಣವನ್ನು ಜೇಮ್ಸ್ ಬಾಂಡ್ ರೀತಿ ಹಿಗ್ಗಿಸೋಕೆ ಆಗುವುದಿಲ್ಲ. ಅದನ್ನೇ ಕೇಂದ್ರೀಕರಿಸಲು ಆಗುವುದಿಲ್ಲ. ರಾಜ್ಯದಲ್ಲಿ ಬೇರೆ ಬೇರೆ ಸಮಸ್ಯೆಗಳಿವೆ. ಕುಡಿಯುವ ನೀರಿನ ಸಮಸ್ಯೆ ಇದೆ. ಆ ಕಡೆ ಗಮನಹರಿಸಬೇಕು' ಎಂದರು.

ಪ್ರಕರಣದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಾತ್ರದ ಕುರಿತ ಆರೋಪದ ಬಗ್ಗೆ ಕೇಳಿದಾಗ, 'ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಸುತ್ತಿ ಎಲ್ಲಿಗೆ ಬಂದು ನಿಲ್ಲುತ್ತೆ ನೋಡೋಣ. ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದೆ. ಸುಮ್ಮನೆ ಆರೋಪ ಮಾಡಿದರೆ ರಾಜೀನಾಮೆ ಕೊಡಲು ಆಗುತ್ತಾ? ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ' ಎಂದು ಹೇಳಿದರು.

ದೇವರಾಜೇಗೌಡ 2 ದಿನ ಪೊಲೀಸ್ ವಶಕ್ಕೆ

ಹೊಳೆನರಸೀಪುರ (ಹಾಸನ): ಅತ್ಯಾಚಾರ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿ, ಬಿಜೆಪಿ ಮುಖಂಡ ಜಿ.ದೇವರಾಜೇಗೌಡ ಅವರನ್ನು ಎರಡು ದಿನಗಳ ಪೊಲೀಸ್ ಕಸ್ಟಡಿಗೆ ನೀಡಿ ಹೊಳೆನರಸೀಪುರದ ಜೆಎಂಎಫ್‌ಸಿ ಕೋರ್ಟ್ ಆದೇಶ ನೀಡಿದೆ.

ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ತಮ್ಮ ವಶಕ್ಕೆ ನೀಡುವಂತೆ ಕೋರಿ ಹೊಳೆನರಸೀಪುರ ನಗರ ಠಾಣೆ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಾಲಯ, ಮೇ 14 ರಂದು ಬೆಳಿಗ್ಗೆ 9 ಗಂಟೆಯಿಂದ ಮೇ 15 ರ ರಾತ್ರಿವರೆಗೆ ಎರಡು ದಿನ ಪೊಲೀಸ್ ವಶಕ್ಕೆ ನೀಡಿತು.

ಮೇ 11 ರಂದು ಬಂಧನಕ್ಕೆ ಒಳಗಾಗಿದ್ದ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಪ್ರಕರಣ ಸಂಬಂಧ ಆರೋಪಿಯ ವಿಚಾರಣೆ ನಡೆಸಬೇಕಿದೆ ಎಂದು ಸೋಮವಾರ ಪ್ರಾಸಿಕ್ಯೂಷನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದರು.

ನಗರ ಠಾಣೆ ಪೊಲೀಸರು ಮೇ 14 ರಂದು ಬೆಳಿಗ್ಗೆ 9 ಗಂಟೆಗೆ ಹಾಸನದ ಜಿಲ್ಲಾ ಕಾರಾಗೃಹದಿಂದ ದೇವರಾಜೇಗೌಡ ಅವರನ್ನು ವಿಚಾರಣೆಗಾಗಿ ಕರೆದೊಯ್ಯಲಿದ್ದಾರೆ.

'15 ಲಕ್ಷ ಜನರನ್ನು ಬಂಧಿಸಬೇಕಾಗುತ್ತದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆನ್‌ಡ್ರೈವ್ ಇದೆ, ವಿಡಿಯೊ ಇದೆ ಎಂದು ಬಂಧಿಸಲು ಹೊರಟರೆ ಹಾಸನ ಜಿಲ್ಲೆಯಲ್ಲಿ 15 ಲಕ್ಷ ಜನರ ಮೇಲೂ ಕೇಸ್ ಹಾಕಿ, ಬಂಧಿಸ-ಬೇಕಾಗುತ್ತದೆ' ಎಂದು ಮಾಜಿ ಶಾಸಕ ಬಿಜೆಪಿಯ ಪ್ರೀತಂಗೌಡ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜಿಲ್ಲೆಯಲ್ಲಿ ವಿಡಿಯೊ ವ್ಯಾಪಕವಾಗಿ ಹಂಚಿಕೆಯಾಗಿ-ರುವುದು ನಿಜ. ಅಶ್ಲೀಲ ವಿಡಿಯೊಗಳನ್ನು ಹಂಚಿಕೊಳ್ಳಬಾರದು ಎಂದು ನಮ್ಮ ಕಾರ್ಯಕರ್ತರಿಗೆ ಕಟ್ಟುನಿಟ್ಟಾದ ಸೂಚನೆ ನೀಡಿದ್ದೇನೆ' ಎಂದರು.

'ಈ ರೀತಿಯ ಕೃತ್ಯಗಳಿಗೆ ನಾನು ಬೆಂಬಲ ನೀಡುವುದಿಲ್ಲ. ಈ ಕುರಿತು ಹಾಸನ ಜಿಲ್ಲೆಯ ಪ್ರಮುಖ ನಾಯಕರು ನನ್ನ ಜತೆ ಮಾತನಾಡಿದ್ದಾರೆ. ಯಾರಿಗಾದರೂ ಪೆನ್‌ಡ್ರೈವ್ ಸಿಕ್ಕರೆ ಎಸ್‌ಐಟಿ ನಿಯಮಗಳನ್ನು ಪಾಲಿಸಬೇಕು ಎಂದು ಹೇಳಿದ್ದೇನೆ' ಎಂದು ಹೇಳಿದರು.

'ಈ ವಿಚಾರವಾಗಿ ತನಿಖೆ ನಡೆಯುತ್ತಿ-ರುವಾಗ ಅದರ ಬಗ್ಗೆ ಮಾತನಾಡುವುದು ಸರಿಯಲ್ಲ. ಆ ತನಿಖೆಯು ಯಾವ ದಿಕ್ಕಿನಲ್ಲಿ ನಡೆಯುತ್ತಿದೆ ಎಂದು ಕಾದು ನೋಡಬೇಕು. ಏನೆಲ್ಲ ಆಗಿದೆ ಎಂಬುದು ತನಿಖೆಯಿಂದ ಬಹಿರಂಗವಾಗಬೇಕು. ನಮ್ಮ ಕಾರ್ಯಕರ್ತರು ಯಾರೂ ವಿಡಿಯೊಗಳನ್ನು ಹಂಚಿಕೊಳ್ಳುತ್ತಿಲ್ಲ' ಎಂದರು.

'ಈ ವಿಡಿಯೊಗಳನ್ನು ಯಾರೊಬ್ಬರೂ ಬೇಕೆಂದು ಕೇಳಿ ತರಿಸಿಕೊಳ್ಳುವುದಿಲ್ಲ. ಆದರೆ, ಯಾರೊ ಯಾವುದೋ ಗ್ರೂಪ್‌ಗೆ ಫಾರ್ವರ್ಡ್ ಮಾಡಿರುತ್ತಾರೆ. ಆಗ ಅದು ಮೊಬೈಲ್‌ನಲ್ಲಿ ಸೇವ್ ಆಗಿರುತ್ತದೆ. ಹಾಗೆಂದು ಎಲ್ಲರನ್ನು ಕರೆದುಕೊಂಡು ಹೋಗಿ ಬಂಧಿಸಲು ಆಗುತ್ತದೆಯೇ' ಎಂದರು.

'ಎಸ್‌ಐಟಿ ಅಧಿಕಾರಿಗಳು ಬಂಧಿಸಿರುವುದು ನನ್ನ ಆಪ್ತ ಸಹಾಯಕನಲ್ಲ. ನನ್ನ ಕಚೇರಿಯಲ್ಲಿ 40 ರಿಂದ 50 ಸಿಬ್ಬಂದಿ ಕೆಲಸ ಮಾಡುತ್ತಾರೆ. ಅವರಲ್ಲಿ ಯಾರೋ ಒಬ್ಬರ ಬಳಿ ಪೆನ್‌ಡ್ರೈವ್, ವಿಡಿಯೊ ಇದ್ದು, ಅದನ್ನು ಅವರು ಕಂಪ್ಯೂಟರ್‌ನಲ್ಲಿ ಹಾಕಿ ನೋಡಿದ್ದನ್ನೇ ಅಪರಾಧ ಎಂದು ಪರಿಗಣಿಸಲು ಸಾಧ್ಯವೇ. ಅಮಾಯಕನನ್ನು ಬಂಧಿಸಿದ್ದಾರೆ' ಎಂದು ಹೇಳಿದರು.

'ಪ್ರಜ್ವಲ್‌ನನ್ನು ಭಾರತಕ್ಕೆ ಕರೆತನ್ನಿ'

ಅಲ್ಕಾ ಲಾಂಬಾ

ಮುಂಬೈ (ಪಿಟಿಐ): ಲೈಂಗಿಕ ದೌರ್ಜನ್ಯ ಆರೋಪ ಕೇಳಿಬಂದ ನಂತರ ವಿದೇಶಕ್ಕೆ ಪರಾರಿಯಾಗಿರುವ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ವಾಪಸ್ ಕರೆತರಲು ಸಾಧ್ಯವಾದ ಎಲ್ಲಾ ಪ್ರಯತ್ನ ಮಾಡಿ ಎಂದು ಕಾಂಗ್ರೆಸ್ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಅಲ್ಕಾ ಲಾಂಬಾ ಅವರು, 'ಮೇ 15 ಮತ್ತು 17ರಂದು ಮುಂಬೈನಲ್ಲಿ ನಡೆಯಲಿರುವ ರ‍್ಯಾಲಿ ವೇಳೆ ಮೋದಿ ಅವರಿಗೆ ಕಪ್ಪು ಬಾವುಟ ತೋರಿಸುತ್ತೇವೆ' ಎಂದು ಹೇಳಿದರು.

'ಪ್ರಜ್ವಲ್ ರೇವಣ್ಣ ಅವರನ್ನು ದೇಶಕ್ಕೆ ಕರೆತಂದು ಕರ್ನಾಟಕ ಸರ್ಕಾರಕ್ಕೆ ಒಪ್ಪಿಸಲೇಬೇಕು' ಎಂದು ಆಗ್ರಹಿಸಿದರು.

'ಪ್ರಧಾನಿ ಮತ್ತು ಬಿಜೆಪಿ ನಾಯಕರ ಮೌನವು ಅವರಿಗೆ ಬೆಂಬಲ ನೀಡುವಂತಿದೆ. ಕೇಂದ್ರ ಸರ್ಕಾರವು ಜರ್ಮನಿ ಜೊತೆ ಮಾತುಕತೆ ನಡೆಸಬೇಕು' ಎಂದರು.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಅತ್ಯಾಚಾರ ಪ್ರಕರಣ: ಸಾಕ್ಷ್ಯ ಸಂಗ್ರಹ

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿ ಎಫ್‌ಎಸ್‌ಎಲ್ ತಂಡದ ಅಧಿಕಾರಿಗಳು ಸೋಮವಾರ ಹಾಸನ ಹಾಗೂ ಹೊಳೆನರಸೀಪುರದಲ್ಲಿ ಪರಿಶೀಲನೆ ನಡೆಸಿ, ಸಾಕ್ಷ್ಯ ಸಂಗ್ರಹಿಸಿದರು.

'ಹಾಸನದ ಸಂಸದರ ಸರ್ಕಾರಿ ನಿವಾಸದಲ್ಲಿ ನನ್ನ ಮೇಲೆ ಅತ್ಯಾಚಾರ ನಡೆದಿತ್ತು' ಎಂದು ದೂರು ನೀಡಿದ್ದ ಸಂತ್ರಸ್ತ ಮಹಿಳೆ ಜೊತೆ ಮೇ 4 ರಂದು ಎಸ್‌ಐಟಿ ಅಧಿಕಾರಿಗಳು ಸ್ಥಳ ಮಹಜರು ನಡೆಸಿದ್ದು, ಸಂಸದರ ನಿವಾಸವನ್ನು ವಶಕ್ಕೆ ಪಡೆದಿದ್ದರು.

ಸೋಮವಾರ ಬೆಳಿಗ್ಗೆಯಿಂದಲೇ ಅಲ್ಲಿ ತಪಾಸಣೆ ನಡೆಸಿದ ಅಧಿಕಾರಿಗಳು, ಸಂಜೆ ಸುಮಾರು ನಾಲ್ಕು ಗಂಟೆಯವರೆಗೆ ಪರಿಶೀಲನೆ ನಡೆಸಿದರು. ಆರೋಪಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಸಂಗ್ರಹಿಸಿದರು.

ಇನ್‌ಸ್ಪೆಕ್ಟರ್ ಸ್ವರ್ಣಾ ನೇತೃತ್ವದಲ್ಲಿ ಹೊಳೆನರಸೀಪುರದ ಶಾಸಕ ರೇವಣ್ಣ ಅವರ ಚೆನ್ನಾಂಬಿಕಾ ನಿವಾಸದಲ್ಲಿಯೂ ತಂಡ ಪರಿಶೀಲನೆ ನಡೆಸಿತು.

ರಂಗಭೂಮಿ ಡಿಪ್ಲೊಮಾ: 19ಕ್ಕೆ ಸಂದರ್ಶನ

ಮೈಸೂರು: ಇಲ್ಲಿನ ರಾಮಕೃಷ್ಣನಗರದ 'ನಟನ ರಂಗಶಾಲೆ'ಯು 2024–25ನೇ ಸಾಲಿನ 'ರಂಗಭೂಮಿ ಡಿಪ್ಲೊಮಾ' ಕೋರ್ಸ್‌ಗೆ ನೇರ ಸಂದರ್ಶನ ಪ್ರಕ್ರಿಯೆಯನ್ನು ಮೇ 19ರಂದು ನಡೆಸಲಿದ್ದು, ಆಸಕ್ತರು ಅರ್ಜಿ ಸಲ್ಲಿಸಬಹುದು.

16ರಿಂದ 32 ವರ್ಷದೊಳಗಿನ ಯುವಕ– ಯುವತಿಯರಿಗಾಗಿನ ವಸತಿ ರಹಿತ ಒಂದು ವರ್ಷದ ಕೋರ್ಸ್ ಇದು. ನಿತ್ಯ ಸಂಜೆ 5.30ರಿಂದ ರಾತ್ರಿ 9ರವರೆಗೆ ತರಗತಿಗಳು ನಡೆಯಲಿವೆ. ಅಭಿನಯ, ರಂಗ ಸಿದ್ಧಾಂತ, ಸಂಗೀತ, ಆಂಗಿಕ ಚಲನೆ, ಧ್ವನಿ, ಬೆಳಕು, ನಾಟಕ ತಯಾರಿ, ಪ್ರದರ್ಶನ ಸೇರಿದಂತೆ ರಂಗಭೂಮಿಯ ಪರಿಚಯಾತ್ಮಕ, ಪ್ರಾಯೋಗಿಕ ತರಗತಿಗಳು ಇರಲಿವೆ.

ಆಸಕ್ತರು ಸಂಸ್ಥೆಯ ವೆಬ್‌ಸೈಟ್ www.natanamysuru.org ಅಥವಾ ಕಚೇರಿಯಲ್ಲಿ ಶುಲ್ಕ ಪಾವತಿಸಿ ಅರ್ಜಿ ಪಡೆದು ಅಂಚೆ ಮೂಲಕ ಸಲ್ಲಿಸಬಹುದು.

ಹಲವು ಜಿಲ್ಲೆಗಳಲ್ಲಿ ಮಳೆಯ ಸಿಂಚನ

ಒಂದನೇ ಪುಟದಿಂದ...

ಬಿರುಗಾಳಿ ಸಹಿತ ಸುರಿದ ಮಳೆಯಿಂದಾಗಿ ಮಂಗಳೂರು-ಬೆಂಗಳೂರು ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿಘಾಟ್‌ನಲ್ಲಿ ಮರ ಉರುಳಿ ಬಿದ್ದು 2 ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತವಾಗಿತ್ತು. ಅರಣ್ಯ, ಹೆದ್ದಾರಿ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ಮರ ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನ ಸುತ್ತಮುತ್ತ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆಯಾಗಿದೆ.

ಬಳ್ಳಾರಿ/ವಿಜಯನಗರ ವರದಿ: ಬಳ್ಳಾರಿ ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ. ತೋರಣಗಲ್ ಹೋಬಳಿಯ ತುಮಟಿ ಗ್ರಾಮದಲ್ಲಿ ಭಾರಿ ಮಳೆ, ಗಾಳಿಯಿಂದ ಬಾಳೆ ಬೆಳೆಗೆ ಹಾನಿಯಾಗಿದೆ. ಚಿತ್ರದುರ್ಗದ ಚಳ್ಳಕೆರೆ, ಹೊಳಲ್ಕೆರೆ ಹಾಗೂ ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಉತ್ತಮವಾಗಿ ಮಳೆ ಸುರಿದಿದೆ. ಬಿರುಗಾಳಿ, ಮಿಂಚು ಕಾಣಿಸಿಕೊಂಡಿದ್ದರಿಂದ ಅಲ್ಲಲ್ಲಿ ಮರ, ವಿದ್ಯುತ್ ಕಂಬಗಳು ಧರೆಗೆ ಉರುಳಿವೆ. ಬಿರುಗಾಳಿ ಮಳೆಗೆ ಜಿಲ್ಲೆಯಲ್ಲಿ ಹತ್ತು ಮನೆಗಳಿಗೆ ಭಾಗಶಃ ಹಾನಿಯಾಗಿದೆ. 6 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಐದು ಜಾನುವಾರುಗಳಿಗೆ ತೊಂದರೆಯಾಗಿದೆ ಎಂದು ಜಿಲ್ಲಾಧಿಕಾರಿ ಕಚೇರಿ ಮಾಹಿತಿ ನೀಡಿದೆ.

ದಾವಣಗೆರೆ ವರದಿ: ಜಿಲ್ಲೆಯ ಹರಿಹರ, ಜಗಳೂರು, ಚನ್ನಗಿರಿ ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದೆ. ಮಳೆ ಬಿದ್ದಿರುವ ಗ್ರಾಮಗಳಲ್ಲಿ ಮುಂಗಾರು ಹಂಗಾಮಿನ ಬಿತ್ತನೆಗೆ ರೈತರು ಭೂಮಿ ಹಸನು ಮಾಡಿಕೊಂಡಿದ್ದಾರೆ.

ಮಳೆ ಪ್ರಮಾಣ (ಸೆಂ.ಮೀ.ಗಳಲ್ಲಿ)

ಎಲ್ಲಿ	ಎಷ್ಟು
ರಾಯಚೂರು ಜಿಲ್ಲೆ	
ರಾಯಚೂರು ನಗರ	9.62
ದೇವಸುಗೂರು	9.36
ಯರಗೇರಾ	8.6
ಯರಮರಸ್	7.82
ಕಲ್ಲೂರು, ಸಿರವಾರ ತಾಲ್ಲೂಕು	7.5
ಗಬ್ಬೂರು, ದೇವದುರ್ಗ ತಾಲ್ಲೂಕು	7.1
ಹಾಸನ ಜಿಲ್ಲೆ	
ಯಸಳೂರು, ಸಕಲೇಶಪುರ ತಾಲ್ಲೂಕು	9.3
ಹೆತ್ತೂರು	5.7
ಹಿರೀಸಾವೆ, ಚನ್ನರಾಯಪಟ್ಟಣ ತಾಲ್ಲೂಕು	5.8
ಬಳ್ಳಾರಿ ಜಿಲ್ಲೆ	
ವಿಠಲಾಪುರ	4.82
ಬಳ್ಳಾರಿ ನಗರ	3.45
ವಿಜಯನಗರ ಜಿಲ್ಲೆ	
ತೌಡೂರು (ಹರಪನಹಳ್ಳಿ ತಾಲ್ಲೂಕು)	6.46
ಚಿತ್ರದುರ್ಗ ಜಿಲ್ಲೆ	
ಡಿ.ಮರಿಕುಂಟೆ	5.1
ಶ್ರೀರಾಂಪುರ	3.5
ದಾವಣಗೆರೆ ಜಿಲ್ಲೆ	
ಸೊಕ್ಕೆ, ಜಗಳೂರು ತಾಲ್ಲೂಕು	6
ಜೋಳದಹಾಳ (ಚನ್ನಗಿರಿ)	4

ಕಾಣೆಯಾದ ಮಕ್ಕಳು ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಅನುಷ್ಕಾ

ವಿಜಯ

ಮಿಹಿರ್

ವಿಜಯಪುರ: ನಗರದಲ್ಲಿ ಭಾನುವಾರ ಕಾಣೆಯಾಗಿದ್ದ ಮೂವರು ಮಕ್ಕಳು ಇಂಡಿ ರಸ್ತೆಯ ಒಳಚರಂಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ನೀರಿನಲ್ಲಿ ಸೋಮವಾರ ಶವವಾಗಿ ಪತ್ತೆಯಾಗಿದ್ದಾರೆ.

ಗದಗಿನ ಅನುಷ್ಕಾ (9), ವಿಜಯ (7) ಮತ್ತು ವಿಜಯಪುರದ ಮಿಹಿರ್ ಜಾನಗೌಳಿ (7) ಮೃತರು. ಬೇಸಿಗೆ ರಜೆಗೆಂದು ತಾಯಿಯೊಂದಿಗೆ ಅಮಿಷ್ಕಾ ಮತ್ತು ವಿಜಯ, ವಿಜಯಪುರದ ಅಜ್ಜಿಯ ಮನೆಗೆ ಬಂದಿದ್ದರು. ಭಾನುವಾರ ಮನೆಯಲ್ಲಿದ್ದ ಮಿಹಿರ್ ಜೊತೆ ಅವರಿಬ್ಬರೂ ಸಮೀಪದಲ್ಲೇ ಒಂಟೆ ಸವಾರಿ ಮಾಡಿದ್ದಾರೆ. ನಂತರ ಒಂಟೆಗಳನ್ನು ಹುಡುಕುತ್ತ ಮನೆ ಸಮೀಪದ ಚಾಬುಕಸಾಬ್ ದರ್ಗಾ ಬಳಿಯಿರುವ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕದಲ್ಲಿ ಕಾಲು ಜಾರಿ ಬಿದ್ದಿದ್ದಾರೆ. ಮಕ್ಕಳು ಕಾಣೆಯಾದ ಬಗ್ಗೆ ಪೋಷಕರು ದೂರು ನೀಡಿದ ಹಿನ್ನೆಲೆಯಲ್ಲಿ ಸೋಮವಾರ ಹುಡುಕಾಟ ನಡೆಸಿದಾಗ, ಮೂವರು ಸಂಸ್ಕರಣಾ ಘಟಕದಲ್ಲಿ ಶವವಾಗಿ ಪತ್ತೆಯಾದರು' ಎಂದು ಎಪಿಎಂಸಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪೋಷಕರ ಪ್ರತಿಭಟನೆ: 'ಒಳಚರಂಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಮಹಾನಗರ ಪಾಲಿಕೆಯು ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿ ಮೃತ ಮಕ್ಕಳ ಪೋಷಕರು ಪ್ರತಿಭಟನೆ ನಡೆಸಿದರು.

'ಘಟಕದ ಸುತ್ತಲೂ ತಂತಿಬೇಲಿ, ತಡೆಗೋಡೆ ನಿರ್ಮಾಣ, ಸ್ಥಳದಲ್ಲಿ ಕಾವಲುಗಾರರ ವ್ಯವಸ್ಥೆ ಸೇರಿ ಯಾವುದೇ ಸುರಕ್ಷತಾ ಕ್ರಮ ಕೈಗೊಂಡಿಲ್ಲ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ತೈಲಾಭಿಷೇಕ ಕೊಟ್ಟೂರು ತಾಲ್ಲೂಕು ಉಜ್ಜಯಿನಿ ಪೀಠದಲ್ಲಿ ಸೋಮವಾರ ಸಂಜೆ ಶಿಖರ ತೈಲಾಭಿಷೇಕ ಸಂಭ್ರಮದಿಂದ ಜರುಗಿತು

ಪ್ರಜಾವಾಣಿ ಚಿತ್ರ

ಸಿಇಟಿ: 12ನೇ ತರಗತಿ ಅಂಕ ದಾಖಲು ಶುರು

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದ ಸಿಬಿಎಸ್‌ಇ, ಐಸಿಎಸ್‌ಇ ಸೇರಿ 12ನೇ ತರಗತಿ ವಿದ್ಯಾರ್ಥಿಗಳು ತಮ್ಮ ಅಂಕಗಳನ್ನು ದಾಖಲಿಸಲು ಮೇ 20ರವರೆಗೆ ಅವಕಾಶ ನೀಡಲಾಗಿದೆ.

ಮೇ 14ರಿಂದ 20ರವರೆಗೆ ಆನ್‌ಲೈನ್ ಪೋರ್ಟಲ್ ಮೂಲಕ ಅಂಕಗಳನ್ನು ದಾಖಲಿಸಬಹುದು. ನಿಗದಿತ ಲಿಂಕ್‌ನಲ್ಲಿ ಅಂಕಗಳನ್ನು ದಾಖಲಿಸಿ, ಅಂಕಪಟ್ಟಿಯ ಪಿಡಿಎಫ್ ಪ್ರತಿಯನ್ನು ತಪ್ಪದೆ ಅಪ್‌ಲೋಡ್ ಮಾಡಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

2024ಕ್ಕಿಂತ ಹಿಂದಿನ ವರ್ಷಗಳಲ್ಲಿ ದ್ವಿತೀಯ ಪಿಯು ತೇರ್ಗಡೆ ಹೊಂದಿದ ವಿದ್ಯಾರ್ಥಿಗಳೂ ಅಂಕಗಳನ್ನು ದಾಖಲಿಸಬೇಕು. ಪ್ರಸಕ್ತ ವರ್ಷ ತೇರ್ಗಡೆಯಾದ ಪಿಯು ವಿದ್ಯಾರ್ಥಿಗಳ ಅಂಕಗಳನ್ನು ಪ್ರಾಧಿಕಾರ ನೇರವಾಗಿ ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ಪಡೆದುಕೊಳ್ಳುತ್ತದೆ.

ಹೆಚ್ಚಿನ ವಿವರಗಳಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಸಂಪರ್ಕಿಸಬಹುದು.

बी ई एम एल
beml NEW FRONTIERS. NEW DREAMS
BEML LIMITED
(A Govt. of India Mini Ratna Company under Ministry of Defence)
Bangalore Complex, Post Box: 7501, New Thippasandra Post, Bangalore-560075

NOTICE INVITING TENDER
e tender through BEML SRM Portal

BEML LIMITED, BANGALORE COMPLEX invites Public Tender-E mode (TWO Bid System) for civil works tender ref: 6300038819 for **Construction of Pre-engineered buildings at Eastern side of existing production hangar for extended Line 3A Metro production and associated works at BEML Limited, Bangalore complex in EPC Mode (Design and Build basis).**

Approx. estimated value : **Rs. 88.00 Crores**
EMD amount : **Rs. 1,76,00,000/-**
Last date & time for submission of bids : **07.06.2024 upto 16.30 Hrs.**
Further details of tender can be obtained from following website:
https://www.bemlindia.in/tenders/active-tenders/ Bangalore complex
SRM Portal : **https://www.bemlindia.in/eprocurement/demo.php**
Bidders are advised to visit above websites frequently for any corrigendum, extension, etc.

Sd/- Asst. General Manager

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.-16032024-253161
CG-DL-E-16032024-253161
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY
No. 1361] NEW DELHI, SATURDAY, MARCH 16, 2024/PHALGUNA 26, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ನವದೆಹಲಿ
ನವದೆಹಲಿ, ದಿನಾಂಕ : 15–03–2024

ಅಧಿಸೂಚನೆ

ಎಸ್.ಓ.ನಂ.1427(ಇ) ಕೇಂದ್ರ ಸರಕಾರಕ್ಕೆ ಪ್ರಸ್ತುತ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಶೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ರಾಯಚೂರು ಜಿಲ್ಲೆಯಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–150ಎ ರಲ್ಲಿ (ಜೇವರ್ಗಿ–ಚಾಮರಾಜನಗರ ಸೆಕ್ಷನ್) ರಸ್ತೆಯ ಕಿಮೀ 144.220 ರಿಂದ ಕಿಮೀ 151.760 ವರೆಗೆ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂ–ಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂದು ಕಂಡು ಬಂದಿರುತ್ತದೆ, ಆದಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ಕಲಂ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂ–ಸ್ವಾಧೀನ ಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂ–ಮಾಲೀಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಇದ್ದವರು ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ವಿಶೇಷ ಭೂ–ಸ್ವಾಧೀನಾಧಿಕಾರಿಗಳು ರಾಷ್ಟ್ರೀಯ ಹೆದ್ದಾರಿ ಧಾರಡಾಡ ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಯಿಸಿ ಈ ಬಗ್ಗೆ ಇತರ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು. ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ರ ಪ್ರಕಾರ ನಿಯಮ 3ಸಿ (2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ. ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಇದ್ದವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ: ಈ ಕೆಳಕಂಡ ಶೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯ ವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಸಹಿ/–
ವಿಶೇಷ ಭೂ–ಸ್ವಾಧೀನಾಧಿಕಾರಿಗಳು,
ರಾಷ್ಟ್ರೀಯ ಹೆದ್ದಾರಿ, ಧಾರವಾಡ

ಅನುಸೂಚಿ

ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯಲ್ಲಿ ಹಾಯ್ದು ಹೋಗಿರುವ (ಜೇವರ್ಗಿ ಚಾಮರಾಜನಗರ ಸೆಕ್ಷನ್) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–150ಎ ರಲ್ಲಿ (ಜೇವರ್ಗಿ–ಚಾಮರಾಜನಗರ ಸೆಕ್ಷನ್) ರಸ್ತೆಯ ಕಿಮೀ 144.220 ರಿಂದ ಕಿಮೀ 151.760 ವರೆಗೆ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ :– ಕರ್ನಾಟಕ ಜಿಲ್ಲೆ : ರಾಯಚೂರು

ಅ ನಂ.	ಸರ್ವೇ ನಂ.	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಚದರ ಮೀಟರಗಳಲ್ಲಿ)	ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)
1	2	3	4	5	6
ಗ್ರಾಮ : ಮಸ್ಕಿ					ತಾಲೂಕ : ಮಸ್ಕಿ
1	254	ಖಾಸಗಿ	ಖುಷ್ಕಿ	850.1 (ಚದರ ಮೀಟರ)	0.08501
2	261	ಖಾಸಗಿ	ಖುಷ್ಕಿ	13 (ಚದರ ಮೀಟರ)	0.0013
3	271	ಖಾಸಗಿ	ಖುಷ್ಕಿ	2727.2 (ಚದರ ಮೀಟರ)	0.27272
4	293	ಖಾಸಗಿ	ಖುಷ್ಕಿ	6576.05 (ಚದರ ಮೀಟರ)	0.657605
5	296	ಖಾಸಗಿ	ಖುಷ್ಕಿ	1368.2 (ಚದರ ಮೀಟರ)	0.13682
6	329	ಖಾಸಗಿ	ಖುಷ್ಕಿ	15783.1 (ಚದರ ಮೀಟರ)	1.57831
7	35	ಖಾಸಗಿ	ಖುಷ್ಕಿ	1595.44 (ಚದರ ಮೀಟರ)	0.159544
8	354/2	ಖಾಸಗಿ	ಖುಷ್ಕಿ	21853.5 (ಚದರ ಮೀಟರ)	2.18535
9	36	ಖಾಸಗಿ	ಖುಷ್ಕಿ	404.68 (ಚದರ ಮೀಟರ)	0.040468
10	360	ಖಾಸಗಿ	ಖುಷ್ಕಿ	1034.42 (ಚದರ ಮೀಟರ)	0.103442
11	384	ಖಾಸಗಿ	ಖುಷ್ಕಿ	2069.13 (ಚದರ ಮೀಟರ)	0.206913
12	387/2	ಖಾಸಗಿ	ಖುಷ್ಕಿ	11129.1 (ಚದರ ಮೀಟರ)	1.11291
13	407	ಖಾಸಗಿ	ಖುಷ್ಕಿ	267.68 (ಚದರ ಮೀಟರ)	0.026768
14	408	ಖಾಸಗಿ	ಖುಷ್ಕಿ	329.9 (ಚದರ ಮೀಟರ)	0.03299
15	413	ಖಾಸಗಿ	ಖುಷ್ಕಿ	78.48 (ಚದರ ಮೀಟರ)	0.007848
				ಒಟ್ಟು	**6.607998**

[F. No. RW/NH/150A/KNT/2021-22-951/3A]
ABHAY JAIN, Dy. Secy.

❦ ಸುಭಾಷಿತ ❦

ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.

–ಶಿವರಾಮ ಕಾರಂತ

ದಾಭೋಲ್ಕರ್ ಹತ್ಯೆ ಪ್ರಕರಣ ಸಂಪೂರ್ಣ ನ್ಯಾಯ ದೊರೆಯಿತೇ?

ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರ ಹತ್ಯೆ ನಡೆದ 11 ವರ್ಷಗಳ ನಂತರ, ಹತ್ಯೆಯ ಆರೋಪಿಗಳಿಗೆ ಶಿಕ್ಷೆ ಆಗಿದೆ. ಆದರೆ, ನ್ಯಾಯದಾನ ವಿಳಂಬವಾದ ಪರಿಣಾಮವಾಗಿ ನ್ಯಾಯದ ನಿರಾಕರಣೆಯೂ ಆಗಿದೆ. ಈ ಹತ್ಯೆಗೆ ಸಂಬಂಧಿಸಿದ ಎಲ್ಲರಿಗೂ ಶಿಕ್ಷೆ ಕೊಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ. ದಾಭೋಲ್ಕರ್ ಅವರನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ ಇಬ್ಬರನ್ನು ಪುಣೆಯ ವಿಶೇಷ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆಗೆ ಗುರಿಪಡಿಸಿದೆ. ಆದರೆ ಈ ಹತ್ಯೆ ಪ್ರಕರಣದ ಹಿಂದಿನ ಪಿತೂರಿಯಲ್ಲಿ ಭಾಗಿಯಾಗಿದ್ದ ಆರೋಪ ಹೊತ್ತಿದ್ದ ಇತರ ಮೂವರನ್ನು ಖುಲಾಸೆಗೊಳಿಸಲಾಗಿದೆ. ಹೀಗೆ ಖುಲಾಸೆಗೊಂಡವರಲ್ಲಿ ವೀರೇಂದ್ರ ಸಿಂಗ್ ತಾವಡೆ ಅವರೂ ಸೇರಿದ್ದಾರೆ. ಈ ವ್ಯಕ್ತಿಯೇ ಮುಖ್ಯ ಸಂಚುಗಾರ ಎಂದು ಪ್ರಕರಣದ ತನಿಖೆ ನಡೆಸಿದ ಸಿಬಿಐ ಆರೋಪಿಸಿತ್ತು. ಐದೂ ಮಂದಿ ಆರೋಪಿಗಳು ಹಿಂದುತ್ವವಾದಿ ಸಂಘಟನೆಯಾದ ಸನಾತನ ಸಂಸ್ಥೆ ಜೊತೆ ನಂಟು ಹೊಂದಿದ್ದರು ಎಂದು ಸಿಬಿಐ ಹೇಳಿತ್ತು. ಆದರೆ, ಐದೂ ಮಂದಿಯ ಪೈಕಿ ಮೂವರ ವಿರುದ್ಧದ ಆರೋಪಗಳನ್ನು ಸಾಬೀತು ಮಾಡುವಲ್ಲಿ ತನಿಖಾ ಸಂಸ್ಥೆಯು ವಿಫಲವಾಗಿದೆ. ನ್ಯಾಯಾಲಯವು ಸಿಬಿಐ ಕುರಿತು ಕೆಲವು ಕಟುವಾದ ಮಾತುಗಳನ್ನು ಆಡಿದೆ. ಮೂವರನ್ನು ಖುಲಾಸೆಗೊಳಿಸುತ್ತಿರುವುದು ಅವರು ಹತ್ಯೆಯಲ್ಲಿ ಯಾವುದೇ ಪಾತ್ರ ವಹಿಸಿಲ್ಲ ಎಂಬ ಕಾರಣಕ್ಕಾಗಿ ಅಲ್ಲ; ಬದಲಿಗೆ, ಪ್ರಕರಣದ ತನಿಖೆಯನ್ನು ನಡೆಸಿದ ಮಹಾರಾಷ್ಟ್ರ ಪೊಲೀಸರು ಮತ್ತು ಸಿಬಿಐ ಅಧಿಕಾರಿಗಳು ತಮ್ಮ ಪಾಲಿನ ಕೆಲಸವನ್ನು ನಿರ್ವಹಿಸುವಲ್ಲಿ ವಿಫಲರಾಗಿರುವುದು ಢಾಳಾಗಿ ಎಂದು ಕೋರ್ಟ್ ಹೇಳಿದೆ.



ಕೋರ್ಟ್‌ನ ಟೀಕೆಗಳು ಹಾಗೂ ಅದು ಹೇಳಿರುವ ಮಾತುಗಳು ಬಹಳ ಗಂಭೀರವಾದವು. ರಾಷ್ಟ್ರ ಮಟ್ಟದಲ್ಲಿ ಸದ್ದು ಮಾಡಿದ ಪ್ರಕರಣವೊಂದನ್ನು ಸರಿಯಾಗಿ ನಿಭಾಯಿಸದೆ ಇದ್ದುದನ್ನು ಆ ಮಾತುಗಳು ದೃಢಪಡಿಸುತ್ತವೆ. ಹತ್ಯೆಯ ಹಿಂದೆ ಪಿತೂರಿ ಇತ್ತು, ನಿರ್ದಿಷ್ಟ ವ್ಯಕ್ತಿಗಳ ವಿರುದ್ಧ ಪಿತೂರಿಯ ಆರೋಪ ಇತ್ತು ಎಂಬುದು ಕೋರ್ಟ್‌ಗೆ ಮನವರಿಕೆ ಆಗಿದೆ. ತಾವಡೆ ಅವರು ಹತ್ಯೆ ಮಾಡುವ ಉದ್ದೇಶ ಹೊಂದಿದ್ದರು ಎಂಬುದಕ್ಕೆ ಆಧಾರ ಇದೆ ಎಂದು ಕೋರ್ಟ್ ಹೇಳಿದೆ. ಅಲ್ಲದೆ, ಖುಲಾಸೆಗೊಂಡ ಇತರ ಇಬ್ಬರಾದ ಸಂಜೀವ್ ಪುನಾಳೇಕರ್ ಮತ್ತು ವಿಕ್ರಂಭಾವೆ ವಿರುದ್ಧ ಸಕಾರಣದ ಅನುಮಾನ ಇದೆ ಎಂದೂ ಅದು ಹೇಳಿದೆ. ಆದರೆ ಇವರಿಬ್ಬರ ಮೇಲಿನ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ಕೂಡ ಪ್ರಾಸಿಕ್ಯೂಷನ್ ವಿಫಲವಾಯಿತು. ಆರೋಪಿಗಳ ಪರ ವಕೀಲರ ನಡೆಯ ಬಗ್ಗೆ ಕೋರ್ಟ್ ಮಹತ್ವದ ಕೆಲವು ಮಾತುಗಳನ್ನು ಹೇಳಿದೆ. ಆ ವಕೀಲರು 'ದಾಭೋಲ್ಕರ್ ಅವರನ್ನು ಹಿಂದೂ ವಿರೋಧಿ ಎಂದು ಚಿತ್ರಿಸಿ, ಅವರ ಹತ್ಯೆಯನ್ನು ಸಮರ್ಥಿಸುವಂತೆ' ನಡೆದುಕೊಂಡಿದ್ದರು ಎಂದು ಹೇಳಿದೆ. ದಾಭೋಲ್ಕರ್ ಅವರ ಹತ್ಯೆ ಅವರು ಪಾಲಿಸುತ್ತಿದ್ದ ಸಿದ್ಧಾಂತವನ್ನು ಅಂತ್ಯಗೊಳಿಸುವ ಉದ್ದೇಶವನ್ನು ಹೊಂದಿತ್ತು ಎಂದು ನ್ಯಾಯಾಲಯ ಹೇಳಿದೆ. ಈ ಕಾರಣಕ್ಕಾಗಿಯೇ ಇಡೀ ಪ್ರಕರಣವನ್ನು ಹಾಗೂ ಪ್ರಕರಣವನ್ನು ನಿಭಾಯಿಸಿದ ಬಗೆಯನ್ನು ವಿಸ್ತೃತ ನೆಲೆಯಲ್ಲಿ ನೋಡಬೇಕಾದ ಅಗತ್ಯ ಇದೆ.

> ಇಡೀ ಪ್ರಕರಣವನ್ನು ಹಾಗೂ ಪ್ರಕರಣವನ್ನು ನಿಭಾಯಿಸಿದ ಬಗೆಯನ್ನು ವಿಸ್ತೃತ ನೆಲೆಯಲ್ಲಿ ನೋಡಬೇಕಾದ ಅಗತ್ಯ ಇದೆ

ದಾಭೋಲ್ಕರ್ ಅವರು ವೈಜ್ಞಾನಿಕ ಮನೋಧರ್ಮದ ಅಗತ್ಯವನ್ನು ಪ್ರತಿಪಾದಿಸುತ್ತಿದ್ದರು. 2005ರಲ್ಲಿ ಮಹಾರಾಷ್ಟ್ರದಲ್ಲಿ ರೂಪುಗೊಂಡ ಅಂಧಶ್ರದ್ಧೆ ವಿರೋಧಿ ಮಸೂದೆಯ ಹಿಂದಿನ ಚಾಲಕ ಶಕ್ತಿಯೂ ಅವರಾಗಿದ್ದರು. ಈ ಮಸೂದೆಗೆ ಹಲವು ಬಲಪಂಥೀಯ ಸಂಘಟನೆಗಳು ವಿರೋಧ ದಾಖಲಿಸಿದ್ದವು. ದಾಭೋಲ್ಕರ್ ಹತ್ಯೆಯ ನಂತರದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಹಲವು ಹತ್ಯೆಗಳು ನಡೆದವು. ವಿಚಾರವಾದಿ ಚಿಂತಕ ಗೋವಿಂದ ಪಾನ್ಸರೆ, ಸಂಶೋಧಕ ಎಂ.ಎಂ. ಕಲಬುರ್ಗಿ, ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆಗಳು ಇಲ್ಲಿ ಪ್ರಮುಖವಾದವು. ಈ ಎಲ್ಲ ಹತ್ಯೆಗಳಿಗೆ ಒಂದು ಸಂಬಂಧ ಇದೆ ಎಂಬುದು ನಂತರದಲ್ಲಿ ಹೆಚ್ಚೆಚ್ಚು ಸ್ಪಷ್ಟವಾಯಿತು. ಅಷ್ಟೇ ಅಲ್ಲ, ಈ ಪ್ರಕರಣಗಳ ತನಿಖೆಯ ಮೇಲೆ ರಾಜಕೀಯವು ಪ್ರಭಾವ ಬೀರಿತು ಎಂಬುದು ಕೂಡ ಸ್ಪಷ್ಟವಾಯಿತು. ದಾಭೋಲ್ಕರ್ ಅವರ ಹತ್ಯೆ ಆಗಿದ್ದು 2013ರಲ್ಲಿ. ಅವರ ಹತ್ಯೆಯ ಆರೋಪಿಗಳ ಬಂಧನ ಆಗಿದ್ದು 2018ರಲ್ಲಿ. ತನಿಖೆಯು ವೇಗವಾಗಿ ನಡೆಯುತ್ತಿಲ್ಲ, ಸಮರ್ಪಕವಾಗಿ ಆಗುತ್ತಿಲ್ಲ ಎಂಬ ಸೂಚನೆಗಳು ಆರಂಭದಿಂದಲೂ ಇದ್ದವು. ದಾಭೋಲ್ಕರ್ ಅವರ ಹತ್ಯೆಯ ನಂತರದಲ್ಲಿ ಇದ್ದ ರಾಜಕೀಯ ವಾತಾವರಣ ಕೂಡ ಹತ್ಯೆಯ ತನಿಖೆಯ ಮೇಲೆ, ಪ್ರಾಸಿಕ್ಯೂಷನ್ ಮೇಲೆ ಪ್ರಭಾವ ಉಂಟುಮಾಡಿರಬಹುದು. ಹತ್ಯೆಯ ಹಿಂದಿನ ಪಿತೂರಿಯು ಸಂಪೂರ್ಣವಾಗಿ ಬಹಿರಂಗವಾದ ನಂತರದಲ್ಲಿ, ಹತ್ಯೆಯಲ್ಲಿ ಭಾಗಿಯಾದ ಎಲ್ಲರಿಗೂ ಶಿಕ್ಷೆಯಾದ ನಂತರದಲ್ಲಿ ಮಾತ್ರವೇ ನ್ಯಾಯದಾನ ಸಂಪೂರ್ಣವಾಗಿ ಆಗಿದೆ ಎಂದು ಹೇಳಬಹುದು.

ದಿನದ ಟ್ವೀಟ್

ಕರಾವಳಿಯ ಸೊಬಗು

ಮಳೆಯಿಂದ ಕರಾವಳಿ ಕರ್ನಾಟಕವು ಕಂಗೊಳಿಸುತ್ತಿದೆ. ದೇವರು ತನ್ನ ನಾಡನ್ನು ಸೃಷ್ಟಿಸಿಕೊಂಡ ನಂತರ ಕರಾವಳಿ ಕರ್ನಾಟಕವನ್ನು ಸೃಷ್ಟಿಸಿದ.

ದೀಪಕ್ ಪ್ರಭು

ಕಿಡಿನುಡಿ

ಸಾಮಾನ್ಯ ವ್ಯಕ್ತಿಯೊಬ್ಬ ಶಾಸಕನಿಗೆ ತಿರುಗಿಸಿ ಹೊಡೆದದ್ದು ಇಷ್ಟವಾಯಿತು. ಆದರೆ ರಾಜಕೀಯ ಗೂಂಡಾಗಳ ದಾಳಿಯಿಂದ ಆ ವ್ಯಕ್ತಿಯನ್ನು ರಕ್ಷಿಸಲು ಸ್ಥಳದಲ್ಲಿದ್ದ ಜನಸಂದಣಿಯಲ್ಲಿ ಯಾರೊಬ್ಬರೂ ಮುಂದೆ ಬಾರದಿದ್ದುದು ದುಃಖಕರ.

(ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯಲ್ಲಿ ಮತ ಹಾಕಲು ತಾವು ಸರದಿಯಲ್ಲಿ ನಿಲ್ಲದಿದ್ದುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಮತದಾರನಿಗೆ ವೈಎಸ್‌ಆರ್‌ಸಿಪಿ ಶಾಸಕ, ತೆನಾಲಿ ಕ್ಷೇತ್ರದ ಅಭ್ಯರ್ಥಿ ಎ. ಶಿವಕುಮಾರ್ ಅವರು ಕೆನ್ನೆಗೆ ಹೊಡೆದ ಪ್ರಕರಣಕ್ಕೆ ಪ್ರತಿಕ್ರಿಯೆ)

ಸ್ನೇಹೇಶ್ ಅಲೆಕ್ಸ್ ಫಿಲಿಪ್, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 14-5-1999

• **ಏಕಕಾಲದಲ್ಲಿ ಚುನಾವಣೆಗೆ ಪಟೇಲ್ ವಿರೋಧ**

ಮೈಸೂರು, ಮೇ 13– ರಾಜ್ಯದಲ್ಲಿ ಲೋಕಸಭೆ ಮತ್ತು ವಿಧಾನಸಭೆಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದನ್ನು ತಮ್ಮ ಸರ್ಕಾರ ವಿರೋಧಿಸಿದ್ದು, ಈ ಸಂಬಂಧ ಕಾನೂನು ಮತ್ತು ಸಂಸದೀಯ ಸಚಿವ ಎಂ.ಸಿ. ನಾಣಯ್ಯ ಅವರು ಮುಖ್ಯ ಚುನಾವಣಾ ಕಮಿಷನರ್ ಅವರನ್ನು ಶೀಘ್ರದಲ್ಲಿಯೇ ಭೇಟಿ ಮಾಡಿ ಚರ್ಚಿಸಲಿದ್ದಾರೆ ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ಸರ್ಕಾರದ ಅಧಿಕಾರದ ಅವಧಿ ಡಿ.16ಕ್ಕೆ ಮುಗಿಯುತ್ತದೆ. ಈ ಅವಧಿಯನ್ನು ಕಡಿತ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಅವಧಿ ಮುಗಿಯುವ 3 ವಾರಗಳ ಮುಂಚೆ ಚುನಾವಣೆ ನಡೆಸಿದರೆ ಸಾಕು. ಇದಕ್ಕಿಂತ ಹೆಚ್ಚಾಗಿ ರಾಜ್ಯ ಸರ್ಕಾರದ ಜತೆ ಚರ್ಚಿಸದೆ ಚುನಾವಣಾ ಆಯೋಗ ಏಕಾಏಕಿ ದಿನಾಂಕ ನಿಗದಿ ಮಾಡಲಾಗದು ಎಂದು ಸುದ್ದಿಗಾರರಿಗೆ ತಿಳಿಸಿದರು.

ವಿಧಾನಸಭೆಗೆ ಪ್ರತ್ಯೇಕವಾಗಿ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗವನ್ನು ಕೋರುವ ಸಂಬಂಧವಾಗಿ ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಎಂದೂ ಅವರು ಹೇಳಿದರು.

• **ದೇವರ ಕಲಶ ಬಿದ್ದು ಗಾಯಗೊಂಡ ಸಿದ್ದರಾಮಯ್ಯ**

ಮೈಸೂರು, ಮೇ 13– ಮೈಸೂರು ತಾಲ್ಲೂಕು ಸಿದ್ಧರಾಮನ ಹುಂಡಿಯ ಸಿದ್ಧರಾಮೇಶ್ವರ ದೇವಾಲಯದ ಉತ್ಸವದಲ್ಲಿ ಇಂದು ಭಾಗವಹಿಸಿದ್ದ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತಲೆಯ ಮೇಲೆ ಆಕಸ್ಮಿಕವಾಗಿ ದೇವರ ಕಲಶ ಬಿದ್ದದ್ದರಿಂದ ಅವರು ಗಾಯಗೊಂಡರು.

ಸಿದ್ದರಾಮಯ್ಯ ಅವರ ಸ್ವಗ್ರಾಮದಲ್ಲಿ ಇಂದು ಸಿದ್ಧರಾಮೇಶ್ವರ ದೇವರ ಪ್ರತಿಷ್ಠಾಪನೆ ನೆರವೇರಿಸುವ ಕಾರ್ಯಕ್ರಮವಿತ್ತು. ಅದರ ಅಂಗವಾಗಿ ದೇವರ ಮೆರವಣಿಗೆ ಇತ್ತು. ದೇವರ ಕಲಶ ಹೊರುವವರ ಪಕ್ಕದಲ್ಲೇ ಉಪಮುಖ್ಯಮಂತ್ರಿ ಇದ್ದುದರಿಂದ ಕಲಶ ಜಾರಿ ಅವರ ತಲೆಯ ಮೇಲೆ ಬಿತ್ತು ಎನ್ನಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 14-5-1974

• **ಗಿರಿ ಮಧ್ಯಪ್ರವೇಶಕ್ಕಾಗಿ ಸಂಸತ್ ವಿರೋಧ ಪಕ್ಷ ನಾಯಕರ ಒತ್ತಾಯ**

ನವದೆಹಲಿ, ಮೇ 13– ರೈಲ್ವೆ ನೌಕರರ ಮುಷ್ಕರ ಇಂದು ಆರನೆಯ ದಿನಕ್ಕೆ ಕಾಲಿಟ್ಟಂತೆ, ಹಿರಿಯ ಕಾರ್ಮಿಕ ನಾಯಕರೂ ರೈಲ್ವೆ ನೌಕರರ ಒಕ್ಕೂಟದ ಅಧ್ಯಕ್ಷರೂ ಆದ ರಾಷ್ಟ್ರಪತಿ ವಿ.ವಿ. ಗಿರಿಯವರು ಮಧ್ಯಪ್ರವೇಶ ಮಾಡಿ ವಿವಾದ ಬಗೆಹರಿಸಬೇಕೆಂದು ಸಂಸತ್ತಿನ ವಿರೋಧ ಪಕ್ಷಗಳ ನಾಯಕರು ಆಗ್ರಹಪಡಿಸಿದ್ದಾರೆ.

ಆರು ವಿರೋಧ ಪಕ್ಷಗಳಿಗೆ ಸೇರಿದ ಎಂಟು ಮಂದಿ ಸಂಸತ್ ಸದಸ್ಯರು ಇಂದು ರಾಷ್ಟ್ರಪತಿಯವರನ್ನು ಭೇಟಿ ಮಾಡಿ ಅವರ ಮಧ್ಯಪ್ರವೇಶಕ್ಕೆ ಒತ್ತಾಯಪಡಿಸುವ ಮನವಿ ಪತ್ರವನ್ನು ಸಲ್ಲಿಸಿದರು.

• **ಮುಂಬೈನಲ್ಲಿ 5 ಸಾವಿರ ಮಂದಿ ವಜಾ**

ನವದೆಹಲಿ, ಮೇ 13– ಮುಷ್ಕರದಲ್ಲಿ ಪಾಲ್ಗೊಂಡ ಸುಮಾರು ಐದು ಸಾವಿರ ಮಂದಿ ಹಂಗಾಮಿ ನೌಕರರನ್ನು ಸೇವೆಯಿಂದ ವಜಾ ಮಾಡಲು ಮಧ್ಯರೈಲ್ವೆಯು ನಿರ್ಧರಿಸಿದೆ.

ಪಶ್ಚಿಮ ರೈಲ್ವೆಯೂ ಮುಷ್ಕರದಲ್ಲಿ ಪಾಲ್ಗೊಂಡಿರುವ ನೌಕರರನ್ನು ವಜಾ ಮಾಡುವ ನಿರ್ಧಾರ ತಾಳಿದೆ. ಇವೆರಡೂ ಮುಂಬಯಿ ವಿಭಾಗದಲ್ಲಿ ಮುಷ್ಕರದ ತೀವ್ರ ಬಿಸಿ ತಾಕಿದ ರೈಲ್ವೆಗಳು.

ಅಂಕಗಳನ್ನಷ್ಟೇ ಆಧರಿಸಿ ಮುಂದಿನ ಓದಿಗೆ ಕೋರ್ಸ್ ಆಯ್ದುಕೊಳ್ಳುವುದು ಸಮಂಜಸವಾಗಲಾರದು

ಕೋರ್ಸ್ ಆಯ್ಕೆ: ಬದಲಾಗಲಿ ಮಾನದಂಡ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಪರೀಕ್ಷೆಯ ಫಲಿತಾಂಶ ಬಂದ ತಕ್ಷಣ, ಮುಂದೆ ಏನನ್ನು ಓದಬೇಕು ಎಂಬ ಚಿಂತನೆಗೆ ವೈಯಕ್ತಿಕ ಮಹತ್ವವಿದೆ. ಇತ್ತೀಚಿನ ದಿನಗಳಲ್ಲಿ ಅದು ಸಾರ್ವಜನಿಕ ಮಹತ್ವದ ವಿಷಯವೂ ಆಗಿದೆ. ಹಾಗೆ ನೋಡಿದರೆ, ಹಿಂದಿನಿಂದಲೂ ಎಸ್‌ಎಸ್‌ಎಲ್‌ಸಿಯಲ್ಲಿ ಜಾಸ್ತಿ ಅಂಕ ಪಡೆದವರು ವಿಜ್ಞಾನವನ್ನು, ಸ್ವಲ್ಪ ಕಡಿಮೆ ಅಂಕ ಪಡೆದವರು ವಾಣಿಜ್ಯ ಶಾಸ್ತ್ರವನ್ನು, ಮತ್ತೂ ಕಡಿಮೆ ಅಂಕ ಪಡೆದವರು ಮಾನವಿಕಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಅಥವಾ ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುವ ಒಂದು ಸಾರ್ವಜನಿಕ ಮನಃಸ್ಥಿತಿ ಇತ್ತು.

ಈಗ ಅಧ್ಯಯನ ಕ್ಷೇತ್ರಗಳು ವಿಸ್ತಾರಗೊಂಡಿವೆ. ವಿದ್ಯಾರ್ಥಿಗಳಿಗೆ ಭವಿಷ್ಯಕ್ಕೆ ಪೂರಕವಾದ ಕೋರ್ಸ್‌ಗಳನ್ನು ಆರಿಸಿಕೊಳ್ಳಲು ಜಾಸ್ತಿ ಆಯ್ಕೆಗಳಿವೆ. ಆದರೆ ಜಾಸ್ತಿ ಅಂಕ ಪಡೆಯುವುದಕ್ಕೂ ಶ್ರೇಷ್ಠವೆಂದು ಕಲ್ಪಿಸಿಕೊಂಡಿರುವ ಕೋರ್ಸ್‌ನ ಆಯ್ಕೆಗೂ ಇರುವ ಸಂಬಂಧದ ಕಲ್ಪನೆ ಬದಲಾಗಿಲ್ಲ. ಅರ್ಥಾತ್ ಜಾಸ್ತಿ ಅಂಕ ಪಡೆದವರು ಮಾರುಕಟ್ಟೆಯ ದೃಷ್ಟಿಯಿಂದ ಶ್ರೇಷ್ಠ ಎನಿಸಿರುವ ಕೋರ್ಸ್ ಅನ್ನು ಆರಿಸಿಕೊಳ್ಳಬೇಕು ಎಂಬ ಭಾವನೆ ಹಾಗೆಯೇ ಇದೆ.

ಶಿಕ್ಷಣ ಮತ್ತು ಔದ್ಯೋಗಿಕ ಕ್ಷೇತ್ರಗಳೆರಡೂ ಸರಳವಾಗಿ ಇದ್ದಾಗ ಅಂಕ ಮತ್ತು ಕೋರ್ಸ್‌ನ ನಡುವಿನ ಸಂಬಂಧ ತುಸು ಹತ್ತಿರ ಇದ್ದಿರಬಹುದು. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ. ಶಿಕ್ಷಣವು ಸಂಕೀರ್ಣವಾಗಿದೆ. ಅಂಕಗಳು ಬಹಳ ಉದಾರವಾಗಿ ಸಿಗುತ್ತಿವೆ. ತಾತ್ವಿಕವಾಗಿ ಜ್ಞಾನದ ಪೂರ್ಣ ಗಳಿಕೆ ಸಾಧ್ಯವಿಲ್ಲ. ಆದ್ದರಿಂದ ನೂರಕ್ಕೆ ನೂರು ಅಂಕ ಪಡೆಯುವುದೂ ಸಾಧ್ಯವಿಲ್ಲ. ಆದರೆ ತಾಂತ್ರಿಕ ಅರ್ಥದಲ್ಲಿ ಹಾಗಲ್ಲ. ನಿರ್ದಿಷ್ಟ ಸನ್ನಿವೇಶದಲ್ಲಿ ನಿರ್ದಿಷ್ಟ ಪಠ್ಯದಲ್ಲಿ ನಿಗದಿಪಡಿಸಿದ ಜ್ಞಾನಾರ್ಜನೆ ಮಾಡುವುದು ಔಪಚಾರಿಕ ಶಿಕ್ಷಣ ವ್ಯವಸ್ಥೆ. ಆದ್ದರಿಂದ ಆ ವ್ಯಾಪ್ತಿಯಲ್ಲಿ ಸಮರ್ಪಕ ಉತ್ತರವೇ ಇದ್ದಾಗ ನೂರಕ್ಕೆ ನೂರು ಅಂಕವನ್ನು ಕೊಡಬಹುದು ಎನ್ನುವುದು ತಾಂತ್ರಿಕವಾಗಿ ಸರಿಯಾದ ವ್ಯಾಖ್ಯಾನವಾಗಿದೆ. ಅದಕ್ಕನುಗುಣವಾಗಿ ನೂರಕ್ಕೆ ನೂರು ಅಂಕವೂ ಸಿಗುತ್ತದೆ.

ಅಂಕ ಗಳಿಕೆಯ ವಿಚಾರದಲ್ಲೂ ತಾತ್ವಿಕ ಧೋರಣೆ ಮತ್ತು ತಾಂತ್ರಿಕ ಧೋರಣೆಯ ನಡುವೆ ವ್ಯತ್ಯಾಸವಿದೆ. ತಾತ್ವಿಕವಾಗಿ, ಚೆನ್ನಾಗಿ ಅಧ್ಯಯನ ನಡೆಸಿದ್ದರ ಪರಿಣಾಮವಾಗಿ ಆ ವಿಷಯದ ಜ್ಞಾನವು ವಿದ್ಯಾರ್ಥಿಯಲ್ಲಿ ಬಹುತೇಕ ಶಾಶ್ವತ ಜ್ಞಾನವಾಗಿ ಉಳಿದುಕೊಂಡಿರುತ್ತದೆ. ಅದನ್ನು ಪರೀಕ್ಷೆಯಲ್ಲಿ ಬರೆದಾಗ ಬರುವ ಅಂಕಗಳು ನಿಜವಾದ ಸಾಮರ್ಥ್ಯವಾಗಿರುತ್ತದೆ. ಆದರೆ ಇದನ್ನು ಪರೀಕ್ಷಿಸಲು ಹಿಂದೆಯೂ ವ್ಯವಸ್ಥೆಗಳಿರಲಿಲ್ಲ, ಈಗಲೂ ಸಮರ್ಪಕ ವ್ಯವಸ್ಥೆ ಇಲ್ಲ. ಪರೀಕ್ಷೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಇದ್ದರೆ ಆಯಿತು, ಅಂಕವನ್ನು ಕೊಡಬೇಕು ಎನ್ನುವುದು ತಾಂತ್ರಿಕ ಧೋರಣೆ. ಪರೀಕ್ಷೆಗೆ ಕೇಳಲಾದ ಪ್ರಶ್ನೆಗೆ ಉತ್ತರವನ್ನು ಗಳಿಸಿದ ಜ್ಞಾನದಿಂದಲೇ ಕೊಡಲಾಗಿದೆಯೇ ಅಥವಾ ಯಾಂತ್ರಿಕವಾಗಿ ಕಂಠಪಾಠ ಮಾಡಿ ಅಥವಾ ಉತ್ತರವನ್ನು ಮಾತ್ರ ನೆನಪಿಡುವ ತಂತ್ರಗಳನ್ನು ಅನುಸರಿಸಿ ಕೊಡಲಾಗಿದೆಯೇ ಎಂಬುದನ್ನು ಪರೀಕ್ಷೆಯು ಪರೀಕ್ಷಿಸುವುದಿಲ್ಲ.

ಇಲ್ಲಿ ಗಮನದಲ್ಲಿ ಇರಿಸಿಕೊಳ್ಳಲೇಬೇಕಾದ ಶೈಕ್ಷಣಿಕ ಅಂಶವೊಂದಿದೆ. ಎಸ್‌ಎಸ್‌ಎಲ್‌ಸಿವರೆಗಿನ ಸಾಮಾನ್ಯ ಶಿಕ್ಷಣವು ಎಲ್ಲ ವಿಷಯಗಳನ್ನೂ ಪರಿಚಯಾತ್ಮಕವಾಗಿಯಷ್ಟೇ ಒದಗಿಸುತ್ತದೆ. ಆಗ ಉತ್ತರಗಳನ್ನು ಸರಳ ತಂತ್ರಗಳಲ್ಲಿ ನೆನಪಿರಿಸಿಕೊಂಡ ಹಾಗೆ ಮುಂದಿನ ಹಂತಗಳಲ್ಲೂ ಸಾಧ್ಯವಾಗುವುದಿಲ್ಲ. ನಿರ್ದಿಷ್ಟ ಕೋರ್ಸ್ ಆಯ್ಕೆ ಮಾಡಿಕೊಂಡಾಗ ಕಲಿಕಾ ವಿಷಯಗಳು ವಿಸ್ತೃತವಾಗುತ್ತವೆ, ಆಳವಾಗುತ್ತವೆ. ಆಗ ಅಲ್ಲಿ ಸ್ವಂತಿಕೆಯ ಓದುವಿಕೆಯೇ ಬೇಕಾಗುತ್ತದೆ. ವಿದ್ಯಾರ್ಥಿಯಲ್ಲಿ ತಾನು ಆಯ್ಕೆ ಮಾಡಿಕೊಳ್ಳುವ ಕೋರ್ಸ್‌ನಲ್ಲಿನ ಕಲಿಕಾಂಶಗಳನ್ನು ಸ್ವತಂತ್ರವಾಗಿ ಓದಲು ಬೇಕಾದ ಸಾಮರ್ಥ್ಯ ಇಲ್ಲದೇ ಇದ್ದರೆ ಆಗ ಭವಿಷ್ಯದಲ್ಲಿ ಕಲಿಕಾ ಹಿನ್ನಡೆ ಉಂಟಾಗುತ್ತದೆ. ಆದ್ದರಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಗಳಿಸಿದ ಅಂಕವನ್ನು ಮಾತ್ರವೇ ಆಧಾರವಾಗಿ ಇರಿಸಿಕೊಂಡು ಮುಂದಿನ ಓದಿಗೆ ಕೋರ್ಸ್ ಆರಿಸಿಕೊಳ್ಳುವುದು ಸಮಂಜಸವಲ್ಲ.

ಕೋರ್ಸ್‌ನ ಆಯ್ಕೆಯ ಇನ್ನೊಂದು ಮಗ್ಗುಲಿನಲ್ಲಿ ಭವಿಷ್ಯದ ಔದ್ಯೋಗಿಕ ಪ್ರಪಂಚ ಮತ್ತು ಮಾರುಕಟ್ಟೆಯ ಸಾಧ್ಯತೆಗಳು ಇವೆ. ಇಂದಿನ ಔದ್ಯೋಗಿಕ ಪ್ರಪಂಚಕ್ಕೆ ಜಾಗತಿಕ ವ್ಯಾಪ್ತಿ ಇದೆ. ಇದು ಈ ತಲೆಮಾರಿನ ವಿದ್ಯಾರ್ಥಿಗಳಿಗೆ ದೊಡ್ಡದಾದ ಅವಕಾಶ ಎಂಬುದೇನೋ ನಿಜ. ಆದರೆ, ಔದ್ಯೋಗಿಕ ಜಗತ್ತು ಭವಿಷ್ಯದಲ್ಲಿ ಸಾಗಬಹುದಾದ ದಿಕ್ಕನ್ನು ಅಂದಾಜಿಸಲಿಕ್ಕೂ ಸಾಧ್ಯವಿಲ್ಲದಷ್ಟು ಜಟಿಲವೂ ಆಗಿದೆ. ಇದು ಈ ತಲೆಮಾರಿಗೆ ಇರುವ ಸವಾಲು.

ಸದ್ಯೋಭವಿಷ್ಯದಲ್ಲಿ ಸರ್ಕಾರಿ ಕೇಂದ್ರಿತ ಔದ್ಯೋಗಿಕ ವ್ಯವಸ್ಥೆ ಇನ್ನಷ್ಟು ನಿರ್ಲಕ್ಷ್ಯಕ್ಕೆ ಒಳಗಾಗಲಿದೆ. ಬದಲಿಗೆ ಖಾಸಗಿ ಕಾರ್ಪೊರೇಟ್ ಕಂಪನಿಗಳು ಬಹುದೊಡ್ಡ ಉದ್ಯೋಗದಾತ ಸಂಸ್ಥೆಗಳಾಗಿರುತ್ತವೆ. ಅವು ಯಾವುದೇ ಸಂದರ್ಭದಲ್ಲೂ ಔದ್ಯೋಗಿಕ ಜಗತ್ತಿನ ದಿಕ್ಕನ್ನು ಬದಲಿಸಬಲ್ಲವು. ಆದ್ದರಿಂದ ಕೋರ್ಸ್‌ನ ಆಯ್ಕೆಯು ಬರಿಯ ವಿಷಯ ಜ್ಞಾನಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಬದಲಾಗಿ ಆಯಾ ಕೋರ್ಸ್ ಅನ್ನು ಆಧರಿಸಿದ ಜಾಗತಿಕ ಮಾರುಕಟ್ಟೆ ಬಯಸುವ ದಕ್ಷತೆ ಮತ್ತು ಬದಲಾಗುವ ಶೈಲಿಗೆ ಒಗ್ಗಿಕೊಳ್ಳುವ ಸಾಮರ್ಥ್ಯವನ್ನೂ ವಿದ್ಯಾರ್ಥಿಯಿಂದ ಅಪೇಕ್ಷಿಸುತ್ತದೆ.

ಹಾಗಿದ್ದರೆ ಮುಂದಿನ ಓದಿಗೆ ಹೇಗೆ ಕೋರ್ಸ್ ಆರಿಸಿಕೊಳ್ಳಬೇಕು ಎಂಬ ಪ್ರಶ್ನೆ ಬರುತ್ತದೆ. ಸಾಮಾನ್ಯವಾಗಿ ವಿದ್ಯಾರ್ಥಿಗಳು ಅವರವರ ಆಸಕ್ತಿಯ ವಿಷಯಗಳನ್ನು ಆಧರಿಸಿ ಭವಿಷ್ಯದ ಕೋರ್ಸ್ ಅನ್ನು ಆರಿಸಿಕೊಳ್ಳಬೇಕು ಎಂದು ಉಚಿತ ಸಲಹೆಯನ್ನು ನೀಡುವ ಪದ್ಧತಿ ನಮ್ಮ ಸಮಾಜದಲ್ಲಿದೆ. ಶೈಕ್ಷಣಿಕ ತತ್ವಗಳ ಆಧಾರದಲ್ಲಿ ಈ ಸಲಹೆ ಸರಿಯಾಗಿದೆ. ಆದರೆ ಕಲಿಕೆಗೆ ಜ್ಞಾನಾರ್ಜನೆಯ ಆಯಾಮ ಇರುವ ಹಾಗೆ ಜ್ಞಾನವು ನಿಷ್ಕ್ರಿಯ ಜ್ಞಾನವಾಗಿ ಉಳಿಯದೆ ಉಪಯುಕ್ತ ಜ್ಞಾನವಾಗಿ ಪರಿವರ್ತನೆ ಆಗಬೇಕಾಗುತ್ತದೆ. ಉಪಯುಕ್ತತೆಗೆ ಸಾಮಾಜಿಕ ಆಯಾಮವಿರುವ ಹಾಗೆ ವೈಯಕ್ತಿಕ ಆಯಾಮವೂ ಇದ್ದು ವಿದ್ಯಾರ್ಥಿಗೂ ಅದು ಉಪಯೋಗಕ್ಕೆ ಬರಬೇಕು. ಉದಾಹರಣೆಗೆ, ಒಬ್ಬ ವಿದ್ಯಾರ್ಥಿಗೆ ಇತಿಹಾಸದ ಬಗ್ಗೆ ಆಸಕ್ತಿ ಇದೆ ಎಂದು ಇತಿಹಾಸವನ್ನು ಆಯ್ಕೆ ಮಾಡಿಕೊಂಡರೆ ಆತ ಉದ್ಯೋಗವನ್ನು ಕೇಳುವ ವಯಸ್ಸಿಗೆ ಬಂದಾಗಲೂ ಅವನು ಕಲಿತ ಇತಿಹಾಸವೇ ಉಪಯೋಗಕ್ಕೆ ಬರಲಿದೆಯೇ? ಈ ಪ್ರಶ್ನೆ ಮುಖ್ಯವಾಗುತ್ತದೆ.

ಆ ಸಂದರ್ಭಕ್ಕಾದಾಗ ರಸ್ತೆ ನಿರ್ಮಾಣ ಕಂಪನಿಗೆ ರಸ್ತೆಯ ಇತಿಹಾಸದ ವರದಿ ಬೇಕಾಗುತ್ತದೆ ಎಂದು ಕಲ್ಪಿಸಿಕೊಳ್ಳೋಣ. ಆ ಉದ್ಯೋಗಕ್ಕೆ ಚಂದ್ರಗುಪ್ತ, ಅಕ್ಬರ್, ವಾಸ್ಕೋಡಗಾಮನ ವಿವರಗಳು ಬೇಕಾಗುವುದಿಲ್ಲ. ಬದಲಿಗೆ ಮಣ್ಣಿನ ಇತಿಹಾಸದ ಜ್ಞಾನ ಅವಶ್ಯವಿರುತ್ತದೆ. ಮಣ್ಣಿನ ಇತಿಹಾಸ ಜ್ಞಾನ ಲಭ್ಯವಾಗಬೇಕಾದರೆ ಆಯ್ಕೆ ಮಾಡಿಕೊಂಡ ಕೋರ್ಸ್‌ನಲ್ಲಿ ಇತಿಹಾಸದೊಂದಿಗೆ ಭೂಗೋಳವೂ ಇರಬೇಕು ಅಥವಾ ಇತಿಹಾಸದಲ್ಲಿ ಮಣ್ಣಿನ ಇತಿಹಾಸವನ್ನೂ ಕಲಿಸುವ ಕೋರ್ಸ್ ಇರಬೇಕು ಅಥವಾ ಮಣ್ಣಿನ ಇತಿಹಾಸವನ್ನು ಸಂಶೋಧಿಸುವ ಸಾಮರ್ಥ್ಯವನ್ನು ಕೋರ್ಸ್ ವಿದ್ಯಾರ್ಥಿಯಲ್ಲಿ ಬೆಳೆಸಿರಬೇಕಾಗುತ್ತದೆ. ಇದು ಬರೀ ಉದಾಹರಣೆಯಷ್ಟೆ. ಆದರೆ ನಿಜವಾಗಿಯೂ 2013ರ ನಂತರ ನಾಗರಿಕ ಸೇವಾ ಪರೀಕ್ಷೆಯಲ್ಲಿ ಸಾಂಸ್ಕೃತಿಕ ಇತಿಹಾಸಕ್ಕೆ ಹೆಚ್ಚು ಮಹತ್ವವಿದೆ. ಆದರೆ ಇತಿಹಾಸದ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ರಾಜಕೀಯ ಇತಿಹಾಸವನ್ನೇ ಹೆಚ್ಚಾಗಿ ಕಲಿಸಲಾಗುತ್ತಿದೆ. ಇಂತಹ ಸಂದರ್ಭದಲ್ಲಿ, ಕಲಿತ ವಿಷಯ ವಿದ್ಯಾರ್ಥಿಗೆ ಹೆಚ್ಚು ಸಹಾಯಕ್ಕೆ ಬರುವುದಿಲ್ಲ. ಬದಲು ವಿದ್ಯಾರ್ಥಿಯಲ್ಲಿರುವ ದಕ್ಷತೆ ಸಹಾಯಕ್ಕೆ ಬರುತ್ತದೆ. ಆದ್ದರಿಂದ ಆಯ್ಕೆಯು ಕೋರ್ಸ್ ಮಾತ್ರ ಆಗಿರದೆ ಯಾವ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಯ ದಕ್ಷತೆಯನ್ನು ಹೆಚ್ಚಿಸುವ ಕಾರ್ಯ ನಡೆಯುತ್ತಿದೆ ಎಂಬುದನ್ನೂ ಆಧರಿಸಿರಬೇಕಾಗುತ್ತದೆ.

ವಿದ್ಯಾರ್ಥಿಗಳ ದಕ್ಷತೆ ಹೆಚ್ಚಳದ ವಿಚಾರದಲ್ಲಿ ಅವರವರ ಆಸಕ್ತಿಯ ವಿಷಯಗಳಿಗೆ ಜಾಸ್ತಿ ಪ್ರಾಮುಖ್ಯ ಇರುತ್ತದೆ. ಆದರೆ ಆಸಕ್ತಿಯೇ ಅಂತಿಮ ಅಲ್ಲ. ಆಸಕ್ತಿ ಇದ್ದ ಮಾತ್ರಕ್ಕೆ ದಕ್ಷತೆ ಇರಲೇಬೇಕೆಂದೇನೂ ಇಲ್ಲ. ವಿದ್ಯಾರ್ಥಿಗೆ ಸುಲಭ ಎನಿಸುವ ವಿಷಯದಲ್ಲಿ ಆಸಕ್ತಿ ಕಾಣಿಸಬಹುದು ಅಥವಾ ವಿದ್ಯಾರ್ಥಿಗೆ ಪ್ರಿಯರಾದ ಅಧ್ಯಾಪಕರು ಬೋಧಿಸುವ ವಿಷಯ ಎಂಬ ನೆಲೆಯಲ್ಲೂ ಆಸಕ್ತಿ ಕಾಣಿಸಬಹುದು. ಆದರೆ ದಕ್ಷತೆ ಬೇರೆ ವಿಷಯದಲ್ಲಿ ಇರಲಿಕ್ಕೂ ಸಾಧ್ಯವಿದೆ. ಆಗ ವಿದ್ಯಾರ್ಥಿ ತನ್ನ ದಕ್ಷತೆ ಯಾವುದರಲ್ಲಿದೆ ಎಂಬುದನ್ನು ಪರಿಶೀಲಿಸಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಮತ್ತೆ ಇಲ್ಲಿ ನೆನಪಿಡಬೇಕಾದದ್ದು ಅಂಕಗಳೇ ದಕ್ಷತೆಯ ಏಕೈಕ ಮಾನದಂಡವಾಗಲಾರವು ಎಂಬುದನ್ನು. ವಿದ್ಯಾರ್ಥಿಯ ದಕ್ಷತೆಯನ್ನು ವಿದ್ಯಾರ್ಥಿಯೇ ಪರಿಶೀಲಿಸಿಕೊಳ್ಳಲು ಸಾಧ್ಯವಾಗದೇ ಇದ್ದಾಗ ಹಿರಿಯರ ಸಹಾಯ ಬೇಕಾಗಬಹುದು ಅಥವಾ ನುರಿತ ಶೈಕ್ಷಣಿಕ ಮನಃಶಾಸ್ತ್ರಜ್ಞರು ವಿದ್ಯಾರ್ಥಿಯ ವ್ಯಕ್ತಿತ್ವ ಪರೀಕ್ಷೆಯನ್ನು ನಡೆಸಿ ಸಲಹೆ ನೀಡಬೇಕಾಗಬಹುದು. ಆದರೆ ಇದನ್ನು ವೈಯಕ್ತಿಕ ನೆಲೆಯಲ್ಲಿ ಮಾಡಬೇಕಾಗುತ್ತದೆ. ಸಾರ್ವತ್ರಿಕವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಸಮಾಜದ ಒಟ್ಟೂ ಚಿಂತನಾ ಕ್ರಮದಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಅಧ್ಯಯನದ ಆಯ್ಕೆಯ ಮಾನದಂಡದ ಪರಿಕಲ್ಪನೆಗಳು ಬದಲಾಗಬೇಕಾದ ಅಗತ್ಯವಿದೆ.

ಚುರುಮುರಿ

ಅರುಗಾಗುವುದು!

• ಲಿಂಗರಾಜು ಡಿ.ಎಸ್.

ವಾಕಿಂಗ್ ಹೋಗುವಾಗ ತುರೇಮಣೆ 'ನಾಯಿ ಹೊಲಸು ಮಾಡ್ಯದೆ. ಅರುಗಾಗ್ರಾ' ಅಂತ ಎಚ್ಚರಿಸಿದರು. 'ಸಾ, ಅರುಗಾಗು ಅಂದ್ರೆ ಅರ್ಥ ಏನು?!' ಅಂತ ಕೇಳಿದೆ. 'ಅದೇ ಕಲಾ ಹೊಲಸನ್ನು ತುಳೀದೇ ಅಂತರ ಕಾಯ್ದುಕೊಳ್ಳುವುದನ್ನೇ ಅರುಗಾಗುವುದು ಅಂತೀವಿ' ಎಂದು ವಿವರಿಸಿದರು.

'ಸಾ, ಯಾವ್ಯಾವ ಹೊಲಸನ್ನ ಕಂಡ್ರೆ ಅಂತರ ಕಾಯ್ದುಕೊಂಡು ಅರುಗಾಗಬೇಕಾಯ್ತದೆ' ಮಿಲಿಯನ್ ಡಾಲರ್ ಪ್ರಶ್ನೆ ಕೇಳಿದೆ.

'ಬೊಡ್ಡಿಹೈದ್ನೆ, ಅದು ನಾಯಿ ಹೊಲಸಾದ್ರೂ ಸರಿ ರಾಜಕೀಯದ ಹೊಲಸಾದ್ರೂ ಸರಿ ತುಳಿದವರ ಕಾಲು ನಾರ್ತದೆ. ಮಗ್ಗುಲಲ್ಲಿ ಅರುಗಾಗಿ ಹೋದ್ರೆ ಬಚಾವು' ಅಂತ ಬುದ್ಧಿಮಾತು ಹೇಳಿದರು.

'ಅಲ್ಲ ಸಾ, ಮನ್ನೆ ಒಬ್ಬರು ಪಕ್ಕದ ದೇಶದ ತಾವು ಬಾಂಬದೆ ಅಂದುದ್ಕೆ 'ಪಕ್ಷ ಈ ಹೇಳಿಕೆಯಿಂದ ಅಂತರ ಕಾಯ್ದುಕೊಂಡದೆ' ಅಂದವ್ರೆ. ಅದ್ಯಾಕೋ' ಚಂದ್ರು ಆನೆ ಪಟಾಕಿ ಸಿಡಿಸಿದ.

'ಹಂಗೀಯೆ ಭಾರತದೋರು ಯಾವ್ಯಾವುದೋ ದೇಸದೋರ ಥರಾ ಕಾಣ್ತಾವ್ರೆ ಅಂದುದ್ಕೂ ಪಕ್ಷ ಅಂತರ ಕಾಯ್ದುಕೊಳ್ಳುವುದು ಒಳ್ಳೇದಲ್ಲವುರಾ?' ನಾನು ಕೇಳಿದೆ.

'ಇವಿಷ್ಟೇ ಅಲ್ಲ ಕನ್ರೋ, ಆನ್‌ಲೈನ್ ಧೋಕಾ ಹೊಲಸು, ಬಿಟ್‌ಕಾಯಿನ್ ಹೊಲಸು, ಕಾಮ ದ್ರೋಹಿಗಳ ಹೊಲಸು, ಅಧಿಕಾರದ ಹೊಲಸು, ಲಂಚದ ಹೊಲಸು, ವಿಡಿಯೊ ಮಾರ್ಫಿಂಗ್, ಬ್ಯಾಡದ ಸ್ನೇಯಿತರಿಂದ, ನೆಂಟರಿಂದ ಅಂತರ ಕಾಯ್ದುಕೊಳ್ಳುವುದೂ ಅದೇ' ಅಂದ್ರು ತುರೇಮಣೆ.

'ಸಾ, ರಾಜಕೀಯವೇ ಹೊಲಸಾಗ್ಯದೆ, ಇದರಿಂದ ಅಂತರ ಕಾಯ್ದುಕೊಳ್ಳುತ್ತೇವೆ ಅಂತ ಇಲ್ಲೀಗಂಟ ಯಾರಾದರೂ ರಾಜಕಾರಣಿ ಹೇಳಿಕೆ ಕೊಟ್ಟವ್ರಾ ಸಾ?' ಅಂತ ಪ್ರಶ್ನೆ ಹಾಕಿದೆ.

'ರಾಜಕಾರಣಿಗಳು ಯಾರೂ ಹಂಗೆ ಹೇಳಕುಲ್ಲ. ಯಾಕೇಂದ್ರೆ ಅವರು ಹೊಲಸಿನ ವಾಸನೆಗೆ ಒಗ್ಗಿರದ್ರಿಂದ ಹೊಲಸು ತುಳಿಯದೇ ಅವರ ಕ್ಯಾಮೆ. ಅದಕ್ಕೆ ಬದಲು 'ಎಲೆಕ್ಷನ್ನಲ್ಲಿ ಎಡವಟ್ ರಾಜಕಾರಣಿಗೆ ಮತದಾನ ಮಾಡದೇ ಅಂತರ ಕಾಯ್ದುಕೊಳ್ಳುತ್ತೇವೆ' ಅಂತ ಜನ ತೀರ್ಮಾನ ತಕ್ಕಂದ್ರ ಭೇಸಲ್ಲವುಲಾ?' ತುರೇಮಣೆ ಕೊಟ್ಟ ಪರಿಹಾರದಿಂದ ಯಾರ್‍ಯಾರು ಅರುಗಾಗಿ ಅಂತರ ಕಾಯ್ದುಕೊಳ್ಳುತ್ತಾರೋ ಗೊತ್ತಿಲ್ಲ!

ಸಂಗತ

'ಲಕ್ಷ್ಮಿ' ಹಣಕ್ಕೆ ಕೃಷ್ಣನ ಲೆಕ್ಕ!

ಈ ಯೋಜನೆಯಡಿ ಮಹಿಳೆಯರಿಗೆ ಸಿಗುವ ಹಣವು ಧಾರ್ಮಿಕ ಕಾರ್ಯಗಳ ಹೆಸರಿನಲ್ಲಿ ಅವರ ಕೈಜಾರಿ ಹೋಗದಂತೆ ನೋಡಿಕೊಳ್ಳಬೇಕಾಗಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಬಡವರಿಗೆ ಹಂಚಲು ಸರ್ಕಾರ ಕೊಟ್ಟ ಪಡಿತರ ಅಕ್ಕಿ, ಸಕ್ಕರೆಯನ್ನು ಖಾಸಗಿ ವರ್ತಕರಿಗೆ ಮಾರಾಟ ಮಾಡಿ, ಬಂದ ಹಣದಲ್ಲಿ ದೇವಾಲಯಗಳನ್ನು ನಿರ್ಮಿಸುವ ಕೆಲಸವನ್ನು ಕೆಲವು ಗ್ರಾಮಸ್ಥರು 1970- 80ರ ದಶಕದಲ್ಲಿ ಮಾಡುತ್ತಿದ್ದರು. ಇದು, ಆಗ ಮುಖ್ಯಮಂತ್ರಿ ಆಗಿದ್ದ ದೇವರಾಜ ಅರಸು ಅವರ ಗಮನಕ್ಕೆ ಬಂತು. 'ಬಡವರ ಹೊಟ್ಟೆಯ ಅನ್ನವನ್ನು ಧಾರ್ಮಿಕ ಕಾರ್ಯದ ಹೆಸರಿನಲ್ಲಿ ಕಿತ್ತುಕೊಳ್ಳುವುದು ಹಿಂಸೆ' ಎಂದು ಅರಸು ಗುಡುಗಿದ್ದರು. ಕಡ್ಡಾಯವಾಗಿ ಪಡಿತರ ಹಂಚಿಕೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರು.

ಈ ಸಂಗತಿ ಏಕೆ ನೆನಪಾಯಿತು ಎಂದರೆ, ಇತ್ತೀಚೆಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ, ಬದಿಯಲ್ಲಿ ಕುಳಿತಿದ್ದ ಪರಿಚಿತ ಹಿರಿಯ ಮಹಿಳೆಯೊಬ್ಬರು 'ಗೃಹಲಕ್ಷ್ಮಿ' ಯೋಜನೆಯಡಿ ಸರ್ಕಾರದಿಂದ ತಮಗೆ ಬರುತ್ತಿರುವ ₹ 2000 ಹಣವನ್ನು ತಮ್ಮ ಗ್ರಾಮದ ಹಿರಿಯರು ದೇವಾಲಯ ನಿರ್ಮಾಣಕ್ಕೆ ಪಡೆದುಕೊಳ್ಳುತ್ತಿರುವುದಾಗಿ ತಿಳಿಸಿದರು. 'ಗ್ರಾಮದ ಮಹಿಳೆಯರೆಲ್ಲ ಒಂದು ವರ್ಷ ಗೃಹಲಕ್ಷ್ಮಿ ಹಣವನ್ನು ದೇವಸ್ಥಾನದ ನಿರ್ಮಾಣಕ್ಕೆ ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದಾರೆ. ಗ್ರಾಮದ ಮಠಾಧಿಪತಿಗಳು ನೇತೃತ್ವ ವಹಿಸಿದ್ದಾರೆ. ಇಲ್ಲ ಎಂದು ಹೇಳಲು ಆಗದೆ ಒಪ್ಪಿಕೊಂಡಿದ್ದೇನೆ' ಎಂದು ಬೇಸರದಿಂದ ಹೇಳಿದರು. ಮಹಿಳೆಯ ಈ ಮಾತು ಕೇಳಿದಾಗ, ಬಡವರ ಸೌಲಭ್ಯಗಳನ್ನು ಕಿತ್ತುಕೊಳ್ಳುವುದು ಹಿಂಸೆ ಎಂದು ಅರಸು ಅವರು ಗುಡುಗಿದ್ದು ಮತ್ತೆ ಕಿವಿಗೆ ಅಪ್ಪಳಿಸಿದಂತಾಯಿತು.

ನಮ್ಮ ಈ ಮಾತನ್ನು ಆಲಿಸಿದ, ಬಸ್ಸಿನಲ್ಲಿದ್ದ ಇನ್ನೊಬ್ಬ ಮಹಿಳೆ 'ನಮ್ಮ ಊರಿನಲ್ಲಿ ದೇವಿಯ ರಥ ನಿರ್ಮಿಸುತ್ತಿದ್ದಾರೆ. ಅದಕ್ಕೆ ಎಲ್ಲರೂ ಗೃಹಲಕ್ಷ್ಮಿಯ ದುಡ್ಡು ಕೊಡಲೇಬೇಕು ಎಂದು ಮಠಾಧಿಪತಿಗಳು ಹೇಳಿದ್ದಾರೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎನ್ನುವ ಸ್ಥಿತಿ ನಮ್ಮದು' ಎಂದರು. ಆ ಮಹಿಳೆಯ ಮಾತಿನಲ್ಲಿ ಸಿಟ್ಟು, ಅಸಮಾಧಾನ, ದುಃಖ ಮಡುಗಟ್ಟಿತ್ತು.

ಗೃಹಲಕ್ಷ್ಮಿ ಯೋಜನೆಯ ಹಣ ಪಡೆದುಕೊಂಡು ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಳ್ಳುವ ಪರಿಪಾಟ ಹಳ್ಳಿಗಳಲ್ಲಿ ಶುರುವಾಗಿದೆ. ಮಠಾಧಿಪತಿಗಳು, ಧಾರ್ಮಿಕ ಮುಖಂಡರು, ಹಿರಿಯರು ಇಂತಹ ಕೆಲಸಗಳ ನೇತೃತ್ವ ವಹಿಸುತ್ತಿದ್ದಾರೆ. ಇನ್ನು ಕೆಲವು ಗ್ರಾಮಗಳಲ್ಲಿ ನಿರ್ದಿಷ್ಟ ಸಮುದಾಯದವರು ತಮ್ಮ ಜಾತಿಯ ಜನ ಆರಾಧಿಸುವ ದೇವರ ಗುಡಿ ಕಟ್ಟಲು ಪ್ಲಾನ್ ಮಾಡುತ್ತಿದ್ದಾರೆ. ಇವರು ಕೂಡ ಗೃಹಲಕ್ಷ್ಮಿ ಹಣದ ಮೇಲೆ ಕಣ್ಣಿಟ್ಟಿದ್ದಾರೆ. ಸಾಮಾನ್ಯವಾಗಿ ಮಹಿಳೆಯರು ಎಷ್ಟೇ ಕಷ್ಟವಿದ್ದರೂ ಧಾರ್ಮಿಕ ಕಾರ್ಯಗಳಿಗೆ ಹಣ ಕೊಟ್ಟುಬಿಡುತ್ತಾರೆ. ಈ ಮನೋಧರ್ಮವನ್ನು ಬಳಸಿಕೊಂಡು ಗೃಹಲಕ್ಷ್ಮಿ ಹಣ ಕಿತ್ತುಕೊಳ್ಳುವುದು ಆತಂಕಕಾರಿ ಬೆಳವಣಿಗೆ.

ಮಹಿಳೆಯರ ನಿತ್ಯದ ಬದುಕಿನ ಅವಶ್ಯಕತೆಗಳಿಗೆ ನೆರವಾಗಿ ಅವರ ಕಷ್ಟ ದೂರ ಮಾಡುವ ಆಶಯದಿಂದ ಸರ್ಕಾರ ಗೃಹಲಕ್ಷ್ಮಿ ಯೋಜನೆ ರೂಪಿಸಿದೆ. ಇದು ಮಹಿಳಾ ಸಬಲೀಕರಣ ಪ್ರಕ್ರಿಯೆಯ ಮಹತ್ವದ ಹೆಜ್ಜೆಯಾಗಿದೆ. ಆದರೆ ಈ ಸಹಾಯಧನವನ್ನು ಗುಡಿ ಕಟ್ಟುವುದಕ್ಕೆ, ರಥ ನಿರ್ಮಾಣಕ್ಕೆ ಪಡೆದುಕೊಳ್ಳುವುದು ಯೋಜನೆಯ ಮೂಲ ಉದ್ದೇಶ ಮತ್ತು ಆಶಯಕ್ಕೆ ವಿರುದ್ಧವಾದುದು. ಗೃಹಲಕ್ಷ್ಮಿ ಸೌಲಭ್ಯ ಪಡೆಯುವ ಮಹಿಳೆಯರು ಹೆಚ್ಚಾಗಿ ಬಡವರಾಗಿದ್ದಾರೆ. ಅವರಿಂದ ದೊಡ್ಡ ಮಟ್ಟದ (ವಾರ್ಷಿಕವಾಗಿ ತಲಾ ₹ 24 ಸಾವಿರ) ದೇಣಿಗೆ ಸಂಗ್ರಹಿಸುವುದು ಸರಿಯಲ್ಲ. ಬಡ ಕುಟುಂಬಗಳು ಆರ್ಥಿಕವಾಗಿ ಬಲಗೊಳ್ಳುವುದನ್ನು ಅಡ್ಡಿಪಡಿಸುವ ಹುನ್ನಾರ ಕೂಡ ಆಗಿರಬಹುದು ಎಂಬ ಅನುಮಾನ ಮೂಡುತ್ತದೆ.

ಸಾಮೂಹಿಕ ಪೂಜೆ, ಪ್ರವಚನ, ಧಾರ್ಮಿಕ ಸಮಾರಂಭಗಳ ವೇದಿಕೆಗಳಲ್ಲಿ, ಗೃಹಲಕ್ಷ್ಮಿಯ ಹಣ ನೀಡಿದ ಮಹಿಳೆಯರ ಹೆಸರುಗಳನ್ನು ಪ್ರಕಟಿಸುವುದು, ಅವರನ್ನು ಸನ್ಮಾನಿಸುವುದು ನಡೆಯುತ್ತಿದೆ. ನೋವಿನ ಸಂಗತಿ ಎಂದರೆ, ಕೆಲವು ಮಹಿಳಾ ಮಂಡಳಗಳು ಮಹಿಳೆಯರ ಮನವೊಲಿಸಿ ಹಣ ಪಡೆಯುತ್ತಿವೆ. ಇದೊಂದು ಸಮಷ್ಟಿ ಕೆಲಸ ಎಂದು ಮಹಿಳಾ ಸಂಘಟನೆಗಳ ಸದಸ್ಯರು ಸಮರ್ಥಿಸಿಕೊಳ್ಳುತ್ತಿರುವುದನ್ನು ನೋಡಿ ಬೇಸರ ಎನಿಸುತ್ತದೆ. ಉಳ್ಳವರು ಶಿವಾಲಯವ ಮಾಡುವರು/ ನಾನೇನು ಮಾಡುವೆ, ಬಡವನಯ್ಯ/ಎನ್ನ ಕಾಲೇ ಕಂಬ, ದೇಹವೇ ದೇಗುಲ/ ಶಿರವೇ ಹೊನ್ನ ಕಳಶವಯ್ಯ ಎಂಬ ಬಸವಣ್ಣನವರ ವಚನ, ಬಡವರ ಹಣ ಪಡೆದು ಗುಡಿ ಕಟ್ಟುವವರಿಗೆ ಮಾರ್ಮಿಕವಾಗಿ ಉತ್ತರ ನೀಡುತ್ತದೆ.

ಗೃಹಲಕ್ಷ್ಮಿ ಹಣ, ಮಹಿಳೆಯರಿಗೆ ಬೇರೆ ಬೇರೆ ನೆಲೆಯಲ್ಲಿ ಅನುಕೂಲಕರವಾಗಿ ಒದಗಿಬಂದಿದೆ. ಸಣ್ಣಪುಟ್ಟ ಕಾಯಿಲೆಗಳಿಗೆ ಔಷಧ ಕೊಳ್ಳಲು, ತರಕಾರಿ ಖರೀದಿಸಲು, ಹಟ ಮಾಡುವ ಮೊಮ್ಮಕ್ಕಳಿಗೆ ಚಾಕೊಲೇಟ್, ಬಿಸ್ಕೆಟ್ ಕೊಡಿಸಲು ಈ ಹಣ ನೆರವಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಕೈಯಲ್ಲಿ ಸ್ವಲ್ಪ ದುಡ್ಡಿರುವುದು ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಹಾಗೆಯೇ ಬೇರೆಯವರ ಬಳಿ ಸಹಾಯ ಯಾಚಿಸುವ ಸಂದರ್ಭಗಳು ಕಡಿಮೆಯಾಗುತ್ತವೆ.

ಮಹಿಳೆಯರ ಆರ್ಥಿಕ ಶಕ್ತಿಯು ಅವರ ಕೌಟುಂಬಿಕ ಉನ್ನತಿಗೆ ಕಾರಣವಾಗುತ್ತದೆ. ಮಹಿಳೆಯ ಬಳಿ ಸದಾಕಾಲ ಸ್ವಲ್ಪವಾದರೂ ಸ್ವಂತದ ಹಣ ಇರುವುದು ಆಕೆಯ ಸುರಕ್ಷತೆಯ ಮೊದಲ ಹೆಜ್ಜೆಯಾಗಿದೆ ಎಂದು ಅಮೆರಿಕದ ಲೇಖಕಿ ಕ್ಲೇರ್ ಬೂತ್ ಲುಸೆ ಹೇಳುವ ಮಾತು ಬಹಳ ವಾಸ್ತವದಿಂದ ಕೂಡಿದೆ.

ಪ್ರಗತಿಪರ ಧೋರಣೆಯ ಹಿರಿಯರು, ಸಾಮಾಜಿಕ ಕಾರ್ಯಕರ್ತರು ಗೃಹಲಕ್ಷ್ಮಿಯ ಹಣವು ಧಾರ್ಮಿಕ ಕಾರ್ಯಗಳ ಹೆಸರಿನಲ್ಲಿ ಮಹಿಳೆಯರ ಕೈಜಾರಿ ಹೋಗದಂತೆ ಮಾರ್ಗದರ್ಶನ ಮಾಡಬೇಕು. ಸರ್ಕಾರ ಎಚ್ಚರಿಕೆಯ ಸುತ್ತೋಲೆ ಹೊರಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

ವಾಚಕರ ವಾಣಿ

ಮಳೆ ಅವಾಂತರ: ಕಂಡುಕೊಳ್ಳಬೇಕಿದೆ ಪರಿಹಾರ

ರಾಜ್ಯದಲ್ಲಿ ಪೂರ್ವ ಮುಂಗಾರು ಆರಂಭವಾಗಿದೆ. ಬೆಂಗಳೂರಿನಲ್ಲಿ ಒಂದು ವಾರದಿಂದ ಆಗುತ್ತಿರುವ ಸಣ್ಣ ಮಳೆಗೇ ರಸ್ತೆಗಳಲ್ಲಿ ನೀರು ತುಂಬಿ ವಾಹನ ಸವಾರರು, ಪಾದಚಾರಿಗಳು ಪರದಾಡುವಂತಾಗಿದೆ. ಮಳೆನೀರು ಸರಾಗವಾಗಿ ಹರಿಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಪರಿಹಾರ ಕಂಡುಕೊಳ್ಳಬೇಕಿದೆ.

ಮಳೆನೀರು ರಸ್ತೆಯ ಅಕ್ಕಪಕ್ಕದಲ್ಲಿರುವ ಚರಂಡಿಗಳಿಗೆ ಹರಿಯದೆ ರಸ್ತೆಯಲ್ಲೇ ಸಾಗುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಚರಂಡಿಗಳಿಗೆ ಕ್ರಮಬದ್ಧವಾಗಿ ನೀರು ಹರಿಯುವಂತೆ ಮಾಡಬೇಕಾಗಿದೆ. ತಗ್ಗುಪ್ರದೇಶಗಳನ್ನು ಗುರುತಿಸಿ, ಇಂಗುಗುಂಡಿಗಳನ್ನು ನಿರ್ಮಿಸಿ, ಆಯಾ ರಸ್ತೆಯ ನೀರು ಅಲ್ಲಲ್ಲೇ ಭೂಮಿಗೆ ಇಂಗುವಂತೆ ಮಾಡಿದರೆ ಸುತ್ತಮುತ್ತಲಿನ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತದೆ, ನೀರು ಪೋಲಾಗಿ ತಗ್ಗುಪ್ರದೇಶಗಳಿಗೆ ನುಗ್ಗುವುದು ಕಡಿಮೆ ಆಗುತ್ತದೆ. ರಾಜ್ಯದ ಇತರ ಪ್ರಮುಖ ನಗರಗಳಲ್ಲೂ ಇಂತಹದೇ ಪರಿಸ್ಥಿತಿ ಇದೆ. ಜೂನ್‌ನಲ್ಲಿ ಮುಂಗಾರು ಆರಂಭವಾಗುವ ಮೊದಲೇ ಬಿಬಿಎಂಪಿ ಈ ಬಗ್ಗೆ ಗಂಭೀರ ಪರಿಹಾರ ಕ್ರಮಗಳನ್ನು ಕಂಡುಕೊಳ್ಳದೆ ನಿರ್ಲಕ್ಷ್ಯ ವಹಿಸಿದರೆ ಅನಾಹುತಗಳು ತಪ್ಪಿದ್ದಲ್ಲ.

ಪ್ರಭು ಇಸುವನಹಳ್ಳಿ, ಬೆಂಗಳೂರು

ಬ್ಯಾಂಕಿಂಗ್ ನೇಮಕಾತಿ: ತಾರತಮ್ಯ ಸಲ್ಲ

ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಹೊಸದಾಗಿ ನೇಮಕ ಮಾಡಿಕೊಳ್ಳಲಿರುವ ಸುಮಾರು 12 ಸಾವಿರ ಉದ್ಯೋಗಿಗಳ ಪೈಕಿ ಶೇ 85ರಷ್ಟು ಎಂಜಿನಿಯರಿಂಗ್ ಪದವೀಧರರಿಗೆ ಆದ್ಯತೆ ನೀಡಲು ನಿರ್ಧರಿಸಿದೆ ಎಂದು ವರದಿಯಾಗಿದೆ (ಪ್ರ.ವಾ., ಮೇ 13). ಈ ನಡೆ, ಸೇವಾ ನಿಯಮಗಳಿಗೆ ವಿರುದ್ಧವಾದುದು. ಇಷ್ಟು ದಿನ ಇಲ್ಲದ ಇಂತಹ ನಿಯಮ ಈಗೇಕೆ? ಬ್ಯಾಂಕಿಂಗ್ ನೇಮಕಾತಿಗಳಲ್ಲಿ ಇಲ್ಲಿಯವರೆಗೆ ವಾಣಿಜ್ಯಶಾಸ್ತ್ರ, ಕೃಷಿ, ತೋಟಗಾರಿಕೆ, ವಿಜ್ಞಾನ, ಕಲಾ ವಿಭಾಗಗಳಲ್ಲಿ ಓದಿದವರೆಲ್ಲರಿಗೂ ಅವಕಾಶ ನೀಡಲಾಗುತ್ತಿತ್ತು. ಈಗ ಇಂತಹ ತಾರತಮ್ಯವೇಕೆ?! ಬ್ಯಾಂಕುಗಳ ವ್ಯವಹಾರಕ್ಕೆ ಅಗತ್ಯವಾದ ಕಂಪ್ಯೂಟರ್ ತಂತ್ರಜ್ಞಾನದ ಜೊತೆಗೆ ಜನರೊಂದಿಗೆ ಒಡನಾಡುವ ಸಾಮಾನ್ಯ ಜ್ಞಾನವೂ ಸಿಬ್ಬಂದಿಗೆ ಇರಬೇಕಾಗುತ್ತದೆ. ಬ್ಯಾಂಕುಗಳು ನಡೆಸುವ ಪರೀಕ್ಷೆಗಳನ್ನು ಯಾವುದೇ ಒಂದು ವಿಭಾಗಕ್ಕೆ ಸೀಮಿತಗೊಳಿಸಿದರೆ, ವಿಶ್ವವಿದ್ಯಾಲಯಗಳು ನೀಡುವ ಪದವಿಗಳಿಗೆ ಕಿಮ್ಮತ್ತು ಇಲ್ಲದಂತೆ ಆಗುತ್ತದೆ. ಇಂತಹ ಕಠಿಣ ಆಲೋಚನೆಯು ಹಿರಿಯ ಅಧಿಕಾರಿಗಳ ಮನಸ್ಸಿಗೆ ಹೇಗೆ ಬಂತು ಎಂದು ಯೋಚಿಸುವಂತೆ ಆಗುತ್ತದೆ.

ಬ್ಯಾಂಕ್ ನಿಗದಿಪಡಿಸುವ ಸ್ಪರ್ಧಾತ್ಮಕ ಪರೀಕ್ಷೆ, ಸಂದರ್ಶನ ಎದುರಿಸಿ ಗೆಲ್ಲುವ ಯಾವುದೇ ಅಭ್ಯರ್ಥಿ ಉದ್ಯೋಗದ ಅವಕಾಶ ಪಡೆಯುವಂತೆ ಆಗಬೇಕು. ಎಂಜಿನಿಯರಿಂಗ್ ಓದಿದವರು ತಮ್ಮ ಕ್ಷೇತ್ರದಲ್ಲೇ ಉದ್ಯೋಗ ಅರಸಿಕೊಳ್ಳಲಿ ಎನ್ನಲಾಗದು. ಆದರೆ 'ಪದವಿ' ಎಂಬುದೇ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲು ಮಾನದಂಡವಾಗಬೇಕು. ನಮಗೆಲ್ಲ ತಿಳಿದಿರುವಂತೆ, ರೈಲ್ವೆ, ಅಂಚೆ, ಬಿಎಸ್‌ಎನ್‌ಎಲ್, ಬ್ಯಾಂಕುಗಳಲ್ಲಿ ಹೊರರಾಜ್ಯದವರನ್ನು ರತ್ನಗಂಬಳಿ ಹಾಸಿ ಕರೆದಾಗಿದೆ. ಇನ್ನು ಈಗ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮತ್ತೊಂದು ಹೊಸ ಅವತಾರವೇ?

ತಿರುಪತಿ ನಾಯಕ್, ಹೊಸನಗರ

ರಾಹುಕಾಲದಲ್ಲಿ ಗೃಹಪ್ರವೇಶ: ಸ್ತುತ್ಯರ್ಹ ನಡೆ

ಮೈಸೂರು ಜಿಲ್ಲೆಯ ಕೆ.ಆರ್.ನಗರದಲ್ಲಿ ಭಾನುವಾರ ಲೇಖಕ ಹಾಗೂ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ವಿಜ್ಞಾನ ವಿಭಾಗದ ಮುಖ್ಯಸ್ಥ ಎನ್.ಆರ್.ಶಿವರಾಂ ಅವರು ತಮ್ಮ ಮನೆಯ ಗೃಹಪ್ರವೇಶವನ್ನು ರಾಹುಕಾಲದಲ್ಲಿ ನೆರವೇರಿಸಿದ ಸುದ್ದಿ ಓದಿ (ಪ್ರ.ವಾ., ಮೇ 13) ಸ್ವಲ್ಪ ಆಶ್ಚರ್ಯವಾಯಿತು. ನಾವು ಎಷ್ಟೇ ಮೂಢನಂಬಿಕೆ ವಿರೋಧಿಗಳು ಎಂದುಕೊಂಡರೂ ಕೆಲವೊಮ್ಮೆ ರಾಹುಕಾಲ, ಗುಳಿಕಕಾಲ, ಯಮಗಂಡಕಾಲ, ಅಮಾವಾಸ್ಯೆ, ಹುಣ್ಣಿಮೆಯಂತಹ ವಿಷಯಗಳಲ್ಲಿ ಸ್ವಲ್ಪ ಹುಷಾರಾಗಿ ನಡೆದುಕೊಳ್ಳುತ್ತೇವೆ. ಶುಭಕಾರ್ಯಗಳನ್ನು ಕೈಗೊಳ್ಳುವ ಸಮಯದಲ್ಲಂತೂ ಬಹುಪಾಲು ಇವುಗಳನ್ನೆಲ್ಲ ಪರಿಗಣಿಸುತ್ತೇವೆ.

ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ ಎಂಬಂತೆ, ಆಕಸ್ಮಿಕವಾಗಿ ಏನಾದರೂ ಕೆಟ್ಟದ್ದು ಸಂಭವಿಸಿದರೂ ಶುಭ ಗಳಿಗೆಯಲ್ಲಿ ಶುಭಾರಂಭ ಮಾಡದಿದ್ದುದೇ ಇದಕ್ಕೆ ಕಾರಣ ಎಂಬ ಅಳುಕು ಬಂದುಬಿಡುತ್ತದೆ. ಅಂತಹುದರಲ್ಲಿ ವಿಜ್ಞಾನ ವಿಭಾಗದ ಮುಖ್ಯಸ್ಥರ ಈ ಧೈರ್ಯದ ಹೆಜ್ಜೆಯನ್ನು ಮೆಚ್ಚಲೇಬೇಕು.

ಟಿ.ಎಸ್.ಪ್ರತಿಭಾ, ಚಿತ್ರದುರ್ಗ

ಇವರು ಯಾರಿಗೆ ಮಾದರಿ?

ಆಂಧ್ರಪ್ರದೇಶದಲ್ಲಿ ಆಡಳಿತ ಪಕ್ಷದ ಶಾಸಕರೊಬ್ಬರು ತಾವು ಮತದಾನ ಮಾಡಲು ಸರದಿ ಸಾಲಿನಲ್ಲಿ ನಿಲ್ಲದೆ ನೇರವಾಗಿ ಮತಗಟ್ಟೆಗೆ ತೆರಳಿದ್ದನ್ನು ಆಕ್ಷೇಪಿಸಿದ ಮತದಾರನೊಬ್ಬನಿಗೆ ಕಪಾಳಕ್ಕೆ ಹೊಡೆದಿರುವುದು ದುರದೃಷ್ಟಕರ. ಕ್ರಿಕೆಟ್ ತಾರೆ, ಸಿನಿಮಾ ತಾರೆಯರಾದಿಯಾಗಿ ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದ್ದನ್ನು ನಾವೆಲ್ಲ ಮಾಧ್ಯಮಗಳ ಮೂಲಕ ನೋಡಿದ್ದೇವೆ. ಇನ್ನು ಶಾಸಕರಾದವರಿಗೆ ಬೇರೆ ನಿಯಮ ಇರುತ್ತದೆಯೇ? ಜನಪ್ರತಿನಿಧಿಯಾದವರು ಈ ರೀತಿ ವರ್ತಿಸುವುದು ಒಳ್ಳೆಯದಲ್ಲ. ಇಂತಹ ಮನೋಭಾವ ಹೊಂದಿರುವವರು ಜನಸೇವೆಯನ್ನು ಹೇಗೆ ಮಾಡಬಲ್ಲರು?

ಎಂ.ಪರಮೇಶ್ವರ ಮದ್ದಿಹಳ್ಳಿ, ಹಿರಿಯೂರು

ಕರುಳು ಮಿಡಿಯಲಿ, ಮಾನವತೆ ಗೆಲ್ಲಲಿ

ತಂದೆ- ತಾಯಿಯನ್ನು ಹೆತ್ತ ಮಕ್ಕಳೇ ಮನೆಯಿಂದ ಆಚೆ ಹಾಕುತ್ತಿದ್ದು, ವೃದ್ಧಾಶ್ರಮಗಳಿಗೆ ಸೇರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದು ಇಂದಿನ ಆಧುನಿಕ ಮತ್ತು ಬದಲಾಗುತ್ತಿರುವ ಸಮಾಜಕ್ಕೆ ಹಿಡಿದ ಕನ್ನಡಿಯಂತಿದೆ. ಈ ವಿಷಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಮಾನವೀಯ ಮೌಲ್ಯಗಳು ಮತ್ತು ಸಂವೇದನಾಶೀಲತೆಯ ಕೊರತೆ ಸಮಾಜದಲ್ಲಿ ಎದ್ದು ಕಾಣುತ್ತಿರುವುದು ತಿಳಿಯುತ್ತದೆ.

ಬರೀ ಅಂಕಗಳ ಅಳತೆಗೋಲಿನಲ್ಲಿ ಶಿಕ್ಷಣ ಇರುವುದು, ದುಡ್ಡನ್ನು ಸಂಪಾದನೆ ಮಾಡಬೇಕಾದ ಮನುಷ್ಯನನ್ನೇ ದುಡ್ಡು ಸಂಪಾದನೆ ಮಾಡುತ್ತಿರುವಂತಹ ಬೆಳವಣಿಗೆಗಳು, ಬಿಡುವಿಲ್ಲದ ಯಾಂತ್ರಿಕ ದುಡಿಮೆ, ಆಧುನೀಕರಣ, ಅವಿಭಕ್ತ ಕುಟುಂಬಗಳು ಮರೆಯಾಗಿರುವುದು, ಜನಜೀವನ ಸುಧಾರಣೆಗೆ ಪೂರಕವಾದ ಯೋಜನೆಗಳಲ್ಲಿ ಸರ್ಕಾರದ ನಿರ್ಲಕ್ಷ್ಯ... ಹೀಗೆ ಎಲ್ಲವುಗಳ ಪಾತ್ರವೂ ಇದರಲ್ಲಿ ಹಾಸುಹೊಕ್ಕಿದೆ. ಪೋಷಕರಾದರೇನು, ಮಕ್ಕಳಾದರೇನು ಕರುಳು ಮಿಡಿಯಲೇಬೇಕಲ್ಲವೇ? ಆದರೆ ಅದಕ್ಕೆ ಪೂರಕವಾದ ವಾತಾವರಣ ಇರಬೇಕಷ್ಟೆ.

ರಾಜು ವೆಂಕಟಪ್ಪ, ಕುಣಿಗಲ್

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿಯಲ್ಲಿ 75ಕ್ಕೆ ನಿವೃತ್ತಿ

ಎಲ್ಲರಿಗೂ ಅನ್ವಯಿಸದು

ಪ್ರಜಾವಾಣಿ ವಾರ್ತೆ

75 ವರ್ಷ ದಾಟಿದ ನಾಯಕರನ್ನು ಸಕ್ರಿಯ ರಾಜಕಾರಣದಿಂದ ದೂರ ಇರಿಸುವ ಪರಿಪಾಟವು ಬಿಜೆಪಿಯಲ್ಲಿ ಇದೆ. ಇಂಥವರಲ್ಲಿ ಕೆಲವರನ್ನು ಮಾರ್ಗದರ್ಶಕ ಮಂಡಳಿಯ ಸದಸ್ಯರನ್ನಾಗಿ ಮಾಡಲಾಗಿದೆ. 75 ವರ್ಷ ತುಂಬಿದ ಮೇಲೆ ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾಗಬೇಕು ಎಂಬಂಥ ನಿಯಮ ಇದೆ ಎಂಬುದನ್ನು ಬಿಜೆಪಿ ನೇರವಾಗಿ ಎಲ್ಲಿಯೂ ಹೇಳಿಲ್ಲ. ಆದರೆ, 2014ರ ಬಳಿಕ ಬಿಜೆಪಿಯು ಇಂಥದ್ದೊಂದು ಮಂಡಳಿಯನ್ನು ಸ್ಥಾಪಿಸಿದೆ.

ಹಿರಿಯರು ತಮ್ಮ ಅಗಾಧ ಅನುಭವದಿಂದ ಸರ್ಕಾರಕ್ಕೆ, ನಾಯಕತ್ವಕ್ಕೆ ಮಾರ್ಗದರ್ಶನ ನೀಡಬೇಕು ಎಂಬ ಕಾರಣಕ್ಕಾಗಿ ಈ ಮಂಡಳಿಯನ್ನು ಸ್ಥಾಪಿಸಲಾಗಿದೆ ಎಂದು ಬಿಜೆಪಿ ಆಗ ಹೇಳಿಕೊಂಡಿತ್ತು. ಕೆಲವೇ ಬಾರಿ ಈ ಮಂಡಳಿಯು ಸರ್ಕಾರ ನಡೆಸುವವರಿಗೆ ಮಾರ್ಗದರ್ಶನ ಮಾಡುವ ಪ್ರಯತ್ನ ಮಾಡಿತ್ತು. 2015ರ ಬಿಹಾರ ಚುನಾವಣೆ ಸೋಲಿನ ಬಳಿಕ, ಪತ್ರಿಕಾ ಪ್ರಕಟಣೆಯನ್ನೂ ಹೊರಡಿಸಿತ್ತು. ಆದರೆ, ಅಧಿಕಾರಸ್ಥರು ಹಿರಿಯರ ಮಾರ್ಗದರ್ಶನವನ್ನು ತಣ್ಣಗೇ ತಳ್ಳಿ ಹಾಕಿದ್ದರು. ಅಲ್ಲಿಂದೀಚೆಗೆ ಯಾವ ಮಾರ್ಗದರ್ಶನವನ್ನೂ ಈ ಮಂಡಳಿ ನೀಡಿಲ್ಲ. ಮಂಡಳಿಯ ಸಭೆ ನಡೆದ ಬಗ್ಗೆ ವರದಿಗಳಿಲ್ಲ.

ಗುಜರಾತ್ ಮುಖ್ಯಮಂತ್ರಿಯಾಗಿದ್ದ ಆನಂದಿಬೆನ್ ಪಟೇಲ್ ಅವರು ತಮಗೆ 75 ತುಂಬುವುದಕ್ಕೆ ಮೊದಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 75 ವರ್ಷ ತುಂಬಿದವರು ನಿವೃತ್ತರಾಗಬೇಕು ಎಂಬ ಪಕ್ಷದ ನಿಯಮದ ಕಾರಣ ನೀಡಿಯೇ ಅವರು ರಾಜೀನಾಮೆ ನೀಡಿದ್ದರು. ಹಿರಿಯ ನಾಯಕ ಯಶವಂತ್ ಸಿನ್ಹಾ ಅವರು ಈ ಅಲಿಖಿತ ನಿಯಮವನ್ನು ಬಹಿರಂಗವಾಗಿಯೇ ಟೀಕಿಸಿದ್ದರು. 'ಅಡ್ವಾಣಿ, ಮುರಳಿ ಮನೋಹರ ಜೋಷಿ ಸೇರಿದಂತೆ 75 ವರ್ಷ ತುಂಬಿದ ಹಿರಿಯರು ಚುನಾವಣೆಯಲ್ಲಿ ಸ್ಪರ್ಧಿಸದಂತೆ, ಅವರನ್ನು ಮೂಲೆಗುಂಪು ಮಾಡಲು 'ಅವರು' ಇಂಥ ನಿಯಮವೊಂದನ್ನು ಮಾಡಿದ್ದಾರೆ' ಎಂದಿದ್ದರು. 2014ರಿಂದ ಈಚೆಗೆ ಇದೇ ನಿಯಮದ ಕಾರಣಕ್ಕಾಗಿ, ಬಿಜೆಪಿ ಸರ್ಕಾರವಿದ್ದ ಹಲವು ರಾಜ್ಯಗಳಲ್ಲಿಯೂ ಕೇಂದ್ರ ಸರ್ಕಾರದಲ್ಲಿಯೂ ಸಚಿವ ಸ್ಥಾನದಲ್ಲಿದ್ದ 75 ವರ್ಷ ತುಂಬಿದ ನಾಯಕರು ಸ್ಥಾನ ತ್ಯಜಿಸಿದ್ದರು.

ನರೇಂದ್ರ ಮೋದಿ ಅವರಿಗೆ ಮುಂದಿನ ವರ್ಷ 75 ವರ್ಷ ತುಂಬಲಿದೆ. ಅಮಿತ್ ಶಾ ಅವರು ಮುಂದಿನ ಪ್ರಧಾನಿ ಆಗಲಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆಗೊಂಡ ಮರುದಿನ ಹೇಳಿಕೆ ನೀಡಿದರು. ಚುನಾವಣೆ ನಡೆಯುತ್ತಿರುವ ಈ ಹೊತ್ತಿನಲ್ಲಿ ಈ ಹೇಳಿಕೆಯು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಹಲವು ನಾಯಕರು ಮೋದಿ ಅವರೇ ಪ್ರಧಾನಿಯಾಗಲಿದ್ದಾರೆ ಎಂದರು. 'ಬಿಜೆಪಿಯಲ್ಲಿ ಇಂಥದ್ದೊಂದು ನಿಯಮವಿಲ್ಲ' ಎಂದು ಪತ್ರಿಕಾ ಗೋಷ್ಠಿಯೊಂದರಲ್ಲಿ ಗೃಹ ಸಚಿವ ಅಮಿತ್ ಶಾ ಅವರು ಹೇಳಿಕೆ ಕೊಟ್ಟರು. ಆದರೆ, 2019ರಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಅಮಿತ್ ಶಾ ಅವರು 'ದಿ ವೀಕ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ, '75 ವರ್ಷ ಮೇಲ್ಪಟ್ಟ ಯಾರಿಗೂ ಈ ಬಾರಿ ಟಿಕೆಟ್ ನೀಡಲಾಗಿಲ್ಲ. ಇದು ಪಕ್ಷದ ನಿರ್ಧಾರ' ಎಂದಿದ್ದರು.

ಆಧಾರ: ಪಿಟಿಐ

2014ರ ಬಳಿಕ, 75 ವರ್ಷ ತುಂಬಿದ್ದರಿಂದಾಗಿ ಸಕ್ರಿಯ ರಾಜಕಾರಣದಿಂದ ದೂರ ಸರಿದ ಬಿಜೆಪಿಯ ಕೆಲವು ನಾಯಕರ ಉದಾಹರಣೆಗಳು ಇಲ್ಲಿವೆ

ಎಲ್.ಕೆ. ಅಡ್ವಾಣಿ



ಬಿಜೆಪಿ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು ಅಡ್ವಾಣಿ. ಎರಡೇ ಸ್ಥಾನಗಳಿಂದ ಆರಂಭವಾಗಿ ಬಿಜೆಪಿಯು ಕೇಂದ್ರದಲ್ಲಿ ಅಧಿಕಾರಕ್ಕೇರುವವರೆಗೂ ಪಕ್ಷಕ್ಕೆ ಅಡ್ವಾಣಿಯವರ ಕೊಡುಗೆ ಅಪಾರವಿತ್ತು. 'ಮಾರ್ಗದರ್ಶಕ ಮಂಡಳಿ'ಗೆ ಸೇರಿಸಲಾದ ಮೊದಲ ನಾಯಕರೂ ಇವರೇ. ಮಂಡಳಿಗೆ ಸೇರಿದ 10 ವರ್ಷಗಳ ಬಳಿಕ, ಅವರಿಗೆ ಕೇಂದ್ರವು 'ಭಾರತ ರತ್ನ'ವನ್ನೂ ನೀಡಿದೆ. ಈಗಲೂ ಅಡ್ವಾಣಿ ಅವರು ಮಾರ್ಗದರ್ಶಕ ಮಂಡಳಿಯ ಸದಸ್ಯರೇ ಆಗಿದ್ದಾರೆ.

2014ರಲ್ಲಿ ಅಡ್ವಾಣಿ ಅವರೇ ಪ್ರಧಾನಿ ಅಭ್ಯರ್ಥಿ ಎಂಬಂಥ ಮಾತುಗಳು ಆರಂಭವಾಗಿದ್ದವು. ಆದರೆ, ಗುಜರಾತ್‌ನ ಮುಖ್ಯಮಂತ್ರಿ ಯಾಗಿದ್ದ ನರೇಂದ್ರ ಮೋದಿ ಅವರನ್ನು ಕ್ಷಿಪ್ರ ಬೆಳವಣಿಗೆಯಲ್ಲಿ ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಲಾಯಿತು. ಬಿಜೆಪಿಯಲ್ಲಿ ಅದಾಗಲೇ ಅಡ್ವಾಣಿ ಪಾಳಯ ಹಾಗೂ ಮೋದಿ ಪಾಳಯ ಎಂಬ ಎರಡು ಭಾಗಗಳಾಗಿದ್ದವು. ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಲೇ ಬಿಜೆಪಿಯ ಸಂಸದೀಯ ಸಮಿತಿಯ ರಚನೆಯಾಯಿತು. ಈ ಸಮಿತಿಯಿಂದ ಅಡ್ವಾಣಿ ಹಾಗೂ ಅಟಲ್ ಬಿಹಾರಿ ವಾಜಪೇಯಿ, ಮುರಳಿ ಮನೋಹರ ಜೋಷಿ ಅವರನ್ನು ಕೈಬಿಡಲಾಯಿತು. 2014ರಲ್ಲಿ ಅಡ್ವಾಣಿ ಅವರು ಗುಜರಾತ್‌ನ ಗಾಂಧಿನಗರ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದರು. ತಾವೇ ಖುದ್ದು ನಿಂತು ಗೆಲ್ಲಿಸಿ ಕೊಡುವುದಾಗಿ ಮೋದಿ ಅವರು ಪಣವನ್ನೂ ತೊಟ್ಟಿದ್ದರು. ಅಡ್ವಾಣಿಯವರ 'ನಿವೃತ್ತಿ'ಯ ನಂತರ ಗಾಂಧಿನಗರ ಲೋಕಸಭಾ ಕ್ಷೇತ್ರವು ಅಮಿತ್ ಶಾ ಅವರ ಪಾಲಾಯಿತು.

ಮುರಳಿ ಮನೋಹರ ಜೋಷಿ



ಬಿಜೆಪಿ ಸ್ಥಾಪಕರಲ್ಲಿ ಜೋಷಿ ಅವರೂ ಒಬ್ಬರು. ಮಾರ್ಗದರ್ಶಕ ಮಂಡಳಿಯ ಸದಸ್ಯ. ವಾರಾಣಸಿಯು ಜೋಷಿ ಅವರ ಕ್ಷೇತ್ರವಾಗಿತ್ತು. 2014ರಲ್ಲಿ ಮೋದಿ ಅವರಿಗಾಗಿ ಜೋಷಿ ಅವರು ಈ ಕ್ಷೇತ್ರವನ್ನು ಬಿಟ್ಟುಕೊಟ್ಟರು. ನಂತರ, ಕಾನ್ಪುರದಿಂದ ಸ್ಪರ್ಧಿಸಿ ಶೇ 57ರಷ್ಟು ಮತಗಳನ್ನು ಗಳಿಸಿ, ಗೆಲುವು ಸಾಧಿಸಿದ್ದರು. ಆದರೆ, 2019ರಲ್ಲಿ ಅವರಿಗೆ ಟಿಕೆಟ್ ನಿರಾಕರಿಸಲಾಯಿತು.

'ನೀವಾಗಿಯೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದುಬಿಡಿ. ಪಕ್ಷವೇ ಈ ತೀರ್ಮಾನ ತೆಗೆದುಕೊಂಡರೆ, ಪಕ್ಷಕ್ಕೆ ಮುಜುಗರವಾಗಲಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿಯೊಬ್ಬರು ಜೋಷಿ ಅವರಲ್ಲಿ ಮನವಿ ಮಾಡಿದ್ದರು ಎಂಬ ವದಂತಿಗಳು ಆಗ ಜೋರಾಗಿಯೇ ಹರಿದಾಡಿದ್ದವು. ಈ ಬಗ್ಗೆ ಜೋಷಿ ಅವರು ಅಸಮಾಧಾನವನ್ನೂ ಹೊರಹಾಕಿದ್ದರು ಎನ್ನಲಾಗಿತ್ತು. ಜೋಷಿ ಅವರು ಅಂದಾಜು ಸಮಿತಿಯ ಮುಖ್ಯಸ್ಥರಾಗಿದ್ದರು. ತಮ್ಮ ವರದಿಗಳ ಮೂಲಕ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಮುಜುಗರಕ್ಕೂ ತಳ್ಳಿದ್ದರು. ರಕ್ಷಣಾ ಸನ್ನದ್ಧತೆ, ಗಂಗಾ ಸ್ವಚ್ಛತೆ ಹಾಗೂ ಬ್ಯಾಂಕುಗಳ ವಸೂಲಾಗದ ಸಾಲಗಳ ಬಗ್ಗೆ ವರದಿ ನೀಡಿದ್ದರು.

ಶಾಂತ ಕುಮಾರ್



ಹಿಮಾಚಲ ಪ್ರದೇಶದ ಪ್ರಭಾವಿ ರಾಜಕಾರಣಿ. ಶಾಂತ ಕುಮಾರ್ ಅವರು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು. 2014ರ ಲೋಕಸಭಾ ಚುನಾವಣೆಯಲ್ಲಿ ಸುಮಾರು 1.70 ಲಕ್ಷ ಮತಗಳಿಂದ ಕಾಂಗ್ರೆಸ್ ವಿರುದ್ಧ ಗೆಲುವು ಸಾಧಿಸಿದ್ದರು. ಆದರೂ 2019ರ ಲೋಕಸಭಾ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ನಿರಾಕರಿಸಲಾಯಿತು. ಅಭ್ಯರ್ಥಿ ಪಟ್ಟಿ ಬಿಡುಗಡೆ ಮಾಡಿದಾಗ ಪಟ್ಟಿಯಲ್ಲಿ ಅವರ ಹೆಸರು ಇರಲಿಲ್ಲ. ಬಳಿಕ, ತಾವು ಚುನಾವಣಾ ರಾಜಕಾರಣದಿಂದ ದೂರ ಸರಿಯುವುದಾಗಿ ಅವರು ಹೇಳಿದರು. 'ಇತ್ತೀಚಿನ ರಾಜಕಾರಣವು ಹದಗೆಟ್ಟಿದೆ. ಇದಕ್ಕೆ ಬಿಜೆಪಿಯೂ ಹೊರತಾಗಿಲ್ಲ. ರಾಮಮಂದಿರವನ್ನು ನಿರ್ಮಿಸಿದರೆ ಸಾಲದು, ಇದು ಸಹಾಯವಾಗದು. ನಾವು ರಾಮನ ಆದರ್ಶಗಳನ್ನು ಪಾಲಿಸಬೇಕು' ಎಂದು ಇತ್ತೀಚೆಗೆ ಹೇಳಿಕೆ ನೀಡಿದ್ದಾರೆ.

ಬಿ.ಎಸ್. ಯಡಿಯೂರಪ್ಪ



2019ರ ಜುಲೈನಲ್ಲಿ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ವಯಸ್ಸಿನ ಕಾರಣ ಮುಂದಿಟ್ಟು 2021ರ ಜುಲೈನಲ್ಲಿ ಅಧಿಕಾರದಿಂದ ಕೆಳಕ್ಕಿಳಿಸಲಾಯಿತು. ಬಿಜೆಪಿ ಹೈಕಮಾಂಡ್‌ನ ಆದೇಶದಂತೆ ಅಧಿಕಾರ ತ್ಯಜಿಸಿದ್ದ ಯಡಿಯೂರಪ್ಪ, '75 ವರ್ಷವಾದ ನಂತರವೂ ಎರಡು ವರ್ಷ ಮುಖ್ಯಮಂತ್ರಿ ಹುದ್ದೆಯಲ್ಲಿರಲು ಅವಕಾಶ ನೀಡಿದ ಬಿಜೆಪಿ ಹೈಕಮಾಂಡ್‌ಗೆ ಆಭಾರಿ' ಎಂದಿದ್ದರು.

ಯಡಿಯೂರಪ್ಪ ಅವರನ್ನು 2021ರಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕಿಳಿಸಿ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿದರೂ ಪಕ್ಷಕ್ಕೆ ರಾಜಕೀಯವಾಗಿ ಅನುಕೂಲ ಆಗಲಿಲ್ಲ. ಲಿಂಗಾಯತ ಸಮುದಾಯದ ವರ್ಚಸ್ವಿ ನಾಯಕ ಎಂಬ ಕಾರಣಕ್ಕಾಗಿ ಮತ್ತೆ ಯಡಿಯೂರಪ್ಪ ಅವರನ್ನು ಮುನ್ನೆಲೆಗೆ ತರಲು ಯತ್ನಿಸಿದ ಬಿಜೆಪಿ, ಅವರಿಗೆ ಪಕ್ಷದ ಸಂಸದೀಯ ಮಂಡಳಿ ಸದಸ್ಯ ಸ್ಥಾನ ನೀಡಿತು.

ಯಶವಂತ್ ಸಿನ್ಹಾ



'...ಚುನಾವಣಾ ರಾಜಕಾರಣವನ್ನು ಸರಿಯಾದ ಸಮಯಕ್ಕೆ ಪ್ರವೇಶಿಸಬೇಕು, ಅಲ್ಲಿಂದ ಸರಿಯಾದ ಸಮಯಕ್ಕೆ ನಿರ್ಗಮಿಸಬೇಕು' ಎಂದವರು ಬಿಜೆಪಿಯ ಹಿರಿಯ ನಾಯಕ, ವಾಜಪೇಯಿ ಅವರ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದ ಯಶವಂತ್ ಸಿನ್ಹಾ. ತಾವು ಯಾಕೆ ಸ್ಪರ್ಧಿಸುತ್ತಿಲ್ಲ ಎನ್ನುವ ಕುರಿತು 2014ರಲ್ಲಿ ಸಿನ್ಹಾ ಅವರು ಪತ್ರವೊಂದನ್ನು ಬರೆದಿದ್ದರು. ಮೇಲಿರುವುದು ಈ ಪತ್ರದಲ್ಲಿನ ಸಾಲುಗಳು. ಅವರನ್ನು ಅದಾಗಲೇ ಮಾರ್ಗದರ್ಶಕ ಮಂಡಳಿಗೆ ಸೇರಿಸಲಾಗಿತ್ತು.

ಮೋದಿ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿದ್ದನ್ನು ಸಿನ್ಹಾ ವಿರೋಧಿಸಿದ್ದರು. ಸರ್ಕಾರ ರಚನೆಯಾದ ಬಳಿಕವೂ ಸಿನ್ಹಾ ಅವರು ಸರ್ಕಾರದ, ಪಕ್ಷದ ಕಟು ವಿಮರ್ಶಕರಾಗಿದ್ದರು. ಇದೇ ಕಾರಣಕ್ಕೆ ಪಕ್ಷವು ಅವರನ್ನು ದೂರವೇ ಇಟ್ಟಿತ್ತು. 'ಪಕ್ಷವನ್ನು ಬಿಟ್ಟು ಹೋಗಿ' ಎಂದೂ ಹಲವು ನಾಯಕರು ಸಿನ್ಹಾ ಅವರಿಗೆ ಹೇಳಿದ್ದರು. '75 ವರ್ಷ ತುಂಬಿದ ಎಲ್ಲರ ಮಿದುಳು 2014ರ ಮೇ 26ರಂದು (ಮೋದಿ ಅವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದಿನ) ನಿಷ್ಕ್ರಿಯವಾದವು' ಎಂದಿದ್ದರು ಅವರು. 2018ರಲ್ಲಿ ಅವರು ಬಿಜೆಪಿಯನ್ನು ತೊರೆದರು.

ಕಲ್‌ರಾಜ್ ಮಿಶ್ರಾ

75 ವರ್ಷ ತುಂಬಿದ ಬಳಿಕವೂ ಕೇಂದ್ರದಲ್ಲಿ ಸಚಿವರಾಗಿದ್ದ ಕಲ್‌ರಾಜ್ ಮಿಶ್ರಾ ಅವರನ್ನು ಮಾತ್ರ ಸಂಪುಟದಲ್ಲಿ ಮುಂದುವರಿಸಲಾಗಿತ್ತು. 2017ರಲ್ಲಿ ಉತ್ತರ ಪ್ರದೇಶದಲ್ಲಿ ವಿಧಾನಸಭೆಗೆ ಚುನಾವಣೆ ನಡೆಯುವುದರಲ್ಲಿತ್ತು. ಇಲ್ಲಿನ ಪ್ರಭಾವಿ ನಾಯಕರಾಗಿದ್ದ ಕಾರಣಕ್ಕಾಗಿಯೇ ಅವರನ್ನು ಉಳಿಸಿಕೊಳ್ಳಲಾಗಿದೆ ಎನ್ನಲಾಗಿತ್ತು. ನಿಮಗೆ 75 ವರ್ಷ ತುಂಬಿದೆ. ಆದರೂ ನೀವೇಕೆ ಇನ್ನು ರಾಜೀನಾಮೆ ನೀಡಿಲ್ಲ ಎಂದು ಪತ್ರಕರ್ತರು ಒಮ್ಮೆ ಮಿಶ್ರಾ ಅವರಿಗೆ ಪ್ರಶ್ನೆ ಕೇಳಿದ್ದರು. ಇದಕ್ಕೆ ಉತ್ತರಿಸಿದ್ದ ಅವರು, ಪಕ್ಷದಲ್ಲಿ ಇಂಥದ್ದೊಂದು ನಿಯಮ ಇರುವ ಬಗ್ಗೆಯೇ ಮಾಹಿತಿ ಇರಲಿಲ್ಲ ಎಂದಿದ್ದರು. ನಂತರ, ಉತ್ತರ ಪ್ರದೇಶದ ಚುನಾವಣೆ ಮುಗಿದ ಬಳಿಕ ರಾಜೀನಾಮೆ ನೀಡಿದ್ದರು. 'ಚುನಾವಣೆಗೂ ಮೊದಲೇ ರಾಜೀನಾಮೆ ನೀಡಲು ಸಿದ್ಧನಿದ್ದೆ' ಎಂದು ರಾಜೀನಾಮೆ ನೀಡುವ ಸಂದರ್ಭದಲ್ಲಿ ಹೇಳಿದ್ದರು. ಈಗ ಮಿಶ್ರಾ ಅವರು ರಾಜಸ್ಥಾನದ ರಾಜ್ಯಪಾಲರಾಗಿದ್ದಾರೆ.

ಸುಮಿತ್ರಾ ಮಹಾಜನ್



'ಹಿರಿಯಕ್ಕ' ಎಂದೇ ಪ್ರಸಿದ್ಧರಾದವರು ಸುಮಿತ್ರಾ ಮಹಾಜನ್. ಮಧ್ಯ ಪ್ರದೇಶದ ಇಂದೋರ್‌ನಿಂದ ಎಂಟು ಬಾರಿ ಸಂಸದೆಯಾಗಿ ಆಯ್ಕೆಯಾದವರು. 2014ರಲ್ಲಿ ಅವರನ್ನು ಲೋಕಸಭೆಯ ಸ್ಪೀಕರ್ ಆಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. 2019ರ ಲೋಕಸಭಾ ಚುನಾವಣೆಗೆ ಇಂದೋರ್‌ನ ಅಭ್ಯರ್ಥಿಯ ಪಟ್ಟಿಯನ್ನು ಪಕ್ಷ ಬಿಡುಗಡೆ ಮಾಡಲೇ ಇಲ್ಲ. ಅದಾಗಲೇ 75 ವರ್ಷ ತುಂಬಿದವರಿಗೆ ಟಿಕೆಟ್ ಇಲ್ಲ ಎನ್ನುವ ಪಕ್ಷದ ನಿರ್ಧಾರ ಹೊರಬಿದ್ದಿತ್ತು. ಇದನ್ನು ಗಮನಿಸಿದ ಸುಮಿತ್ರಾ ಅವರು ಪತ್ರವೊಂದನ್ನು ಬರೆದು, ತಾವು ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದಿದ್ದರು. 'ಪಕ್ಷವು ಇಲ್ಲಿಯವರೆಗೂ ಅಭ್ಯರ್ಥಿಯನ್ನು ಘೋಷಿಸಿಲ್ಲ. ಯಾಕೆ ಈವರೆಗೂ ನಿರ್ಧಾರ ಮಾಡಲಾಗಿಲ್ಲ? ನಿರ್ಧಾರ ತಿಳಿಸಲು ಪಕ್ಷವು ಹಿಂಜರಿಯುತ್ತಿದೆಯೇ? ನಾನೇ ಘೋಷಿಸಿಸುತ್ತೇನೆ. ನಾನು ಚುನಾವಣೆಗೆ ಸ್ಪರ್ಧಿಸುವುದಿಲ್ಲ. 75 ವರ್ಷ ತುಂಬಿದವರಿಗೆ ಟಿಕೆಟ್ ಇಲ್ಲ ಎನ್ನಲಾಗುತ್ತಿದೆ. ಈಗ ಪಕ್ಷವು ತನ್ನ ನಿರ್ಧಾರ ಪ್ರಕಟಿಸಲು ಸ್ವತಂತ್ರವಾಗಿದೆ' ಎಂದಿದ್ದರು. ಈ ಬಾರಿ, ಇಂದೋರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯು ಕೊನೇ ಕ್ಷಣದಲ್ಲಿ ತಮ್ಮ ನಾಮಪತ್ರವನ್ನು ವಾಪಸ್ ಪಡೆದು, ನಂತರ ಬಿಜೆಪಿ ಸೇರಿಕೊಂಡರು. ಈ ಬಗ್ಗೆ ಪ್ರತಿಕ್ರಿಯಿಸಿದ ಸುಮಿತ್ರಾ ಅವರು, 'ಇದು ಅನ್ಯಾಯ. ತಮ್ಮ ಸಂಸದ ಯಾರು ಆಗಬೇಕು ಎನ್ನುವ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಮತದಾರನಿಗೆ ಇದೆ' ಎಂದಿದ್ದರು.

ಸಿನಿ ಬಿಟ್ಸ್

ಶೀಘ್ರದಲ್ಲೇ ನಾಮನಿರ್ದೇಶಿತರ ಪಟ್ಟಿ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಜೂನ್‌ನಲ್ಲಿ ಪ್ರಶಸ್ತಿ ವಿತರಣೆ ಕಾರ್ಯಕ್ರಮ ನಡೆಯಲಿದ್ದು, ಶೀಘ್ರದಲ್ಲೇ ಪ್ರಶಸ್ತಿಗೆ ನಾಮನಿರ್ದೇಶಿತರಾದವರ ಹೆಸರುಗಳ ಘೋಷಣೆಯಾಗಲಿದೆ.

ಈ ಸಾಲಿನ ಪ್ರಶಸ್ತಿಗೆ 2023ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದ್ದು, ನೂರಕ್ಕೂ ಅಧಿಕ ಸಿನಿಮಾಗಳು ಸ್ಪರ್ಧೆಯಲ್ಲಿ ಭಾಗವಹಿಸಿವೆ. ಈ ಸಿನಿಮಾಗಳನ್ನು ತಾಂತ್ರಿಕ ತೀರ್ಪುಗಾರರು ವೀಕ್ಷಿಸಿ ನಾಮನಿರ್ದೇಶಿತರ ಪಟ್ಟಿಯನ್ನು ಸಿದ್ಧಪಡಿಸಿದ್ದಾರೆ. 'ಪ್ರತಿಭಾನ್ವಿತ ಕಲಾವಿದರು' ವಿಭಾಗದಲ್ಲಿ 15 ಪ್ರಶಸ್ತಿಗಳು, 'ಜನಮೆಚ್ಚಿದ ವಿಭಾಗ'ದಲ್ಲಿ ನಾಲ್ಕು ಪ್ರಶಸ್ತಿಗಳು ಹಾಗೂ 'ಜೀವಮಾನ ಸಾಧನೆ' ವಿಭಾಗದಲ್ಲಿ ತಲಾ ಐದು ಜನರನ್ನು ತಾಂತ್ರಿಕ ತೀರ್ಪುಗಾರರು ನಾಮನಿರ್ದೇಶನ ಮಾಡಿದ್ದು, ಇವುಗಳಿಗೆ ಮುಖ್ಯತೀರ್ಪುಗಾರರ ಮಂಡಳಿ ಅಂತಿಮ ಮುದ್ರೆ ಒತ್ತಲಿದೆ.

ಜೊತೆಗೆ 'ಚಲನಚಿತ್ರ ಉದ್ಯಮಕ್ಕೆ ಹೊಸ ದಿಕ್ಕು ತೋರಿಸಬಲ್ಲ ಸಿನಿಮಾ'ಗಳಲ್ಲಿ ನಾಲ್ಕು ಪ್ರಶಸ್ತಿಗಳಿದ್ದು ಇವುಗಳಿಗೆ ನಾಮನಿರ್ದೇಶನಗೊಂಡ ಸಿನಿಮಾಗಳಲ್ಲಿ ವಿಜೇತರನ್ನು ಮುಖ್ಯ ತೀರ್ಪುಗಾರರೇ ಆರಿಸಲಿದ್ದಾರೆ. ಸಂಪಾದಕರ ಆಯ್ಕೆ ವಿಭಾಗದಲ್ಲಿ ಎರಡು ಪ್ರಶಸ್ತಿಗಳಿವೆ. ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡುತ್ತಾರೆ. ನಂತರ ಮುಖ್ಯ ತೀರ್ಪುಗಾರರ ಮಂಡಳಿಯಿಂದ ಆಯ್ಕೆಗಳಿಗೆ ಅಂತಿಮ ಅನುಮೋದನೆ ದೊರೆಯಲಿದೆ. ಈ ಎಲ್ಲಾ ಹಂತದಲ್ಲಿ ಆಡಿಟ್ ಪಾರ್ಟ್‌ನರ್ ಆಗಿ 'ಇವೈ' ಸಂಸ್ಥೆ ಜೊತೆಯಾಗಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಕೋಟಿ'ಯ ಮಾತು ಸೋತು

ಧನಂಜಯ, ಮೋಕ್ಷಾ ಕುಶಾಲ್

'ಡಾಲಿ' ಧನಂಜಯ ಅಭಿನಯದ 'ಕೋಟಿ' ಸಿನಿಮಾದ ಮೊದಲ ಹಾಡು 'ಮಾತು ಸೋತು' ಬಿಡುಗಡೆಯಾಗಿದೆ. ಹಾಡನ್ನು ವಾಸುಕಿ ವೈಭವ್ ಸಂಯೋಜಿಸಿದ್ದು, ಯೋಗರಾಜ್ ಭಟ್ ಸಾಹಿತ್ಯ ರಚಿಸಿ, ಅರ್ಮಾನ್ ಮಲಿಕ್ ಹಾಡಿದ್ದಾರೆ.

'ಕೋಟಿ' ಸಿನಿಮಾದ ಹಾಡುಗಳ ಹಕ್ಕನ್ನು 'ಸರೆಗಮ' ಖರೀದಿಸಿದೆ. 'ಒಳ್ಳೆಯ ಹಾಡುಗಳನ್ನು ಬರೆಯುವವರ ಬಗ್ಗೆ ನನಗೆ ಒಂಥರಾ ಹೊಟ್ಟೆಕಿಚ್ಚು. ಹಾಗೆ ತಮ್ಮ ಹಾಡುಗಳ ಮೂಲಕ ಅತಿಹೆಚ್ಚು ಅಸಿಡಿಟಿ ಉಂಟುಮಾಡಿದ ಖ್ಯಾತಿ ಯೋಗರಾಜ್ ಭಟ್ ಅವರದು. ಅವರ ಹಾಡುಗಳ ದೊಡ್ಡ ಅಭಿಮಾನಿ ನಾನು. 'ಕೋಟಿ' ಸಿನಿಮಾದ ಹಾಡುಗಳಿಗೆ ರಾಗ ಸಂಯೋಜನೆ ಮಾಡಿರೋದು ವಾಸುಕಿ. ಅವರು ಈ ಸಿನಿಮಾದ ಕತೆಯನ್ನು ಕನಿಷ್ಠ ಆರು ಸಲ ಕೇಳಿದ್ದಾರೆ! ಭಟ್ರ ಮನೆ, ನಮ್ಮನೆ ಹೀಗೆ ಹತ್ತಾರು ದಿನ ಒದ್ದಾಡಿ, ಸಿಕ್ಕ ಸಿಕ್ಕವರಿಗೆಲ್ಲಾ ಕಾಟ ಕೊಟ್ಟು ರಾತ್ರಿಯೆಲ್ಲಾ ಕುಳಿತು ಹಾಡಿನ ಕೆಲಸ ಮಾಡಿದ್ದು ಒಂಥರಾ ಖುಷಿ' ಎಂದು ಈ ಹಾಡಿನ ಹುಟ್ಟಿನ ಬಗ್ಗೆ ನೆನಪಿಸಿಕೊಂಡಿದ್ದಾರೆ ನಿರ್ದೇಶಕ ಪರಮ್.

'ಕೋಟಿ' ಚಿತ್ರದಲ್ಲಿ ಧನಂಜಯಗೆ ಜೋಡಿಯಾಗಿ ಮೋಕ್ಷಾ ಕುಶಾಲ್ ನಟಿಸಿದ್ದು, ರಂಗಾಯಣ ರಘು, ರಮೇಶ್ ಇಂದಿರಾ, ತಾರಾ, ಸರ್ದಾರ್ ಸತ್ಯ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದ ಹಿನ್ನೆಲೆ ಸಂಗೀತದ ಜವಾಬ್ದಾರಿಯನ್ನು '777 ಚಾರ್ಲಿ' ಖ್ಯಾತಿಯ ನೊಬಿನ್ ಪೌಲ್ ಹೊತ್ತಿದ್ದಾರೆ. ಸಿನಿಮಾ ಜೂನ್ 14ರಂದು ಬಿಡುಗಡೆಯಾಗಲಿದೆ.

ಗುಂಡಣ್ಣ

ನುಡಿ ಬೆಳಗು

ಸಣ್ಣ ಕೆಲಸ ದೊಡ್ಡ ಬದಲಾವಣೆ

ಪಿ. ಚಂದ್ರಿಕಾ

ನಾಗರಬಾವಿಯಿಂದ ಬೆಂಗಳೂರು ವಿ.ವಿಯ ಒಳಗೆ ತಿರುಗಿದರೆ ಅದೆಲ್ಲವೂ ಕಾಡೇ. ಸ್ವಲ್ಪ ವರ್ಷಗಳ ಹಿಂದೆ ಸಂಜೆಯಾದರೆ ಅಲ್ಲಿ ಓಡಾಡಲಿಕ್ಕೆ ಜನ ಹೆದರುತ್ತಿದ್ದರು. ಮಧ್ಯದಲ್ಲಿ ದೊಡ್ಡದೊಂದು ರಾಜಕಾಲುವೆ ಹರಿಯುತ್ತಿದೆ. ದಿನಾ ನಾನು ಓಡಾಡುವ ರಸ್ತೆಯೇ ಆದ್ದರಿಂದ ಅಲ್ಲಿಗೆ ಬಂದಾಗ ಬೆಂಗಳೂರಿನ ಕೊಳಚೆಯ ವಾಸನೆ ಮೂಗಿಗೆ ಬಡಿದು ಮೂಗು ಮುಚ್ಚಿಕೊಳ್ಳುತ್ತಿದ್ದೆ. ಇದರ ಬಗ್ಗೆಯೇ ಯೋಚಿಸುತ್ತ ಮುಂದಕ್ಕೆ ಬಂದೆ. ಅಲ್ಲೊಬ್ಬ ಪುಟ್ಟ ಹುಡುಗ ಕೈಲಿ ಚೀಲ ಹಿಡಿದು ಫುಟ್‌ಪಾತ್ ಮೇಲೆ ನಿಂತಿದ್ದ. ಅಲ್ಲೇ ರಸ್ತೆಯ ಮೇಲೆ ಸುಮಾರು ನಲವತ್ತರ ಆಸುಪಾಸಿನ ವ್ಯಕ್ತಿಯೊಬ್ಬರು ಒಂದು ಕೋಲನ್ನು ಹಿಡಿದು ಕಸಕಡ್ಡಿಯನ್ನು ಕೆದಕಿ ಸ್ವಚ್ಛ ಮಾಡುತ್ತಿದ್ದರು. ನಾನು ಸ್ವಲ್ಪ ದೂರ ಮುಂದೆ ಹೋಗಿಬಿಟ್ಟೆ. ಆಗ ತುಂಬಾ ಗೌರವಾನ್ವಿತರಾಗಿ ಕಾಣುತ್ತಿದ್ದ ಅವರು ಏನು ಮಾಡುತ್ತಿದ್ದಾರೆ ಎನ್ನುವ ಕುತೂಹಲ ಮೂಡಿತು. ತಕ್ಷಣ ವಾಪಾಸು ಬಂದು, ಸರ್, ನಿಮ್ಮನ್ನು ನೊಡಿದರೆ ಒಳ್ಳೆಯ ಸ್ಥಾನದಲ್ಲಿದ್ದೀರ ಎನ್ನಿಸುತ್ತೆ. ಇಲ್ಲೇನು ಮಾಡ್ತ ಇದೀರ?' ಎಂದು ಕೇಳಿದೆ.

'ಮೇಡಂ ನಾನು ಇಲ್ಲಿಗೆ 20–22 ವರ್ಷಗಳಿಂದ ವಾಕಿಂಗ್ ಬರ್ತಾ ಇದೀನಿ. ಇನ್ನೇನು ಮಳೆಗಾಲ ಶುರುವಾಗ್ತ ಇದೆ. ನೀರು ಹರಿದು ಹೋಗಲಿಕ್ಕೆ ಮಾಡಿರುವ ಚಿಕ್ಕ ಚಿಕ್ಕ ದಾರಿಗಳು ಕಸಕಡ್ಡಿಗಳಿಂದ ಮುಚ್ಚಿಹೋಗಿವೆ. ನೀರು ವ್ಯರ್ಥವಾಗಿ ರಸ್ತೆಗೆ ಹರಿದು ಹೋಗುತ್ತೆ. ಅದಕ್ಕೆ ದಾರಿ ಮಾಡಿಕೊಡ್ತಾ ಇದೀನಿ. ಒಂದೇ ದಿನಕ್ಕೆ ಕೆಲಸ ಆಗುವುದಿಲ್ಲ ನೋಡಿ ಅದಕ್ಕೆ ದಿನಾ ಇಷ್ಟಿಷ್ಟು ಎಂದು ಮಾಡುತ್ತಿದ್ದೇನೆ' ಎಂದರು.

ಆ ದಾರಿಯಲ್ಲಿ ದಿನಾ ಓಡಾಡುವ ನನ್ನಂಥವರಿಗೆ ಇದೆಲ್ಲಾ ಯಾಕೆ ಕಾಣಲಿಲ್ಲ... ನಿಜಕ್ಕೂ ಕೆನ್ನೆಗೆ ಹೊಡೆದ ಹಾಗನ್ನಿಸಿತು. ಮಾತನ್ನು ಮುಂದುವರಿಸಿದ ಅವರು 'ಈ ಜಾಗದ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ನಾವು ನೀರನ್ನು ಎಲ್ಲಿಗೆ ಹರಿಯಲು ಬಿಡಬೇಕೋ ಅದರ ಬಗ್ಗೆ ಯೋಚಿಸುತ್ತಿಲ್ಲ. ಎಲ್ಲ ಜಾಗಗಳನ್ನು ಬಂದ್ ಮಾಡಿಟ್ಟದ್ದೇವೆ. ಈ ಜಾಗದಲ್ಲಿ ಅಲ್ಲಲ್ಲಿ ಕೆರೆಗಳಿವೆ. ಅಲ್ಲೀಗ ಹೂಳೆತ್ತುವವರೂ ಇಲ್ಲ. ಕಡೇ ಪಕ್ಷ ಆ ಜಾಗಕ್ಕೆ ನೀರು ಸೇರಿದರೂ ಸಾಕಲ್ಲವೇ? ಇಂಗುವ ನೀರು ಅಂತರ್ಜಲ ಮಟ್ಟವನ್ನು ಏರಿಸಿಬಿಡುತ್ತೆ. ಮನುಷ್ಯ ಹೇಗೋ ಬದುಕುತ್ತಾನೆ. ಪಶು ಪಕ್ಷಿಗಳ ಗತಿ ಏನು' ಎಂದರು.

ಸ್ವಾರ್ಥ ಲಾಲಸೆಗಳಿಂದ ಕೆರೆಗಳನ್ನು ಮುಚ್ಚಿ ಅದರ ಮೇಲೆ ಮನೆ ಕಟ್ಟುತ್ತಿರುವವರ ಮಧ್ಯೆ ಕೆರೆಗಳ ಲೆಕ್ಕ ಇಡುವವರು ಯಾರು? ಹೂಳೆತ್ತದೆ ಮುಚ್ಚಿ ಹೋದ ಕೆರೆಗಳೆಷ್ಟೋ ಗೊತ್ತಿರುವುದು ಯಾರಿಗೆ? ಇವರಿಗೆಂಥಾ ಕಾಳಜಿ... ಆ ವ್ಯಕ್ತಿಯ ಬಗ್ಗೆ ಕುತೂಹಲ ಅನ್ನಿಸಿ, 'ನೀವೇನು ಕೆಲಸ ಮಾಡುತ್ತಿದ್ದೀರಾ?' ಎಂದು ವಿಚಾರಿಸಿದೆ. ಅವರ ಹೆಸರು ವೆಂಕಟೇಶ್ ಗೌಡ, ಎಲ್ಲರಿಗೂ ಬುಲೆಟ್ ವೆಂಕಟೇಶ್ ಎಂದೇ ಪರಿಚಿತರು. ಗೋವಿಂದರಾಜ ನಗರ ಕ್ಷೇತ್ರದಲ್ಲಿ ಪಕ್ಷವೊಂದರ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಸಾಮಾಜಿಕ ಕಾರ್ಯಕರ್ತ ಕೂಡಾ. ಅಂತಃಕರಣ ತುಂಬಿದವರಿಗೆ ಮಾತ್ರ ಹತ್ತು ಜನರಿಗೆ ಉಪಯುಕ್ತವಾಗುವ ಸಂಗತಿಗಳು ತಂತಾನೆ ಗೋಚರಿಸುತ್ತವೆ. ಇಲ್ಲದಿದ್ದರೆ ತುಂಬಿದ ಕಸ ಕಡ್ಡಿಯ ನಡುವೆ ಇರುವ ನೀರ ಹರಿವಿನ ದಾರಿ ಕಾಣುವುದಾದರೂ ಹೇಗೆ... ಇಂಥಾ ಪುಟ್ಟದೊಂದು ಸಾಮಾಜಿಕ ಮತ್ತು ಪರಿಸರದ ಕಾಳಜಿ ಎಂಥಾ ದೊಡ್ಡ ಬದಲಾವಣೆಗೆ ಕಾರಣವಾಗಿಬಿಡುತ್ತದೆ ಅಲ್ಲವೇ? ಬುಲೆಟ್ ವೆಂಕಟೇಶ್ ಅವರಿಗೆ ಸಕಲ ಜೀವರಾಶಿಗಳ ಪರವಾಗಿ ಪ್ರೀತಿಯ ನಮಸ್ಕಾರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 14, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಸಪ್ತಮಿ ಗಂ. 28-20 ನಕ್ಷತ್ರ: ಪುಷ್ಯ ಗಂ. 13-05 ಯೋಗ: ಗಂಡ ಗಂ. 07-25 ವೃಷಭ ಮಾಸದ 01 ನೇ ದಿನ, ಮಳೆನಕ್ಷತ್ರ: ಕೃತ್ತಿಕಾ 1.

ರಾಹುಕಾಲ : ಮಧ್ಯಾಹ್ನ 03-00 - 04-30

ಸೂರ್ಯೋದಯ : 06-08 ಸೂರ್ಯಾಸ್ತ : 06-45

ಮುಸ್ಲಿಂ ದಿನಾಂಕ : 05 ಜುಲ್ಕಾಯದ್

ದಿನ ವಿಶೇಷ : ಗಂಗೋತ್ಪತ್ತಿ, ಅದೃಷ್ಟ ಸಂಖ್ಯೆ : 6, 3

ಮೇಷ: ಮಕ್ಕಳ ಎಲ್ಲಾ ವಿಚಾರಗಳಲ್ಲೂ ಮೃದು ಮನಸ್ಸಿನ ಆಲೋಚನೆಗಳನ್ನೇ ಮಾಡಿದಲ್ಲಿ ಫಲಿತಾಂಶವು ನೀವಂದುಕೊಂಡ ರೀತಿಯಲ್ಲಿ ಇರುವುದಿಲ್ಲ. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು.

ವೃಷಭ: ದಿನಗೂಲಿ ಲೆಕ್ಕದಲ್ಲಿ ದುಡಿಮೆ ಮಾಡುತ್ತಿರುವವರಿಗೆ ಜೀವನದಲ್ಲಿ ಒಂದು ತರಹದ ಅಸ್ಥಿರ ಭಾವನೆ ಕಾಡಲು ಶುರುವಾಗುತ್ತದೆ. ಆಹಾರದ ವಿಚಾರವಾಗಿ ನಿರ್ಲಕ್ಷ್ಯ ಆರೋಗ್ಯಕ್ಕೆ ಒಳ್ಳೆಯದಲ್ಲ.

ಮಿಥುನ: ಜಟಿಲ ಸಮಸ್ಯೆಗೆ ಬೇರೆಯವರಿಗೆ ಸುಲಲಿತವಾಗಿ ಪರಿಹಾರವನ್ನು ಸೂಚಿಸುವ ನೀವು ನಿಮ್ಮದೇ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಎಡವುತ್ತೀರಿ. ವಾಹನದ ಖರೀದಿಗೆ ಸೂಕ್ತ ಸಮಯವಾಗಿರುತ್ತದೆ.

ಕರ್ಕಾಟಕ: ಯುವಕ ಯುವತಿಯರಿಗೆ ಕಾಲೇಜಿನ ಶಿಸ್ತುಬದ್ಧ ಜೀವನವು ಉಸಿರುಗಟ್ಟಿಸುವಂಥ ಅನುಭವವನ್ನು ತರಿಸಬಹುದು. ಯೋಗಿಗಳ ದರ್ಶನ ಹಾಗೂ ಮಾರ್ಗದರ್ಶನದ ಅವಶ್ಯಕತೆ ಅಗತ್ಯವಿರುತ್ತದೆ.

ಸಿಂಹ: ಖಾಸಗಿ ಕಂಪನಿಯಲ್ಲಿರುವವರು ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಅನುಕೂಲ ಪಡೆಯುವರು. ಉತ್ತಮ ವಿಚಾರಗಳು ಜಾರಿಗೆ ಬರಬೇಕೆಂದು ಮಾಡುತ್ತಿರುವ ಪ್ರಯತ್ನವು ಶೀಘ್ರ ಶುಭಫಲ ನೀಡುವುದು.

ಕನ್ಯಾ: ಬರಹಗಾರರಾಗಬೇಕು ಎಂಬ ಪಥದಲ್ಲಿ ಸಾಗುತ್ತಿರುವವರಿಗೆ ಇತರರ ಬರಹಗಳನ್ನು ಓದಿ ಬರವಣಿಗೆಗೆ ಸ್ಪಷ್ಟತೆ ದೊರೆಯುತ್ತದೆ. ಫೈನಾನ್ಸ್‌ನಲ್ಲಿ ಹೂಡಿಕೆ ಮಾಡುವವರು ಜಾಗರೂಕರಾಗಿ.

ತುಲಾ: ಆಹಾರವನ್ನು ಮಿತವಾಗಿ ಸೇವಿಸುವುದು ಉತ್ತಮ. ಸಂಪೂರ್ಣ ಸಾವಯವ ವ್ಯವಸಾಯವನ್ನು ಮಾಡುವವರಿಗೆ, ತಾಜಾ ತರಕಾರಿ ಹಾಗೂ ಹಣ್ಣುಗಳ ಮಾರಾಟಗಾರರಿಗೆ ಲಾಭವು ಅಧಿಕವಾಗಲಿದೆ.

ವೃಶ್ಚಿಕ: ಹಿಂದುಸ್ತಾನಿ ಸಂಗೀತಗಾರರು ಕಛೇರಿಯಲ್ಲಿ ಭಾವಪರವಶರಾಗಿ ಹಾಡಿದ ವಿರಹ ರಾಗಕ್ಕೆ ಅಭಿಮಾನಿಗಳು ಮರುಳಾಗುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಮನೆಯ ವಿಚಾರಗಳನ್ನು ಚರ್ಚಿಸುವಂಥ ಕೆಲಸ ಮಾಡದಿರಿ.

ಧನು: ಚರ್ಮ ಸಂಬಂಧಿ ಕಾಯಿಲೆಗಳಿದ್ದಲ್ಲಿ ಆಯುರ್ವೇದ ಅಥವಾ ನಾಟಿ ಚಿಕಿತ್ಸೆ ಪರಿಣಾಮಕಾರಿ ಮಗಳ ಶಿಫಾರಸಿನ ಮೇಲೆ ಖರೀದಿಸಿದ ಆಸ್ತಿಯು ಲಾಭದಾಯಕವಾದದ್ದು ಎಂದು ಮನವರಿಕೆಯಾಗುತ್ತದೆ.

ಮಕರ: ಆಕಸ್ಮಿಕವಾಗಿ ಹೊಸ ವ್ಯಕ್ತಿಯ ಪರಿಚಯವಾಗಲಿದೆ. ಅವಿವಾಹಿತರಿಗೆ ಒಳ್ಳೆಯ ಕಡೆ ಸಂಬಂಧ ಬರುವುದು. ಗಣಕಯಂತ್ರದ ತಯಾರಕರು, ರಿಪೇರಿ ಮಾಡುವ ವ್ಯಕ್ತಿಗಳಿಗೆ ಈ ದಿನ ಉತ್ತಮ ದಿನವಾಗಲಿದೆ.

ಕುಂಭ: ಇಷ್ಟು ದಿನಗಳವರೆಗೂ ಅತ್ಯಂತ ತಾಳ್ಮೆಯಿಂದಿದ್ದ ಮನಸ್ಸು ಅನಿವಾರ್ಯ ಕಾರಣದಿಂದಾಗಿ ಕಾರ್ಯಕ್ಷೇತ್ರದಲ್ಲಿ ಸ್ಫೋಟಗೊಳ್ಳುವ ಸಾಧ್ಯತೆ ಇದೆ. ಬೃಹತ್ ಯೋಜನೆಗಾಗಿ ಸಾಲ ಮಾಡುವ ಪರಿಸ್ಥಿತಿ ಬರಬಹುದು.

ಮೀನ: ವ್ಯವಸ್ಥಾಪಕರು ನೀಡುವ ಧೈರ್ಯದ ಮಾತುಗಳು ಜವಾಬ್ದಾರಿಯನ್ನು ಉತ್ತಮ ಗುಣಮಟ್ಟದ್ದಾಗಿಸುತ್ತದೆ. ದೇವಸ್ಥಾನದ ಭೇಟಿ ಹಾಗೂ ದೇವರ ದರ್ಶನದಿಂದ ಮನಸ್ಸಿಗೆ ಸಂತಸವಾಗುವುದು.

ಪದಬಂಧ 5680

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಂದಿಯ ಹತ್ತಿರವಿರುವ ತಾಯಿ (3)
3.ಗರದಲ್ಲಿರುವ ಅನ್ಯಮಾರ್ಗ (4)
5.ಎಳ್ಳಿನಿಂದಿರಿಸಿದ ಬೊಟ್ಟು (3)
7.ಎಲ್ಲೆಯಲ್ಲಿರುವ ಕಾಲಸೂಚಕ ಯಂತ್ರ (4)
9.ನಯವಾದ ನುಡಿ (4)
12.ಅಷ್ಟಮಿ ನಂತರದ ತಿಥಿ (3)
14.ಕನ್ನಡಿಗನಾಡಿರುವ ಚೆಸ್ (4)
15.ಕರದಲ್ಲಿ ಕಠಿಣವಾದುದು ಕಾಣಿಸೀತೆ? (3)

ಮೇಲಿಂದ ಕೆಳಕ್ಕೆ

1.ಗತಿಸಿದ ಹಿರಿಯರ ಹುಟ್ಟುಹಬ್ಬ (3)
2.ಪ್ರಸ್ತವಿದ್ದಾಗಲೇ ಚಿಮುಕಿಸುವಿಕೆ! (3)
3.ಸರಹದ್ದನ್ನು ತಲುಪುವಾಗಿನ ಅವಸರ (4)
4.ಈತ ಕಾಪಾಡುವವನು (3)
6.ಭೋಜನ ಸಮಾರಂಭಕ್ಕೆ ಬೇಕಾಗುವ ಸಾಮಗ್ರಿ (4)
7.ತಿರುಗಿದಾಗ ಕಾಣಿಸಿದ ಅಶ್ವ (3)
8.ದೇವರನ್ನು ರಥದಲ್ಲಿ ಕೂರಿಸಿ ಮಾಡುವ ಮೆರವಣಿಗೆ (4)
10.ಆನೆಯನ್ನು ನಡೆಸುವವನು (4)
11.ಕನ್ನಡಿಗನು ಹಿಡಿದಿರುವ ಸ್ಪೂನ್ (3)
12.ನಡುವೆಯೇ ಉಂಟಾದ ಕಂಪನ (3)
13.ಸೂರ್ಯ ಇಲ್ಲಿಯೇ ಕಾಣುತ್ತಿದ್ದಾನೆ (3)



5679ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ :

1.ಭಯಂಕರ 3.ಮರೀಚಿಕೆ
5.ನಿಯಮ 7.ವರ್ತಕ
9.ಅಂಬಿಗ 10.ರಸಿಕ
11.ಅಂಗದ 15.ಕಡುಮೋಹ
16.ವರಮಾನ

ಮೇಲಿಂದ ಕೆಳಕ್ಕೆ:

1.ಭಗಿನಿ 2.ರಫ್ತು
3.ಮದುವಣಿಗ 4.ಕೆನೆ
6.ಯಥಾಪ್ರಕಾರ 8.ಕಸ್ತೂರಿಮೃಗ
9.ಅಂತಃಕಲಹ 12.ದಶನ
13.ಸುಂಕ 14.ಭಾವ

ಸುಡೊಕು 6065

		5	8				1	
2							7	
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6064 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಷೇರುಪೇಟೆ ವಹಿವಾಟು ▲111



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,055
ಇಂದಿನ ಅಂತ್ಯ	22,104
▼	48
ದಿನದ ಕನಿಷ್ಠ	22,120

ವಿನಿಮಯ ದರ

$ ಡಾಲರ್	83.53
£ ಪೌಂಡ್	104.64
€ ಯುರೊ	90.05
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು 100ಕ್ಕೆ	₹610
12 ಕ್ಕೆ	₹80
ಮೈಸೂರು 100ಕ್ಕೆ	₹615

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹159.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹292-488
ದ್ವಿತಳಿ (ಬಿ.ವಿ)	₹255-485

ಷೇರುಪೇಟೆ: ಸಕಾರಾತ್ಮಕ ವಹಿವಾಟು

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಹಾಗೂ ಟಿಸಿಎಸ್ ಷೇರುಗಳ ಖರೀದಿ ಹೆಚ್ಚಿದ್ದರಿಂದ ದೇಶದ ಷೇರುಪೇಟೆಯಲ್ಲಿ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಬೆಳಿಗ್ಗಿನ ವಹಿವಾಟಿನಲ್ಲಿ ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಿದ್ದರಿಂದ ಕುಸಿತ ಕಂಡಿದ್ದ ಸೂಚ್ಯಂಕಗಳು, ಬಳಿಕ ಚೇತರಿಕೆಯ ಹಾದಿಗೆ ಮರಳಿದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 111 ಅಂಶ ಏರಿಕೆ (ಶೇ 0.15ರಷ್ಟು) ಕಂಡು 72,776 ಅಂಶಗಳಲ್ಲಿ ಸ್ಥಿರಗೊಂಡಿತು. ಒಂದು ಹಂತದಲ್ಲಿ 798 ಅಂಶ ಕುಸಿತ ಕಂಡು, 71,866 ಅಂಶಕ್ಕೆ ಮುಟ್ಟಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 48 ಅಂಶ ಏರಿಕೆ (ಶೇ 0.22ರಷ್ಟು) ಕಂಡು 22,104 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಏಷ್ಯನ್ ಪೇಂಟ್ಸ್, ಸನ್ ಫಾರ್ಮಾ, ಎಚ್‌ಡಿಎಫ್‌ಸಿ ಬ್ಯಾಂಕ್, ಟಿಸಿಎಸ್, ಎಕ್ಸಿಸ್ ಬ್ಯಾಂಕ್, ಟಾಟಾ ಸ್ಟೀಲ್, ಜೆಎಸ್‌ಡಬ್ಲ್ಯು ಸ್ಟೀಲ್, ಎಲ್ ಆ್ಯಂಡ್ ಟಿ, ಐಸಿಐಸಿಐ ಬ್ಯಾಂಕ್ ಹಾಗೂ ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಎನ್‌ಟಿಪಿಸಿ, ಭಾರ್ತಿ ಏರ್‌ಟೆಲ್, ಟೈಟನ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಸ್ಲೆ ಇಂಡಿಯಾ ಷೇರಿನ ಮೌಲ್ಯದಲ್ಲಿ ಕುಸಿತವಾಗಿದೆ.

ಸೋಲ್, ಟೋಕಿಯೊ, ಶಾಂಘೈ ಮಾರುಕಟ್ಟೆಗಳು ಇಳಿಕೆ ದಾಖಲಿಸಿದ್ದರೆ, ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಶುಕ್ರವಾರ ₹2,117 ಕೋಟಿ ಬಂಡವಾಳವನ್ನು ಹಿಂತೆಗೆದುಕೊಂಡಿದ್ದಾರೆ ಎಂದು ಷೇರುಪೇಟೆಯ ಅಂಕಿ-ಅಂಶಗಳು ತಿಳಿಸಿವೆ.

ಟಾಟಾ ಮೋಟರ್ಸ್‌ಗೆ ನಷ್ಟ

ಮುಂಬೈ (ಪಿಟಿಐ): ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಶೇ 8ರಷ್ಟು ಕುಸಿತವಾಗಿದ್ದು, ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯವು (ಎಂ-ಕ್ಯಾಪ್) ₹29,016 ಕೋಟಿ ಇಳಿಕೆಯಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 8.32ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆ ₹959.80 ಆಗಿದೆ. ವಹಿವಾಟಿನ ಒಂದು ಸಂದರ್ಭದಲ್ಲಿ ಶೇ 9.44ರಷ್ಟು ಇಳಿಕೆ ಕಂಡಿತ್ತು.

ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 8.33ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆ ₹959.40 ಆಗಿದೆ. ಕಂಪನಿಯ ಒಟ್ಟು ಎಂ-ಕ್ಯಾಪ್ ₹3.19 ಲಕ್ಷ ಕೋಟಿ ಆಗಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭದಲ್ಲಿ ಮೂರು ಪಟ್ಟು ಏರಿಕೆಯಾಗಿದೆ. ಆದರೆ, ಹೂಡಿಕೆದಾರರ ನಿರೀಕ್ಷೆಗೆ ತಕ್ಕಂತೆ ಲಾಭದಲ್ಲಿ ಹೆಚ್ಚಳವಾಗಿಲ್ಲ. ಇದರಿಂದ ಷೇರಿನ ಮೌಲ್ಯ ಕುಸಿತವಾಗಿದೆ.

ದೆಹಲಿ ಮುನ್ಸಿಪಲ್ ಕಾರ್ಪೊರೇಷನ್‌ಗೆ ‘ಸುಪ್ರೀಂ’ ತರಾಟೆ

‘ನಿತ್ಯ 3,800 ಮೆಟ್ರಿಕ್ ಟನ್ ಘನತ್ಯಾಜ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಭಾರತದ ರಾಜಧಾನಿ ದೆಹಲಿಯಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುವ 3,800 ಮೆಟ್ರಿಕ್ ಟನ್‌ನಷ್ಟು ಘನತ್ಯಾಜ್ಯವನ್ನು ನಿರ್ವಹಣೆ ಮಾಡಲಾಗುತ್ತಿಲ್ಲ. ಇದು ಸರಿಯಾದ ಬೆಳವಣಿಗೆಯಲ್ಲ’ ಎಂದು ಸುಪ್ರೀಂ ಕೋರ್ಟ್ ಸೋಮವಾರ ಅಸಮಾಧಾನ ವ್ಯಕ್ತಪಡಿಸಿದೆ.

ದೆಹಲಿಯಲ್ಲಿ ಘನತ್ಯಾಜ್ಯ ಸಂಸ್ಕರಣೆ ವಿಚಾರ ಸಂಬಂಧ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು ವಿಚಾರಣೆ ನಡೆಸಿತು.

‘ಘನತ್ಯಾಜ್ಯ ನಿರ್ವಹಣೆ ವಿಚಾರವನ್ನು ರಾಜಕೀಯ ಮೀರಿ ಚಿಂತಿಸಬೇಕು. ಆದರೆ, ಈ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಈ ಕುರಿತು ಪೌರಸಂಸ್ಥೆಯ ಉನ್ನತ ಅಧಿಕಾರಿಗಳ ಸಭೆ ನಡೆಸಬೇಕಾಗುತ್ತದೆ’ ಎಂದು ಪೀಠ ಹೇಳಿದೆ.

ಪ್ರತಿನಿತ್ಯ ಉತ್ಪತ್ತಿಯಾಗುವ 3,800 ಮೆಟ್ರಿಕ್ ಟನ್ ತ್ಯಾಜ್ಯ ನಿರ್ವಹಣೆ ಹಾಗೂ ಸಂಸ್ಕರಣೆ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ. ಈ ಕುರಿತು ಕ್ರಮ ಕೈಗೊಳ್ಳದೇ ಇದ್ದರೆ ಶೀಘ್ರವೇ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇದೆ. ಕೇಂದ್ರ ಸರ್ಕಾರ ಮತ್ತು ಪೀಠವು ನೀಡಿತು. ‘ಇಷ್ಟು ಪ್ರಮಾಣದ ಘನತ್ಯಾಜ್ಯ ನಿರ್ವಹಣೆಗೆ ಅಗತ್ಯ ಸೌಲಭ್ಯವನ್ನು ಯಾವಾಗ ಅಭಿವೃದ್ಧಿಪಡಿಸಿಕೊಳ್ಳುವಿರಿ. ತ್ಯಾಜ್ಯ ನಿರ್ವಹಣೆಯ ಸಾಮರ್ಥ್ಯವಿಲ್ಲದ ಕಾರಣ, ಇಷ್ಟು ಪ್ರಮಾಣದ ತ್ಯಾಜ್ಯವನ್ನು ನಿರ್ವಹಣೆ ಮಾಡಲಾಗುತ್ತಿಲ್ಲ ಎಂಬುದು ದಾಖಲೆಗಳು ಹೇಳುತ್ತವೆ. ಈ ಹೇಳಿಕೆ ಸರಿಯಾಗಿದೆಯೆ ಎಂಬ ನಮ್ಮ ಪ್ರಶ್ನೆಗೆ ಉತ್ತರಿಸಿ. ಈ ಸರಳವಾದ ಪ್ರಶ್ನೆಗೆ ಸರಳವಾದ ಉತ್ತರ ನಿರೀಕ್ಷಿಸುತ್ತೇವೆ’ ಎಂದು ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ (ಎಂಸಿಡಿ) ಪರ ಹಾಜರಿದ್ದ ಹಿರಿಯ ವಕೀಲರಾದ ಮೀನಾಕ್ಷಿ ಗುರುಸ್ವಾಮಿ ಅವರನ್ನು ಪ್ರಶ್ನಿಸಿತು.

ಬಾರಾಮತಿ: ಇವಿಎಂ ಇದ್ದೆಡೆ ಸಿ.ಸಿ.ಟಿ.ವಿ. ಕ್ಯಾಮೆರಾ ಸ್ಥಗಿತ

ಪುಣೆ (ಪಿಟಿಐ): ಬಾರಾಮತಿ ಲೋಕಸಭಾ ಕ್ಷೇತ್ರದಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳನ್ನು ಇಟ್ಟಿಟ್ಟ ಗೋದಾಮಿನಲ್ಲಿ 45 ನಿಮಿಷ ಸಿ.ಸಿ.ಟಿ.ವಿ ಕ್ಯಾಮೆರಾಗಳು ಸ್ವಿಚ್ ಆಫ್ ಆಗಿದ್ದು, ಏನೋ ತಪ್ಪು ನಡೆದಿದೆ ಎಂದು ರಾಷ್ಟ್ರೀಯ ಕಾಂಗ್ರೆಸ್ ಪಕ್ಷ (ಎಸ್‌ಪಿ) ಸೋಮವಾರ ಆರೋಪಿಸಿದೆ.

ಮಹಾರಾಷ್ಟ್ರದ ಪುಣೆ ಜಿಲ್ಲೆಯ ಭಾರತೀಯ ಆಹಾರ ನಿಗಮದ ಗೋದಾಮೊಂದರಲ್ಲಿ ಇವಿಎಂಗಳನ್ನು ಇರಿಸಲಾಗಿತ್ತು. ವಿದ್ಯುತ್ ಕಾಮಗಾರಿ ನಡೆದ ಕಾರಣದಿಂದಾಗಿ ಕ್ಯಾಮೆರಾದ ಕೇಬಲ್ ತೆಗೆಯಬೇಕಾಯಿತು. ಹೀಗಾಗಿ ಸಿ.ಸಿ.ಟಿ.ವಿ. ಕ್ಯಾಮೆರಾಗಳು ಅಲ್ಪಾವಧಿ ಸ್ಥಗಿತಗೊಂಡಿದ್ದವು ಎಂದು ಉಸ್ತುವಾರಿ ವಹಿಸಿದ್ದ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಬೆಳಿಗ್ಗೆ 10.30ರಿಂದ 11.15ರವರೆಗೆ ಸಿ.ಸಿ.ಟಿ.ವಿ ಕ್ಯಾಮೆರಾಗಳು ಸ್ವಿಚ್ ಆಫ್ ಆಗಿದ್ದವು ಎಂದು, ಬಾರಾಮತಿ ಅಭ್ಯರ್ಥಿ ಸುಪ್ರಿಯಾ ಸುಳೆ ಅವರ ಚುನಾವಣಾ ಪ್ರತಿನಿಧಿ ತಿಳಿಸಿದ್ದಾರೆ.

ಹಣ್ಣು, ತರಕಾರಿ, ಬೇಳೆಕಾಳು ಧಾರಣೆ ಏರಿಕೆ: ಮೊಟ್ಟೆ, ಮಾಂಸದ ದರ ಇಳಿಕೆ

ಚಿಲ್ಲರೆ ಹಣದುಬ್ಬರ: 11 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಹನ್ನೊಂದು ತಿಂಗಳ ಕನಿಷ್ಠ ಮಟ್ಟವಾದ ಶೇ 4.83ಕ್ಕೆ ಇಳಿಕೆಯಾಗಿದೆ. ಸತತ ಎರಡು ತಿಂಗಳಿನಿಂದ ಹಣದುಬ್ಬರವು ಇಳಿಕೆಯ ಪಥದಲ್ಲಿ ಸಾಗುತ್ತಿದ್ದರೂ, ಕೆಲವು ಆಹಾರ ಪದಾರ್ಥಗಳ ಧಾರಣೆಯು ಏರುಗತಿಯಲ್ಲೇ ಸಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ಮಾರ್ಚ್‌ನಲ್ಲಿ ಶೇ 4.85ರಷ್ಟು ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಶೇ 4.7ರಷ್ಟು ದಾಖಲಾಗಿತ್ತು.

ಮಾರ್ಚ್‌ನಲ್ಲಿ ಶೇ8.52ರಷ್ಟಿದ್ದ ಆಹಾರ ಹಣದುಬ್ಬರವು, ಏಪ್ರಿಲ್‌ನಲ್ಲಿ ಶೇ 8.70ಕ್ಕೆ ಏರಿಕೆಯಾಗಿದೆ. ಮೊಟ್ಟೆ, ಮಾಂಸ, ಸಂಬಾರ ಪದಾರ್ಥಗಳು, ಧಾನ್ಯಗಳ ಬೆಲೆಯಲ್ಲಿ ಇಳಿಕೆಯಾಗಿದೆ. ಆದರೆ, ಹಣ್ಣುಗಳು, ತರಕಾರಿಗಳು ಮತ್ತು ಬೇಳೆಕಾಳು ಧಾರಣೆಯಲ್ಲಿ ಏರಿಕೆಯಾಗಿದೆ.



ಕಳೆದ ವರ್ಷದ ಏಪ್ರಿಲ್‌ಗೆ ಹೋಲಿಸಿದರೆ ತರಕಾರಿ ಬೆಲೆಯಲ್ಲಿ ಶೇ 27.80ರಷ್ಟು, ಬೇಳೆಕಾಳು ಬೆಲೆಯಲ್ಲಿ ಶೇ 16.84ರಷ್ಟು ಹೆಚ್ಚಳವಾಗಿದೆ.

ನಗರವಾಸಿಗಳಿಗೆ ಹೋಲಿಸಿದರೆ ಗ್ರಾಮೀಣ ಜನರಿಗೆ ಆಹಾರ ಪದಾರ್ಥಗಳ ಬೆಲೆಯ ಬಿಸಿ ತಟ್ಟಿದೆ. ನಗರ ಪ್ರದೇಶದ ಹಣದುಬ್ಬರವು ಶೇ 4.11ಕ್ಕೆ ಇಳಿಕೆಯಾಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ 5.43ಕ್ಕೆ ಏರಿಕೆಯಾಗಿದೆ ಎಂದು ಸೋಮವಾರ ಬಿಡುಗಡೆಯಾಗಿರುವ ಕೇಂದ್ರ ಸಾಂಖ್ಯಿಕ ಕಚೇರಿಯ ವರದಿ ತಿಳಿಸಿದೆ.

‘ಗ್ರಾಮೀಣ ಪ್ರದೇಶದಲ್ಲಿ ಹಣದುಬ್ಬರ ಮಟ್ಟದ ಏರಿಕೆಯಲ್ಲಿ ಆಹಾರ ಪದಾರ್ಥಗಳ ಕೊಡುಗೆ ದೊಡ್ಡದಿದೆ’ ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ತಿಳಿಸಿದ್ದಾರೆ.

‘ನಗರ ಪ್ರದೇಶಗಳಲ್ಲಿ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಬಳಕೆ ಮಾಡಲಾಗುತ್ತದೆ. ಸಂಸ್ಕರಣೆ ಮಾಡಿದ ಆಹಾರ ಪದಾರ್ಥಗಳ ಬೆಲೆಯಲ್ಲೂ ತುಸು ಏರಿಕೆಯಾಗಿದೆ’ ಎಂದು ಹೇಳಿದ್ದಾರೆ.

‘ಇಂಧನ, ವಿದ್ಯುತ್, ಸಾರಿಗೆ ಮತ್ತು ಸರಕು ಸೇವಾ ವಿಭಾಗದಲ್ಲಿ ಬೆಲೆ ಗಮನಾರ್ಹವಾಗಿ ಕಡಿಮೆಯಾಗಿದೆ. ಆದರೆ, ಆಹಾರ ಪದಾರ್ಥಗಳ ಬೆಲೆಯಲ್ಲಿ ಅಲ್ಪಮಟ್ಟಿಗೆ ಏರಿಕೆಯಾಗಿದೆ’ ಎಂದು ಇವೈ ಇಂಡಿಯಾದ ಮುಖ್ಯ ನೀತಿ ಸಲಹೆಗಾರ ಡಿ.ಕೆ. ಶ್ರೀವಾಸ್ತವ ಹೇಳಿದ್ದಾರೆ.

ಒಡಿಶಾದಲ್ಲಿ ಹೆಚ್ಚು ದಾಖಲು

ಒಡಿಶಾದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಹಣದುಬ್ಬರದ (ಶೇ 7.11ರಷ್ಟು) ದಾಖಲಾಗಿದ್ದರೆ, ನವದೆಹಲಿಯಲ್ಲಿ (ಶೇ 2.17ರಷ್ಟು) ಕಡಿಮೆ ದಾಖಲಾಗಿದೆ.

ಆಂಧ್ರಪ್ರದೇಶ, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸಗಢ, ಹರಿಯಾಣ, ಕರ್ನಾಟಕ, ಕೇರಳ ಮತ್ತು ಮಧ್ಯಪ್ರದೇಶದಲ್ಲಿ ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚು ದಾಖಲಾಗಿದೆ.

ಕಳೆದ ವರ್ಷದ ಡಿಸೆಂಬರ್‌ನಿಂದಲೂ ಚಿಲ್ಲರೆ ಹಣದುಬ್ಬರವು ಇಳಿಕೆಯ ಹಾದಿ ಹಿಡಿದಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜಿಸಿರುವ ಶೇ 2ರಿಂದ ಶೇ 6ರ ನಡುವೆಯೇ ಇದೆ. ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳಲು ಆರ್‌ಬಿಐ ಹರಸಾಹಸಪಡುತ್ತಿದೆ.

ಕೆ.ಜಿ.ಗೆ ₹2.50 ಲಕ್ಷ ಬೆಲೆಬಾಳುವ ಮಾವಿನ ಹಣ್ಣು

ಕೊಪ್ಪಳಕ್ಕೂ ಬಂತು ಮೀಯಾಜಾಕಿ

• ಪ್ರಮೋದ

ಕೊಪ್ಪಳ: ಜಗತ್ತಿನ ಅತ್ಯಂತ ದುಬಾರಿ ಮಾವಿನ ಹಣ್ಣುಗಳಲ್ಲಿ ಒಂದಾದ ಜಪಾನ್ ಮೂಲದ ‘ಮೀಯಾಜಾಕಿ’ ತಳಿ ಈಗ ಕೊಪ್ಪಳದಲ್ಲಿಯೂ ಸದ್ದು ಮಾಡುತ್ತಿದೆ.

ಈಗಾಗಲೇ, ರಾಜ್ಯದ ವಿಜಯಪುರ ಜಿಲ್ಲೆಯಲ್ಲಿ ಈಗಾಗಲೇ ಈ ತಳಿಯ ಹಣ್ಣುಗಳನ್ನು ಬೆಳೆಯಲಾಗಿದೆ.

ನಗರದಲ್ಲಿ ತೋಟಗಾರಿಕಾ ಇಲಾಖೆ ಆಯೋಜಿಸಿರುವ ಮಾವು ಮೇಳದಲ್ಲಿ ಈ ಹಣ್ಣಿನದ್ದೇ ಸುದ್ದಿ. ಏಜೆನ್ಸಿಗಳ ಮೂಲಕ ಮಧ್ಯಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಂದ ಈ ತಳಿ ರಾಜ್ಯದ ಹಲವು ಕಡೆ ಮಾರಾಟವಾಗಿದೆ. ಒಂದು ಮೀಯಾಜಾಕಿ ತಳಿ ಸಸಿಯ ಬೆಲೆ ₹ 2,500ರಿಂದ ₹ 3,000. ಇದರ ಒಂದು ಕೆ.ಜಿ. ಮಾವಿನ ಹಣ್ಣಿಗೆ ₹ 2.50 ಲಕ್ಷ! ಹೀಗಾಗಿ ಇದು ಎಲ್ಲರ ಆಕರ್ಷಣೆ ಕೇಂದ್ರಬಿಂದುವಾಗಿದೆ.

ಕಳೆದ ವರ್ಷದಿಂದ ಈ ಹಣ್ಣು ಸಾಕಷ್ಟು ಸುದ್ದಿ ಮಾಡುತ್ತಿದೆ. ಹಿಂದಿನ ಮಾವು ಮೇಳದಲ್ಲಿ ಮಧ್ಯಪ್ರದೇಶದಿಂದ ಈ ತಳಿಯ ಹಣ್ಣನ್ನು ಮೊದಲ ಬಾರಿಗೆ ಪ್ರದರ್ಶನಕ್ಕೆ ಇರಿಸಲಾಗಿತ್ತು. ಆದರೆ, ಈ ಸಲ ವಿಜಯಪುರ ಜಿಲ್ಲೆಯ ಯುವಕ ಅಫ್ವಾಕ್ ಪಾಟೀಲ ಎಂಬುವರು ತಮ್ಮ ಮನೆಯ ಕೈ ತೋಟದಲ್ಲಿ ಬೆಳೆದ ಶ್ರೀಮಂತ ಮಾವಿನ ಹಣ್ಣನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಅಫ್ವಾಕ್ ಬೆಳೆದ ಮೀಯಾಜಾಕಿ ಗಿಡದಲ್ಲಿ ಈಗ 14 ಹಣ್ಣುಗಳು ಬಿಟ್ಟಿದ್ದು ದೊಡ್ಡ ಲಾಭದ ನಿರೀಕ್ಷೆಯಲ್ಲಿದ್ದಾರೆ.

‘ಏಜೆನ್ಸಿ ಮೂಲಕ ಜಪಾನ್‌ನಿಂದ ಮೀಯಾಜಾಕಿ ಖರೀದಿಸಿದ್ದೆ. ಮೊದಲ ಬಾರಿಗೆ ಫಸಲು ಬಂದಿದ್ದು, ಈ ಹಣ್ಣಿನ ಮೌಲ್ಯ ಗೊತ್ತಿದ್ದವರು ಮಾತ್ರ ದುಬಾರಿ ಎನಿಸಿದರೂ ಖರೀದಿ ಮಾಡುತ್ತಾರೆ. ಮುಂಬೈ, ಹೈದರಾಬಾದ್‌ನಲ್ಲಿ ತಳಿಗೆ ಉತ್ತಮ ಮಾರುಕಟ್ಟೆ ಲಭಿಸುತ್ತದೆ’ ಎಂದು ಅಫ್ವಾಕ್ ಹೇಳುತ್ತಾರೆ.

ವಿಜಯಪುರದ ಅಸ್ಫಕ್ ಪಾಟೀಲ್ ತಮ್ಮ ಮನೆಯ ತೋಟದಲ್ಲಿ ಬೆಳೆದಿರುವ ಮೀಯಾ ಜಾಕಿ ಮಾವಿನ ಹಣ್ಣುಗಳು

> ಕಳೆದ ವರ್ಷ ಮಾವಿನ ಮೇಳದಲ್ಲಿ ಮೀಯಾಜಾಕಿ ಪ್ರದರ್ಶನಕ್ಕೆ ಇರಿಸಿದ್ದರಿಂದ ಸಾಕಷ್ಟು ರೈತರ ಮೇಲೆ ಪ್ರಭಾವ ಬೀರಿದ್ದು, ಬೆಳೆಯಲು ಮುಂದಾಗಿದ್ದಾರೆ
>
> **ಕೃಷ್ಣ ಉಕ್ಕುಂದ,** ಉಪ ನಿರ್ದೇಶಕ, ತೋಟಗಾರಿಕಾ ಇಲಾಖೆ, ಕೊಪ್ಪಳ

ಹಿಂದಿನ ವರ್ಷದ ಮಾವು ಮೇಳದಲ್ಲಿ ಮೀಯಾಜಾಕಿ ಪ್ರದರ್ಶನವಾದ ಬಳಿಕ ಉತ್ತೇಜಿತರಾದ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತರ್ಲಕಟ್ಟಿ ಗ್ರಾಮದ ರಂಗನಾಥ ವಲಮಕೊಂಡಿ ಎಂಬುವವರು ಎಂಟು ತಿಂಗಳು ಹಿಂದೆ 600 ಸಸಿಗಳನ್ನು ನಾಟಿ ಮಾಡಿದ್ದಾರೆ. ಕಡಿಮೆ ಅವಧಿಯಲ್ಲಿ ಉತ್ತಮ ಬೆಳವಣಿಗೆ ಕಂಡಿದ್ದು, ಉತ್ತಮ ಫಸಲು ಮತ್ತು ಲಾಭ ಸಿಗಬಹುದು ಎನ್ನುವ ನಿರೀಕ್ಷೆ ಹೊಂದಿದ್ದಾರೆ.

‘ಒಂದು ಸಸಿಗೆ ₹ 2,500 ಕೊಟ್ಟು ಖರೀದಿಸಿದ್ದೇನೆ. ಈ ಬಾರಿ ಕೇಸರ್ ಮಾವಿನಹಣ್ಣು ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಕೆ.ಜಿ.ಗೆ ₹ 100ರಿಂದ ₹ 150 ಬೆಲೆಗೆ ಮಾರಾಟ ಮಾಡಿದ್ದೇನೆ. ರಾಜ್ಯದ ಮಾರುಕಟ್ಟೆಯಲ್ಲಿ ಮೀಯಾಜಾಕಿ ಕನಿಷ್ಠ ಕೆ.ಜಿ.ಗೆ ₹1,000 ಮಾರಾಟವಾದರೂ ಅದೇ ಲಾಭ’ ಎನ್ನುತ್ತಾರೆ ರಂಗನಾಥ.

ಮಾರುಕಟ್ಟೆ ಧಾರಣೆ

ಬಂಟ್ವಾಳ (ಅಡಿಕೆ)	
ಕೋಕ	18000-28500
ಹೊಸತು	28500 -38000
ಹಳತು	38000 -46500
ಕಾರ್ಕಳ	
ಹೊಸತು	25000 -38000
ಹಳತು	30000 -46500
ಕುಮಟ	
ಚಿಪ್ಪು	26899-30509
ಕೋಕ	13569-27019
ಫ್ಯಾಕ್ಟರಿ	11509-21259
ಹಳೆಚಾಲಿ	38599-40299
ಹೊಸಚಾಲಿ	38599-40299
ಶಿವಮೊಗ್ಗ	
ಗೊರಬಲು	17950-38012
ರಾಶಿ	33000 -54396
ಸರಕು	63989-81100
ಸಿದ್ದಾಪುರ	
ಬಿಳಿಗೋಟು	28389-32609
ಕೋಕ	26139 -30400
ಹೊಸಚಾಲಿ	34599-40599
ಕೆಂಪುಗೋಟು	24289-30600
ರಾಶಿ	43099-49399
ತಟ್ಟಿಬೆಟ್ಟೆ	37389-41219
ಶಿರಸಿ	
ಬೆಟ್ಟೆ	36570-41099
ಬಿಳಿಗೋಟು	24300-32592
ಚಾಲಿ	35099-39111

ಪಿಒಕೆ: ಪರಿಸ್ಥಿತಿ ನಿಯಂತ್ರಿಸಲು ₹690 ಕೋಟಿ ಮೊತ್ತ ಹಂಚಿಕೆ

ಇಸ್ಲಾಮಾಬಾದ್ (ಪಿಟಿಐ): ಬೆಲೆ ಏರಿಕೆ, ದುಬಾರಿ ವಿದ್ಯುತ್ ಬಿಲ್ ಹಾಗೂ ತೆರಿಗೆ ವಿರೋಧಿಸಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನಡೆಯುತ್ತಿರುವ ಮುಷ್ಕರವು ಸೋಮವಾರವೂ ಮುಂದುವರಿದಿದ್ದು, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಪರಿಸ್ಥಿತಿಯನ್ನು ನಿಯಂತ್ರಿಸುವ ಕ್ರಮವಾಗಿ ಪಾಕಿಸ್ತಾನ ಸರ್ಕಾರವು ಒಟ್ಟು ₹690 ಕೋಟಿ ಮೊತ್ತವನ್ನು ಈ ವಲಯಕ್ಕಾಗಿ ಹಂಚಿಕೆ ಮಾಡಿದೆ. ಹೋರಾಟಗಾರರು ಮತ್ತು ಪೊಲೀಸರ ನಡುವೆ ಶನಿವಾರ ಇಲ್ಲಿ ಘರ್ಷಣೆ ನಡೆದಿದ್ದು, ಒಬ್ಬ ಪೊಲೀಸ್ ಅಧಿಕಾರಿ ಮೃತಪಟ್ಟಿದ್ದರು.

ಹಣದುಬ್ಬರ, ಬೆಲೆ ಏರಿಕೆ ವಿರೋಧಿಸಿ ಶುಕ್ರವಾರದಿಂದ ಪೂರ್ಣ ಬಂದ್ ಆಚರಿಸಲಾಗುತ್ತಿದ್ದು, ಜನಜೀವನ ಬಹುತೇಕ ಸ್ಥಗಿತವಾಗಿದೆ.

ಪರಿಸ್ಥಿತಿ ನಿಯಂತ್ರಿಸುವ ಕ್ರಮವಾಗಿ ಹೋರಾಟಗಾರರು ಹಾಗೂ ಸರ್ಕಾರದ ಪ್ರತಿನಿಧಿಗಳ ನಡುವೆ ಮಾತುಕತೆ ನಡೆಯಿತು. ಇದರ ಹಿಂದೆಯೇ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಅವರು, ಈ ವಲಯದಲ್ಲಿ ಪರಿಹಾರ ಕ್ರಮಗಳಿಗಾಗಿ ಹಣ ಬಿಡುಗಡೆ ಮಾಡಿದರು.

ಜಮ್ಮು ಕಾಶ್ಮೀರ ಜಂಟಿ ಅವಾಮಿ ಕ್ರಿಯಾ ಸಮಿತಿ (ಜೆಎಎಸಿ) ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿದೆ. ಕಡಿಮೆ ವೆಚ್ಚದಲ್ಲಿ ವಿದ್ಯುತ್ ಪೂರೈಸಬೇಕು ಹಾಗೂ ರಿಯಾಯಿತಿ ದರದಲ್ಲಿ ಗೋಧಿ ಹಿಟ್ಟು ಪೂರೈಸಬೇಕು ಎಂಬುದು ಪ್ರತಿಭಟನಕಾರರ ಪ್ರಮುಖ ಬೇಡಿಕೆಯಾಗಿದೆ.

ರಾಮಚರಿತಮಾನಸ ಯುನೆಸ್ಕೊ ಪಟ್ಟಿಗೆ

ನವದೆಹಲಿ (ಪಿಟಿಐ): ತುಳಸಿದಾಸರ ರಾಮಚರಿತಮಾನಸದ ಪುರಾತನ ಸಚಿತ್ರ ಹಸ್ತಪ್ರತಿಗಳು ಮತ್ತು ಪಂಚತಂತ್ರ ನೀತಿಕಥೆಗಳ 15ನೇ ಶತಮಾನದ ಹಸ್ತಪತ್ರಿಗಳು ಏಷ್ಯಾ-ಫೆಸಿಫಿಕ್ 20 ಅಂಶಗಳಲ್ಲಿ ಸೇರಿಸಲಾಗಿದೆ. ಇವುಗಳನ್ನು 2024ರ ಯುನೆಸ್ಕೋದ ವಿಶ್ವ ಪ್ರಾದೇಶಿಕ ನೋಂದಣಿಯ ಸ್ಮರಣಿಕೆಯಲ್ಲಿ ಸೇರಿಸಲಾಗಿದೆ ಎಂದು ಸೋಮವಾರ ಘೋಷಿಸಲಾಗಿದೆ. ಮಂಗೋಲಿಯಾದ ಉಲಾನ್‌ಬಾತರ್‌ನಲ್ಲಿ ನಡೆದ ಮೇ7- 8 ರಂದು ಆಯೋಜಿಸಲಾಗಿದ್ದ ಏಷ್ಯಾ ಮತ್ತು ಫೆಸಿಫಿಕ್ ವಿಶ್ವ ಸಮಿತಿಯ 10ನೇ ಸಾಮಾನ್ಯ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

BANKING WORKನ Marketing ಮಾಡಲು ಮಹಿಳೆಯರು ಅಥವಾ ಪುರುಷರು ಬೇಕಾಗಿದ್ದಾರೆ.9353651275, 8088963615, 7406009827

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555/ 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿಮ್ಮೋಗ 8095555517

ಭವಿಷ್ಯ

Astrology

★ಜೀವನದ ಸರ್ವತೋಮುಖ ಅಭಿವೃದ್ಧಿಗಾಗಿ,ನಿಮ್ಮ ಯಾವುದೇ ಹೆಣ್ಣು ಅಥವಾ ಗಂಡು ಸಂಬಂಧಿತ ಸಂಪೂರ್ಣ ಮನಇಚ್ಛ ವಶೀಕರಣ, ದಾಂಪತ್ಯ,ಸಂತಾನ,ಆರೋಗ್ಯ,ಹಣ, ಆಸ್ತಿ,ಮತ್ತು ಇನ್ನಿತರ ನಿಮ್ಮ ಯಾವುದೇ ಇಷ್ಟಾರ್ಥಫಲಪ್ರಾಪ್ತಿ 3ದಿನಗಳಲ್ಲಿ ಲಭ್ಯ. 9845005009*

ಪ್ರವಾಸ

Travel

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ್, ವೈಷ್ಣೋದೇವಿ, ಕಾಶ್ಮೀರ,ಕುರುಕ್ಷೇತ್ರ ಆಗ್ರ,ದೆಹಲಿ ಇತ್ಯಾದಿ 28000/ ಮೇ,ಜುನ್ ನಲ್ಲಿ 5/8ದಿನಗಳು ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ವೈಯಕ್ತಿಕ

Change of Name

ಹೆಸರು ಬದಲಾವಣೆ
ಸೊಲೊಮನ್ ರವಿಕುಮಾರ್ ಎಂಬ ನಾನು ನಿಕೂ ಹೋಮ್ 1, ಭಾರತೀಯ ನಗರ, ಅಪಾರ್ಟ್‌ಮೆಂಟ್, ನಂ. 80509, ಥಣಿಸಂದ್ರ ಮುಖ್ಯ ರಸ್ತೆ, ಬೆಂಗಳೂರು – 560064 ಇಲ್ಲಿನ ನಿವಾಸಿಯಾಗಿದ್ದು, ದಿ:14/03/2024ರಂದು ಅಫಿಡವಿಟ್‌ನಲ್ಲಿ ನನ್ನ ಹೆಸರನ್ನು ಸೊಲೊಮನ್ ರವಿಕುಮಾರ್ ಸ್ಯಾಮುಯೆಲ್ ಎಂದು ನೋಟರಿಯವರಾದ ವೈ.ಆರ್. ಚಂದ್ರಶೇಖರ್, ಬೆಂಗಳೂರು ಅವರ ಮುಂದೆ ಬದಲಾಯಿಸಿದ್ದೇನೆ. ಇನ್ನು ಮುಂದೆ ನನ್ನ ಹೆಸರನ್ನು ಸೊಲೊಮನ್ ರವಿಕುಮಾರ್ ಸ್ಯಾಮುಯೆಲ್ ಎಂದು ಕರೆಯಲಾಗುವುದು.

ಸೌಂದರ್ಯ-ಆರೋಗ್ಯ

Hair Care

ವಿಶೇಷವಾದ ಆಯಸ್ಕಾಂತದ ಕಲ್ಲನ್ನು ನೀರಿನಲ್ಲಿ ಹಾಕಿ ಕುಡಿಯುವುದರಿಂದ ಮಧುಮೇಹ, ರಕ್ತದೊತ್ತಡ , ಕೊಲೆಸ್ಟ್ರಾಲ್, ಹೃದಯ ರೋಗ, ಕೀಲುನೋವು, ಕಿಡ್ನಿ ಸ್ಟೋನ್, ಬೊಜ್ಜು ಕಡಿಮೆ ಮಾಡಿಕೊಳ್ಳಬಹುದು. ಕೆಮ್ಮು , ದಮ್ಮು, ಅಸ್ತಮ ಮುಂತಾದ ಕಾಯಿಲೆಗಳಿಗೆ ಉಪಯೋಗವಿದೆ. ಉಚಿತವಾಗಿ ಕೊಡಲಾಗುವುದು 9019626612.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560| +91 9901641752 | 080-45557163/164
*Conditions apply

ಜೊಮಾಟೊಗೆ ₹175 ಕೋಟಿ ಲಾಭ

ನವದೆಹಲಿ (ಪಿಟಿಐ): ಆನ್‌ಲೈನ್‌ನಲ್ಲಿ ಆಹಾರ ಪದಾರ್ಥ ಪೂರೈಸುವ ಜೊಮಾಟೊ ಕಂಪನಿಯು, 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹175 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹188 ಕೋಟಿ ನಷ್ಟವಾಗಿತ್ತು ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.ವರಮಾನವು ₹2,056 ಕೋಟಿಯಿಂದ ₹3,562 ಕೋಟಿಗೆ ಹೆಚ್ಚಳವಾಗಿದೆ. ಒಟ್ಟು ವೆಚ್ಚವು ₹2,431 ಕೋಟಿಯಿಂದ ₹3,636 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

2023–24ರ ಪೂರ್ಣ ಆರ್ಥಿಕ ವರ್ಷದಲ್ಲಿ ನಿವ್ವಳ ಲಾಭವು ₹351 ಕೋಟಿ ಆಗಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ₹971 ಕೋಟಿ ನಷ್ಟ ಅನುಭವಿಸಿತ್ತು. ವರಮಾನವು ₹7,079 ಕೋಟಿಯಿಂದ ₹12,114 ಕೋಟಿಗೆ ಏರಿಕೆಯಾಗಿದೆ.

‘ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಒಟ್ಟು ಆರ್ಡರ್‌ಗಳ ಮೌಲ್ಯದಲ್ಲಿ ಶೇ 28ರಷ್ಟು ಏರಿಕೆಯಾಗಿದೆ. ರೆಸ್ಟೋರೆಂಟ್ ವಲಯದಲ್ಲಿನ ನಿಧಾನಗತಿಯ ಬೆಳವಣಿಗೆ ನಡುವೆಯೂ ರೆಸ್ಟೋರೆಂಟ್‌ಗಳ ಮೂಲಕ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲಾಗಿದೆ’ ಎಂದು ಜೊಮಾಟೊ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ದೀಪಿಂದರ್ ಗೋಯಲ್, ಷೇರುದಾರರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಷೇರಿನ ಮೌಲ್ಯ ಕುಸಿತ: ಜೊಮಾಟೊ ಕಂಪನಿಯ ಷೇರಿನ ಮೌಲ್ಯದಲ್ಲಿ ಶೇ 4ರಷ್ಟು ಕುಸಿತವಾಗಿದೆ. ಬಿಎಸ್‌ಇಯಲ್ಲಿ ಶೇ 3.82ರಷ್ಟು ಕುಸಿದಿದ್ದು, ಪ್ರತಿ ಷೇರಿನ ಬೆಲೆ ₹193.70 ಆಗಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 2.30ರಷ್ಟು ಇಳಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹196.65 ಆಗಿದೆ.

ಸಿಂಗಾಪುರ ಸಚಿವ ಸಂಪುಟ: ಭಾರತದ ಪಿಳ್ಳೈಗೆ ಸ್ಥಾನ

ಸಿಂಗಪುರ (ಪಿಟಿಐ): ಇಲ್ಲಿಯ ನೂತನ ಪ್ರಧಾನಿ ಲಾರೆನ್ಸ್ ವಾಂಗ್ ಅವರ ಸಂಪುಟದಲ್ಲಿ ಭಾರತ ಮೂಲದ ಸಂಸದ ಮುರಳಿ ಪಿಳ್ಳೈ ಅವರು ಕಾನೂನು ಮತ್ತು ಸಾರಿಗೆ ರಾಜ್ಯ ಖಾತೆ ಸಚಿವರಾಗಿ ನೇಮಕವಾಗಲಿದ್ದಾರೆ.

ಲಾರೆನ್ಸ್ ವಾಂಗ್

ಸಿಂಗಪುರದ ಪ್ರಧಾನಿ ಕಚೇರಿಯು ಸಂಭವನೀಯ ಸಂಪುಟ ಸದಸ್ಯರ ಪಟ್ಟಿಯನ್ನು ಸೋಮವಾರ ಬಿಡುಗಡೆಗೊಳಿಸಿದೆ. ಆಡಳಿತಾರೂಢ ಪೀಪಲ್ಸ್ ಆ್ಯಕ್ಷನ್ ಪಾರ್ಟಿ ಸದಸ್ಯರಾಗಿರುವ ಪಿಳ್ಳೈ (56) ಅವರು ವೃತ್ತಿಯಿಂದ ವಕೀಲರು. ಜುಲೈ 1ರಂದು ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಬಾಕಿ ಸಂಸದರು ಮೇ 15ರಂದೇ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಅಲ್ಲಿಯ ‘ಸ್ಟ್ರೇಯ್ಟ್ಸ್ ಟೈಮ್ಸ್’ ಪತ್ರಿಕೆ ವರದಿ ಮಾಡಿದೆ.

ರೇವಣ್ಣಗೆ ಜಾಮೀನು

ಒಂದನೇ ಪುಟದಿಂದ...

‘ಎಚ್.ಡಿ.ರೇವಣ್ಣ ಅವರ ಕುಟುಂಬವು ರಾಜಕೀಯವಾಗಿ ತುಂಬಾ ಪ್ರಭಾವಿ ಮತ್ತು ಬಲಾಢ್ಯವಾಗಿದೆ. ಈ ಪ್ರಕರಣದಲ್ಲಿನ ಕ್ರಿಮಿನಲ್ ಪಿತೂರಿಯನ್ನು ಗಮನಿಸಿದರೆ ಇವರು ಸಂತ್ರಸ್ತೆಯನ್ನು ಬೆದರಿಸಿ ಅಪಹರಿಸಿರುವುದು ವೇದ್ಯವಾಗುತ್ತದೆ. ಆರೋಪಿ ಪತ್ನಿ ಭವಾನಿ ರೇವಣ್ಣ, ದೊಡ್ಡ ಮಗ ಸೂರಜ್ ರೇವಣ್ಣ ಮತ್ತು ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಸ್ಥಳೀಯರು ಎದುರು ಹಾಕಿಕೊಳ್ಳುವುದು ಕಷ್ಟದ ಮಾತು. ಇಂತಹವರನ್ನು ಜಾಮೀನಿನ ಮೇಲೆ ಹೊರಗೆ ಬಿಟ್ಟರೆ ಪ್ರಾಸಿಕ್ಯೂಷನ್ ಸಾಕ್ಷಿಗಳನ್ನು ಬೆದರಿಸಬಲ್ಲರು. ಸಂತ್ರಸ್ತೆಯ ಜೀವ ಅಪಾಯದಲ್ಲಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ರೇವಣ್ಣ ಪರ ಹಾಜರಿದ್ದ ಹೈಕೋರ್ಟ್‌ನ ಹಿರಿಯ ವಕೀಲ ಸಿ.ವಿ. ನಾಗೇಶ್, ‘ಸಂತ್ರಸ್ತ ಮಹಿಳೆಯು ಕಳೆದ ಹತ್ತು ವರ್ಷಗಳಿಂದ ರೇವಣ್ಣ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆಕೆ ರೇವಣ್ಣ ಅವರ ಸಂಬಂಧಿಯೂ ಹೌದು. ನನ್ನನ್ನು ಯಾರೂ ಅಪಹರಣ ಮಾಡಿಲ್ಲ ಎಂದು ಸ್ವತಃ ಮಹಿಳೆಯೇ ವಿಡಿಯೊ ಬಿಡುಗಡೆ ಮಾಡಿದ್ದು ಅದು ಈಗ ವೈರಲ್ ಆಗಿದೆ. ಅಷ್ಟಕ್ಕೂ ಪ್ರಾಸಿಕ್ಯೂಷನ್ ರೇವಣ್ಣ ಅವರನ್ನು ಬಂಧಿಸುವ ಮುನ್ನವಾಗಲೀ ಅಥವಾ ನಂತರವಾಗಲೀ ಅವರ ಪಾತ್ರದ ಬಗ್ಗೆ ಯಾವುದೇ ಸಾಕ್ಷ್ಯವನ್ನು ಸಾದರಪಡಿಸಿಲ್ಲ. ಹೀಗಾಗಿ, ಅವರನ್ನು ನ್ಯಾಯಾಂಗ ಬಂಧನದಲ್ಲಿರಿಸಿರುವುದು ಕಾನೂನು ಬಾಹಿರ’ ಎಂದು ಆಕ್ಷೇಪಿಸಿದರು.

ಸುದೀರ್ಘ ವಾದ ಹಾಗೂ ಪ್ರತಿವಾದ ಆಲಿಸಿದ ನ್ಯಾಯಾಧೀಶರು ಕಾಯ್ದಿರಿಸಿದ್ದ ಆದೇಶವನ್ನು ಸಂಜೆ ಮುಕ್ತ ನ್ಯಾಯಾಲಯದಲ್ಲಿ ಪ್ರಕಟಿಸಿದರು. ಇದೇ 4ರಂದು ರೇವಣ್ಣ ಅವರನ್ನು ವಿಶೇಷ ತನಿಖಾ ದಳ (ಎಸ್ಐಟಿ) ಬಂಧಿಸಿತ್ತು. ನಂತರ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 4 ದಿನ ಎಸ್ಐಟಿ ಕಸ್ಟಡಿಗೆ ನೀಡಿತ್ತು. ಮೇ 8ರಿಂದ ರೇವಣ್ಣ ನ್ಯಾಯಾಂಗ ಬಂಧನದಲ್ಲಿದ್ದರು.

ಷರತ್ತುಗಳು ಏನು?

- ಆರೋಪಿ ರೇವಣ್ಣ ₹5 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ನೀಡಬೇಕು.
- ತಮ್ಮ ಪಾಸ್‌ಪೋರ್ಟ್ ಅನ್ನು ನ್ಯಾಯಾಲಯದ ವಶಕ್ಕೆ ಒಪ್ಪಿಸಬೇಕು.
- ನ್ಯಾಯಾಲಯದ ಲಿಖಿತ ಅನುಮತಿ ಪಡೆಯದೇ ರಾಜ್ಯದ ಗಡಿ ದಾಟುವಂತಿಲ್ಲ.
- ಪ್ರಾಸಿಕ್ಯೂಷನ್ ಸಾಕ್ಷಿ, ದೂರುದಾರರು ಅಥವಾ ಸಂತ್ರಸ್ತರಿಗೆ ಬೆದರಿಕೆ ಹಾಕಬಾರದು.
- ತನಿಖಾಧಿಕಾರಿ ಸೂಚಿಸಿದಾಗ ತನಿಖೆಗೆ ಹಾಜರಾಗಬೇಕು.
- ಮುಂದಿನ ಆದೇಶದವರೆಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕೆ.ಆರ್.ನಗರ ತಾಲ್ಲೂಕು ಅಥವಾ ಸಂತ್ರಸ್ತೆಯ ಕಾಯಂ ನಿವಾಸದತ್ತ ಸುಳಿಯುವಂತಿಲ್ಲ.
- ಪ್ರತಿ ತಿಂಗಳ ಎರಡನೇ ಭಾನುವಾರದಂದು ತನಿಖಾಧಿಕಾರಿಯ ಮುಂದೆ ಆರು ತಿಂಗಳ ಕಾಲ ಅಥವಾ ದೋಷಾರೋಪ ಪಟ್ಟಿ ಸಲ್ಲಿಕೆಯಾಗುವವರೆಗೆ ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯ ಒಳಗೆ ಹಾಜರಾಗಬೇಕು.
- ಅಪರಾಧ ಕೃತ್ಯದಲ್ಲಿ ಭಾಗಿಯಾಗಬಾರದು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

‘ಚಬಹಾರ್’ ನಿರ್ವಹಣೆ ಭಾರತ- ಇರಾನ್ ಅಂಕಿತ

ನವದೆಹಲಿ (ಪಿಟಿಐ): ಮುಂದಿನ ಹತ್ತು ವರ್ಷಗಳ ಕಾಲ ಚಬಹಾರ್ ಬಂದರಿನಲ್ಲಿರುವ ಶಾಹಿದ್ ಬೆಹೆಷ್ತಿ ಟರ್ಮಿನಲ್‌ನ ಕಾರ್ಯಾಚರಣೆ ಮತ್ತು ನಿರ್ವಹಣೆ ಕುರಿತ ಒಪ್ಪಂದಕ್ಕೆ ಭಾರತ ಮತ್ತು ಇರಾನ್, ಸೋಮವಾರ ಸಹಿ ಹಾಕಿವೆ.

ಇಂಡಿಯಾ ಪೋರ್ಟ್ ಗ್ಲೋಬಲ್ ಲಿಮಿಟೆಡ್ ಮತ್ತು ಇರಾನ್‌ನ ಸಮುದ್ರಯಾನ ಸಂಸ್ಥೆಯು ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೊವಾಲ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಅಂಕಿತ ಹಾಕಿವೆ ಎಂದು ಇರಾನ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿಯು ‘ಎಕ್ಸ್’ನಲ್ಲಿ ತಿಳಿಸಿದೆ.

‘ಭಾರತದಿಂದ ಅಭಿವೃದ್ಧಿಪಡಿಸುತ್ತಿರುವ ಮೊದಲ ಸಾಗರೋತ್ತರ ಬಂದರು ಯೋಜನೆ ಇದಾಗಿದೆ. ಚಬಹಾರ್‌ನ ದೀರ್ಘಕಾಲದ ಕಾರ್ಯಾಚರಣೆಗೆ ಅಡಿಗಲ್ಲು ಹಾಕಿದ್ದೇವೆ. ಈ ಒಪ್ಪಂದವು ಎರಡೂ ದೇಶಗಳ ನಡುವೆ ಆರ್ಥಿಕ ಬೆಳವಣಿಗೆ ಮತ್ತು ಹೂಡಿಕೆಗೆ ನೆರವಾಗಲಿದೆ’ ಎಂದು ಹೇಳಿದ್ದಾರೆ.

‘ಚಬಹಾರ್ ಬಂದರು ಭಾರತಕ್ಕೆ ಹತ್ತಿರದಲ್ಲಿದೆ ಎಂದು ಪರಿಗಣಿಸುವಂತಿಲ್ಲ. ಇದು ಆಯಕಟ್ಟಿನ ಸ್ಥಳದಲ್ಲಿದೆ’ ಎಂದು ಹೇಳಿದ್ದಾರೆ.

ಇರಾನ್‌ನ ದಕ್ಷಿಣ ಕರಾವಳಿ ಭಾಗಕ್ಕೆ ಸೇರಿದ ಸಿಸ್ತಾನ್-ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಈ ಬಂದರಿದೆ. ಇದರ ಅಭಿವೃದ್ಧಿಯಿಂದ ಉಭಯ ದೇಶಗಳ ನಡುವೆ ವ್ಯಾಪಾರ ವಹಿವಾಟಿಗೆ ಮತ್ತಷ್ಟು ಉತ್ತೇಜನ ಸಿಗಲಿದೆ.

ಪಾಕಿಸ್ತಾನದ ಅಡೆತಡೆ ಇಲ್ಲದೆಯೇ ಅಫ್ಗಾನಿಸ್ತಾನದೊಂದಿಗೆ ವ್ಯಾಪಾರ ವಹಿವಾಟಿಗೆ ಈ ಬಂದರು ನೆರವಾಗಲಿದೆ. ಅಂತರರಾಷ್ಟ್ರೀಯ ಉತ್ತರ-ದಕ್ಷಿಣ ಸಾರಿಗೆ ಕಾರಿಡಾರ್ ಯೋಜನೆಗೆ (ಐಎನ್‌ಎಸ್‌ಟಿಸಿ) ಪೂರಕವಾಗಿ ಉಭಯ ದೇಶಗಳು ಇದರ ಅಭಿವೃದ್ಧಿಗೆ ಮುಂದಾಗಿವೆ.

ಸುಮಾರು 7,200 ಕಿ.ಮೀ. ಉದ್ದದ ಕಾರಿಡಾರ್ ಇದಾಗಿದೆ. ಭಾರತ, ಇರಾನ್, ಅಫ್ಗಾನಿಸ್ತಾನ, ಅರ್ಮೇನಿಯಾ, ಅಜೆರ್ಬೈಜಾನ್, ರಷ್ಯಾ, ಸೆಂಟ್ರಲ್ ಏಷ್ಯಾ ಮತ್ತು ಯುರೋಪ್ ನಡುವಿನ ಸರಕು ಸಾಗಣೆಗೆ ಇದು ಕೊಂಡಿಯಾಗಿದೆ.

ಮುಂಬೈ: ಜಾಹೀರಾತು ಫಲಕ ಬಿದ್ದು 4 ಸಾವು, 50ಕ್ಕೂ ಹೆಚ್ಚು ಜನರಿಗೆ ಗಾಯ

ದೂಳು ಸಹಿತ ಭಾರಿ ಬಿರುಗಾಳಿ, ಮಳೆ

ಮುಂಬೈನ ಚೆಡ್ಡಾನಗರದಲ್ಲಿ ಬಿರುಗಾಳಿಯಿಂದಾಗಿ 100 ಅಡಿ ಎತ್ತರದ ಬೃಹತ್ ಜಾಹೀರಾತು ಫಲಕ ಪೆಟ್ರೋಲ್ ಪಂಪ್ ಮೇಲೆ ಬಿದ್ದ ಹಿನ್ನೆಲೆಯಲ್ಲಿ ರಕ್ಷಣಾ ಕಾರ್ಯ ನಡೆಸಲಾಯಿತು (ಎಡಚಿತ್ರ). ಠಾಣೆ ಮತ್ತು ಮುಲುಂಡ್ ರೈಲು ನಿಲ್ದಾಣದಲ್ಲಿ ರೈಲಿನ ಮೇಲೆ ಬಾಗಿರುವ ಕಂಬವನ್ನು ತೆರವುಗೊಳಿಸಲಾಯಿತು —ಪಿಟಿಐ ಚಿತ್ರಗಳು

ಮುಂಬೈ (ಪಿಟಿಐ): ಮುಂಬೈನಲ್ಲಿ ಇದ್ದಕ್ಕಿದ್ದಂತೆ ದೂಳು ಸಹಿತ ಭಾರಿ ಬಿರುಗಾಳಿ ಬೀಸಿತು. ಅಲ್ಲದೇ ಜೋರು ಮಳೆ ಸುರಿದ ಪರಿಣಾಮ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಯಿತು.

ಘಾಟ್‌ಕೋಪರ್ ಪ್ರದೇಶದ ಚೆಡ್ಡಾನಗರದಲ್ಲಿ 100 ಅಡಿ ಎತ್ತರದ ಜಾಹೀರಾತು ಫಲಕವು ಪೆಟ್ರೋಲ್ ಪಂಪ್ ಮೇಲೆ ಬಿದ್ದು, 4 ಜನರು ಮೃತಪಟ್ಟಿದ್ದಾರೆ. 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಸ್ಥಳದಲ್ಲಿದ್ದ, ಹಲವರು ಫಲಕದಡಿ ಸಿಲುಕಿಕೊಂಡಿದ್ದರು. ಕೂಡಲೇ ರಕ್ಷಣಾ ಕಾರ್ಯಾಚರಣೆ ನಡೆಸಿ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮುಂಬೈ ವಿಮಾನ ನಿಲ್ದಾಣದಲ್ಲಿ ಸೋಮವಾರ ವಿಮಾನ ಕಾರ್ಯಾಚರಣೆಯನ್ನು ಒಂದು ಗಂಟೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ನಗರದಲ್ಲಿ ರೈಲು ಸಂಚಾರದಲ್ಲೂ ವ್ಯತ್ಯಯವಾಯಿತು.

ಪ್ರತಿಕೂಲದ ಹವಾಮಾನದಿಂದಾಗಿ 15 ವಿಮಾನಗಳನ್ನು ಬೇರೆ ನಿಲ್ದಾಣಗಳತ್ತ ಮಾರ್ಗ ಬದಲಾಯಿಸಲು ಸೂಚಿಸಲಾಯಿತು. ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಯು ಸಂಜೆ 5.30ಕ್ಕೆ ಪುನರಾರಂಭಗೊಂಡಿತು ಎಂದು ನಿಲ್ದಾಣದ ಅಧಿಕಾರಿಗಳು ತಿಳಿಸಿದರು.

ಆರೆ ಮತ್ತು ಪೂರ್ವ ಅಂಧೇರಿ ಮೆಟ್ರೊ ನಿಲ್ದಾಣಗಳ ನಡುವೆ ಮಾರ್ಗದಲ್ಲಿ ತಂತಿಯ ಮೇಲೆ ಬ್ಯಾನರ್ ಒಂದು ಬಿದ್ದಿದ್ದರಿಂದ ಈ ಮಾರ್ಗದ ಮೆಟ್ರೊ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಠಾಣೆ ಮತ್ತು ಮುಲುಂಡ್ ರೈಲು ನಿಲ್ದಾಣಗಳ ಮಾರ್ಗ ಮಧ್ಯೆ ಗಾಳಿಯ ರಭಸಕ್ಕೆ ಕಂಬವೊಂದು ಬಾಗಿದ ಪರಿಣಾಮ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಯಿತು ಎಂದು ಕೇಂದ್ರೀಯ ರೈಲ್ವೆ ಅಧಿಕಾರಿಗಳು ಹೇಳಿದರು.

ಠಾಣೆ ಜಿಲ್ಲೆಯ ಕಲ್ವಾ ಮತ್ತು ಇತರ ಪ್ರದೇಶಗಳಲ್ಲಿ ಮಳೆಯಿಂದಾಗಿ ವಿದ್ಯುತ್ ವ್ಯತ್ಯಯವಾದ ವರದಿಯಾಗಿದೆ. ಹಲವೆಡೆ ಮರಗಳು ಉರುಳಿವೆ.

ದಾದರ್, ಕುರ್ಲಾ, ಮಾಹಿಮ್, ಘಾಟ್‌ಕೋಪರ್, ಮುಲುಂಡ್ ಮತ್ತು ವಿಖ್ರೋಲಿ ನಗರಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗಿದೆ. ಠಾಣೆ, ಅಂಬರ್ ನಾಥ್, ಬದ್ಲಾಪುರ್, ಕಲ್ಯಾಣ್ ಮತ್ತು ಉಲ್ಲಾಸ್‌ನಗರದಲ್ಲಿಯೂ ಬಿರುಸಾದ ಗಾಳಿಯೊಂದಿಗೆ ಸಾಧಾರಣ ಮಳೆಯಾಗಿದೆ.

ಭಾರತ–ಫ್ರಾನ್ಸ್ ಸೇನಾ ಜಂಟಿ ಸಮರಾಭ್ಯಾಸ

ನವದೆಹಲಿ (ಪಿಟಿಐ): ಭಾರತ ಮತ್ತು ಫ್ರಾನ್ಸ್ ನಡುವಿನ ಜಂಟಿ ಸೇನಾ ಸಮರಾಭ್ಯಾಸವು ಸೋಮವಾರ ಮೇಘಾಲಯದಲ್ಲಿ ಆರಂಭಗೊಂಡಿತು. ಇದು ಉಭಯ ದೇಶಗಳ ಸೇನಾ ಸಾಮರ್ಥ್ಯವನ್ನು ಹೆಚ್ಚಿಸುವ ಗುರಿ ಹೊಂದಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಸೇನಾ ಜಂಟಿ ಸಮರಾಭ್ಯಾಸವು ಉಭಯ ರಾಷ್ಟ್ರಗಳ ನಡುವಿನ ರಕ್ಷಣಾ ಸಹಕಾರದ ಮಟ್ಟವನ್ನು ಹೆಚ್ಚಿಸಲು ಮತ್ತು ದ್ವಿಪಕ್ಷೀಯ ಬಾಂಧವ್ಯವೃದ್ಧಿಗೆ ಸಹಕಾರಿಯಾಗಲಿದೆ.

ಮೇ 13ರಿಂದ 26ರವರೆಗೆ ಎರಡೂ ರಾಷ್ಟ್ರಗಳ ನಡುವೆ ನಡೆಯಲಿರುವ ‘ಶಕ್ತಿ’ ಜಂಟಿ ಸಮರಾಭ್ಯಾಸವು, ಉಭಯ ದೇಶಗಳು ನಡೆಸುವ ಕಾರ್ಯಾಚರಣೆಯ ಅತ್ಯುನ್ನತ ತಂತ್ರಗಾರಿಕೆ, ಕಾರ್ಯವಿಧಾನಗಳಲ್ಲಿ ತಮ್ಮ ಕೌಶಲಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡಲಿದೆ ಎಂದು ರಕ್ಷಣಾ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ಎಎಪಿ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಗಂಭೀರ ಆರೋಪ

ದೆಹಲಿ ಸಿ.ಎಂ. ನಿವಾಸದಲ್ಲಿ ಹಲ್ಲೆ

ನವದೆಹಲಿ(ಪಿಟಿಐ) : ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಅಧಿಕೃತ ನಿವಾಸದಲ್ಲಿ ಮುಖ್ಯಮಂತ್ರಿಗಳ ಆಪ್ತ ಸಿಬ್ಬಂದಿಯಿಂದ ತಮ್ಮ ಮೇಲೆ ಹಲ್ಲೆ ನಡೆದಿದೆ ಎಂದು ಎಎಪಿ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಸೋಮವಾರ ಗಂಭೀರ ಆರೋಪ ಮಾಡಿದ್ದಾರೆ. ಆದರೆ, ಈ ಬಗ್ಗೆ ಮಾಲಿವಾಲ್ ಅವರು ಇದುವರೆಗೆ ಯಾವುದೇ ಲಿಖಿತ ದೂರು ದಾಖಲಿಸಿಲ್ಲ.

‘ಸೋಮವಾರ ಬೆಳಗ್ಗೆ 9.30ರ ಸುಮಾರಿಗೆ ಮಹಿಳೆಯೊಬ್ಬರು ಪೊಲೀಸ್ ಕಂಟ್ರೋಲ್ ರೂಂಗೆ ಕರೆ ಮಾಡಿ, ದೆಹಲಿ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ತಮ್ಮ ಮೇಲೆ ದೌರ್ಜನ್ಯ ನಡೆದಿರುವುದಾಗಿ ತಿಳಿಸಿದರು. ಬಳಿಕ ಕರೆಬಂದಿದ್ದು ಸಂಸದೆ ಸ್ವಾತಿ ಮಾಲಿವಾಲ್ ಅವರಿಂದ ಎಂಬುದು ತಿಳಿದುಬಂತು. ಸಿವಿಲ್ ಲೈನ್ ಪೊಲೀಸ್ ಠಾಣಾ ಸಿಬ್ಬಂದಿ ತಕ್ಷಣವೇ ಮುಖ್ಯಮಂತ್ರಿಗಳ ನಿವಾಸಕ್ಕೆ ತೆರಳಿ ಸ್ವಾತಿ ಅವರನ್ನು ಭೇಟಿ ಮಾಡಿದೆ. ಈ ವೇಳೆ ಅವರು ತಾವೇ ಖುದ್ದಾಗಿ ಪೊಲೀಸ್ ಠಾಣೆಗೆ ಬಂದು ದೂರು ದಾಖಲಿಸುವುದಾಗಿ ಪೊಲೀಸರಿಗೆ ಹೇಳಿದ್ದಾರೆ’ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

‘10 ಗಂಟೆ ವೇಳೆಗೆ ಪೊಲೀಸ್ ಠಾಣೆಗೆ ತೆರಳಿರುವ ಸ್ವಾತಿ, ಕೆಲಕಾಲ ಠಾಣೆಯಲ್ಲಿಯೇ ಇದ್ದರೂ ಯಾವುದೇ ಲಿಖಿತ ದೂರು ದಾಖಲಿಸಿಲ್ಲ. ‘ಎಫ್‌ಐಆರ್ ದಾಖಲಿಸಲು ವೈದ್ಯಕೀಯ ಪರೀಕ್ಷೆ ಅಗತ್ಯವಿದೆ. ಹಾಗಾಗಿ ವೈದ್ಯಕೀಯ ಪರೀಕ್ಷೆಯ ನಂತರ ಮರಳಿ ಬರುವೆ’ ಎಂದು ಹೇಳಿ ಅವರು ಠಾಣೆಯಿಂದ ಹೊರಹೋಗಿದ್ದಾರೆ’ ಎಂಬುದಾಗಿ ಡಿಸಿಪಿ ಮೀನಾ ಅವರು ಮಾಹಿತಿ ನೀಡಿದ್ದಾರೆ.

ಈ ರೀತಿಯ ಕೃತ್ಯ ಯಾವ ಮಹಿಳೆಯರ ಮೇಲೆ ನಡೆದರೂ ಅವರಿಗೆ ನ್ಯಾಯ ಸಿಗಲೇ ಬೇಕಿದೆ. ಹಾಗಾಗಿ ಈ ವಿಚಾರವನ್ನು ಗಂಭೀರವಾಗಿ ತನಿಖೆ ಮಾಡಬೇಕು ಎಂದು ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚದೇವ ಆಗ್ರಹಿಸಿದ್ದಾರೆ. ಈ ವಿಚಾರವಾಗಿ ಆಡಳಿತಾರೂಢ ಎಎಪಿ ನಾಯಕರಾಗಲೀ, ಮುಖ್ಯಮಂತ್ರಿಗಳ ನಿವಾಸವಾಗಲೀ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆರೋಪ ವಿಚಾರಣೆಗೆ ತಂಡ ರಚನೆ: ಮಹಿಳಾ ಆಯೋಗ

ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರ ಮೇಲೆ ದೌರ್ಜನ್ಯ ನಡೆದಿದೆ ಎಂಬ ಆರೋಪದ ಕುರಿತು ಸೂಕ್ತ ವಿಚಾರಣೆ ನಡೆಸಲು ತನಿಖಾ ತಂಡವನ್ನು ರಚಿಸುವುದಾಗಿ ರಾಷ್ಟ್ರೀಯ ಮಹಿಳಾ ಆಯೋಗ ಹೇಳಿದೆ.

‘ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಹಾಗಾಗಿ, ಈ ಪ್ರಕರಣ ಸಂಬಂಧ ಪೊಲೀಸರು ತೆಗೆದುಕೊಂಡಿರುವ ಕ್ರಮಗಳ ಸಮಗ್ರ ವರದಿ(ಎಟಿಆರ್)ಯನ್ನು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಸಲ್ಲಿಸುವಂತೆ ದೆಹಲಿ ಪೊಲೀಸರಿಗೆ ಔಪಚಾರಿಕ ಪತ್ರ ಬರೆಯಲಾಗುವುದು’ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

‘ಪರಮಾಣು ಒಪ್ಪಂದ ಅನುಷ್ಠಾನ ಪ್ರಗತಿಯಲ್ಲಿ’

ಎಸ್‌.ಜೈಶಂಕರ್

ಮುಂಬೈ (ಪಿಟಿಐ): ರಷ್ಯಾದೊಂದಿಗಿನ ಪರಮಾಣು ಒಪ್ಪಂದದ ಅನುಷ್ಠಾನಕ್ಕಾಗಿ ಭಾರತವು ಹೆಚ್ಚುವರಿ ಪ್ರದೇಶಗಳನ್ನು ಹುಡುಕುತ್ತಿದೆ. ಪ್ರಸ್ತಾವಿತ ಜೈತಾಪುರ ಪರಮಾಣು ವಿದ್ಯುತ್ ಸ್ಥಾವರ ಯೋಜನೆ ಕುರಿತು ಫ್ರಾನ್ಸ್‌ನೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ತಿಳಿಸಿದ್ದಾರೆ.

ಮುಂಬೈನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಜೈಶಂಕರ್ ಮಾತನಾಡಿದರು. ವಿದೇಶಗಳೊಂದಿಗಿನ ಪರಮಾಣು ಒಪ್ಪಂದಗಳನ್ನು ನಿರೀಕ್ಷೆಯಂತೆ ಅನುಷ್ಠಾನಗೊಳಿಸದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಜೈಶಂಕರ್, ‘ಪರಮಾಣು ಹಾನಿಯ ಕುರಿತು ನಾಗರಿಕ ಹೊಣೆಗಾರಿಕಾ ಕಾಯ್ದೆ 2010 ಅನ್ನು ರೂಪಿಸಿದ ರೀತಿಯಲ್ಲಿ ವಿದೇಶಿ ಪೂರೈಕೆದಾರರ ಕಳವಳವನ್ನು ಹೇಗೆ ಪರಿಹರಿಸಬಹುದು ಎಂಬುದನ್ನು ನೋಡಲು ಅವರೊಂದಿಗೆ ಸಾಕಷ್ಟು ಸಂವಾದದ ಅಗತ್ಯವಿದೆ’ ಎಂದರು.

ಈ ರೀತಿಯ ಸಂವಾದವು ಕೆಲವು ದೇಶಗಳಿಗೆ ಮಾತ್ರ ಅನ್ವಯಿಸುತ್ತದೆ ಮತ್ತು ಇದರಿಂದಾಗಿಯೇ ಒಟ್ಟಾರೆ ಪ್ರಕ್ರಿಯೆ ತಡವಾಗಿದೆ ಎಂದು ತಿಳಿಸಿದರು.

ಜೈಶಂಕರ್ ಅವರು ಕಳೆದ ಡಿಸೆಂಬರ್‌ನಲ್ಲಿ ರಷ್ಯಾ ಪ್ರವಾಸದಲ್ಲಿದ್ದಾಗ, ಕೂಡಂಕುಳಂ ಪರಮಾಣು ಸ್ಥಾವರದ ಭವಿಷ್ಯದ ವಿದ್ಯುತ್ ಉತ್ಪಾದನಾ ಘಟಕಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಉಭಯ ರಾಷ್ಟ್ರಗಳು ಪ್ರಮುಖ ಒಪ್ಪಂದಕ್ಕೆ ಸಹಿ ಹಾಕಿದ್ದವು.

ಕೂಡಂಕುಳಂನಲ್ಲಿ ತಲಾ 1,000 ಮೆಗಾವಾಟ್‌ನ ನಾಲ್ಕು ಪರಮಾಣು ವಿದ್ಯುತ್ ಸ್ಥಾವರಗಳನ್ನು ನಿರ್ಮಿಸಿದೆ ಮತ್ತು ಅದೇ ಸಾಮರ್ಥ್ಯದ ಇನ್ನೂ 2 ರಿಯಾಕ್ಟರ್‌ಗಳನ್ನು ನಿರ್ಮಿಸಲಾಗುತ್ತಿದೆ. ಇದು ದೇಶದ ಅತಿದೊಡ್ಡ ಪರಮಾಣು ಪಾರ್ಕ್ ಆಗಿದೆ.

‘ನಿಜ್ಜರ್ ಹತ್ಯೆ ಪ್ರಕರಣ: ಮಹತ್ತರ ಮಾಹಿತಿ ಬಂದಿಲ್ಲ’

‘ಖಾಲಿಸ್ತಾನ್ ಪ್ರತ್ಯೇಕತಾವಾದ ಹೋರಾಟಗಾರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಕುರಿತಂತೆ ತನಿಖಾ ಸಂಸ್ಥೆಗಳಿಂದ ಬಲವಾದ ಯಾವುದೇ ಸಾಕ್ಷ್ಯ ನಮಗೆ ತಲುಪಿಲ್ಲ’ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಸೋಮವಾರ ತಿಳಿಸಿದರು.

ನಿಜ್ಜರ್ ಹತ್ಯೆ ಕುರಿತಂತೆ ಕೆನಡಾದ ಅಧಿಕಾರಿಗಳು 4ನೇ ಆರೋಪಿಯನ್ನು ಬಂಧಿಸಿದ್ದಾರೆ ಎಂಬ ವರದಿಗೆ ಪ್ರತಿಕ್ರಿಯಿಸಿದ ಅವರು, ‘ಈ ಪ್ರಕರಣ ಕುರಿತಂತೆ ತನಿಖೆಗೆ ಭಾರತ ಮುಕ್ತವಾಗಿದೆ. ಆದರೆ, ದೇಶದಲ್ಲಿ ತನಿಖೆಗೆ ಅಗತ್ಯವಿರುವ ಆಧಾರವನ್ನು ಕೆನಡಾ ನೀಡಬೇಕು’ ಎಂದರು.

‘ಈ ಪ್ರಕರಣದ ಸಂಬಂಧ ಕಳೆದ ಕೆಲವು ದಿನಗಳಲ್ಲಿ ಮಹತ್ತರ ಬದಲಾವಣೆಯಾಗಿದೆ ಎಂಬುದರ ಮಾಹಿತಿ ನನಗಿಲ್ಲ. ವಿದೇಶೀಯರ ಬಂಧನವಾದಾಗ, ಆ ರಾಷ್ಟ್ರ ಅಥವಾ ಆ ರಾಷ್ಟ್ರದ ರಾಯಭಾರಿಗೆ ವಿಷಯ ತಿಳಿಸುವುದು ಶಿಷ್ಟಾಚಾರ’ ಎಂದು ಜೈಶಂಕರ್ ಪ್ರತಿಕ್ರಿಯಿಸಿದರು.

45 ವರ್ಷದ ನಿಜ್ಜರ್‌ನನ್ನು ಬ್ರಿಟಿಷ್ ಕೊಲಂಬಿಯಾದ ಗುರುನಾನಕ್ ಸಿಖ್ ಗುರುದ್ವಾರದ ಬಳಿ ಜೂನ್ 18, 2023ರಂದು ಹತ್ಯೆ ಮಾಡಲಾಗಿತ್ತು. ಈ ಸಂಬಂಧ ಕೆನಡಾದ ಪೊಲೀಸರು ಒಟ್ಟು ನಾಲ್ವರನ್ನು ಬಂಧಿಸಿದ್ದಾರೆ. ಈ ಪ್ರಕರಣವು ಭಾರತ ಮತ್ತು ಕೆನಡಾದ ರಾಜತಾಂತ್ರಿಕ ಸಂಬಂಧದ ಮೇಲೂ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ.

ಮತ 4ನೇ ಹಂತ: ಹಲವೆಡೆ ಹಿಂಸೆ

ಮತದಾನದ ಪ್ರಮಾಣ (%)

ರಾಜ್ಯ	%
ಆಂಧ್ರಪ್ರದೇಶ	68.12
ಬಿಹಾರ	55.90
ಜಮ್ಮು ಮತ್ತು ಕಾಶ್ಮೀರ	36.58
ಜಾರ್ಖಂಡ್	63.37
ಮಧ್ಯಪ್ರದೇಶ	68.63
ಮಹಾರಾಷ್ಟ್ರ	52.75
ಒಡಿಶಾ	63.85
ತೆಲಂಗಾಣ	61.39
ಉತ್ತರ ಪ್ರದೇಶ	57.88
ಪಶ್ಚಿಮ ಬಂಗಾಳ	75.94

(ಸೋಮವಾರ ರಾತ್ರಿ 8 ಗಂಟೆಗೆ ದೊರೆತ ಮಾಹಿತಿ)

ಒಂದನೇ ಪುಟದಿಂದ...

ಕುಪ್ಪಂನಲ್ಲಿ ಒಂದು ಮತಗಟ್ಟೆಯ ಅಧಿಕಾರಿಯು ಟಿಡಿಪಿ ನಾಯಕರ ಜೊತೆ ಶಾಮೀಲಾಗಿ, ಚುನಾವಣಾ ಅಕ್ರಮಕ್ಕೆ ಅನುವು ಮಾಡಿಕೊಟ್ಟಿದ್ದಾರೆ ಎಂದು ದೂರಿದೆ.

ಜನರಿಗೆ ತಮ್ಮ ಹಕ್ಕು ಚಲಾಯಿಸಲು ರಾಜ್ಯದಲ್ಲಿ ಶಾಂತಿಯುತವಾದ ವಾತಾವರಣ ಇರಲಿಲ್ಲ ಎಂದು ಟಿಡಿಪಿ ನಾಯಕ ಚಂದ್ರಬಾಬು ನಾಯ್ಡು ಆರೋಪಿಸಿದ್ದಾರೆ.

‘ಬೆಳಿಗ್ಗೆಯಿಂದ ವರದಿಯಾಗುತ್ತಿರುವ ಹಿಂಸಾಚಾರವನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ವೈಎಸ್‌ಆರ್‌ಸಿಪಿ ಪಕ್ಷವು ತನ್ನ ಸಂಚನ್ನು ಸಂಘಟಿತವಾಗಿ ಕಾರ್ಯರೂಪಕ್ಕೆ ತರುತ್ತಿದೆ. ಮಾಚೆರ್ಲ ಕ್ಷೇತ್ರದಲ್ಲಿ ಹಿಂಸಾಚಾರವನ್ನು ತಡೆಯುವಲ್ಲಿ ಸ್ಥಳೀಯ ಪೊಲೀಸರು ವಿಫಲರಾಗಿದ್ದಾರೆ’ ಎಂದು ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ.

ಉತ್ತರ ಪ್ರದೇಶದಲ್ಲಿ ಹಲವೆಡೆ ಜನರು ಮತದಾನಕ್ಕೆ ಬಹಿಷ್ಕಾರ ಹಾಕಿದ್ದರು. ಶಹಜಹಾನಪುರದ ಕೆಲವು ಹಳ್ಳಿಗಳ ಜನರು ರಸ್ತೆ ಸೌಲಭ್ಯ ಸರಿಯಿಲ್ಲ, ಅಭಿವೃದ್ಧಿ ಕೆಲಸ ಆಗಿಲ್ಲ ಎಂದು ದೂರಿ ಮತದಾನದಿಂದ ದೂರ ಉಳಿದರು.

ಪಶ್ಚಿಮ ಬಂಗಾಳದ ಎಂಟು ಲೋಕಸಭಾ ಕ್ಷೇತ್ರಗಳಲ್ಲಿ ಮತದಾನದ ದಿನ ಹಿಂಸಾಚಾರ ನಡೆದಿದೆ. ಬೀರ್‌ಭೂಮ್ ಮತ್ತು ಬರ್ಧಮಾನ್–ದುರ್ಗಾಪುರ ಲೋಕಸಭಾ ಕ್ಷೇತ್ರಗಳ ಹಲವು ಕಡೆಗಳಲ್ಲಿ ಟಿಎಂಸಿ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ.

ನಾಲ್ಕನೆಯ ಹಂತದ ಮತದಾನವು ಶಾಂತಿಯುತವಾಗಿ ನಡೆದಿದೆ ಎಂದು ಚುನಾವಣಾ ಆಯೋಗ ಹೇಳಿದೆಯಾದರೂ, ಇವಿಎಂ ಸರಿಯಾಗಿ ಕೆಲಸ ಮಾಡಿಲ್ಲ ಎಂದು, ಏಜೆಂಟರಿಗೆ ಮತಗಟ್ಟೆ ಪ್ರವೇಶಿಸಲು ಅವಕಾಶ ನೀಡಲಿಲ್ಲ ಎಂದು ಒಟ್ಟು 1,088 ದೂರುಗಳನ್ನು ವಿವಿಧ ಪಕ್ಷಗಳು ಆಯೋಗಕ್ಕೆ ಸಲ್ಲಿಸಿವೆ.

ಬರ್ಧಮಾನ್– ದುರ್ಗಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ದಿಲೀಪ್ ಘೋಷ್ ಅವರ ವಾಹನಗಳ ಮೇಲೆ ಎರಡು ಕಡೆಗಳಲ್ಲಿ ಕಲ್ಲು ತೂರಲಾಗಿದೆ. ಟಿಎಂಸಿ ಕಾರ್ಯಕರ್ತರು ಘೋಷ್ ಅವರಿಗೆ ಅಡ್ಡಿ ಉಂಟುಮಾಡುವ ಕೆಲಸ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ಒಡಿಶಾದ ಹಲವು ಕಡೆಗಳಲ್ಲಿ ಇವಿಎಂನಲ್ಲಿ ದೋಷಗಳು ಕಂಡುಬಂದವು ಎಂದು ವರದಿಯಾಗಿದೆ.

ತಾಯಿ ಹೊತ್ತು 3 ಕಿ.ಮೀ ನಡೆದ ಮಗ

ರಾಂಚಿ (ಪಿಟಿಐ): ಜಾರ್ಖಂಡ್‌ನ ಖುಂತಿ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು ತನ್ನ ಅಂಗವಿಕಲ ತಾಯಿಯಿಂದ ಮತದಾನ ಮಾಡಿಸುವ ಸಲುವಾಗಿ ಆಕೆಯನ್ನು ಭುಜದ ಮೇಲೆ ಹೊತ್ತು ಮೂರು ಕಿ.ಮೀ. ನಡೆದಿದ್ದಾರೆ.

ಇಟ್ವಾರಿ ದೇವಿಯನ್ನು ಆಕೆಯ ಮಗ ಬಸಂತ್ ಮುಂಡಾ ಹೊತ್ತು ಸಾಗುತ್ತಿದ್ದುದನ್ನು ಸ್ಥಳೀಯರು ನೋಡಿದ್ದಾರೆ.

‘ನನ್ನ ತಾಯಿಗೆ ಒಂದು ವರ್ಷದಿಂದ ನಡೆಯಲು ಸಾಧ್ಯವಾಗುತ್ತಿಲ್ಲ. ಅವರು ಮನೆಯಲ್ಲಿಯೇ ಮತದಾನ ಮಾಡಬೇಕಿತ್ತು. ಆದರೆ, ಯಾವ ಚುನಾವಣಾಧಿಕಾರಿಯೂ ಇತ್ತ ಬಂದಿಲ್ಲ. ನಮ್ಮ ತಾಯಿಗೆ ಮತದಾನದ ಹಕ್ಕನ್ನು ಚಲಾಯಿಸುವ ಬಯಕೆ. ಹಾಗಾಗಿ, ನಾನು ಅವರನ್ನು ಭುಜದ ಮೇಲೆ ಹೊತ್ತು 3 ಕಿ.ಮೀ ನಡೆಯದೇ ಬೇರೆ ಮಾರ್ಗವೇ ಇರಲಿಲ್ಲ’ ಎಂದು ಬಸಂತ್ ಮುಂಡಾ ತಿಳಿಸಿದ್ದಾರೆ.

ಅಂಗವಿಕಲ ಮತದಾರರು ಮತದಾನ ಮಾಡಲು ಚುನಾವಣಾಧಿಕಾರಿಗಳು ಸೂಕ್ತ ವ್ಯವಸ್ಥೆ ಮಾಡಿಲ್ಲ ಎಂದು ಆರೋಪಿಸಿದ್ದಾರೆ.

ಮತದಾನ ಪ್ರಮಾಣ ಪ್ರಕಟಣೆಗೆ ಮನವಿ: 17ಕ್ಕೆ ಅರ್ಜಿ ವಿಚಾರಣೆ

ನವದೆಹಲಿ (ಪಿಟಿಐ): ಮತದಾನದ ಅವಧಿ ಮುಗಿದ 48 ಗಂಟೆಯೊಳಗೆ ಮತಗಟ್ಟೆವಾರು ಮತದಾನದ ಪ್ರಮಾಣವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಚುನಾವಣೆ ಆಯೋಗಕ್ಕೆ ನಿರ್ದೇಶಿಸಲು ಕೋರಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮೇ 17ರಂದು ನಡೆಸಲಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಘಟನೆ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರಿದ್ದ ನ್ಯಾಯಪೀಠ ಸಮ್ಮತಿಸಿತು.

ಮತಗಟ್ಟೆವಾರು ಮತದಾನದ ಮಾಹಿತಿಯುಳ್ಳ ಫಾರಂ 17ಸಿ ನ್ನು ಪ್ರತಿ ಹಂತದ ಮತದಾನದ ಪ್ರಕ್ರಿಯೆ ಬಳಿಕ ಪ್ರಕಟಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು ಎಂದು ಎನ್‌ಜಿಒ ಮನವಿ ಮಾಡಿದೆ.

ಲೋಕಸಭೆ ಚುನಾವಣೆಯ ಮೊದಲ ಎರಡು ಹಂತದ ಮತದಾನದ ಪ್ರಮಾಣವನ್ನು ಆಯೋಗವು, ಏಪ್ರಿಲ್ 30ರಂದು ಅಂದರೆ ಮೊದಲ ಹಂತದ ಮತದಾನದ 11 ದಿನ, ಎರಡನೇ ಹಂತದ ಮತದಾನದ 4 ದಿನದ ಬಳಿಕ ಪ್ರಕಟಿಸಿದೆ. ಮತದಾನದ ದಿನ ಪ್ರಕಟಿಸಿದ್ದಕ್ಕಿಂತ ಅಂಕಿಅಂಶಕ್ಕೆ ಹೋಲಿಸಿದರೆ, ಅಂತಿಮವಾಗಿ ಪ್ರಕಟಿಸಿದ ಪ್ರಮಾಣದಲ್ಲಿ ಶೇ 5ರಿಂದ 6ರಷ್ಟು ಏರಿಕೆಯಾಗಿತ್ತು ಎಂಬ ಅಂಶವನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಜಮ್ಮು: ದೇವಸ್ಥಾನ ರಸ್ತೆಗಾಗಿ ಮುಸ್ಲಿಂ ಕುಟುಂಬದಿಂದ ಮುಕ್ಕಾಲು ಎಕರೆ ಜಮೀನು

ರಿಯಾಸಿ/ ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿರುವ ಐತಿಹಾಸಿಕ ದೇವಸ್ಥಾನಕ್ಕೆ ಹೋಗಲು ಅಗತ್ಯವಿರುವ ರಸ್ತೆ ನಿರ್ಮಾಣಕ್ಕಾಗಿ ಮುಸ್ಲಿಂ ಸಮುದಾಯದ ಕುಟುಂಬವೊಂದು ಬಿತ್ತನೆಗೆ ಯೋಗ್ಯವಾದ ಮುಕ್ಕಾಲು ಎಕರೆಯಷ್ಟು ಜಮೀನನ್ನು ದೇಣಿಗೆ ನೀಡಿದೆ.

ಈ ಕುರಿತು ಪ್ರತಿಕ್ರಿಯಿಸಿದ ನಾಲ್ಕು ಜನ ಸಹೋದರರ ಪೈಕಿ ಒಬ್ಬರಾದ ಗುಲಾಂ ರಸೂಲ್, ‘ಐತಿಹಾಸಿಕ ಗುಪ್ತ ಕಾಶಿ ಗೌರಿ ಶಂಕರ ದೇವಸ್ಥಾನಕ್ಕೆ ತೆರಳಲು ನಿರ್ಮಿಸಲಿರುವ ರಸ್ತೆಗಾಗಿ ಸ್ವಯಂ ಪ್ರೇರಿತವಾಗಿ ಜಮೀನು ನೀಡಲು ನಿರ್ಧರಿಸಿದ್ದೇವೆ. ಇದನ್ನು ಎರಡೂ ಸಮುದಾಯಗಳು ಸ್ವಾಗತಿಸಿವೆ. ಹಲವು ವರ್ಷಗಳಿಂದಲೂ ಎರಡೂ ಸಮುದಾಯದವರು ಒಟ್ಟಿಗೆ ಜೀವಿಸುತ್ತಿದ್ದೇವೆ’ ಎಂದರು.

ರಿಯಾಸಿ ಜಿಲ್ಲಾ ಕೇಂದ್ರದಿಂದ 10 ಕಿ.ಮೀ. ದೂರದ ಕಾಶಿ ಪಟ್ಟ ಗ್ರಾಮದಲ್ಲಿರುವ ಶಿವನ ದೇವಾಲಯವನ್ನು ಛೋಟಾ ಕಾಶಿ ಎಂತಲೂ ಕರೆಯುತ್ತಾರೆ. ಈ ದೇವಾಲಯವನ್ನು ದೋಗ್ರಾ ರಾಜವಂಶಸ್ಥ ಮಹಾರಾಜ ಗುಲಾಬ್ ಸಿಂಗ್ ಅವರು 8ನೇ ಶತಮಾನದಲ್ಲಿ ನಿರ್ಮಿಸಿದ್ದರು ಎನ್ನಲಾಗಿದೆ. ಈ ದೇವಸ್ಥಾನಕ್ಕೆ ಮೈದಾನದಂತಿರುವ ಪ್ರದೇಶದಲ್ಲಿ ನಡೆದುಕೊಂಡೇ ಹೋಗಬೇಕಿದೆ. ಹೀಗಾಗಿ ಈ ದೇವಸ್ಥಾನಕ್ಕೆ ಹೋಗಲು ರಸ್ತೆ ನಿರ್ಮಿಸುವ ಸಲುವಾಗಿ ಹಲವು ಹಿಂದೂ ಕುಟುಂಬಗಳು ತಮ್ಮ ಜಮೀನು ನೀಡುತ್ತಿವೆ.

ಪೊಲೀಸರ ವಿರುದ್ಧ ಕೋರ್ಟ್‌ಗೆ ಗಂಗೋಪಾಧ್ಯಾಯ ದೂರು

ಕೋಲ್ಕತ್ತ (ಪಿಟಿಐ): ‘ನನ್ನ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಲು ಪೊಲೀಸರು ಅತ್ಯುತ್ಸಾಹ ತೋರಿದ್ದಾರೆ’ ಎಂದು ದೂರಿ ಮಾಜಿ ನ್ಯಾಯಮೂರ್ತಿ, ಲೋಕಸಭೆ ತಮ್ಲುಕ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಭಿಜಿತ್ ಗಂಗೋಪಾಧ್ಯಾಯ ಕಲ್ಕತ್ತ ಹೈಕೋರ್ಟ್‌ನ ಮೆಟ್ಟಿಲೇರಿದ್ದಾರೆ.

ನ್ಯಾಯಮೂರ್ತಿ ಜೈ ಸೆನ್‌ಗುಪ್ತಾ ಅವರ ಪೀಠದ ಎದುರು ಈ ಅರ್ಜಿ ಬಂದಿದ್ದು, ಮಂಗಳವಾರ ಇದನ್ನು ವಿಚಾರಣೆಗೆ ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.

ಸಿಬಿಎಸ್‌ಇ: ಬಾಲಕಿಯರದ್ದೇ ಮೇಲುಗೈ

10ನೇ ತರಗತಿ ಶೇ 93.60, 12ನೇ ತರಗತಿ ಶೇ 87.98

ಮುಖ್ಯಾಂಶಗಳು

- ಕಳೆದ ಸಾಲಿಗೆ ಹೋಲಿಸಿದರೆ ಉತ್ತೀರ್ಣ ಪ್ರಮಾಣದಲ್ಲಿ ಏರಿಕೆ
- ಶೇ 90, ಶೇ 95ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆಯಲ್ಲೂ ಏರಿಕೆ
- ಮೆರಿಟ್ ಪಟ್ಟಿ ಬಿಡುಗಡೆ ಇಲ್ಲ

ನವದೆಹಲಿ (ಪಿಟಿಐ): ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಮತ್ತು 12ನೇ ತರಗತಿ ಪರೀಕ್ಷೆಗಳ ಫಲಿತಾಂಶವು ಸೋಮವಾರ ಪ್ರಕಟವಾಗಿದ್ದು, ಈ ಸಾಲಿನಲ್ಲೂ ಬಾಲಕೀಯರೇ ಮೇಲುಗೈ ಸಾಧಿಸಿದ್ದಾರೆ.

10ನೇ ತರಗತಿಯ ಉತ್ತೀರ್ಣ ಪ್ರಮಾಣ ಶೇ 93.60. ಕಳೆದ ಸಾಲಿನ ಫಲಿತಾಂಶಕ್ಕೆ ಹೋಲಿಸಿದರೆ ಶೇ 0.48ರಷ್ಟು ಹೆಚ್ಚಳವಾಗಿದೆ. 12ನೇ ತರಗತಿ ಉತ್ತೀರ್ಣ ಪ್ರಮಾಣ ಶೇ 87.98. ಕಳೆದ ಸಾಲಿಗಿಂತ ಶೇ 0.65ರಷ್ಟು ಹೆಚ್ಚಳವಾಗಿದೆ.

ಇದೇ ರೀತಿ, ಈ ಬಾರಿ ಶೇ 90 ಮತ್ತು ಶೇ 95 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ.

12ನೇ ತರಗತಿಯಲ್ಲಿ ಒಟ್ಟು 1.16 ಲಕ್ಷ ವಿದ್ಯಾರ್ಥಿಗಳು ಶೇ 90ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. ಇವರಲ್ಲಿ 262 ವಿದ್ಯಾರ್ಥಿಗಳು ವಿಶೇಷ ಸೌಲಭ್ಯಗಳ ಅಗತ್ಯವಿರುವ ಮಕ್ಕಳ ವರ್ಗಕ್ಕೆ (ಸಿಎಸ್ ಡಬ್ಲ್ಯುಎನ್) ಸೇರಿದವರಾಗಿದ್ದಾರೆ. 24,068 ವಿದ್ಯಾರ್ಥಿಗಳು ಶೇ 95ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. ಅವರಲ್ಲಿ 43 ವಿದ್ಯಾರ್ಥಿಗಳು ಸಿಎಸ್‌ಡಬ್ಲ್ಯುಎನ್‌ಗೆ ಸೇರಿದವರಿದ್ದಾರೆ.

10ನೇ ತರಗತಿಯಲ್ಲಿ 47,000 ವಿದ್ಯಾರ್ಥಿಗಳು ಶೇ 95ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. 2.12 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ 90ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. 10ನೇ ತರಗತಿಯಲ್ಲಿ 11,000 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳಿಸಿದ್ದಾರೆ.

ಕಾರ್ಯದಕ್ಷತೆಗೆ ಸಂಬಂಧಿಸಿದ ಪ್ರಶ್ನೆಗಳ ಸಂಖ್ಯೆಯನ್ನು ಈ ಬಾರಿಯ ಪರೀಕ್ಷೆಗಳಲ್ಲಿ ಹೆಚ್ಚಿಸಲಾಗಿತ್ತು. ಹೀಗಾಗಿ ಉತ್ತಮ ಫಲಿತಾಂಶ ದಾಖಲಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಮೆರಿಟ್ ಪಟ್ಟಿ ಇಲ್ಲ: ವಿದ್ಯಾರ್ಥಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆಯನ್ನು ತಡೆಯುವ ದಿಸೆಯಲ್ಲಿ ಮೆರಿಟ್ ಪಟ್ಟಿಯನ್ನು ಬಿಡುಗಡೆ ಮಾಡುವುದು ಬೇಡ ಎಂದು ಸಿಬಿಎಸ್‌ಇ ಈ ಹಿಂದೆಯೇ ನಿರ್ಧರಿಸಿತ್ತು. ಅದರಂತೆ ಮೆರಿಟ್ ಪಟ್ಟಿಯನ್ನು ಬಿಡುಗಡೆ ಮಾಡಲಾಗಿಲ್ಲ. ಆದರೆ, ವಿವಿಧ ವಿಷಯಗಳಲ್ಲಿ ಅತಿಹೆಚ್ಚು ಅಂಕ ಗಳಿಸಿರುವ ಶೇ 0.1 ವಿದ್ಯಾರ್ಥಿಗಳಿಗೆ ಮಂಡಳಿಯು ಪ್ರಮಾಣ ಪತ್ರವನ್ನು ನೀಡಲಿದೆ ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸನ್ಯಾಮ್ ಭಾರದ್ವಾಜ್ ಹೇಳಿದ್ದಾರೆ.

2024–25ನೇ ಸಾಲಿನ 10 ಮತ್ತು 12ನೇ ತರಗತಿ ಪರೀಕ್ಷೆಗಳನ್ನು ಫೆಬ್ರುವರಿ 15ರಿಂದಲೇ ಆರಂಭಿಸಲಾಗುವುದು ಎಂದು ಸಿಬಿಎಸ್‌ಇ ತಿಳಿಸಿದೆ.

ಜುಲೈ 15ರಿಂದ ಪೂರಕ ಪರೀಕ್ಷೆ: 10ನೇ ತರಗತಿಯ 1.32 ಲಕ್ಷ ಅಭ್ಯರ್ಥಿಗಳು ಪೂರಕ ಪರೀಕ್ಷೆ ಬರೆಯುವ ಸಂಭವ ಇದೆ. 12ನೇ ತರಗತಿಯ 1.22 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪೂರಕ ಪರೀಕ್ಷೆ ಬರೆಯುವ ಸಂಭವವಿದೆ. ಜುಲೈ 15ರಿಂದ 10 ಮತ್ತು 12ನೇ ತರಗತಿಗಳ ಪೂರಕ ಪರೀಕ್ಷೆಗಳು ನಡೆಯಲಿವೆ ಎಂದು ಮಂಡಳಿ ತಿಳಿಸಿದೆ.

10 ಮತ್ತು 12ನೇ ತರಗತಿ ಪರೀಕ್ಷೆಗಳಲ್ಲಿ ತಿರುವನಂತಪುರಂ ವಲಯದಲ್ಲಿ ಕ್ರಮವಾಗಿ ಶೇ 99.91 ಮತ್ತು ಶೇ 99.75 ಉತ್ತೀರ್ಣ ಪ್ರಮಾಣ ದಾಖಲಾಗಿದೆ. ಈ ಮೂಲಕ ಆ ವಲಯವು ಅತಿ ಹೆಚ್ಚು ಫಲಿತಾಂಶ ದಾಖಲಿಸಿದಂತಾಗಿದೆ. ಪ್ರಯಾಗ್‌ರಾಜ್ ವಲಯವು 12ನೇ ತರಗತಿಯಲ್ಲಿ ಪರೀಕ್ಷೆಯಲ್ಲಿ ಕಳಪೆ ಸಾಧನೆ ಮಾಡಿದ್ದು, ಶೇ 78.25 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 10ನೇ ತರಗತಿಯಲ್ಲಿ ಗುವಾಹಟಿ ವಲಯವು ಶೇ 77.94 ಉತ್ತೀರ್ಣ ಫಲಿತಾಂಶ ಪಡೆವ ಮೂಲಕ ಅತಿ ಕಡಿಮೆ ಫಲಿತಾಂಶ ದಾಖಲಿಸಿರುವ ವಲಯ ಎನಿಸಿಕೊಂಡಿದೆ.

10ನೇ ತರಗತಿಯಲ್ಲಿ ಜವಾಹರ್ ನವೋದಯ ವಿದ್ಯಾಲಯ ಶಾಲೆಗಳು ಶೇ 99.09 ಫಲಿತಾಂಶ ದಾಖಲಿಸಿ ಮೊದಲ ಸ್ಥಾನದಲ್ಲಿವೆ, ಸೆಂಟ್ರಲ್ ಟಿಬೆಟನ್ ಸ್ಕೂಲ್ ಅಡ್ಮಿನಿಸ್ಟ್ರೇಷನ್ ಶಾಲೆಗಳು 12ನೇ ತರಗತಿಯಲ್ಲಿ ಶೇ 99.23 ಫಲಿತಾಂಶ ದಾಖಲಿಸಿ ಮೊದಲ ಸ್ಥಾನದಲ್ಲಿವೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತೇರ್ಗಡೆಯಾದ ವಿದ್ಯಾರ್ಥಿಗಳನ್ನು ‘ಎಕ್ಸ್’ ಮೂಲಕ ಅಭಿನಂದಿಸಿದ್ದಾರೆ.

ರಾಜ್ಯಕ್ಕೆ 4ನೇ ಸ್ಥಾನ

ಒಂದನೇ ಪುಟದಿಂದ...

10ನೇ ತರಗತಿ ಫಲಿತಾಂಶದಲ್ಲಿ ಇಂದಿರಾನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಮಾಯಾ ರಾಜೇಶ್ ಶೇ 99.2 ಅಂಕಗಳನ್ನು ಪಡೆದಿದ್ದಾರೆ. ದಾವಣಗೆರೆಯ ಶ್ರೀ ಚೈತನ್ಯ ಟೆಕ್ನೋ ಸ್ಕೂಲ್‌ನ ಎಂ.ಸುಚಿತಾ, ಸಿಂಧನೂರಿನ ಸತ್ಕೃತಿ ತಿಮ್ಮನದೊಡ್ಡಿ ಕರಣಂ 500ಕ್ಕೆ 494 ಅಂಕ ಗಳಿಸಿದ್ದಾರೆ.

ಜವಾಹರ್ ವಿದ್ಯಾಲಯಕ್ಕೆ ಶೇ 100

12ನೇ ತರಗತಿಯಲ್ಲಿ ಸರ್ಕಾರಿ ಶಾಲೆಗಳು ಶೇ 99.11, ಖಾಸಗಿ ಶಾಲೆಗಳು ಶೇ 96.33, ಜವಾಹರ್ ನವೋದಯ ವಿದ್ಯಾಲಯಗಳು ಶೇ 99.87, ಕೇಂದ್ರೀಯ ವಿದ್ಯಾಲಯಗಳು ಶೇ 99.35 ಹಾಗೂ ಟಿಬೆಟಿಯನ್ ಶಾಲೆಗಳು ಶೇ 98.84 ಫಲಿತಾಂಶ ಪಡೆದಿವೆ.

10ನೇ ತರಗತಿಯಲ್ಲಿ ಸರ್ಕಾರಿ ಶಾಲೆಗಳು ಶೇ 98.07, ಖಾಸಗಿ ಶಾಲೆಗಳು ಶೇ 99.24, ಜವಾಹರ್ ನವೋದಯ ವಿದ್ಯಾಲಯಗಳು ಶೇ 100, ಕೇಂದ್ರೀಯ ವಿದ್ಯಾಲಯಗಳು ಶೇ 99.85 ಹಾಗೂ ಟಿಬೆಟಿಯನ್ ಶಾಲೆಗಳು ಶೇ 100 ಫಲಿತಾಂಶ ಪಡೆದಿವೆ.

11 ಮಂದಿಯ ತಲೆಗೆ ಒಟ್ಟಾರೆ ₹41 ಲಕ್ಷ ಇನಾಮು

ಛತ್ತೀಸಗಢ: 14 ನಕ್ಸಲರ ಬಂಧನ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ 14 ನಕ್ಸಲರನ್ನು ಪೊಲೀಸರು ಬಂಧಿಸಿದ್ದಾರೆ. ಈ ಪೈಕಿ ಆರು ಮಹಿಳೆಯರು ಹಾಗೂ ಎಂಟು ಪುರುಷರು ಇದ್ದಾರೆ ಎಂದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಹನ್ನೊಂದು ನಕ್ಸಲರ ತಲೆಗಳಿಗೆ ಒಟ್ಟಾರೆ ₹41 ಲಕ್ಷ ಬಹುಮಾನ ನೀಡುವುದಾಗಿ ಪೊಲೀಸರು ಘೋಷಿಸಿದ್ದರು. ಆ ಹನ್ನೊಂದು ಮಂದಿ ಕೂಡ ಬಂಧಿತರಲ್ಲಿ ಸೇರಿದ್ದಾರೆ.

ಗಂಗಾಲೂರು ಪೊಲೀಸ್ ಠಾಣಾ ವ್ಯಾಪ್ತಿಯ ಪಿಡಿಯಾ ಮತ್ತು ಮುಟ್ವೆಂಡಿ ಗ್ರಾಮ ಗ್ರಾಮಗಳ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಜಿಲ್ಲಾ ಮೀಸಲು ಪಡೆ ಮತ್ತು ಜಿಲ್ಲಾ ಪೊಲೀಸರ ಕಾರ್ಯಾಚರಣೆಯಲ್ಲಿ 14 ನಕ್ಸಲರನ್ನು ಭಾನುವಾರ ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ಹೇಳಿದ್ದಾರೆ.

ವಿಚಾರಣೆ ವೇಳೆ ನಕ್ಸಲರು ನೀಡಿದ ಮಾಹಿತಿ ಮೇರೆಗೆ ಅವರ ಅಡಗಿಸಿಟ್ಟಿದ್ದ ನಾಲ್ಕು ಟಿಫಿನ್ ಬಾಂಬ್‌ಗಳು, ಎರಡು ಕುಕ್ಕರ್ ಬಾಂಬ್‌ಗಳು, ಸ್ಫೋಟಕಗಳು, ಕಾರ್ಡೆಕ್ಸ್ ವೈರ್, ಜಿಲೆಟಿನ್ ಕಡ್ಡಿಗಳು, ಸ್ಫೋಟಕಗಳು ಮತ್ತು ಮಾವೋವಾದಕ್ಕೆ ಸಂಬಂಧಿಸಿದ ಇತರ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಗಂಗಾಲೂರು ಪ್ರದೇಶ ಸಮಿತಿಯ ಸದಸ್ಯರಾದ ಬಿಚ್ಚೆಂ ಯುಕಾ, ಶರ್ಮಿಳಾ ಕುರ್ಸಾಮ್ ಮತ್ತು ಲಕ್ಷ್ಮಿ ಟಾಟಿ ಅವರ ತಲೆಗೆ ತಲಾ ₹5 ಲಕ್ಷ ಇನಾಮು ಘೋಷಿಸಲಾಗಿತ್ತು. ನಾಲ್ವರು ಕೇಡರ್‌ಗಳಿಗೆ ತಲಾ ₹2 ಹಾಗೂ ಇಬ್ಬರಿಗೆ ₹1 ಲಕ್ಷ ಇನಾಮು ಘೋಷಿಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಮೇ 10ರಂದು ಪಿಡಿಯಾ ಗ್ರಾಮದ ಅರಣ್ಯದಲ್ಲಿ 12 ಗಂಟೆಗಳ ಕಾರ್ಯಾಚರಣೆ ಕೈಗೊಂಡಿದ್ದ ಭದ್ರತಾ ಪಡೆಗಳು, 12 ನಕ್ಸಲರನ್ನು ಹೊಡೆದುರುಳಿಸಿತ್ತು. ಜೊತೆಗೆ ಹಲವು ಶಂಕಿತರನ್ನು ವಶಕ್ಕೆ ಪಡೆಯಲಾಗಿತ್ತು. ಅಂದು ವಶಕ್ಕೆ ಪಡೆಯಲಾದವರ ಮಾಹಿತಿಯನ್ನು ಪೊಲೀಸರು ಈವರೆಗೆ ಬಹಿರಂಗಪಡಿಸಿಲ್ಲ. ಮತ್ತೊಂದೆಡೆ ಅಂದು ನಡೆದಿರುವುದು ನಕಲಿ ಎನ್‌ಕೌಂಟರ್ ಎಂದು ಗ್ರಾಮಸ್ಥರು ಮಾನವ ಹಕ್ಕುಗಳ ಹೋರಾಟಗಾರರು ದೂರಿದ್ದಾರೆ.

ಅಲ್ಲದೆ, ಅಂದು ಎನ್‌ಕೌಂಟರ್‌ನಲ್ಲಿ ಮೃತಪಟ್ಟವರು ಕಾಡಿನಲ್ಲಿ ಸಿಗುವ ಎಲೆಯೊಂದನ್ನು ಕಿತ್ತಿಕೊಳ್ಳಲು ಹೋಗಿದ್ದ ಗ್ರಾಮಸ್ಥರಾಗಿದ್ದಾರೆ ಎಂದು ಗ್ರಾಮಸ್ಥರ ವಾದ. ಆದರೆ, ಈ ಆರೋಪವನ್ನು ಅಲ್ಲಗಳೆದಿರುವ ಪೊಲೀಸರು, ಹತ್ಯೆಗೀಡಾದವರು ನಕ್ಸಲರೇ ಆಗಿದ್ದು, ಅವರ ತಲೆಗೆ ಇನಾಮು ಘೋಷಣೆಯಾಗಿತ್ತು ಎಂದಿದ್ದಾರೆ.

ಮೂವರು ನಕ್ಸಲರು ಹತ

ಗಢಚಿರೋಲಿ, ಮಹಾರಾಷ್ಟ್ರ (ಪಿಟಿಐ): ಭದ್ರತಾ ಪಡೆಗಳು ಸೋಮವಾರ ಇಲ್ಲಿ ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಮಹಿಳೆಯರು ಸೇರಿ ಮೂವರು ನಕ್ಸಲರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಕ್ಸಲ್ ಸಂಘಟನೆಯ ‘ಪೆರಿಮಿಲಿ ದಲಂ’ ಪಂಗಡದ ಕೆಲ ಸದಸ್ಯರು ಕತ್ರಂಗಟ್ಟ ಗ್ರಾಮದ ಬಳಿಯ ಅರಣ್ಯದಲ್ಲಿ ಅಡಗಿದ್ದಾರೆ ಮತ್ತು ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸುತ್ತಿದ್ದಾರೆ ಎಂಬ ಕುರಿತು ಗುಪ್ತಚರ ಮಾಹಿತಿ ದೊರಕಿತು. ಕೂಡಲೇ ಸಿ– 60 ಕಮಾಂಡೊದ ಎರಡು ತಂಡಗಳು, ಗಢಚಿರೋಲಿಪೊಲೀಸರ ವಿಶೇಷ ಕಾರ್ಯಪಡೆಯನ್ನು ಕಾರ್ಯಾಚರಣೆ ನಡೆಸಲು ಕಳುಹಿಸಲಾಯಿತು ಎಂದು ನೀಲೋತ್ಪಲ್‌ನ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಶೋಧಕಾರ್ಯ ನಡೆಸುತ್ತಿದ್ದ ಭದ್ರತಾ ಪಡೆಗಳ ಮೇಲೆ ನಕ್ಸಲರು ಗುಂಡಿನ ದಾಳಿ ನಡೆಸಿದರು. ಈ ವೇಳೆ ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿದವು. ಗುಂಡಿನ ಚಕಮಕಿಯ ಬಳಿಕ ಸ್ಥಳದಿಂದ ಮೂವರು ನಕ್ಸಲರ ಮೃತದೇಹಗಳನ್ನು ವಶಕ್ಕೆ ಪಡೆಯಲಾಗಿದೆ.

ಸಂಕ್ಷಿಪ್ತ ಸುದ್ದಿ

ಜೈಪುರ: ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್, ಆತಂಕ

ಜೈಪುರ (ಪಿಟಿಐ): ಇಲ್ಲಿನ 50ಕ್ಕೂ ಹೆಚ್ಚು ಶಾಲೆಗಳಿಗೆ ಸೋಮವಾರ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಲಾಗಿದೆ. ಈ ಸುದ್ದಿ ಹರಡುತ್ತಿದ್ದಂತೆ, ವಿದ್ಯಾರ್ಥಿಗಳು ಹಾಗೂ ಪೋಷಕರು ತೀವ್ರ ಆತಂಕಕ್ಕೆ ಒಳಗಾದರು.

ಬೆದರಿಕೆ ಪತ್ರದ ಹಿಂದೆಯೇ ಶಾಲೆಗಳಲ್ಲಿ ತೀವ್ರ ತಪಾಸಣೆಯನ್ನು ನಡೆಸಲಾಯಿತು. ಆದರೆ, ಯಾವುದೇ ಸ್ಫೋಟಕ ಅಥವಾ ಶಂಕಾಸ್ಪದ ಪರಿಕರ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಜೈಪುರದಲ್ಲಿ 2008ರಲ್ಲಿ ಇದೇ ದಿನ ಸರಣಿ ಬಾಂಬ್ ಸ್ಫೋಟ ಸಂಭವಿಸಿತ್ತು. ಆಗ ಸುಮಾರು 71 ಜನರು ಸತ್ತಿದ್ದು, 180 ಜನರು ಗಾಯಗೊಂಡಿದ್ದರು. ಅದರ 16ನೇ ವರ್ಷದ ದಿನದಂದೇ ಶಾಲೆಗಳಿಗೆ ಬೆದರಿಕೆ ಕರೆ ಬಂದಿರುವುದು ಗಮನಾರ್ಹ.

ಮೊದಲ ಬೆದರಿಕೆ ಇ–ಮೇಲ್ ತಿಲಕ್ ನಗರದಲ್ಲಿರುವ ಖಾಸಗಿ ಶಾಲೆಗೆ ಬಂದಿತು. ನಂತರ ಮಾನಕ್ ಚೌಕ್, ವೈಶಾಲಿ ನಗರ, ವಿದ್ಯಾಧರ ನಗರ, ನಿವಾರು ರೋಡ್, ಟೋಂಕ್ ರೋಡ್‌ನಲ್ಲಿರುವ ಖಾಸಗಿ ಶಾಲೆಗಳಿಗೂ ಬಂದಿತು ಎಂದು ಪೊಲೀಸರು ತಿಳಿಸಿದ್ದಾರೆ.

ಸೊರೇನ್ ಜಾಮೀನು ಅರ್ಜಿ ತಿರಸ್ಕೃತ

ರಾಂಚಿ (ಪಿಟಿಐ): ಜಮೀನು ಕಬಳಿಕೆ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷದ ಕಾರ್ಯಾಧ್ಯಕ್ಷ ಹೇಮಂತ್ ಸೊರೇನ್ ಅವರ ಜಾಮೀನು ಅರ್ಜಿಯನ್ನು ಇಲ್ಲಿನ ವಿಶೇಷ ನ್ಯಾಯಾಲಯ (ಪಿಎಂಎಲ್‌ಎ) ಸೋಮವಾರ ತಿರಸ್ಕರಿಸಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತಮ್ಮ ಬಂಧನ ಪ್ರಶ್ನಿಸಿ ಸೊರೇನ್ ಅವರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಮೇ 17ರ ಒಳಗೆ ಹೇಳಿಕೆ ದಾಖಲಿಸುವಂತೆ ಜಾರಿ ನಿರ್ದೇಶನಾಲಯಕ್ಕೆ ಸೂಚನೆ ನೀಡಿದೆ.

ಬಂಧನ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಮೇ 3ರಂದು ತಿರಸ್ಕರಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ, ಸೊರೇನ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಅಲ್ಲದೆ, ಈ ಕುರಿತು ನ್ಯಾಯಾಲಯ ತೀರ್ಪು ಪ್ರಕಟಿಸುವ ಮುನ್ನ ಲೋಕಸಭಾ ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳ ಪರ ಪ್ರಚಾರ ಕೈಗೊಳ್ಳಲು ಮಧ್ಯಂತರ ಜಾಮೀನು ನೀಡುವಂತೆಯೂ ಸೊರೇನ್ ಅವರು ಅರ್ಜಿಯಲ್ಲಿ ಮನವಿ ಮಾಡಿದ್ದರು.

ಮಾನಹಾನಿ ಪ್ರಕರಣದ ರಾಜಿ ಕೇಜ್ರಿವಾಲ್‌ಗೆ ಕಾಲಾವಕಾಶ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧದ ಮಾನಹಾನಿ ಪ್ರಕರಣದ ಪ್ರಕ್ರಿಯೆಗಳಿಗೆ ನೀಡಲಾದ ತಡೆಯನ್ನು ಸೋಮವಾರ ವಿಸ್ತರಿಸಿರುವ ಸುಪ್ರೀಂ ಕೋರ್ಟ್, ಈ ಪ್ರಕರಣವನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಕಾಲಾವಕಾಶ ನೀಡಿದೆ.

ಕೇಜ್ರಿವಾಲ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ಈ ಕುರಿತು ವಿಚಾರಣೆ ನಡೆದ ಮಾರ್ಚ್ 11ರಿಂದ ಈವರೆಗೆ ಪ್ರಕರಣದ ಎರಡೂ ಪಕ್ಷಗಳವರು ರಾಜೀ ಸಂಧಾನದ ಕುರಿತು ಚರ್ಚಿಸಲು ಒಮ್ಮೆಯೂ ಭೇಟಿಯಾಗಿಲ್ಲ’ ಎಂದು ತಿಳಿಸಿದರು.

ಈ ವೇಳೆ ದೂರುದಾರರ ಪರ ವಕೀಲರು, ನ್ಯಾಯಾಲಯದ ಕೊನೆಯ ಕಲಾಪದ ಬಳಿಕ ಯಾರೂ ತಮ್ಮನ್ನು ಸಂಪರ್ಕಿಸಿಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ‘ಕೇಜ್ರಿವಾಲ್ ಅವರ ಕಡೆಯಿಂದ ದೂರುದಾರರನ್ನು ಸಂಪರ್ಕಿಸಲಾಗುವುದು’ ಎಂದು ಹೇಳಿ, ವಿಚಾರಣೆಯನ್ನು ಆಗಸ್ಟ್ 12ಕ್ಕೆ ಮುಂದೂಡಿತು.

2018ರಲ್ಲಿ ಯೂಟ್ಯೂಬರ್ ಧ್ರುವ ರಾಠೆ ಪ್ರಸಾರ ಮಾಡಿದ್ದ ವಿಡಿಯೊವನ್ನು ಮರು ಟ್ವೀಟ್ ಮಾಡಿದ ಆರೋಪದ ಮೇರೆಗೆ ಕೇಜ್ರಿವಾಲ್ ವಿರುದ್ಧ ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಕೇಜ್ರಿವಾಲ್ ಅವರಿಗೆ ನೀಡಲಾಗಿದ್ದ ಸಮನ್ಸ್ ಅನ್ನು ಎತ್ತಿಹಿಡಿದಿದ್ದ ದೆಹಲಿ ಹೈಕೋರ್ಟ್ ಆದೇಶದ ವಿರುದ್ಧ ಕೇಜ್ರಿವಾಲ್ ಸುಪ್ರೀಂ ಕೋರ್ಟ್ ಮೊರೆಹೋಗಿದ್ದರು.

ಮೋದಿ ವಿರುದ್ಧ ಕ್ರಮ: ನಿರ್ದೇಶನ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಕೋಮು ಸೌಹಾರ್ದಕ್ಕೆ ಧಕ್ಕೆಯಾಗುವ ಹೇಳಿಕೆಗಳ ಮೂಲಕ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದಡಿ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಕ್ರಮ ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು ಎಂದು ಕೋರಿದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಸೋಮವಾರ ವಜಾ ಮಾಡಿದೆ.

ರಾಯಲ್ ಚಾಲೆಂಜರ್ಸ್‌ನ ವೇಗಿ ಯಶ್ ದಯಾಳ್‌ಗೆ ಅಂದು ಟೀಕೆ, ಇಂದು ಹೊಗಳಿಕೆ

ಬಿದ್ದಲ್ಲಿಂದಲೇ ಪುಟಿದೆದ್ದ ಆರ್‌ಸಿಬಿ

• ಗಿರೀಶ ದೊಡ್ಡಮನಿ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳ ಕಂಗಳಲ್ಲಿ ಈಗ ಮತ್ತೆ 'ಕಪ್ ಕನಸು' ಇಣುಕುತ್ತಿದೆ.

ಏಕೆಂದರೆ; ರಾಯಲ್ ಚಾಲೆಂಜರ್ಸ್ ತಂಡವು ಬಿದ್ದ ಸ್ಥಳದಲ್ಲಿಯೇ ಮತ್ತೆ ಪುಟಿದೆದ್ದು ನಿಂತಿದೆ. ಆರಂಭಿಕ ಹಂತದಲ್ಲಿ ಸತತ ಸೋಲುಗಳಿಗೆ ಕಾರಣವಾಗಿದ್ದ ಬೌಲರ್‌ಗಳೇ ಈಗ ಪಂದ್ಯಗಳನ್ನು ಗೆಲ್ಲಿಸಿಕೊಡುತ್ತಿದ್ದಾರೆ. ಎದುರಾಳಿ ತಂಡಗಳನ್ನು ಆಲೌಟ್ ಮಾಡುತ್ತಿದ್ದಾರೆ. 20 ದಿನಗಳ ಹಿಂದಷ್ಟೇ ಅಂಕಪಟ್ಟಿಯಲ್ಲಿ ಹತ್ತನೇ ಸ್ಥಾನದಲ್ಲಿದ್ದ (2 ಅಂಕ) ತಂಡವನ್ನು ಈಗ ಐದನೇ ಸ್ಥಾನಕ್ಕೆ ತಂದು ನಿಲ್ಲಿಸಿದ್ದಾರೆ. ತಂಡದ ಖಾತೆಯಲ್ಲಿ ಈಗ 12 ಅಂಕಗಳೂ ಇವೆ. ಬೌಲಿಂಗ್ ಪಡೆಯು ಮೂರು ಪಂದ್ಯಗಳಲ್ಲಿ ಎದುರಾಳಿ ತಂಡಗಳನ್ನು ಆಲೌಟ್ (ಗುಜರಾತ್ ಟೈಟನ್ಸ್, ಪಂಜಾಬ್ ಕಿಂಗ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್) ಮಾಡಿದೆ.

ಹರಾಜು ಪ್ರಕ್ರಿಯೆಯಲ್ಲಿ ಆರ್‌ಸಿಬಿ ತಂಡವು ಯಶ್ ದಯಾಳ್ ಅವರನ್ನು ಖರೀದಿಸಿದಾಗ ಟೀಕಿಸಿದ್ದವರು ಈಗ ಮೌನವಾಗಿದ್ದಾರೆ. ಅಲಹಾಬಾದಿನ 26 ವರ್ಷದ ಈ ದಯಾಳ್ ಭಾನುವಾರದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಎದುರು ಮೂವರು ಪ್ರಮುಖ ಬ್ಯಾಟರ್‌ಗಳ ವಿಕೆಟ್ ಕಬಳಿಸಿದ್ದಲ್ಲದೇ, ಸ್ಫೋಟಕ ಶೈಲಿಯ ಬ್ಯಾಟರ್ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅವರ ರನ್‌ಔಟ್‌ಗೂ ಕಾರಣರಾಗಿದ್ದರು.

'ಸತತ ಸೋಲುಗಳ ಕಹಿಯುಂಡಾಗ ನೈತಿಕ ಸ್ಥೈರ್ಯ ಕುಂದುತ್ತದೆ. ಈ ಅನುಭವ ನಮಗೆ ಆಗಿದೆ. ಸತತ ಆರು ಪಂದ್ಯಗಳನ್ನು ಸೋತಾಗ ನಾವು ಸ್ವಲ್ಪ ಮಟ್ಟಿಗೆ ಮಾನಸಿಕವಾಗಿ ಕುಸಿದಿದ್ದೆವು. ಆದರೆ ನಮ್ಮಲ್ಲಿ ಯಾರೂ ಇನ್ನೊಬ್ಬರತ್ತ ಬೆರಳು ತೋರಿಸಲಿಲ್ಲ. ನೆಪಗಳನ್ನು ಹೆಣೆಯಲಿಲ್ಲ. ಆ ಸೋಲುಗಳನ್ನೇ ಸವಾಲಾಗಿ ತೆಗೆದುಕೊಂಡು ಪುಟಿದೆದ್ದೇವೆ -ಮತ್ತೆ ಗೆಲುವಿನ ಹಾದಿಗೆ ಮರಳಿದ್ದೇವೆ' ಎಂದು ಭಾನುವಾರ ಪಂದ್ಯದ ನಂತರ ಸುದ್ದಿಗೋಷ್ಠಿಯಲ್ಲಿ ಯಶ್ ಹೇಳಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಯಶ್ ದಯಾಳ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಐದನೇ ಜಯಕ್ಕೂ ಮುನ್ನ: ಮಾರ್ಚ್ 25ರಂದು ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿ ಪಂಜಾಬ್ ಕಿಂಗ್ಸ್ ಎದುರು ಗೆದ್ದಿತ್ತು. ಅದರೊಂದಿಗೆ ಮೊದಲ ಪಂದ್ಯದಲ್ಲಿ ಚೆನ್ನೈ ಎದುರಿನ ಸೋಲನ್ನು ಮರೆಸಿತ್ತು. ಆದರೆ ಇದಾದ ನಂತರ ಏಪ್ರಿಲ್ 25ರವರೆಗೂ ಸತತ ಅರ್ಧಡಜನ್ ಪಂದ್ಯಗಳಲ್ಲಿ ಸೋತಿತು. ಆಗ 'ಆರ್‌ಸಿಬಿ ಈ ಬಾರಿ ಕಪ್ ಗೆಲ್ಲುವುದಿರಲಿ, ಪ್ಲೇಆಫ್ ಕೂಡ ಪ್ರವೇಶಿಸುವುದಿಲ್ಲ' ಎಂಬ ಟೀಕೆಗಳು ಕೇಳಿಬಂದವು. ಫ್ರ್ಯಾಂಚೈಸಿ ಆಡಳಿತ ಮಂಡಳಿಯ ನಿರ್ಧಾರಗಳೂ ಮತ್ತು ಆಟಗಾರರ ಆಯ್ಕೆ ಪ್ರಕ್ರಿಯೆಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿತ್ತು.

ವಿರಾಟ್ ಕೊಹ್ಲಿ, ದಿನೇಶ್ ಕಾರ್ತಿಕ್ ಅವರಿಬ್ಬರನ್ನು ಬಿಟ್ಟರೆ ಬೇರೆ ಬ್ಯಾಟರ್‌ಗಳು ಲಯದಲ್ಲಿ ಸ್ಥಿರತೆ ಇರಲಿಲ್ಲ. ಆದರೆ, ಹೈದರಾಬಾದಿನಲ್ಲಿ ಸನ್‌ರೈಸರ್ಸ್ ತಂಡವನ್ನು ಮಣಿಸಿದ ನಂತರ ಹಿಂತಿರುಗಿ ನೋಡಿಲ್ಲ. ಫಫ್ ಡುಪ್ಲೆಸಿ, ರಜತ್ ಪಾಟೀದಾರ್, ವಿಲ್ ಜ್ಯಾಕ್ಸ್, ಮಹಿಪಾಲ್ ಲೊಮ್ರೊರ್ ಹಾಗೂ ಕ್ಯಾಮರಾನ್ ಗ್ರೀನ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡುತ್ತಿದ್ದಾರೆ. ಗ್ಲೆನ್ ಮ್ಯಾಕ್ಸ್‌ವೆಲ್ ಅವರು ವಿಫಲರಾದರೂ ಯುವ ಆಟಗಾರರು ಬೆಳಗುತ್ತಿರುವುದು ಆಶಾದಾಯಕ ಬೆಳವಣಿಗೆ.

ಭಣಗುಟ್ಟುತ್ತಿದ್ದ ಸ್ಪಿನ್ ಬೌಲಿಂಗ್ ವಿಭಾಗಕ್ಕೆ ಸ್ವಪ್ನಿಲ್ ಸಿಂಗ್ ಮತ್ತು ಕರ್ಣ ಶರ್ಮಾ ಜೀವ ತುಂಬಿದ್ದಾರೆ. ವೇಗಿ ಮೊಹಮ್ಮದ್ ಸಿರಾಜ್ ಪವರ್ ಪ್ಲೇ ಯಲ್ಲಿ ಲೈನ್ ಮತ್ತು ಲೆಂಗ್ತ್ ಕಂಡುಕೊಂಡಿದ್ದಾರೆ. ಎಲ್ಲರ ಫೀಲ್ಡಿಂಗ್ ಕೂಡ ಚುರುಕಾಗಿದೆ. ಧರ್ಮಶಾಲಾದಲ್ಲಿ ಪಂಜಾಬ್ ಕಿಂಗ್ಸ್ ತಂಡದ ಬ್ಯಾಟರ್ ಶಶಾಂಕ್ ಸಿಂಗ್ ಅವರ ರನ್‌ಔಟ್‌ಗೆ ಕಾರಣರಾದ ವಿರಾಟ್ ಕೊಹ್ಲಿಯ ಚಿರತೆ ವೇಗದ ಫೀಲ್ಡಿಂಗ್ ಯುವ ಆಟಗಾರರಿಗೆ ಸ್ಫೂರ್ತಿಯಾಗಿದೆ. ಒಟ್ಟಿನಲ್ಲಿ ಎಲ್ಲ ವಿಭಾಗಗಳ ದೌರ್ಬಲ್ಯ ತಿದ್ದಿಕೊಂಡಿರುವ ತಂಡವು ಗೆಲುವು ಸಾಧಿಸುತ್ತ ನಡೆದಿದೆ.

ಆದರೆ ಪ್ಲೇ ಆಫ್ ಹಾದಿ ಇನ್ನೂ ಸುಗಮವಾಗಿಲ್ಲ. ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಆರ್‌ಸಿಬಿಯು ಚೆನ್ನೈ ಸೂಪರ್ ಕಿಂಗ್ಸ್ ಎದುರು ಉತ್ತಮ ರನ್‌ರೇಟ್‌ನಿಂದ ಗೆಲ್ಲಬೇಕು. ಅದರ ನಂತರ 12 ಅಂಕ ಗಳಿಸಿರುವ ಇನ್ನುಳಿದ ತಂಡಗಳಾದ ಲಖನೌ ಸೂಪರ್ ಜೈಂಟ್ಸ್, ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ತಮ್ಮ ಮುಂದಿನ ಪಂದ್ಯಗಳಲ್ಲಿ ಅನುಭವಿಸುವ ಸೋಲು ಮತ್ತು ಗೆಲುವುಗಳ ಲೆಕ್ಕಾಚಾರದಲ್ಲಿಯೂ ಆರ್‌ಸಿಬಿಗೆ ಅದೃಷ್ಟ ಒಲಿದರೆ ಮಾತ್ರ ನಾಲ್ಕರ ಘಟ್ಟದ ಗುರಿಸಾಧನೆ ಸಾಧ್ಯವಾಗಬಹುದು.

ಸೂಪರ್ ಜೈಂಟ್ಸ್ –ಕ್ಯಾಪಿಟಲ್ಸ್ ಹಣಾಹಣಿ ಇಂದು

ಜಯದ ಒತ್ತಡದಲ್ಲಿ ರಾಹುಲ್ ಬಳಗ

ಕೆ.ಎಲ್. ರಾಹುಲ್ –ಪಿಟಿಐ ಚಿತ್ರ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ನವದೆಹಲಿ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಅವರ ಮೇಲೆ ಈಗ ಎಲ್ಲರ ಚಿತ್ತ ನೆಟ್ಟಿದೆ.

ರಾಹುಲ್ ಅವರು ಲಖನೌ ತಂಡದ ನಾಯಕತ್ವವನ್ನು ತೊರೆಯಲಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿರುವುದು ಇದಕ್ಕೆ ಕಾರಣ. ಈಚೆಗೆ ಸನ್‌ರೈಸರ್ಸ್ ಹೈದರಾಬಾದ್ ಎದುರು ಪಂದ್ಯದ ಲಖನೌ ಸೋತಿತ್ತು. ಆಗ ಮೈದಾನದಲ್ಲಿಯೇ ತಂಡದ ಮಾಲೀಕರು ರಾಹುಲ್ ಅವರನ್ನು 'ವಾಗ್ದಂಡನೆ'ಗೊಳಪಡಿಸಿದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಮಾಡಿತ್ತು. ಆದ್ದರಿಂದಲೇ ರಾಹುಲ್ ಅವರು ತಂಡವನ್ನು ತೊರೆಯುವ ಕುರಿತ ಮಾತುಗಳು ಕೇಳಿಬರುತ್ತಿವೆ.

ಇದೀಗ ಅವರ ಮುಂದೆ ತಮ್ಮ ನಾಯಕತ್ವ ಮತ್ತು ಬ್ಯಾಟಿಂಗ್ ಸಾಮರ್ಥ್ಯವನ್ನು ತೋರಿಸುವ ಅವಕಾಶಗಳಿವೆ. ಲೀಗ್ ಹಂತದಲ್ಲಿ ತನ್ನ ಪಾಲಿನ ಎರಡೂ ಪಂದ್ಯಗಳನ್ನು ಗೆದ್ದರೆ ಲಖನೌ ತಂಡಕ್ಕೆ ಪ್ಲೇಆಫ್ ಪ್ರವೇಶ ಸುಗಮವಾಗಲಿದೆ. ಅದರಲ್ಲಿ ಒಂದು ಪಂದ್ಯವು ಮಂಗಳವಾರ ಡೆಲ್ಲಿ ಕ್ಯಾಪಿಟಲ್ಸ್ ಎದುರು ನಡೆಯಲಿದೆ. ಕೊನೆಯ ಲೀಗ್ ಪಂದ್ಯವಾಡುತ್ತಿರುವ ಡೆಲ್ಲಿ ತಂಡಕ್ಕೂ ಇದು 'ಮಾಡು ಇಲ್ಲವೇ ಮಡಿ' ಪಂದ್ಯವೇ ಆಗಿದೆ.

ರಾಹುಲ್ ಅವರು ಇತ್ತೀಚೆಗೆ ಟಿ20 ಮಾದರಿಯಲ್ಲಿ ಉತ್ತಮ ಲಯದಲ್ಲಿ ಇಲ್ಲ. ಅದರಿಂದಾಗಿಯೇ ಅವರು ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿಯೂ ಸ್ಥಾನ ತಪ್ಪಿಸಿಕೊಂಡಿದ್ದಾರೆನ್ನಲಾಗಿದೆ. ಅಲ್ಲದೇ ಐಪಿಎಲ್‌ನಲ್ಲಿ 12 ಅಂಕಗಳೊಂದಿಗೆ ಏಳನೇ ಸ್ಥಾನದಲ್ಲಿದೆ. ಇಷ್ಟೇ ಅಂಕ ಹೊಂದಿರುವ ಆರ್‌ಸಿಬಿ ಮತ್ತು ಡೆಲ್ಲಿ ಕ್ರಮವಾಗಿ ಐದು ಹಾಗೂ ಆರನೇ ಸ್ಥಾನದಲ್ಲಿವೆ.

ಕಳೆದ ಪಂದ್ಯದಿಂದ ಇಲ್ಲಿಯವರೆಗೆ ಐದು ದಿನಗಳ ಬಿಡುವು ಲಖನೌ ತಂಡಕ್ಕೆ ಸಿಕ್ಕಿತ್ತು. ಈ ಅವಧಿಯಲ್ಲಿ ತಂಡವು ತನ್ನ ಲೋಪಗಳನ್ನು ತಿದ್ದಿಕೊಳ್ಳಲು ಪ್ರಯತ್ನಿಸಿದೆ. ಕ್ವಿಂಟನ್ ಡಿ ಕಾಕ್ ಹಾಗೂ ರಾಹುಲ್ ಅವರು ಪವರ್‌ಪ್ಲೇನಲ್ಲಿ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ತಂಡಕ್ಕೆ ಉತ್ತಮ ಆರಂಭ ದೊರೆಯುತ್ತದೆ. ಮಧ್ಯಮ ಕ್ರಮಾಂಕದಲ್ಲಿ ಮಾರ್ಕಸ್ ಸ್ಟೊಯಿನಿಸ್ ಹಾಗೂ ನಿಕೊಲಸ್ ಪೂರನ್ ಅವರು ಒತ್ತಡರಹಿತವಾಗಿ ತಮ್ಮ ಬೀಸಾಟವಾಡಬಹುದು.

ಕಳೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಅಲ್ಪಮೊತ್ತಕ್ಕೆ ಕುಸಿಯಲಿದ್ದ ತಂಡವನ್ನು ಪೂರನ್ ಮತ್ತು ಆಯುಷ್ ಬಡೋನಿ ಅವರೇ ಪಾರು ಮಾಡಿದ್ದರು. ಆದರೆ ಬೌಲಿಂಗ್ ವಿಭಾಗವು ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ. ವೇಗಿ ಮಯಂಕ್ ಯಾದವ್ ಅನುಪಸ್ಥಿತಿಯಲ್ಲಿ ತಂಡದ ಬೌಲಿಂಗ್ ಪರಿಣಾಮಕಾರಿಯಾಗಿಲ್ಲ. ಅದರಿಂದಾಗಿಯೇ ಸನ್‌ರೈಸರ್ಸ್ ಒಂದೂ ವಿಕೆಟ್ ನಷ್ಟವಿಲ್ಲದೇ ಗುರಿ ಸಾಧಿಸಿತು.

ಬೌಲರ್‌ಗಳಾದ ನವೀನ್ ಉಲ್ ಹಕ್, ಕೃಣಾಲ್ ಪಾಂಡ್ಯ, ರವಿ ಬಿಷ್ಣೋಯಿ ಅವರ ಮುಂದೆ ಡೆಲ್ಲಿ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲಿದೆ. ಅಮಾನತು ಶಿಕ್ಷೆಯಿಂದಾಗಿ ಆರ್‌ಸಿಬಿ ಎದುರು ಕಣಕ್ಕಿಳಿಯದ ರಿಷಭ್ ಪಂತ್ ಅವರು ಮತ್ತೆ ತಂಡಕ್ಕೆ ಮರಳುವರು. ಆರ್‌ಸಿ ಬಿ ಎದುರು ಕೆಟ್ಟ ಫೀಲ್ಡಿಂಗ್ ಮತ್ತು ಬ್ಯಾಟಿಂಗ್ ವೈಫಲ್ಯದಿಂದ ಡೆಲ್ಲಿ ಸೋತಿತು. ಜೇಕ್ ಫ್ರೇಸರ್ ಮೆಕ್‌ಗುರ್ಕ್, ಶಾಯ್ ಹೋಪ್, ಟ್ರಿಸ್ಟನ್ ಸ್ಟಬ್ಸ್ ಹಾಗೂ ಡೇವಿಡ್ ವಾರ್ನರ್ ಅವರು ಅಬ್ಬರಿಸಿ ದರೆ ಡೆಲ್ಲಿ ಗೆಲುವಿನ ಕನಸಿಗೆ ಬಲ ಬರಲಿದೆ.

ತವರಿಗೆ ಮರಳಿದ ಜ್ಯಾಕ್ಸ್, ಟಾಪ್ಲಿ

ನವದೆಹಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾ ರರಾದ ವಿಲ್ ಜ್ಯಾಕ್ಸ್ ಮತ್ತು ರೀಸ್ ಟಾಪ್ಲಿ ಅವರು ಇಂಗ್ಲೆಂಡ್‌ಗೆ ಮರಳಿದ್ದಾರೆ.

ಮೇ 22ರಿಂದ ಆರಂಭವಾಗಲಿರುವ ಪಾಕಿಸ್ತಾನ ವಿರುದ್ಧದ ಟಿ20 ಸರಣಿಯಲ್ಲಿ ಆಡಲಿರುವ ತಮ್ಮ ತವರು ಇಂಗ್ಲೆಂಡ್ ತಂಡವನ್ನು ಸೇರಿಕೊಳ್ಳಲಿದ್ದಾರೆ. ವಿಲ್ ಜ್ಯಾಕ್ಸ್ ಈ ಬಾರಿಯ ಟೂರ್ನಿಯಲ್ಲಿ ಎಂಟು ಪಂದ್ಯಗಳನ್ನು ಆಡಿದ್ದಾರೆ. ಅದರಲ್ಲಿ ಒಂದು ಶತಕ ಸೇರಿದಂತೆ 230 ರನ್ ಗಳಿಸಿದ್ದಾರೆ.

ರಾಜಸ್ಥಾನ ರಾಯಲ್ಸ್ ತಂಡದ ಆರಂಭಿಕ ಬ್ಯಾಟರ್ ಜೋಸ್ ಬಟ್ಲರ್, ಗಾಯಗೊಂಡಿರುವ ಪಂಜಾಬ್ ಕಿಂಗ್ಸ್ ಆಟಗಾರ ಲಿಯಾಮ್ ಲಿವಿಂಗ್‌ಸ್ಟೋನ್ ಕೂಡ ಇಂಗ್ಲೆಂಡ್‌ಗೆ ಮರಳಿದ್ದಾರೆ. ಪಂಜಾಬ್ ತಂಡವು ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ.

ಅಲ್ಲದೇ: ಐಪಿಎಲ್‌ನಲ್ಲಿ ಆಡುತ್ತಿರುವ ಇಂಗ್ಲೆಂಡ್ ತಂಡದ ಮೋಯಿನ್ ಅಲಿ (ಚೆನ್ನೈ ಸೂಪರ್ ಕಿಂಗ್ಸ್), ಸ್ಯಾಮ್ ಕರನ್, ಜಾನಿ ಬೆಸ್ಟೊ (ಪಂಜಾಬ್ ಕಿಂಗ್ಸ್) ಮತ್ತು ಫಿಲ್ ಸಾಲ್ಟ್ (ಕೋಲ್ಕತ್ತ ನೈಟ್ ರೈಡರ್ಸ್) ಕೂಡ ಶೀಘ್ರದಲ್ಲಿಯೇ ತಮ್ಮ ತವರಿಗೆ ಮರಳುವ ಸಾಧ್ಯತೆ ಇದೆ. ಈ ಆಟಗಾರರು ಟಿ20 ವಿಶ್ವ ಕಪ್ ಟೂರ್ನಿಯಲ್ಲಿ ಆಡುವ ಸಂಭವನೀಯ ತಂಡದಲ್ಲಿದ್ದಾರೆ.

ಮಳೆಯಲ್ಲಿ ಮುಳುಗಿದ ಟೈಟನ್ಸ್ ಕನಸು

ಅಹಮದಾಬಾದ್ (ಪಿಟಿಐ): ಹೋದ ವರ್ಷದ ಐಪಿಎಲ್ ಟೂರ್ನಿಯ ರನ್ನರ್ಸ್ ಅಪ್ ತಂಡ ಗುಜರಾತ್ ಟೈಟನ್ಸ್ ಈ ಬಾರಿ ಪ್ಲೇ ಆಫ್ ಪ್ರವೇಶದ ಹಾದಿಯಿಂದ ಹೊರಬಿತ್ತು.

ಸೋಮವಾರ ರಾತ್ರಿ ಸುರಿದ ಮಳೆಯಿಂದಾಗಿ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯವು ರದ್ದಾದ ನಂತರ ಟೈಟನ್ಸ್ ಪ್ಲೇಆಫ್ ಕನಸು ಕಮರಿತು. ಒಟ್ಟು 11 ಅಂಕ ಗಳಿಸಿದ ಶುಭಮನ್ ಗಿಲ್ ತಂಡವು ಸದ್ಯ ಅಂಕಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. 13 ಪಂದ್ಯಗಳನ್ನು ಆಡಿ 5 ಪಂದ್ಯ ಗೆದ್ದು 7ರಲ್ಲಿ ಸೋತಿದೆ. ಮೇ 16ರಂದು ತನ್ನ ಕೊನೆಯ ಲೀಗ್ ಪಂದ್ಯವನ್ನು ಆಡಲಿರುವ ಗಿಲ್ ಬಳಗವು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸೆಣಸಲಿದೆ.

4 ದಿನಗಳ ಹಿಂದೆ ಚೆನ್ನೈ ಸೂಪರ್ ಕಿಂಗ್ಸ್ ಎದುರು ಅಮೋಘ ಜಯ ಸಾಧಿಸಿದ್ದ ಟೈಟನ್ಸ್ ತಂಡಕ್ಕೆ ನಾಲ್ಕರ ಘಟ್ಟ ಪ್ರವೇಶಿಸುವ ಸಣ್ಣ ಅವಕಾಶವೊಂದು ಇತ್ತು. ಕೋಲ್ಕತ್ತ ಮತ್ತು ಸನ್‌ರೈಸರ್ಸ್ ಎದುರಿನ ಪಂದ್ಯಗಳಲ್ಲಿ ಗೆದ್ದು ಒಟ್ಟು 14 ಅಂಕ ಗಳಿಸಿ ಪ್ಲೇ ಆಫ್ ಪೈಪೋಟಿಯಲ್ಲಿ ಉಳಿಯುವ ಭರವಸೆಯಲ್ಲಿತ್ತು.

ಆದರೆ ಸೋಮವಾರ ಸಂಜೆ ಸುರಿಯಲು ಆರಂಭಿಸಿದ ಮಳೆಯಲ್ಲಿ ಗಿಲ್ ಬಳಗದ ಕನಸು ಕೊಚ್ಚಿಹೋಯಿತು. ಆಗಾಗ ತುಸು ಬಿಡುವು ಕೊಟ್ಟ ಮಳೆಯಿಂದಾಗಿ ಪಂದ್ಯ ಪುನರಾರಂಭವಾಗುವ ಭರವಸೆ ಮೂಡುತ್ತಿತ್ತು. ಆದರೆ ಮತ್ತೆ ಮಳೆ ಬರುತ್ತಿತ್ತು. ಕೊನೆಗೆ ರಾತ್ರಿ 10.40ರ ಸುಮಾರಿಗೆ ಪಂದ್ಯವನ್ನು ರದ್ದುಗೊಳಿಸಿ ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಲಾಯಿತು. ಕೋಲ್ಕತ್ತ ತಂಡವು ಈಗಾಗಲೇ ಪ್ಲೇ ಆಫ್ ಪ್ರವೇಶಿಸಿದ್ದು, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಟೈಟನ್ಸ್ ತಂಡಕ್ಕೆ ತವರಿನಂಗಳದಲ್ಲಿ ಇದು ಕೊನೆಯ ಪಂದ್ಯವಾಗಿತ್ತು. ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರು ನಿರಾಶೆಯಿಂದ ಮರಳಿದರು.

ಗುಜರಾತ್ ತಂಡವು 2022 ಮತ್ತು 2023ರ ಆವೃತ್ತಿಗಳಲ್ಲಿ ಕ್ರಮವಾಗಿ ಚಾಂಪಿಯನ್ ಮತ್ತು ರನ್ನರ್ಸ್ ಅಪ್ ಆಗಿತ್ತು. ಆ ಎರಡೂ ಆವೃತ್ತಿಗಳಲ್ಲಿ ತಂಡಕ್ಕೆ ಹಾರ್ದಿಕ್ ಪಾಂಡ್ಯ ನಾಯಕರಾಗಿದ್ದರು. ಈ ವರ್ಷ ಹಾರ್ದಿಕ್ ಮುಂಬೈ ಇಂಡಿಯನ್ಸ್ ತಂಡಕ್ಕೆ ಹೋಗಿದ್ದರು. ಟೈಟನ್ಸ್ ತಂಡಕ್ಕೆ ಶುಭಮನ್ ಗಿಲ್ ಅವರನ್ನು ನಾಯಕರನ್ನಾಗಿ ನೇಮಿಸಲಾಗಿತ್ತು.

ಅಹಮದಾಬಾದಿನಲ್ಲಿ ಸೋಮವಾರ ಐಪಿಎಲ್ ಪಂದ್ಯ ನೋಡಲು ಸೇರಿದ್ದ ಜನಸ್ತೋಮ –ಪಿಟಿಐ ಚಿತ್ರ

ಪ್ಲೇ ಆಫ್ ಲೆಕ್ಕಾಚಾರ

ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಈಗಾಗಲೇ ಪ್ರವೇಶಿಸಿದೆ. ಎರಡನೇ ಸ್ಥಾನದಲ್ಲಿರುವ ರಾಜಸ್ಥಾನ ರಾಯಲ್ಸ್ (16 ಅಂಕ) ತನ್ನ ಸ್ಥಾನ ಬಹುತೇಕ ಖಚಿತಪಡಿಸಿಕೊಂಡಿದೆ. ಆದರೆ, ಇನ್ನುಳಿದ ಎರಡು ಸ್ಥಾನಗಳಿಗೆ ಐದು ತಂಡಗಳ ನಡುವೆ ಪೈಪೋಟಿ ಇದೆ. ಅದರಲ್ಲಿ ಸನ್‌ರೈಸರ್ಸ್ ಹೈದರಾಬಾದ್ (14) ಹಾಗೂ ಲಖನೌ ಸೂಪರ್‌ಜೈಂಟ್ಸ್ (12) ತಂಡಗಳಿಗೆ ನಾಲ್ಕರ ಘಟ್ಟದ ಪ್ರವೇಶಿಸಲು ಹೆಚ್ಚಿನ ಅವಕಾಶಗಳಿವೆ. ಏಕೆಂದರೆ; ಉಭಯ ತಂಡಗಳಿಗೆ ಇನ್ನೂ ಎರಡು ಪಂದ್ಯಗಳು ಬಾಕಿ ಇವೆ.

ಆದರೆ ಚೆನ್ನೈ ಸೂಪರ್ ಕಿಂಗ್ಸ್ (14), ಆರ್‌ಸಿಬಿ (12) ಹಾಗೂ ಡೆಲ್ಲಿ ಕ್ಯಾಪಿಟಲ್ಸ್ (12) ತಂಡಗಳಿಗೆ ತಲಾ ಒಂದು ಪಂದ್ಯ ಮಾತ್ರ ಬಾಕಿ ಇದೆ.

ಆದರೆ ಆರ್‌ಸಿಬಿ ತಂಡವು ಪ್ಲೇಆಫ್ ಪ್ರವೇಶಿಸಬೇಕಾದರೆ ಮೊದಲು ಉತ್ತಮ ರನ್‌ರೇಟ್‌ನೊಂದಿಗೆ ಚೆನ್ನೈ ಎದುರು ಜಯಿಸಬೇಕು. ಇನ್ನೊಂದೆಡೆ ಸನ್‌ರೈಸರ್ಸ್ ಮತ್ತು ಲಖನೌ ತಂಡಗಳು ತಮ್ಮ ಪಾಲಿನ ಎರಡೂ ಪಂದ್ಯಗಳಲ್ಲಿ ಸೋಲಬೇಕು. ಆಗ ಆರ್‌ಸಿಬಿಗೆ ನಾಲ್ಕರ ಘಟ್ಟದ ಪ್ರವೇಶ ಸುಗಮವಾಗಲಿದೆ ಎಂಬ ಲೆಕ್ಕಾಚಾರ ನಡೆಯುತ್ತಿದೆ. ಆದರೆ ಮಂಗಳವಾರ ಲಖನೌ ತಂಡವನ್ನು ಸೋಲಿಸಿದರೆ ಡೆಲ್ಲಿಗೂ 14 ಪಾಯಿಂಟ್ ಆಗಲಿದೆ. ಆಗ ಮತ್ತೆ ಈ ಲೆಕ್ಕಾಚಾರ ಬದಲಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	13	9	3	19	1.428
ರಾಜಸ್ಥಾನ ರಾಯಲ್ಸ್	12	8	4	16	0.349
ಚೆನ್ನೈ ಸೂಪರ್ ಕಿಂಗ್ಸ್	13	7	6	14	0.528
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಆರ್‌ಸಿಬಿ	13	6	7	12	0.387
ಡೆಲ್ಲಿ ಕ್ಯಾಪಿಟಲ್ಸ್	13	6	7	12	-0.482
ಲಖನೌ ಸೂಪರ್ ಜೈಂಟ್ಸ್	12	6	6	12	-0.769
ಗುಜರಾತ್ ಟೈಟನ್ಸ್	13	5	7	11	-1.063
ಮುಂಬೈ ಇಂಡಿಯನ್ಸ್	13	4	9	8	-0.271
ಪಂಜಾಬ್ ಕಿಂಗ್ಸ್	12	4	8	8	-0.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (661)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಹರ್ಷಲ್ ಪಟೇಲ್ (ತಲಾ 20 ವಿಕೆಟ್)

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಹುದ್ದೆಗೆ ಅರ್ಜಿ ಆಹ್ವಾನ

ನವದೆಹಲಿ: ಮುಂದಿನ ತಿಂಗಳು ಅಮೆರಿಕ ಮತ್ತು ವೆಸ್ಟ್‌ಇಂಡೀಸ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ನೊಂದಿಗೆ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರ ಅಧಿಕಾರಾವಧಿ ಕೊನೆಗೊಳ್ಳಲಿದೆ. ಹೀಗಾಗಿ, ಮುಂದಿನ ಮೂರೂವರೆ ವರ್ಷಗಳ ಅವಧಿಗೆ ಮುಖ್ಯ ಕೋಚ್ ಹುದ್ದೆಗಾಗಿ ಬಿಸಿಸಿಐ ಸೋಮವಾರ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಇದೇ 27ರಂದು ಕೊನೆಯ ದಿನವಾಗಿದೆ ಎಂದು ಬಿಸಿಸಿಐ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

'ಆಯ್ಕೆ ಪ್ರಕ್ರಿಯೆಯು ಅರ್ಜಿಗಳ ಸಂಪೂರ್ಣ ಪರಿಶೀಲನೆಯನ್ನು ಒಳಗೊಂಡಿರುತ್ತದೆ. ನಂತರ ವೈಯಕ್ತಿಕ ಸಂದರ್ಶನಗಳು ಮತ್ತು ಶಾರ್ಟ್‌ಲಿಸ್ಟ್ ಮಾಡಿದ ಅಭ್ಯರ್ಥಿಗಳ ಮೌಲ್ಯಮಾಪನ ಒಳಗೊಂಡಿರುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

ಆಯ್ಕೆಯಾದ ಹೊಸ ಕೋಚ್ ವಿಶ್ವಕಪ್ ಟೂರ್ನಿಯ ನಂತರ ತಕ್ಷಣವೇ ತಂಡದ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ಅವರ ಅವಧಿಯು 2027ರ ಡಿಸೆಂಬರ್ 31ಕ್ಕೆ ಮುಕ್ತಾಯಗೊಳ್ಳುತ್ತದೆ. ದ್ರಾವಿಡ್ ಅವರು ಟಿ20 ವಿಶ್ವಕಪ್ ನಂತರ ಕೋಚ್ ಹುದ್ದೆಯಲ್ಲಿ ಮುಂದುವರಿಯಲು ಬಯಸಿದರೆ ಮತ್ತೆ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಈಚೆಗೆ ಹೇಳಿದ್ದರು.

ಅಭಾ ದಾಖಲೆ, ಉನ್ನತಿಗೆ ಚಿನ್ನ

ಭುವನೇಶ್ವರ (ಪಿಟಿಐ): ಅಭಾ ಖತುವಾ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನ ಶಾಟ್‌ಪಟ್ ಥ್ರೋ ಸ್ಪರ್ಧೆಯಲ್ಲಿ 18.41 ಮೀಟರ್ ಸಾಧನೆಯೊಂದಿಗೆ ರಾಷ್ಟ್ರೀಯ ದಾಖಲೆ ನಿರ್ಮಿಸಿದರು.

ಮಹಾರಾಷ್ಟ್ರವನ್ನು ಪ್ರತಿನಿಧಿಸುತ್ತಿರುವ ಅಭಾ ಅವರು, ಮನ್‌ಪ್ರೀತ್ ಕೌರ್ (18.06 ಮೀ) ಅವರೊಂದಿಗೆ ಈ ಹಿಂದೆ ಜಂಟಿ ರಾಷ್ಟ್ರೀಯ ದಾಖಲೆಯನ್ನು ಹೊಂದಿದ್ದರು. ಈಗ ಆ ದಾಖಲೆಯನ್ನು ತಮ್ಮದೇ ಹೆಸರಿಗೆ ಬರೆದುಕೊಂಡಿದ್ದಾರೆ.

ಅಭಾ ಅವರಿಗೆ ಇಲ್ಲಿ ಒಲಿಂಪಿಕ್ಸ್ ಅರ್ಹತಾ ಮಟ್ಟ (18.80 ಮೀ) ತಲುಪಲು ಸಾಧ್ಯವಾಗಲಿಲ್ಲ.

ಉನ್ನತಿ, ಚೇತನ್‌ಗೆ ಚಿನ್ನ: ಕರ್ನಾಟಕದ ಉನ್ನತಿ ಅಯ್ಯಪ್ಪ ಅವರು ಮಹಿಳೆಯರ 200 ಮೀಟರ್ ಓಟದ ಫೈನಲ್‌ನಲ್ಲಿ 23.85 ಸೆಕೆಂಡ್‌ಗಳಲ್ಲಿ ಕ್ರಮಿಸಿ ಚಿನ್ನ ಗೆದ್ದರು. ಸರಸ್ವತಿ ಸಹಾ (22.82ಸೆ) ಅವರ ರಾಷ್ಟ್ರೀಯ ದಾಖಲೆಯನ್ನು ಮುರಿಯುವ ಅವಕಾಶವನ್ನು ಕೂದಲೆಳೆಯ ಅಂತರದಲ್ಲಿ ಕಳೆದುಕೊಂಡರು.

ಉನ್ನತಿ ಅಯ್ಯಪ್ಪ

ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಕರ್ನಾಟಕದ ಚೇತನ್ ಬಾಲಸುಬ್ರಹ್ಮಣ್ಯನ್ 2.09 ಮೀ. ಸಾಧನೆಯೊಂದಿಗೆ ಚಿನ್ನದ ಪದಕ ಗೆದ್ದರು.

ಪ್ರಜ್ಞಾನಂದಗೆ ನಾಲ್ಕನೇ ಸ್ಥಾನ

ವಾರ್ಸಾ, ಪೋಲೆಂಡ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಸೂಪರ್‌ಬಿಟ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಪಡೆದರು.

ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ 26 ಅಂಕಗಳೊಂದಿಗೆ ಪ್ರಶಸ್ತಿ ಮುಡಿಗೇರಿಸಿಕೊಂಡರು. ಚೀನಾದ ವೀ ಯಿ (25.5) ಎರಡನೇ ಮತ್ತು ಪೋಲೆಂಡ್‌ನ ಜಾನ್ ಕ್ರಿಸ್ಟೋಫ್ ದುಡಾ (19.5) ಮೂರನೇ ಸ್ಥಾನ ಪಡೆದರು.

ಪ್ರಜ್ಞಾನಂದ 19 ಅಂಕ ಪಡೆದರೆ, ಅರ್ಜುನ್ ಇರಿಗೇಶಿ (18) ಮತ್ತು ಗುಕೇಶ್ (12.5) ಕ್ರಮವಾಗಿ ಐದನೇ ಮತ್ತು 10ನೇ ಸ್ಥಾನ ಗಳಿಸಿದರು.

ಫಿಡೆ ರೇಟೆಡ್ ಚೆಸ್ ಟೂರ್ನಿ 17ರಿಂದ

ಮಂಗಳೂರು: ಫಿಡೆ ರೇಟೆಡ್ ರಾಜ್ಯ ಮುಕ್ತ ಮತ್ತು 17 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್ ಇದೇ 17ರಿಂದ 19ರ ವರೆಗೆ ನಗರದ ಮಿನಿ ಪುರಭವನ ಆವರಣದಲ್ಲಿ ಆಯೋಜಿಸಲಾಗಿದೆ.

ಒಟ್ಟು ₹ 1 ಲಕ್ಷ ನಗದು ಬಹುಮಾನ ಹಾಗೂ ಟ್ರೋಫಿ ನೀಡಲಾಗುವ ಟೂರ್ನಿಯಲ್ಲಿ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಸ್ಪರ್ಧೆಗಳು ನಡೆಯಲಿವೆ. ಹೆಸರು ನೊಂದಾಯಿಸಿಕೊಳ್ಳಲು www.chessfee.com ಸಂಪರ್ಕಿಸುವಂತೆ ಜಿಲ್ಲಾ ಚೆಸ್ ಸಂಸ್ಥೆ ಅಧ್ಯಕ್ಷ ರಮೇಶ್ ಕೋಟೆ ತಿಳಿಸಿದ್ದಾರೆ.

ಚೆಸ್: ಶ್ಯಾಮನಿಖಿಲ್ ಭಾರತದ 85ನೇ ಗ್ರ್ಯಾಂಡ್‌ಮಾಸ್ಟರ್

ದುಬೈ (ಪಿಟಿಐ): ಚೆಸ್ ಆಟಗಾರ ಪಿ. ಶ್ಯಾಮನಿಖಿಲ್ ಅವರು ಭಾರತದ 85ನೇ ಗ್ರ್ಯಾಂಡ್‌ಮಾಸ್ಟರ್ ಆಗಿ ಹೊರಹೊಮ್ಮಿದ್ದಾರೆ. 12 ವರ್ಷಗಳಿಂದ ಅವರು ಪಟ್ಟ ಶ್ರಮಕ್ಕೆ ಈಗ ಫಲ ದೊರೆತಿದೆ.

ದುಬೈ ಪೊಲೀಸ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಸ್ಪರ್ಧಿಸಿದ್ದ ಅವರು ಮೂರನೇ ಮತ್ತು ಅಂತಿಮ ಜಿಎಂ ನಾರ್ಮ್ ಪೂರೈಸಿದರು.

ತಮ್ಮ ದೀರ್ಘ ಕಾಲದ ಕನಸು ಈಡೇರಿಸಿಕೊಳ್ಳಲು ಅವರಿಗೆ ಒಂದು ಜಯ ಹಾಗೂ ಎಂಟು ಡ್ರಾಗಳ ಅಗತ್ಯವಿತ್ತು. ಅದು ಈ ಟೂರ್ನಿಯಲ್ಲಿ ಈಡೇರಿತು. 31 ವರ್ಷದ ಶ್ಯಾಮನಿಖಿಲ್ ಅವರು ಗ್ರ್ಯಾಂಡ್‌ಮಾಸ್ಟರ್ ಗೌರವ ಪಡೆಯಲು ಬೇಕಾದ 2500 ಇಎಲ್‌ಒ ಪಾಯಿಂಟ್ಸ್ ಸಂಪಾದಿಸಿದ್ದಾರೆ.

ಅವರು 2012ರಲ್ಲಿಯೇ ಎರಡು ಜಿಎಂ ನಾರ್ಮ್‌ಗಳನ್ನು ಪೂರೈಸಿದ್ದರು. ಆದರೆ ಅಂತಿಮ ನಾರ್ಮ್ ಗಳಿಸಲು ಇಲ್ಲಿಯವರೆಗೆ ಕಾಯಬೇಕಾಯಿತು.

ತಮಿಳನಾಡಿನ ನಾಗರ್‌ಕೊಯಿಲ್‌ನ ಅವರು ಎಂಟನೇ ವಯಸ್ಸಿನಿಂದಲೇ ಚೆಸ್ ಕ್ರೀಡೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಶ್ಯಾಮನಿಖಿಲ್

'ನನ್ನ ಎಂಟನೇ ವಯಸ್ಸಿನಲ್ಲಿಯೇ ಚೆಸ್ ಆಡಲಾರಂಭಿಸಿದೆ. ನನ್ನ ಪಾಲಕರು ಆಟ ಕಲಿಸಿದರು. ಆದರೆ, ಮೂರು ವರ್ಷಗಳ ಕಾಲ ಯಾವುದೇ ಟೂರ್ನಿಯಲ್ಲಿ ಆಡಲು ಸಾಧ್ಯವಾಗಲಿಲ್ಲ. 13 ವರ್ಷದೊಳಗಿನವರ ರಾಜ್ಯ ಚಾಂಪಿಯನ್‌ಷಿಪ್ ಜಯಿಸುವುದರೊಂದಿಗೆ ಅವಕಾಶಗಳ ಬಾಗಿಲು ತೆರೆಯಿತು' ಎಂದು ಶ್ಯಾಮನಿಖಿಲ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕರ್ನಾಟಕ ತಂಡ ಫೈನಲ್‌ಗೆ

ಬೆಂಗಳೂರು: ಅದಿತಿ ಸುಬ್ರಮಣ್ಯಂ ಅವರ ಅಮೋಘ ಆಟದ ಬಲದಿಂದ ಕರ್ನಾಟಕದ ಬಾಲಕಿಯರು ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ 74ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿದರು.

ಸೋಮವಾರ ನಡೆದ ನಾಲ್ಕರ ಘಟ್ಟದ ರೋಚಕ ಹಣಾಹಣಿಯಲ್ಲಿ ಕರ್ನಾಟಕ ತಂಡವು 63–62ರಿಂದ ಆತಿಥೇಯ ಮಧ್ಯಪ್ರದೇಶ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಮುನ್ನಡೆಯಿತು. ಲೀಗ್ ಹಂತದ ಪಂದ್ಯದಲ್ಲಿ ಮಧ್ಯಪ್ರದೇಶದ ವಿರುದ್ಧ ಸೋತಿದ್ದ ಕರ್ನಾಟಕ ತಂಡವು ನಾಲ್ಕರ ಘಟ್ಟದ ಪಂದ್ಯದಲ್ಲಿ ಗೆದ್ದು ಮುಯ್ಯಿ ತೀರಿಸಿಕೊಂಡಿತು. ಕರ್ನಾಟಕ ತಂಡವು ಫೈನಲ್‌ನಲ್ಲಿ ಪಂಜಾಬ್ ತಂಡವನ್ನು ಎದುರಿಲಿದೆ.

ಶಿಸ್ತು ಸಮಿತಿಗೆ ಬಿ.ದಯಾನಂದ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಫೆಡರೇಷನ್‌ನ (ಎಫ್‌ಐಬಿಎ) ಶಿಸ್ತು ಸಮಿತಿಯ ಸದಸ್ಯರಾಗಿ (2023ರಿಂದ 2027ರ ಅವಧಿ) ನೇಮಕಗೊಂಡಿದ್ದಾರೆ. ಇವರು ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ಗೌರವಾಧ್ಯಕ್ಷರೂ ಆಗಿದ್ದಾರೆ.

ಬಾಕ್ಸಿಂಗ್: ನಿಖತ್ ಶುಭಾರಂಭ

ಅಸ್ತಾನಾ, ಕಜಕಸ್ತಾನ (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ನಿಖತ್ ಜರೀನ್ (52 ಕೆಜಿ) ಅವರು ಇಲ್ಲಿ ಸೋಮವಾರ ಆರಂಭಗೊಂಡ ಎಲೋರ್ಡಾ ಕಪ್ ಬಾಕ್ಸಿಂಗ್ ಟೂರ್ನಿಯ 52 ಕೆ.ಜಿ. ವಿಭಾಗದ ಮೊದಲ ಸುತ್ತಿನಲ್ಲಿ ಕಜಕಸ್ತಾನನ ರಾಖಿಂಬರ್ಡಿ ಝನ್ಸಾಯಾ ವಿರುದ್ಧ ಸುಲಭ ಗೆಲುವು ದಾಖಲಿಸಿದರು.

27 ವರ್ಷದ ಭಾರತದ ಬಾಕ್ಸರ್ ನಿಖತ್ ಅವರು 5–0ಯಿಂದ ಎದುರಾಳಿಯನ್ನು ಮಣಿಸಿ ಮುನ್ನಡೆದರು. ಮೀನಾಕ್ಷಿ (48 ಕೆ.ಜಿ) ಮತ್ತು ಅನಾಮಿಕಾ (50 ಕೆ.ಜಿ) ಅವರೂ ಶುಭಾರಂಭ ಮಾಡಿದರು.

ಮೀನಾಕ್ಷಿ ಅವರು 4–1 ಅಂತರದಲ್ಲಿ ಆತಿಥೇಯ ದೇಶದ ಗ್ಯಾಸ್ಸಿಮೊವಾ ರೊಕ್ಸಾನಾ ವಿರುದ್ಧ ಗೆಲುವು ಸಾಧಿಸಿದರೆ, ಅನಾಮಿಕಾ ಅವರು ಜುಮಾಬಾಯೆವಾ ಅರ್‍ಯಲಿಮ್ ಅವರನ್ನು ಸೋಲಿಸಿದರು. ರೆಫರಿ ಈ ಬೌಟ್ ಸ್ಥಗಿತಗೊಳಿಸುವ ಮುನ್ನ (ಆರ್‌ಎಸ್‌ಸಿ) ಮೊದಲ ಸುತ್ತಿನಲ್ಲಿ ಅನಾಮಿಕ ಮೇಲುಗೈ ಸಾಧಿಸಿದ್ದರು.

ಆದರೆ, ಭಾರತದ ಇಶ್ಮೀತ್ ಸಿಂಗ್ (75 ಕೆಜಿ) ಮತ್ತು ಸೋನಿಯಾ (54 ಕೆಜಿ) ನಿರಾಸೆ ಮೂಡಿಸಿದರು. ಅವರು ಕ್ರಮವಾಗಿ ಕಜಕಸ್ತಾನದ ಅರ್ಮಾನಲಿ ಅರ್ಮಾಟ್ ಮತ್ತು ಚೀನಾದ ಚಾಂಗ್ ಯುವಾನ್ ಅವರಿಗೆ ಶರಣಾದರು.

ನಿಖತ್ ಜರೀನ್

ಆರು ಬಾರಿ ಏಷ್ಯನ್ ಚಾಂಪಿಯನ್‌ಷಿಪ್ ಪದಕವಿಜೇತ ಶಿವ ಥಾಪಾ (63.5 ಕೆ.ಜಿ), ಸಂಜಯ್ (80 ಕೆ.ಜಿ) ಮತ್ತು ಗೌರವ್ ಚೌಹಾಣ್ (92) ಅವರು ಮಂಗಳವಾರ ಕಣಕ್ಕಿಳಿಯಲಿದ್ದಾರೆ.

ಬಾಕ್ಸಿಂಗ್ ಫೆಡರೇಷನ್ ಆಫ್ ಇಂಡಿಯಾವು ಈ ಟೂರ್ನಿಗೆ 21 ಬಾಕ್ಸರ್‌ಗಳ ತಂಡವನ್ನು ಕಳುಹಿಸಿದೆ. ಕಜಕಸ್ತಾನ, ಚೀನಾ, ಭಾರತ, ಜಪಾನ್ ಮತ್ತು ಉಜ್ಬೇಕಿಸ್ತಾನದ ಸ್ಪರ್ಧಿಗಳು ಕಣದಲ್ಲಿದ್ದಾರೆ.

ಥಾಯ್ಲೆಂಡ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಇಂದಿನಿಂದ

ಸಾತ್ವಿಕ್– ಚಿರಾಗ್ ಮೇಲೆ ಕಣ್ಣು

ಬ್ಯಾಂಕಾಕ್ (ಪಿಟಿಐ): ಭಾರತದ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಇಲ್ಲಿ ಮಂಗಳವಾರ ಆರಂಭವಾಗುವ ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸುವುದರೊಂದಿಗೆ ಗೆಲುವಿನ ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲಬಹುದಾದ ನೆಚ್ಚಿನ ಜೋಡಿಗಳಲ್ಲಿ ಒಂದಾಗಿರುವ ಸಾತ್ವಿಕ್– ಚಿರಾಗ್ ಈಚೆಗೆ ನಡೆದ ಥಾಮಸ್ ಕಪ್‌ನಲ್ಲಿ ಮುಗ್ಗರಿಸಿದ್ದರು. ಇಂಡೊನೇಷ್ಯಾ ಮತ್ತು ಚೀನಾದ ಎದುರಾಳಿಗಳಿಗೆ ಶರಣಾಗಿದ್ದರು. ಇಲ್ಲಿ ಮಲೇಷ್ಯಾದ ನೂರ್ ಮೊಹಮ್ಮದ್ ಅಜ್ರಿನ್ ಅಯೂಬ್ ಮತ್ತು ತಾನ್ ವೀ ಕಿಯೊಂಗ್ ವಿರುದ್ಧ ಅಭಿಯಾನವನ್ನು ಆರಂಭಿಸಲಿದ್ದಾರೆ.

ಚಿರಾಗ್ ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ –ಎಎಫ್‌ಪಿ ಚಿತ್ರ

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಅಗ್ರಮಾನ್ಯ ಆಟಗಾರ ಎಚ್.ಎಸ್. ಪ್ರಣಯ್ ಅವರು ಆರೋಗ್ಯ ಸಮಸ್ಯೆಯಿಂದಾಗಿ ಈ ಋತುವಿನಲ್ಲಿ ನಿರೀಕ್ಷಿತ ಆಟ ಪ್ರದರ್ಶಿಸಿಲ್ಲ. ಆದರೆ, ಥಾಮಸ್ ಕಪ್ ಟೂರ್ನಿಯಲ್ಲಿ ಇಂಡೊನೇಷ್ಯಾದ ಆ್ಯಂಟನಿ ಸಿನಿಸುಕ್ ಗಿಂಟಿಂಗ್ ಅವರಿಗೆ ಆಘಾತ ನೀಡಿ ಆತ್ಮವಿಶ್ವಾಸವನ್ನು ಕೊಂಚ ಹೆಚ್ಚಿಸಿಕೊಂಡಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಪ್ರಣಯ್ ಅವರಿಗೆ ಈ ಟೂರ್ನಿ ಪೂರ್ವಸಿದ್ಧತೆಯ ವೇದಿಕೆಯಾಗಿದೆ. ಅವರು ಮೊದಲ ಸುತ್ತಿನಲ್ಲಿ ಕ್ವಾಲಿಫೈಯರ್ ಹಂತದ ಆಟಗಾರನನ್ನು ಎದುರಿಸಲಿದ್ದಾರೆ.

ಒಲಿಂಪಿಯನ್ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಕಿರಣ್ ಜಾರ್ಜ್ ಮತ್ತು ಸತೀಶ್ ಕುಮಾರ್ ಕರುಣಾಕರನ್ ಪುರುಷರ ಸಿಂಗಲ್ಸ್‌ನಲ್ಲಿ ಕಣದಲ್ಲಿದ್ದಾರೆ. ಕಿರಣ್ ಮೊದಲ ಸುತ್ತಿನಲ್ಲಿ ಚೀನಾದ ವೆಂಗ್ ಹಾಂಗ್ ಯಾಂಗ್ ಅವರನ್ನು ಎದುರಿಸಲಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಒಡಿಶಾ ಮಾಸ್ಟರ್ಸ್ ಪ್ರಶಸ್ತಿಯನ್ನು ಗೆದ್ದಿರುವ ಸತೀಶ್ ಅವರು ಕ್ವಾಲಿಫೈಯರ್ ಸುತ್ತಿನ ಆಟಗಾರನ ವಿರುದ್ಧ ಅಭಿಯಾನ ಆರಂಭಿಸುವರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಯುವ ಆಟಗಾರ್ತಿಯರಾದ ಅಶ್ಮಿತಾ ಚಾಲಿಹಾ, ಮಾಳವಿಕಾ ಬನ್ಸೋಡ್ ಮತ್ತು ಆಕರ್ಷಿ ಕಶ್ಯಪ್ ಸ್ಪರ್ಧೆಯಲ್ಲಿದ್ದಾರೆ.

ಡಬಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ತನಿಶಾ ಕ್ರಾಸ್ಟೊ– ಅಶ್ವಿನಿ ಪೊನ್ನಪ್ಪ, ಉನ್ನತಿ ಹೂಡಾ– ಪಾಲಕ್ ಅರೋರಾ ಜೋಡಿಗಳು ಸುಧಾರಿತ ಪ್ರದರ್ಶನದ ವಿಶ್ವಾಸದಲ್ಲಿವೆ.